# ಚಿಂತನ ಬಯಲು

ತ್ರೈಮಾಸಿಕ ISSN 2278-2192



ಸಂಪುಟ : 13, ಸಂಚಿಕೆ : 2 ಅಕ್ಟೋಬರ್ – ಡಿಸೆಂಬರ್ 2024
Volume : 13, Issue : 2 October - December 2024

# ಚಿಂತನ ಬಯಲು

ಸಂಪಾದಕಿ
**ರೇಶ್ಮಾ ಜಿ. ಭಟ್**

ಸಂಪಾದಕೀಯ ಸಲಹೆ
**ಡಾ. ಅಜಕ್ಕಳ ಗಿರೀಶ ಭಟ್**
**ಡಾ. ಶ್ರೀಧರ್ ಹೆಚ್.ಜಿ.**
**ಡಾ. ವರದರಾಜ ಚಂದ್ರಗಿರಿ**
**ಡಾ. ಜಿ.ಬಿ. ಹರೀಶ**
**ಶ್ರೀ ಎಂ.ಎ. ಸುಬ್ರಹ್ಮಣ್ಯ**

**ಚಿಂತನ ಬಯಲು**
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574219

**CHINTHANA BAYALU**
Kannada Quarterly; A Peer Reviewed Journal ISSN: 2278-2192
Included in UGC - CARE List
Volume 13, Issue 2, October - December 2024

Edited, Published, Printed & Owned by
**Reshma G. Bhat**
Door No. 15-109, Modankapu Post
Bantwal Taluk, Dakshina Kannada - 574219
Karnataka
Mobile : 8217703698
Email : chinthanabayalu@gmail.com
website: www.chinthanabayalu.in

© : Reserved

Size : Dy 1/8

Paper Used : 70 GSM

Pages : 128

Price : Rs. 50

Cover Photo : **Girish Bhat**

Cover Design : **Kallur Nagesh**

Designed & Printed at :
**Aakrithi Prints**
Maximus Complex
Light House Hill Road
Mangaluru - 575 001
Tel. : 0824 2972002 / 7019225774

---

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

# ಪುಟನೋಟ

1 ಕೆ.ಎನ್. ಗಣೇಶಯ್ಯ ಅವರ ಕಥೆಗಳಲ್ಲಿ ರೂಪದರ್ಶಿ
❖ **ಚಂದ್ರಕಲ ಹೆಚ್.ಪಿ. / 8**

2. ಬೇಂದ್ರೆ ಕವಿತೆಗಳಲ್ಲಿ 'ಅನ್ನಾವತಾರ'
❖ **ಡಾ. ಎಚ್.ಕೆ. ವೆಂಕಟೇಶ / 13**

3. ಸಾಂಸ್ಕೃತಿಕ ಕೇಂದ್ರ : ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ
❖ **ಡಾ. ಮಹಾಂತ ಗೌಡ ಪಾಟೀಲ / 18**

4. ಮಹಿಳಾ ಆತ್ಮಕಥನಗಳಲ್ಲಿ ಸ್ವಪ್ರಜ್ಞೆಯ ನೆಲೆಗಳು
❖ **ಅಕ್ಷತ ಕೆ. / 23**

5. ಮಾಸ್ತಿಯವರ ಕಾವ್ಯದಲ್ಲಿ ಆಸ್ತಿಕತೆ
❖ **ಡಾ. ಜ್ಯೋತಿ ಎಸ್.ಬಿ. / 28**

6. ಅ.ನ.ಕೃ : ಭಾರತೀಯ ಚಿತ್ರಕಲೆಯಲ್ಲಿ
ರಾಜಾ ರವಿವರ್ಮನ ಸ್ಥಾನಮಾನದ ತಾತ್ವೀಕ ಚಿಂತನೆಗಳು
❖ **ಡಾ. ಮಹೇಶ ಎಂ.ಕೆ. / 33**

7. ಸಂಶೋಧನೆಯ ಹಾದಿಯಲ್ಲಿನ ತೋರುಗಂಬ 'ಸಂಶೋಧಕರಾಜಮಾರ್ಗ'
❖ **ಡಾ. ರವಿಶಂಕರ ಜಿ.ಕೆ. / 38**

8. ಗುರು–ಲಿಂಗ–ಜಂಗಮ : ವಿಶ್ಲೇಷಣಾತ್ಮಕ ಅಧ್ಯಯನ
❖ **ಡಾ. ಆರ್.ವಿ. ಪಾಟೀಲ / 43**

9. ಮಹಾಸತಿ ಮತ್ತು ಬಿಗನಹಳ್ಳಿಯ ಮಾಸ್ತಮ್ಮ
❖ **ಡಾ. ರಘುನಂದನ್ ಬಿ.ಆರ್. / 48**

10. ಶ್ರೀಧರ ಬಳಗಾರರ ಆಡುಕಳ ಕಾದಂಬರಿ–ಒಂದು ವಿಶ್ಲೇಷಣೆ
❖ **ಡಾ. ಪ್ರತಿಮಾ ಕೆ.ಪಿ. / 52**

11. ಬದಲಾಗುತ್ತಿರುವ ಕಾಲಘಟ್ಟದಲ್ಲಿ ಯಕ್ಷಗಾನ ಕೆಲವು ಸವಾಲುಗಳು
❖ **ಡಾ ಪಿ ಬಿ ಪ್ರಸನ್ನ / 56**

12. ಮೈಸೂರಿನ ದಿವಾನ್ ಸಿ.ರಂಗಚಾರ್ಲುರವರ ಆಡಳಿತಾತ್ಮಕ ಒಳನೋಟಗಳು
❖ **ಡಾ. ಉಷಾದೇವಿ** ❖ **ಡಾ. ಬಿ.ಸಿ. ಸುರೇಶ**
❖ **ಡಾ. ಮೋಹನ್ ಕೆ.ಎನ್ / 61**

13. ಅ.ನ.ಕೃ. ಕಾದಂಬರಿಗಳಲ್ಲಿ ಪರಂಪರೆ–ಆಧುನಿಕತೆ ಹಾಗೂ
ಪೂರ್ವ–ಪಶ್ಚಿಮ ಸಂಸ್ಕೃತಿಗಳ ಮುಖಾಮುಖಿ
❖ **ಡಾ. ಗಿರೀಶ ದೇಸೂರ / 67**

14. ಪ್ರಥಮ ಮಹಾಯುದ್ಧ ಕಾಲದ ಸ್ವಾತಂತ್ರ್ಯ ಚಳುವಳಿಯಲ್ಲಿ
ಅನಿ ಬೆಸೆಂಟ್ ಮತ್ತು ಹೋಂರೂಲ್ ಚಳುವಳಿ(1847–1933)
❖ **ಡಾ. ಹೇಮಲತ ಹೆಚ್. ಆರ್ / 72**

15. ಇನಾಂದಾರರ 'ವಿಜಯಯಾತ್ರೆ' ಕಾದಂಬರಿ: ಒಂದು ವಿಶ್ಲೇಷಣೆ
❖ **ಡಾ. ಸೀತಾ ಹೆಚ್. ಎನ್**
❖ **ಡಾ. ಭೀಮೇಶ್ ಹೆಚ್.ಜೆ. / 76**

16. ಜನಪದ ಸಾಹಿತ್ಯ ಪ್ರಕಾರಗಳು
❖ **ಆರ್. ದುರ್ಗಾ ಮೆನನ್ / 80**

17. ಕೀರ್ತನಾ ಸಾಹಿತ್ಯದಲ್ಲಿ ಅನುಭಾವದ ವಿಶಿಷ್ಟ ನೆಲೆ
❖ **ಡಾ. ಕೆ. ಚಂದ್ರಕಾಂತ್**
❖ **ಡಾ. ದೇವಿಕ ಎಸ್. / 83**

18. ಮಹಾಕವಿ ಹರಿಹರ
❖ **ಡಾ. ಪಾಟೀಲ ಶ್ರೀಕಾಂತ ವಿ. / 87**

19. ವಚನಕಾರ್ತಿಯರ ವಚನಗಳಲ್ಲಿ ಸಮಸಮಾಜದ ಆಶಯ
❖ **ಡಾ. ಕೆ.ಜಿ. ಚವಾಣ / 90**

20. ತಾರಾ ಭಟ್ ಅವರ 'ಲೋಟಸ್ ಪಾಂಡ್' ಮಹಿಳೆಯರು
❖ **ಡಾ. ದೇವಮ್ಮಣ್ಣಿ ಎಂ. / 95**

21. ಆದದ್ದು – ಆಗಬೇಕಾದ್ದು ಮತ್ತು ಓದಬೇಕಾದುದು
❖ **ಡಾ. ವೆಂಕಟೇಶಯ್ಯ ಕೆ.ಎಂ. / 100**

22. ಕಾಷ್ಠಶಿಲ್ಪ : ಜನಪದ ಕಲೆಯ ವೈಭವ
❖ **ಡಾ. ಎಂ.ಎಸ್. ಮಾಗಣಗೇರಿ / 102**

23. ಗೋವು ಮತ್ತು ಅಶ್ವವೈದ್ಯ ಸಾಹಿತ್ಯಕ್ಕೆ ಜೈನಕವಿಗಳ ಕೊಡುಗೆ
❖ **ಡಾ. ಪ್ರವೀಣ್ ಕುಮಾರ್ ಎಸ್. / 108**

24. ಜನಪದ ಮಹಾಕಾವ್ಯ ಪರಂಪರೆ
❖ **ಡಾ. ಅಪ್ಪಗೆರೆ ಸೋಮಶೇಖರ್ / 112**

25. ಕನಕದಾಸರು ಕಂಡ ಆದಿಕೇಶವ ಯಾರು?
❖ **ಡಾ. ಪುರುಷೋತ್ತಮ ಡಿ. / 116**

26. ಅರಟಗಲ್ಲಿನ ಸ್ಮಾರಕ ಶಿಲಾಶಾಸನ
❖ **ಡಾ. ಕೆರೆಪ್ಪಗೌಡ ಎಸ್. ಪಾಟೀಲ / 120**

27. ಡಿ. ವಿ. ಗುಂಡಪ್ಪನವರ ಕಗ್ಗಗಳಲ್ಲಿ ಮನಸ್ಸಿನ ನೆಲೆ : ಒಂದು ವಿವೇಚನೆ
❖ **ಪವಿತ್ರಾ ಮ. ಹೂಗಾರ / 123**

28. 'ಪಂಪಭಾರತ' ಹಾಗೂ 'ಕುಮಾರವ್ಯಾಸ ಭಾರತ'ಗಳಲ್ಲಿನ ಅನಾಮಿಕ ಸ್ತ್ರೀಯರು
❖ **ಲಕ್ಷ್ಮೀಕಾಂತ / 127**

# ಸಂಪಾದಕೀಯ

ಹಿಂದೆಯೂ ಸಾಕಷ್ಟು ಬಾರಿ ಹೇಳಿರುವಂತೆ ಪತ್ರಿಕೆಗೆ ಪ್ರಕಟಣೆಗಾಗಿ ಬರುವ ಎಲ್ಲ ಲೇಖನಗಳೂ ಗುಣಮಟ್ಟದ ದೃಷ್ಟಿಯಿಂದ ಅತ್ಯುತ್ತಮವಾಗಿರುವುದಿಲ್ಲ. ಯಾಕೆಂದರೆ, ಸಂಶೋಧನ ಲೇಖನಗಳು ಮತ್ತು ಪಿಎಚ್.ಡಿ. ಸಂಶೋಧನೆಗಳ ಗುಣಮಟ್ಟ ಕುಸಿದಿದೆ ಎಂದು ಪದೇಪದೇ ಹೇಳುವ ಬಹಳಷ್ಟು ಹೆಸರಾಂತ ವಿದ್ವಾಂಸರು ಲೇಖನವನ್ನೇ ಬರೆಯುವುದಿಲ್ಲ; ಅಥವಾ ಬರೆದರೂ ಪತ್ರಿಕೆಗೆ ಕಳುಹಿಸುವುದಿಲ್ಲ! ಹೀಗಿರುವಾಗ ಇಂತಹ ಪತ್ರಿಕೆಗಳನ್ನು ನಡೆಸುವುದು ದೊಡ್ಡ ಸವಾಲೇ ಹೌದು. ಅದು ಕೇವಲ ಹಣಕಾಸಿನ ದೃಷ್ಟಿಯ ಸವಾಲು ಅಷ್ಟೇ ಅಲ್ಲ. ಹೀಗಿದ್ದರೂ 'ಚಿಂತನ ಬಯಲು' ಕಳೆದ ಹದಿಮೂರು ವರ್ಷಗಳಲ್ಲಿ ಕನ್ನಡದ ಬೌದ್ಧಿಕ ವಲಯದಲ್ಲಿ ಮೂಡಿಸಿದ ಸಂಚಲನದ ಬಗ್ಗೆ ನಮಗೆ ಸಮಾಧಾನವಿದೆ. ಹಾಗೆ ನೋಡಿದರೆ ಈ ಬದಲಾವಣೆಯ ಬಗ್ಗೆ ಪ್ರತ್ಯೇಕವಾಗಿಯೇ ವಿಶ್ಲೇಷಣೆ ಮಾಡಲು ಸಾಕಷ್ಟಿದೆ.

ತಮ್ಮ ಲೇಖನ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂದು ಬಯಸುವ ಲೇಖಕರು ಹಾಗೂ ಸಂಶೋಧಕರು ಇತರರ ಲೇಖನಗಳನ್ನು ತಾವೂ ಓದಬೇಕೆಂದು ಮನಸ್ಸು ಮಾಡಿದರೆ ಪತ್ರಿಕೆಯು ಇನ್ನಷ್ಟು ಚೆನ್ನಾಗಿ ನಡೆದುಕೊಂಡು ಬಂದೀತು. ಈಗಾಗಲೇ 'ಚಿಂತನ ಬಯಲು' ಜೊತೆಗೆ ಇರುವ ಓದುಗರು ಹೊಸಹೊಸ ಓದುಗರಿಗೆ ಪತ್ರಿಕೆಯನ್ನು ಪರಿಚಯಿಸುವಂತೆ ನಮ್ಮ ಕೋರಿಕೆ.

**–ಸಂ.**

# ಕೆ.ಎನ್. ಗಣೇಶಯ್ಯ ಅವರ ಕಥೆಗಳಲ್ಲಿ ರೂಪದರ್ಶಿ

**ಚಂದ್ರಕಲ ಹೆಚ್.ಪಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ), ಮೈಸೂರು

ಕನ್ನಡದ ಶ್ರೀಮಂತ ಕಥನ ಸಾಹಿತ್ಯ ಪರಂಪರೆಯಲ್ಲಿ ಗುರುತಿಸಿಕೊಂಡಿರುವ ಕೃಷಿ ವಿಜ್ಞಾನಿಯಾದ ಕೆ.ಎನ್. ಗಣೇಶಯ್ಯ ಅವರು ತಮ್ಮ ನೂತನ ಕಥನ ಶೈಲಿಯಿಂದ ಇಂದು ಕನ್ನಡ ಸಾರಸ್ವತ ಲೋಕಕ್ಕೆ ಚಿರಪರಿಚಿತರಾಗಿದ್ದಾರೆ. ಅವರ ಕಥೆಗಳಲ್ಲಿ ಚಾರಿತ್ರಕತೆ, ವೈಜ್ಞಾನಿಕತೆ, ವೈಚಾರಿಕತೆ, ರೋಚಕತೆ, ಪತ್ತೆದಾರಿಕೆ, ಸಂಶೋಧನಾತ್ಮಕತೆ, ಕಲ್ಪನೆ ಎಲ್ಲವೂ ಮಿಳಿತವಾಗಿವೆ. ಲೇಖಕರ ಕಲಾಕೇಂದ್ರಿತ ಕಥೆಗಳಲ್ಲಿ ರೂಪದರ್ಶಿಯನ್ನು ಮುಖ್ಯ ಭೂಮಿಕೆಯಲ್ಲಿ ಚರ್ಚಿಸಿರುವ 'ಶಾಲಭಂಜಿಕೆ', 'ಕಲೆಯ ಬಲೆಯಲ್ಲಿ' ಹಾಗೂ 'ಪದ್ಮಪಾಣಿ' ಎಂಬ ಮೂರು ಕಥೆಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಗು ಮಾಡಲಾಗಿದೆ. ಈ ಕಥೆಗಳು ಶಿಲ್ಪಕಲೆ ಹಾಗೂ ಚಿತ್ರಕಲೆಯನ್ನು ಕುರಿತಂತೆ ಪ್ರಧಾನ ನೆಲೆಯಲ್ಲಿ ಚರ್ಚಿಸಿರುವ ಜೊತೆಗೆ, ಆ ಶಿಲ್ಪಗಳ ರಚನೆಗೆ ಸ್ಫೂರ್ತಿದಾಯಕವಾದ ರೂಪದರ್ಶಿ ಯಾರಿರಬಹುದೆಂಬುದರ ಬಗೆಗೆ ಕುತೂಹಲ ಮೂಡಿಸುವುದನ್ನು ಕೂಡ ಗುರುತಿಸಬಹುದಾಗಿದೆ.

ಶಿಲ್ಪಕಲೆಯ ವಿಚಾರವನ್ನು ಕೇಂದ್ರವಾಗುಳ್ಳ 'ಶಾಲಭಂಜಿಕೆ' ಕಥೆಯು ಲೇಖಕರ ಮೊದಲ ಕಥೆಯೂ ಹೌದು. ಇದು ಮೊದಲು ಸುಧಾ ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಗ್ವಾಲಿಯರ್‌ನ ಗುರ್ಜರಿ ಮೊಹಲ್‌ನ ಸಂಗ್ರಹಾಲಯದಲ್ಲಿರುವ 'ಶಾಲಭಂಜಿಕೆ' ಎಂಬ ಶಿಲ್ಪದ ಹೆಸರೇ ಈ ಕಥೆಯ ಕೇಂದ್ರ. ಮೊನಾಲಿಸಾಳ ನಗುವಿನಷ್ಟೆ ಸುಂದರವಾದ ನಗು ಹೊಂದಿರುವ ಶಿಲ್ಪ ಎಂದು ಜಗತ್ತಿನಾದ್ಯಂತ ಪ್ರಸಿದ್ಧಿ ಹೊಂದಿರುವ ಈ ಶಿಲ್ಪವು ಕೇವಲ ಅದರ ಮೋಹಕ ನಗುವಿನಿಂದಷ್ಟೆ ಅಲ್ಲ, ಅದರ ಮೈಮಾಟದಿಂದಲೂ ಪ್ರಸಿದ್ಧಿ ಪಡೆದಿದೆ. ಅಂತಹ ಅತ್ಯದ್ಭುತ ಶಿಲ್ಪದ ರೂಪದರ್ಶಿ ಯಾರಿರಬೇಕೆಂದು ಹುಡುಕಾಟ ನಡೆಸುವ ಕಥಾ ಹಂದರವನ್ನು ಇಲ್ಲಿ ಕಾಣಬಹುದಾಗಿದೆ.

1933ರಲ್ಲಿ ಗ್ಯಾರಸಪುರದ ದೇವಾಲಯದ ಅವಶೇಷಗಳಡಿ ದೊರೆತ ಈ ಶಿಲ್ಪದ ಇತಿಹಾಸವನ್ನು 10ನೇ ಶತಮಾನಕ್ಕೆ ತೆಗೆದುಕೊಂಡು ಹೋಗಿ ರಾಷ್ಟ್ರಕೂಟ ದೊರೆ ದಂತಿದುರ್ಗನ ಕಾಲದೊಂದಿಗೆ ಸಂಬಂಧ ಬೆಸೆಯಲಾಗಿದೆ. ದಂತಿದುರ್ಗ ತನ್ನ ದಂಡಯಾತ್ರೆಯ ಸಂದರ್ಭದಲ್ಲಿ ಉಜ್ಜೈನಿಯ ಮೇಲೆ ಆಕ್ರಮಣ ಮಾಡಿ ಅಲ್ಲಿನ ದೊರೆ ನಾಗಭಟನನ್ನು ಸೆರೆಹಿಡಿಯುತ್ತಾನೆ. ಈ ಸಂದರ್ಭದಲ್ಲಿ ನಾಗಭಟನ ಅರಮನೆಯಲ್ಲಿದ್ದ ಶಾಲಭಂಜಿಕೆಯ ಮಾದಕ ಮೈಮಾಟಕ್ಕೆ ಆತ ಆಕರ್ಷಿತನಾಗುತ್ತಾನೆ. ಆ ಶಿಲ್ಪಕ್ಕೆ ರೂಪದರ್ಶಿಯಾದ ಸುಂದರಿಯನ್ನು ಪಡೆಯಲೇಬೇಕೆಂಬ ಹುಚ್ಚು ಆಸೆಯ ಬೆನ್ನತ್ತಿ ಅದರ ರಹಸ್ಯ ತಿಳಿದುಕೊಳ್ಳುತ್ತಾನೆ. ಆ ಶಿಲ್ಪದ ರಚನೆಕಾರ ಗೋವಿಂದನಿಂದ ಶಾಲಭಂಜಿಕೆಯ ರೂಪದರ್ಶಿ ತನ್ನ ರಾಣಿ 'ರತ್ನಮಾಲಾ' ಎಂದು ತಿಳಿದು ಹತಾಶೆಗೊಳಗಾಗುತ್ತಾನೆ. ತನ್ನ ರಾಣಿಯ ಮೈಮಾಟವನ್ನು ಚಿತ್ರಿಸಿದ ಗೋವಿಂದನನ್ನು ಕೊಲ್ಲುತ್ತಾನೆ.

ರಾಜ್ಯದಾಹದಿಂದ ಪತ್ನಿಯನ್ನು ತೊರೆದು ಬಂದು ಎಲ್ಲವನ್ನು ಗೆದ್ದೆ ಎಂಬ ಯುದ್ಧೋತ್ಸಾಹದ ದಂತಿದುರ್ಗನ ಗರ್ವ ಸತ್ಯ ತಿಳಿದ ಮೇಲೆ ತನ್ನ ಪತ್ನಿಯನ್ನೇ ಗೆಲ್ಲಲಾಗಲಿಲ್ಲವಲ್ಲ ಎಂಬ ಜಿಗುಪ್ಸೆಯತ್ತ ಸಾಗುತ್ತದೆ. ಕಲೆಯ ಮೋಹ ಗೋವಿಂದನನ್ನು ಬಲಿ ತೆಗೆದುಕೊಂಡರೆ, ಗೋವಿಂದನ ಕಲೆಯಲ್ಲಿ ಒಡಮೂಡಿದ ಶಿಲ್ಪವನ್ನು ಮೋಹಿಸಿದ ದಂತಿದುರ್ಗನ ಮೋಹ ಆತನನ್ನು ವೈರಾಗ್ಯದತ್ತ ಕೊಂಡೊಯ್ಯುತ್ತದೆ. ಆತ ತಾನು ಗೆದ್ದ ಪ್ರತಿಹಾರ ರಾಜ್ಯವನ್ನೆಲ್ಲ ಹಿರಣ್ಯಗರ್ಭದಾನ ಎಂಬ ಯಜ್ಞದ ಮೂಲಕ ದಾನ ಮಾಡುತ್ತಾನೆ. "ದಂತಿದುರ್ಗನ ಈ ಮಹಾದಾನದ ಉದ್ದೇಶವು ರಹಸ್ಯವಾಗಿಯೇ ಉಳಿದಿದೆ".[1] ಅಲ್ಲದೇ ಈ ದಾನದ ಸಂದರ್ಭದಲ್ಲಿ ನಾಗಭಟನಿಗೆ ಮಾಳ್ವ ಮತ್ತು ಆವಂತಿಯನ್ನು ಬಿಟ್ಟು ಕೊಡುತ್ತಾನೆ. ನಾಗಭಟನನ್ನು "ದಾನದ ಸಂದರ್ಭದಲ್ಲಿ ದ್ವಾರಪಾಲಕನಾಗಿ ಮಾಡಿದ್ದರಿಂದ ಅವನ ವಂಶದವರಿಗೆ ಗುರ್ಜರಿ ಪ್ರತಿಹಾರಿಗಳು ಅಂದರೆ ದ್ವಾರಪಾಲಕರು ಎಂದು ಈಗಲೂ ಹೇಳುತ್ತಾರೆ".[2]

ಕಥೆಯಲ್ಲಿನ ಪ್ರಮುಖ ವಿಚಾರಗಳಾದ ದಂತಿದುರ್ಗನ ಉಜ್ಜೈನಿಯ ಆಕ್ರಮಣ, ನಾಗಭಟನ ಸೋಲು, ದಂತಿದುರ್ಗನ ಹಿರಣ್ಯಗರ್ಭದಾನ, ಶಾಲಭಂಜಿಕೆಯ ಭಗ್ನ ಪ್ರತಿಮೆ ದೊರೆತಿರುವುದು ಇವುಗಳೆಲ್ಲ ಚರಿತ್ರೆಯಲ್ಲಿ ಉಲ್ಲೇಖವಾಗಿರುವುದು ಸರಿಯಷ್ಟೆ. ಇವುಗಳೊಂದಿಗೆ ಲೇಖಕರು ಶಾಲಭಂಜಿಕೆಯ ರೂಪದರ್ಶಿಯನ್ನಾಗಿ ರತ್ನಮಾಲಾಳನ್ನು ಮಾಡಿ ತಮ್ಮ ಕಲ್ಪನೆಯನ್ನು ಅದರೊಳಗೆ ಹೆಣೆದು, ಚರಿತ್ರೆಯಲ್ಲಿ ನಡೆದ ಘಟನೆಗಳೊಳಗೆ ಕೊಂಡಿಯನ್ನು ಬೆಸೆದಿದ್ದಾರೆ.

ಬೇಲೂರಿನ ಶಿಲ್ಪಕಲೆಯನ್ನು ಕುರಿತಂತೆ ರಚನೆಯಾಗಿರುವ ಪದ್ಮಪಾಣಿ ಕಥಾಸಂಕಲನದ 'ಕಲೆಯ ಬಲೆಯಲ್ಲಿ' ಎಂಬ ಕಥೆಯೂ ಕೂಡ ಇದೇ ಕಥಾ ಹಂದರವನ್ನು ಹೊಂದಿದೆ. ಇಲ್ಲಿಯೂ ಕೂಡ ರೂಪದರ್ಶಿಯೇ ಕಥೆಯ ಕೇಂದ್ರ ಬಿಂದು. ಬೇಲೂರಿನ ಶಿಲಾಬಾಲಿಕೆಯರ ರೂಪದರ್ಶಿ ಶಾಂತಲೆಯೇ ಎಂಬ ವಿಚಾರದ ಸುತ್ತ ಕಥೆಯ ಹೆಣಿಗೆಯಿದೆ. ಅದಕ್ಕೆ ಕಾರಣ ಆಕೆ ನಾಟ್ಯರಾಣಿಯಾಗಿದ್ದುದು ಒಂದು ಪ್ರಮುಖ ಅಂಶವಾಗಿದೆ. ಜನಪದ ಕಥೆಗಳು, ಮನೆಮಾತುಗಳು, ಮೌಖಿಕ ಸಾಹಿತ್ಯ ಪರಂಪರೆಯಲ್ಲಿ ಬೆಳೆದು ಬಂದಿರುವ ವಿಚಾರಗಳಿಂದ ಅದೇ ಸತ್ಯ ಎಂಬ ನಂಬಿಕೆಗೆ ಪುಷ್ಟಿ ದೊರೆತಿದೆ. ಆದರೆ ಇತಿಹಾಸದಲ್ಲೆಲ್ಲೂ ಆ ಬಗ್ಗೆ ಉಲ್ಲೇಖ ದೊರೆಯದ ಹಿನ್ನಲೆಯಲ್ಲಿ ಇಂದಿಗೂ ಅದು ಕಗ್ಗಂಟಾಗಿಯೇ ಉಳಿದಿದೆ.

ಆ ಕಾಲಘಟ್ಟದ ಚಾರಿತ್ರಿಕ ವಿಚಾರಧಾರೆಗಳು ಕೂಡ ಇಲ್ಲಿ ಪ್ರಮುಖವಾಗಿ ಚರ್ಚಿತವಾಗಿವೆ. ವಿಷ್ಣುವರ್ಧನ ವೈಷ್ಣವಧರ್ಮಕ್ಕೆ ಬದಲಾದ ನಂತರ ಜೈನಧರ್ಮಿಯಳಾಗೇ ಉಳಿದ ಶಾಂತಲೆಯ ವಿಚಾರ, ಇಂತಹ ಧರ್ಮ ಸಂಘರ್ಷದ ವೇಳೆಯಲ್ಲಿ ಆಕೆ ಅರಮನೆ ತೊರೆದು ಶಿವಗಂಗೆಗೆ ಹೋಗಿ ನೆಲೆಸಿ ಅಲ್ಲೆ ಕೊನೆಯುಸಿರೆಳೆದ ವಿಚಾರ, ಶಾಂತಲೆಯ ನೆನಪಿಗಾಗಿ ಶ್ರವಣಬೆಳಗೊಳದಲ್ಲಿ ವಿಷ್ಣುವರ್ಧನ ಬಸದಿ ಕಟ್ಟಿಸಿದ್ದ ವಿಚಾರಗಳೆಲ್ಲ ಇಲ್ಲಿ ಗಮನಾರ್ಹವಾಗಿವೆ. ಆದರೆ ಕಥೆಯ ಕೇಂದ್ರ ಬೇಲೂರಿನ ಮದನಿಕೆಯರ ಶಿಲ್ಪಗಳ ರೂಪದರ್ಶಿ ಯಾರೆಂಬುದರಲ್ಲಿ ಇದೆ. ವಿಷ್ಣುವರ್ಧನ ಬೇಲೂರಿನಲ್ಲಿ ವೈಷ್ಣವ ದೇವಾಲಯವನ್ನು ನಿರ್ಮಿಸಲು ಮುಂದಾಗಿ ದಾಸೋಜ ಮತ್ತು ಆತನ ಮಗ ಚವಣರನ್ನು ಅದರ ಮುಖ್ಯ ಶಿಲ್ಪಿಗಳನ್ನಾಗಿ ನೇಮಿಸಿ ನಿರ್ಮಾಣದ ಜವಾಬ್ದಾರಿ ವಹಿಸುತ್ತಾನೆ. ದೇವಾಲಯದ ಸೂರಿಗೆ ಭಿತ್ತಿಗಳನ್ನು ಕೆತ್ತಲು ಬಳಪದ

ಕಲ್ಲನ್ನು ಹುಡುಕುತ್ತಾ ಬಳ್ಳಿಗಾವೆಗೆ ಬಂದ ಇವರು ಅಲ್ಲಿನ ದೇವಾಲಯವೊಂದರ ಒಳಾಂಗಣದಲ್ಲಿದ್ದ ಚಿತ್ರದ ಭಂಗಿಗಳಿಂದ ಆಕರ್ಷಿತರಾಗಿ ಅವುಗಳನ್ನೇ ಬೇಲೂರಿನಲ್ಲಿ ಕೆತ್ತಲು ನಿರ್ಧರಿಸುತ್ತಾರೆ.

ಚವಣ ಅಲ್ಲೆ ಇದ್ದು ಅವುಗಳನ್ನು ಪ್ರತಿ ಮಾಡಿಕೊಂಡು ಶಿಲ್ಪಗಳನ್ನು ಕೆತ್ತಿ ಬೇಲೂರಿಗೆ ಕಳುಹಿಸಿದಾಗ ದಾಸೋಜ ಹಾಗೂ ರಾಣಿ ಶಾಂತಲೆಯ ನೇತೃತ್ವದಲ್ಲಿ ಅವುಗಳನ್ನು ಎಲ್ಲಿ ನೆಲೆಯಾಗಿಸಬೇಕೆಂಬ ನಿರ್ಧಾರವಾಗುತ್ತದೆ. ಇಂತಹ ಅದ್ಭುತ ಮದನಿಕೆಯರ ಶಿಲ್ಪಗಳನ್ನು ಕಂಡ ರಾಜ ಅವುಗಳ ಸೌಂದರ್ಯಕ್ಕೆ ಬೆರಗಾಗಿ ಚವಣನ ಶಿಲ್ಪಕ್ಕೆ ಮೂಲವಾದ ಚಿತ್ರಗಳನ್ನು ರಚಿಸಿದ ಚಿತ್ರಕಾರ ಯಾರೆಂದು ಹುಡುಕುವ ಪ್ರಯತ್ನ ಮಾಡುತ್ತಾನೆ. ಆತನ ಕಾರ್ಯಾಚರಣೆಯಿಂದ ಅವುಗಳನ್ನು ಚಿತ್ರಿಸಿದ್ದು, ತನ್ನ ರಾಣಿವಾಸದ ಸೇವಕಿ ಚವಣನ ಪತ್ನಿ ವನಜಾಂಬಿಕೆ ಎಂದು ತಿಳಿದು ಆಕೆಯನ್ನು ಗುಪ್ತ ವಿಚಾರಣೆಗೊಳಪಡಿಸಿದಾಗ ಆಕೆ ಚಿತ್ರಿಸಿರುವುದು ರಾಣಿ ಶಾಂತಲೆಯ ನೃತ್ಯ ಭಂಗಿಗಳನ್ನು ಎಂದು ತಿಳಿದು ಕೋಪೋದ್ರಿಕ್ತನಾಗುತ್ತಾನೆ. ಆಕೆಯನ್ನು ಕೊಲ್ಲಿಸುತ್ತಾನೆ. ಆದರೆ ನಿಜವಾದ ಸತ್ಯವೇನೆಂದರೆ ಶಾಂತಲೆ ತನ್ನ ನೃತ್ಯ ಮತ್ತು ಸೌಂದರ್ಯವನ್ನು ಶಾಶ್ವತಗೊಳಿಸಬೇಕೆಂಬ ಮಹಾತ್ವಾಕಾಂಕ್ಷೆಯಿಂದ ತಾನೇ ಆ ಶಿಲ್ಪಗಳಿಗೆ ರೂಪದರ್ಶಿಯಾಗಿ ನಿಂತು ಚವಣನಿಂದ ಆ ಚಿತ್ರಗಳನ್ನು ಬರೆಯಿಸಿದ್ದಳು. ಸತ್ಯ ತಿಳಿದಿದ್ದ ವನಜಾಂಬಿಕೆ ತನ್ನ ಪತಿಯ ಕಲಾರಾಧನೆಗೆ ಮಧ್ಯಸ್ಥಿಕೆ ವಹಿಸಿ ತನ್ನ ಜೀವವನ್ನೇ ತ್ಯಾಗ ಮಾಡಿ ತಾನು ಮಾಡದ ತಪ್ಪಿಗೆ ನದಿಯಲ್ಲಿ ಹೆಣವಾಗುತ್ತಾಳೆ. ಹೀಗೆ ಶಾಂತಲೆಯ ನೃತ್ಯ ಕಲಾ ನೈಪುಣ್ಯಕ್ಕೆ ಚವಣನ ಶಿಲ್ಪಕಲಾ ನೈಪುಣ್ಯದಿಂದ ಶಾಶ್ವತತೆ ದೊರೆಯುತ್ತದೆ.

ಪದ್ಮಪಾಣಿ ಕಥಾ ಸಂಕಲನದ 'ಪದ್ಮಪಾಣಿ' ಕಥೆಯು ಕೂಡ ಇದೇ ಕಥಾ ಹಂದರವನ್ನು ಹೊಂದಿದೆ. ಅಜಂತಾದ ಒಂದನೇ ಗುಹೆಯಲ್ಲಿರುವ ಅದ್ಭುತ ಭಿತ್ತಿ ಚಿತ್ರವಾದ ಪದ್ಮಪಾಣಿಯ ಸುಂದರ ಮೊಗದ ಹಿಂದಿನ ರಹಸ್ಯ ಕುರಿತಾದ ವಿಚಾರ ಕಥೆಯಲ್ಲಿ ಅಡಗಿದೆ. ಕ್ರಿ.ಶ. 5ನೇ ಶತಮಾನದಲ್ಲಿ ವಾಕಟಾಕರ ದೊರೆ ಹರಿಸೇನನ ಆಳ್ವಿಕೆಯ ಸಂದರ್ಭದಲ್ಲೂ ಇವುಗಳ ನಿರ್ಮಾಣಕ್ಕೆ ಪುಷ್ಟಿ ದೊರೆತಿದ್ದು, ಈ ಕಥೆ ಆತನ ಕಾಲಘಟ್ಟದ ಚರಿತ್ರೆಗೆ ಸಂಬಂಧಿಸಿದೆ.

ಅಜಂತಾದಲ್ಲಿ 29 ಗುಹೆಗಳಿವೆ. ಅವುಗಳಲ್ಲಿ 1ನೇ ಗುಹೆಯಲ್ಲಿನ ಪದ್ಮಪಾಣಿಯ ಭಿತ್ತಿಚಿತ್ರವನ್ನು ಈ ಕಥೆ ಕುರಿತಿದೆ. ಮಹಾಯಾನದ ಐವರು ಬೋಧಿಸತ್ವರಲ್ಲಿ ಒಬ್ಬರಾದ ಅವಲೋಕಿತೇಶ್ವರನಿಗೆ ಪದ್ಮಪಾಣಿ ಎಂಬ ಹೆಸರಿರುವುದು ತಿಳಿಯುತ್ತದೆ. "ಕರುಣೆಯೇ ಮುಖ್ಯ ರಸವಾಗಿ ಉಳ್ಳ ಪದ್ಮಪಾಣಿ ಅವಲೋಕಿತೇಶ್ವರನ ಜಪಾನಿ ರೂಪ ಕ್ವನ್ನೊನ್, ಚೀನಾದಲ್ಲಿ ಕು ಆನ್–ಯಿನ್ ಎನಿಸಿದೆ. ಅಲ್ಲಿ ಈ ಅವತಾರವನ್ನು ಸಾಮಾನ್ಯವಾಗಿ ಸ್ತ್ರೀಯರಂತೆ ಚಿತ್ರಿಸಲಾಗುತ್ತದೆ. ಭಾರತದಲ್ಲಿ ಇದು ಪುರುಷ ಮೂರ್ತಿ"[3] ಎಡಗೈಯಲ್ಲಿ ಪದ್ಮವನ್ನು ಹಿಡಿದು ಬಲಗೈ ವರದಾನ ಮುದ್ರೆಯಲ್ಲಿದ್ದು ತ್ರಿಭಂಗಿಯಲ್ಲಿರುವ ಈ ಚಿತ್ರ ಇಂದು ಜಗತ್ಪ್ರಸಿದ್ಧಿಯಾಗಿದೆ. 1924 ರಲ್ಲಿ ಭಾರತಕ್ಕೆ ಬಂದು 27 ವರ್ಷಗಳು ಇಲ್ಲಿದ್ದುಕೊಂಡು ಅಜಂತಾದ ಭಿತ್ತಿಚಿತ್ರಗಳನ್ನು ಪ್ರತಿ ಮಾಡಿದ್ದ ಬ್ರಿಟಿಷ್ ಅಧಿಕಾರಿ ಕ್ಯಾಪ್ಟನ್‌ಗಿಲ್ ಅವರ ಮೂಲಕವೇ ಕಥೆಯು ನಿರೂಪಣೆಗೊಂಡಿದೆ. ಪದ್ಮಪಾಣಿಯ ಚಿತ್ರದ ಹಿಂದಿರುವ ರಹಸ್ಯ ಚರಿತ್ರೆಯ ಕಡೆಗೆ ಅದು ಓದುಗರನ್ನು ಕೊಂಡೊಯ್ಯುತ್ತದೆ.

ಹಿಂದೂ ಧರ್ಮದ ರಾಜ ಹರಿಸೇನ ಬೌದ್ಧ ಧರ್ಮದ ಗುಹಾಂತರ ವಿಹಾರಗಳನ್ನು ಕಟ್ಟಲು ಕಾರಣವೇನು? ಎಂಬ ಪ್ರಶ್ನೆಯ ಹಿನ್ನೆಲೆಯಲ್ಲಿ ಕತೆ ಪ್ರಾರಂಭವಾಗುತ್ತದೆ. ಬೌದ್ಧ ಧರ್ಮಗುರು ದಿನ್ನಿಗ ಇದರ ನಿರ್ಮಾಣದ ಜವಾಬ್ದಾರಿ ಹೊತ್ತು ವಿಷ್ಣುಶರ್ಮ ಎಂಬ ಚಿತ್ರಶಿಲ್ಪಿಯ ನೇತೃತ್ವದಲ್ಲಿ ಬುದ್ಧ ಹಾಗೂ ಬೋಧಿಸತ್ವರ ಭಿತ್ತಿ ಚಿತ್ರಗಳನ್ನು ಪಡಿ ಮೂಡಿಸಲು ಪ್ರಾರಂಭಿಸುತ್ತಾನೆ. ಆದರೆ ಕಮಲಾಂಬಿಕೆ ತನ್ನ ಗಂಡನ ಈ ನಿರ್ಮಾಣಕಾರ್ಯ ಜಗತ್ತಿನಲ್ಲಿ ಅದ್ಭುತ ಸೃಷ್ಟಿಯಾಗಬೇಕು, ಅದಕ್ಕಾಗಿ ತಾನೇ ರೂಪದರ್ಶಿಯಾಗುತ್ತೇನೆಂದು ವಿಷ್ಣುಶರ್ಮನನ್ನು ಒಪ್ಪಿಸಿ ಆತನ ಕುಂಚದೊಳಗೆ ತನ್ನ ಸೌಂದರ್ಯವನ್ನು ಸೆರೆಯಾಗಿಸುತ್ತಾಳೆ. ಒಂದು ರೀತಿಯಲ್ಲಿ ವಿಷ್ಣುಶರ್ಮ ತನ್ನ ಕುಶಲತೆಯನ್ನು ಕಳೆದುಕೊಂಡು ತಾನು ಚಿತ್ರಿಸಿದ ಶಿಲ್ಪಗಳಲ್ಲಿ ಕಮಲಾಂಬಿಕೆಯ ರೂಪವನ್ನು ಭಟ್ಟಿ ಇಳಿಸಿಬಿಟ್ಟಿದ್ದ.

ದಿನ್ನಗರಿಗೆ ವಿಷ್ಣುಶರ್ಮನು ಚಿತ್ರಿಸಿದ್ದ ಚಿತ್ರಗಳಲ್ಲಿ ಭಿನ್ನತೆ ಕಾಣದೆ ಏಕತಾನತೆ ಕಂಡಾಗ ಅದರ ಕಾರಣ ಹುಡುಕಲು ಪ್ರಯತ್ನಿಸುತ್ತಾರೆ. ಸತ್ಯ ತಿಳಿದು ಕಂಗಾಲಾಗುತ್ತಾರೆ. ವಿಷ್ಣುಶರ್ಮನ ಕುಂಚದಲ್ಲಿ ಅರಳಿದ ಪದ್ಮಪಾಣಿಯ ಮುಖದಲ್ಲಿ ಕಮಲಾಂಬಿಕೆಯ ಸೌಂದರ್ಯ ಸೆರೆಯಾಗಿರುತ್ತದೆ. ದಿನ್ನಿಗರು ಬೌದ್ಧಧರ್ಮ ಸ್ವೀಕರಿಸುವ ಮೊದಲು ಅವರನ್ನು ಪ್ರೇಮಿಸಿದ್ದ ಕಮಲಾಂಬಿಕೆ, ತನ್ನ ಸೌಂದರ್ಯವನ್ನು ತಿರಸ್ಕರಿಸಿ ಹೋದ ದಿನ್ನಗರ ಮೇಲಿನ ದ್ವೇಷದಿಂದ, ಆ ಇಡೀ ವಿಹಾರದ ಸಂಯೋಜನೆಯಲ್ಲಿ ತನ್ನ ಸೌಂದರ್ಯವನ್ನು ಅಡಕಗೊಳಿಸಿ ದಿನ್ನಗರ ತಿರಸ್ಕಾರಕ್ಕೆ ಈ ಮೂಲಕ ಪ್ರತೀಕಾರ ತೀರಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. "ಆ ಭಿತ್ತಿಗಳ ಅಂತರಾಳದೊಳಗೆ, ಅವು ವಿಜೃಂಭಿಸುವ ವೈಭವದೊಳಗೆ ನಾನು ಅಡಗಿ ಕುಳಿತಿದ್ದೇನೆ. ನಿಮ್ಮ ಬುದ್ಧನಷ್ಟೇ ಎಲ್ಲೆಲ್ಲೂ ತುಂಬಿದ್ದೇನೆ"[4] ಎಂಬ ಆಕೆಯ ಪ್ರತೀಕಾರದ ನುಡಿಗೆ ದಿನ್ನಗರೆ ಕುಸಿದು ಹೋಗುತ್ತಾರೆ. ಆದರೆ ಕಮಲಾಂಬಿಕೆಯ ಮಗನೇ ಆ ಶಿಲ್ಪಗಳ ಮುಂದೆ ನಿಂತು ಅವುಗಳ ಆಕರ್ಷಕ ಮೈಮಾಟ, ಸೌಂದರ್ಯವನ್ನು ಹೊಗಳಿದಾಗ ತನ್ನ ಬಗೆಗೆ ಜಿಗುಪ್ಸೆ ತಾಳಿ, ತಪ್ಪಿನ ಅರಿವಾಗಿ ದೀಕ್ಷೆ ಪಡೆದು ಬೌದ್ಧ ಭಿಕ್ಷ್ಮಣಿಯಾಗುತ್ತಾಳೆ. ಇಲ್ಲಿ ಬರುವ ವಿಷ್ಣುಶರ್ಮ, ದಿನ್ನಿಗ, ಕಮಲಾಂಬಿಕೆಯ ಪಾತ್ರಗಳು ಕಲ್ಪನೆಯಾದರೂ, ಕಲ್ಪನೆಯಾಚೆಗೂ ಕಥೆ ತನ್ನ ಹರಹನ್ನು ಚಾಚಿದೆ.

ಇಲ್ಲಿ ರೂಪುಗೊಂಡಿರುವ ಅಂತಹ ಅತ್ಯಮೋಘ ಶಿಲ್ಪಗಳ ರಚನೆಗೆ ಶಿಲ್ಪಿಗೆ ಪ್ರೇರಣೆಯಾಗಿ ರೂಪದರ್ಶಿ ಇರಬೇಕೆಂಬ ಹಿನ್ನೆಲೆಯಲ್ಲಿ ಈ ಮೂರೂ ಕಥೆಗಳು ತೆರೆದುಕೊಳ್ಳುತ್ತವೆ. ದಂತಿದುರ್ಗನಾಗಲಿ, ವಿಷ್ಣುವರ್ಧನನಾಗಲಿ, ಆ ಶಿಲ್ಪದಲ್ಲಿ ಅಡಗಿರುವ ರೂಪದರ್ಶಿಯರ ಸೌಂದರ್ಯಕ್ಕೆ ಮನಸೋತು ಅವರನ್ನು ಪಡೆಯುವ ಹುಚ್ಚು ಹಂಬಲದಿಂದ ಶಿಲ್ಪಿಗಳನ್ನು ಪೀಡಿಸಿದಾಗ ತಿಳಿಯುವ ಸತ್ಯದಿಂದ ಕುಗ್ಗಿ ಹೋಗುತ್ತಾರೆ. ತಮ್ಮ ಅಂತಃಪುರಕ್ಕೆ ಸೀಮಿತವಾಗಿದ್ದ ರಾಣಿಯರ ಸೌಂದರ್ಯದ ಮಾಟವನ್ನು ಇಡೀ ಜಗತ್ತು ನೋಡುವಂತಾದುದರ ಬಗೆಗೆ ಅವರಿಗಿರುವ ಬೇಸರ ಕಥೆಯಲ್ಲಿ ಅಭಿವ್ಯಕ್ತವಾಗಿದೆ.

ಆ ಹಿನ್ನೆಲೆಯಲ್ಲಿ ಗಮನಿಸಿದಾಗ ಬೇರೆಯ ಹೆಣ್ಣು ಮಕ್ಕಳ ಸೌಂದರ್ಯವನ್ನು, ಕಲೆಯನ್ನು ಆಸ್ವಾದಿಸುವ ರಾಜನಿಗೆ ತನ್ನ ವೈಯಕ್ತಿಕ ವಿಚಾರ ಬಂದಾಗ, ತನ್ನ ರಾಣಿಯ ನೃತ್ಯ ಕಲಾ ನೈಪುಣ್ಯವನ್ನು, ಮೈಮಾಟವನ್ನು ಬೇರೆಯವರು ನೋಡುವುದು,

ಆಸ್ವಾದಿಸುವುದು ಅವಮಾನಕರವಾದ ವಿಚಾರವಾಗುತ್ತದೆ. ತನ್ನ ಪ್ರತಿಷ್ಠೆಗೆ ಕಳಂಕ ಬಂದಂತಾಗುತ್ತದೆ. ಇಲ್ಲಿ ರಾಜನೊಬ್ಬ ಕಲೆಯನ್ನು ನೋಡುವ ಪರಿಮಿತ ದೃಷ್ಟಿಕೋನವನ್ನು ಗಮನಿಸಬಹುದಾಗಿದೆ. ಕೌಟುಂಬಿಕ ವಿಚಾರ ಬಂದಾಗ ರಾಜ ತನ್ನ ವೈಯಕ್ತಿಕತೆಯನ್ನು ಮೀರಿ ನಿಲ್ಲಲಾಗದ ಸಂದರ್ಭವನ್ನಿಲ್ಲಿ ಕಾಣಬಹುದಾಗಿದೆ. ಆದರೆ ಕಲೆಯನ್ನು ಆರಾಧಿಸುವ ರಾಣಿಯರಿಗೆ ತಮ್ಮ ಸೌಂದರ್ಯ ಕಲೆಯಲ್ಲಿ ಅರಳಿ ನಿಂತಿರುವ ಬಗೆಗೆ ಹೆಮ್ಮೆ ಇದೆ. ಪುರುಷನ ಸಂಕುಚಿತ ದೃಷ್ಟಿಕೋನದ ಮುಂದೆ ಕಲಾರಾಧಕಳಾದ ಹೆಣ್ಣಿನ ವಿಶಾಲ ದೃಷ್ಟಿಕೋನ ಮಹತ್ವಪೂರ್ಣವಾಗಿ ಕಾಣಿಸುತ್ತದೆ. ಆದರೆ ದಿನ್ನಿಗರ ಮೇಲಿನ ದ್ವೇಷದಿಂದ ಶಿಲ್ಪಕಲೆಗೆ ರೂಪದರ್ಶಿಯಾದ ಕಮಲಾಂಬಿಕೆಗೆ ಮಾತ್ರ ತನ್ನ ಕಾರ್ಯದ ಬಗೆಗೆ ಖೇದವಿದೆ. ಒಟ್ಟಾರೆ ಈ ಮೂರೂ ಕಥೆಗಳಲ್ಲಿ ರತ್ನಮಾಲಾ ಗೋವಿಂದನ ಕಲೆಗೆ, ಶಾಂತಲೆ ಚವಣನ ಕಲೆಗೆ ಹಾಗೂ ಕಮಲಾಂಬಿಕೆ ವಿಷ್ಣುಶರ್ಮನ ಕಲೆಗೆ ರೂಪದರ್ಶಿಯಾಗಿದ್ದಾರೆ. ಐತಿಹಾಸಿಕ ವಸ್ತುಗಳನ್ನು ಹೊಂದಿರುವ ಈ ಕಥೆಗಳಲ್ಲಿನ ರೂಪದರ್ಶಿಯರ ವಿಚಾರ ಲೇಖಕರ ಕಲ್ಪನೆಯಾದರೂ ಅದು ಕಥೆಗಳಿಗೆ ತಂದುಕೊಟ್ಟಿರುವ ರೋಚಕತೆ ಅವರ ಸೃಜನಶೀಲತೆಗೆ ಸಾಕ್ಷಿಯಾಗಿದೆ.

**ಟಿಪ್ಪಣಿ**

1. ಗಣೇಶಯ್ಯ ಕೆ.ಎನ್., ಶಾಲಭಂಜಿಕೆ, ಪು.ಸಂ 15
2. ಪೂರ್ವೋಕ್ತ, ಪು.ಸಂ 15
3. ವಿಕಿಸೋರ್ಸ್ – ಪದ್ಮಪಾಣಿ – ಮೈಸೂರು ವಿ.ವಿ. ವಿಶ್ವಕೋಶ
4. ಗಣೇಶಯ್ಯ ಕೆ.ಎನ್., ಪದ್ಮಪಾಣಿ, ಪು.ಸಂ. 24

**ಆಕರ ಗ್ರಂಥಗಳು**


1) ಗಣೇಶಯ್ಯ ಕೆ.ಎನ್. : ಶಾಲಭಂಜಿಕೆ, ಛಂದ ಪುಸ್ತಕ, ಬೆಂಗಳೂರು, ಐದನೇ ಮುದ್ರಣ, 2016.

2) ಗಣೇಶಯ್ಯ ಕೆ.ಎನ್. : ಪದ್ಮಪಾಣಿ, ಅಂಕಿತ ಪುಸ್ತಕ, ಬಸವನಗುಡಿ, 4ನೇ ಮುದ್ರಣ, 2018.


❖❖❖

# ಬೇಂದ್ರೆ ಕವಿತೆಗಳಲ್ಲಿ 'ಅನ್ನಾವತಾರ'

**ಡಾ. ಎಚ್.ಕೆ. ವೆಂಕಟೇಶ**
ಕನ್ನಡ ಸಹ ಪ್ರಾಧ್ಯಾಪಕರು
ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಎಂ.ಜಿ.ರಸ್ತೆ, ಹಾಸನ–573202

ಬೇಂದ್ರೆಯವರು ಶಿಷ್ಟಸಾಹಿತ್ಯ ಮತ್ತು ಜಾನಪದ ಸಾಹಿತ್ಯ ಸೃಷ್ಟಿಸಿದ ಕೂಸು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ತಮ್ಮ ಕಾವ್ಯಧ್ವನಿ, ಪದಲಾಲಿತ್ಯ, ಭಾವಗೀತಾಂಶ ಗುಣಗಳಿಂದ ಗಮನ ಸೆಳೆಯುವವರು ವರಕವಿ, ಚಿರಕವಿ ಅಂಬಿಕಾತನಯದತ್ತರು. "ಆಧುನಿಕ ಯುಗದ ಕಾವ್ಯವಾಣಿಯನ್ನು ರೂಪುಗೊಳಿಸಿದ್ದು ಮಾತ್ರವಲ್ಲ, ಈ ಯುಗದ ವಾಣಿಯೂ ಆದರು ಬೇಂದ್ರೆ."

ಸಾಧಾರಣವಾಗಿ ವಿಮರ್ಶಕರು ಬೇಂದ್ರೆಯವರ ಸಮಾಜಪ್ರಜ್ಞೆಯ ಬಗ್ಗೆ ಒತ್ತು ನೀಡುವುದು ಕಡಮೆ. ಈ ಕೊರತೆಯನ್ನು ತುಂಬುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಬೇಂದ್ರೆಯವರು ತಮ್ಮ ಕಾವ್ಯ–ಜೀವನದುದ್ದಕ್ಕೂ ಮಾನವೀಯ ಮತ್ತು ಸಾಮಾಜಿಕ ಆಶಯದ ನೂರಾರು ಕವಿತೆಗಳನ್ನು ಬರೆದರು. ಬೇಂದ್ರೆಯವರ ಕವಿತೆಗಳಲ್ಲಿ ಶ್ರೇಷ್ಠ ಸ್ಥಾನವಿರುವುದು 'ಅನ್ನ'ಕ್ಕೆ. 'ಮಾನವನ ದೀನತೆಯೂ ಧರ್ಮದ ಆತಂತ್ರತೆಯೂ ಅನ್ನದ ಅವ್ಯವಸ್ಥೆಯ ಮೂಲಕವಾಗಿಯೇ ಇದೆ' ಎಂದು 'ಅನ್ನ' ಎಂಬ ಲೇಖನದಲ್ಲಿ ಅವರು ಹೇಳುತ್ತಾರೆ. ಹಸಿವು ಅವರ ದೃಷ್ಟಿಯಲ್ಲಿ ಮಾನವನ ಅತಿದೊಡ್ಡ ಸಾಮಾಜಿಕ ಸಮಸ್ಯೆ. 'ಬಡತನವು ಪಾಪವೆಂದು ತಿಳಿಯದ ಹೊರತು ಮನುಷ್ಯನಿಗೆ ಮುಂದೆ ಗತಿಯಿಲ್ಲ' ಎನ್ನುವುದು ಅವರ ಸ್ಪಷ್ಟ ನಿಲುವಾಗಿತ್ತು. 'ಅನ್ನ'ವನ್ನು ಕುರಿತಂತೆ ಅವರು ಅನೇಕ ಕವನಗಳನ್ನು ಬರೆದಿದ್ದಾರೆ. 'ಕೆಲಸವಿಲ್ಲದವರ ಹಾಡು', 'ತುತ್ತಿನ ಚೀಲ', 'ಬೈರಾಗಿಯ ಹಾಡು', 'ಯಜ್ಞ', 'ಅನ್ನಾವತಾರ', 'ಅನ್ನಯಜ್ಞ', 'ದರಿದ್ರನಾರಾಯಣ', 'ಅನ್ನಬೇಕು', 'ಅನ್ನಬಕಾಸುರ ರಾಜ್ಯದಲ್ಲಿ' ಇವು ಉದಾಹರಣೆಗಳು ಮಾತ್ರ.

ಬೇಂದ್ರೆಯವರ 'ತುತ್ತಿನಚೀಲ' ತನ್ನ ಸಾಮಾಜಿಕಾಂಶದಿಂದ ಗಮನ ಸೆಳೆವ ಕವನ. ಹಸಿವಿನ ಸಮಸ್ಯೆ ಇಡೀ ಮಾನವಜನಾಂಗದ ಸಮಸ್ಯೆ. ಇದು ಜಗತ್ತನ್ನೇ ನುಂಗುವ ರಾಕ್ಷಸರೂಪಿಯದು. 'ತುತ್ತಿನ ಚೀಲ'ದಲ್ಲಿ ವಿಶ್ವವನ್ನೇ ತುತ್ತುಗೊಳ್ಳಲು ಹೊಂಚುತ್ತಿರುವ ಬಡಬಗ್ಗರ ಹಸಿವೆಯ ಭೀಷಣ ಗರ್ಜನೆಯಿದೆ. ಕವನದ ಆರಂಭದ ಸಾಲುಗಳು ಇವು:

**"ಅನ್ನಬ್ರಹ್ಮದ**
**ದೇಗುಲದಲ್ಲಿ**
**ಬೆಳಗೂ ಬೈಗೂ**
**ಛಿಳಿ ಛಿಟಿ ಬೆಂಕಿ,**
**ಡೊಂಬರ ಪೂಜೆಯ**
**ಕಾಗೆಯ ಮಂತ್ರ,**
**ಗಾಳಿಯ ಎಡೆಯು,**
**ಬೊಬ್ಬೆಯ ಗಂಟೆ**

**ಅನ್ನಬ್ರಹ್ಮದ**

**ದೇಗುಲದಲ್ಲಿ''** (ಬೇಂದ್ರೆಯವರ ಸಮಗ್ರ ಕಾವ್ಯ, ಸಂ.–4, ತುತ್ತಿನಚೀಲ, ಪು. 85)

ಅನ್ನಬ್ರಹ್ಮದ ದೇಗುಲದಲ್ಲಿ ವಿಚಿತ್ರ ಪರಿಸ್ಥಿತಿಯ ನಿರ್ಮಾಣವಾಗಿದೆ. ಅನ್ನಕ್ಕಾಗಿ ಕಚ್ಚಾಡುವ ವ್ಯವಹಾರ. ಈ ಕಗ್ಗವಿಯಲ್ಲಿ ಮೌನದ ವೀಣೆಗೆ ಕರುಳಿನ ತಂತಿ, ಮಿಡಿದೂ ಮಿಡಿದೂ ಬೆರಳು ಮುರಿದುವಂತೆ. ಬಡತನದಲ್ಲಿ ಬೆಂದು 'ಅತ್ತಿತು' ಕೂಗಿತು, ಚೀರಿತು ಜೀವ'. 'ತುತ್ತಿನ ಚೀಲ' ಸಾಮಾಜಿಕ ನೆಲೆಯಲ್ಲಿ ನಿಂತು, ಸಂಸ್ಕೃತಿಗೆ ಮತ್ತು ಸಮಾಜಕ್ಕೆ ಸವಾಲನ್ನೆಸೆಯುವ ಶಕ್ತಿಪೂರ್ಣ ಕವನ.

ಬಡವರ ಬದುಕು ಶೋಚನೀಯವಾಗಿದೆ. ನಮ್ಮವರ ದಾರಿದ್ರ್ಯ, ದೀನತೆ, ಹಸಿವು ಇವರ ಬಗೆಯನ್ನು ಬಹಳ ಕದಡಿವೆ. ಬಡವರ, ಹೊಟ್ಟೆಗಿಲ್ಲದವರ ಸಂಕಟ ಇವರ ಕಾವ್ಯವಾಣಿಯನ್ನು ಕೆರಳಿಸಿದೆ. ಧನಿಕರ ಔದ್ಧತ್ಯದಿಂದ ಇವರು ಔಡುಗಚ್ಚಿದ್ದಾರೆ.

**''ಬರಿದೋ ಬರಿದು**

**ತೆರವೋ ತೆರವೂ**

**ಬಡವರ ಬಗ್ಗರ**

**ತುತ್ತಿನ ಚೀಲಾ'' (ಅದೇ, ಪು. 87)**

ಬಡವರ ಪರಿಸ್ಥಿತಿ ಹದಗೆಟ್ಟಾಗ ಅವರ ಆಕ್ರೋಶ ಮಾತಿಗೆ ಮೀರಿದ್ದು. 'ಕಲ್ಕಿ' ಸ್ವರೂಪದ ಕ್ರಾಂತಿಕಾರಿ ನಡಾವಳಿ ಇಲ್ಲಿದೆ. ಬಡವರ ಪರ ಧ್ವನಿಯಾಗಿ 'ಕಲ್ಕಿ' ಹೊರಗಿನಿಂದ ಬಂದ ವ್ಯಕ್ತಿಯಾದರೆ, ಬೇಂದ್ರೆಯವರ ಈ ಪದ್ಯದಲ್ಲಿ ಸಾಮಾಜಿಕ ವ್ಯವಸ್ಥೆ ಸುಧಾರಿಸಲು ಬಡವರ ಒಡಲೊಳಗಿಂದಲೇ ಬರುವುದು ಹೆಚ್ಚು ಧ್ವನಿಪೂರ್ಣವಾಗಿದೆ. ಬಡವರ ಆಕ್ರೋಶದ ಕಿಡಿಯ ಸ್ವರೂಪ: 'ದೇವರದೊಂದು ಗೋರಿಯ ಕಟ್ಟಿ, ಧರ್ಮದ ಧೂಪಕೆ ಬೆಂಕಿಯನಿಕ್ಕಿ, ಗಣಗಣ ಬಾರಿಸಿ ಪ್ರಾಣದ ಗಂಟೆಯ, ಸಾವಿನ ನೋವಿಗೆ ಕಲಮಲವೆದ್ದು ನೆಲವನ್ನೆಲ್ಲಾ ತುತ್ತುವೆನೆಂದು ಗದರುತ್ತಿಹುದು' – ಅದು

**''ಬಡವರ ಬಗ್ಗರ**

**ತುತ್ತಿನ ಚೀಲದ**

**ಒಳಗಿನ ಒಳಗಿನ**

**ಒಳದನಿಯೊಂದು''! (ಅದೇ, ಪು. 88)**

'ತುತ್ತಿನಚೀಲ' ಕವನದ ಅರ್ಥವ್ಯಾಪ್ತಿ ಬೇಂದ್ರೆಯವರ ಕಾವ್ಯಶಕ್ತಿಯಂತೆ ಅಪಾರ. 'ಹತ್ತು ಕಟ್ಟುವುದಕ್ಕಿಂತ ಒಂದು ಮುತ್ತು ಕಟ್ಟು' ಇದು ಗಾದೆ. ಅಂತೆಯೇ ಹತ್ತು ಅವತಾರಗಳಿಗಿಂತ ಒಂದು ಮುತ್ತಿನಂಥ ಅವತಾರ ಸಾಕು. 'ಅನ್ನಾವತಾರ' ಸಂದರ್ಭದ ಬೇಂದ್ರೆಯವರದೇ ಮಾತು: ''ಅನ್ನದ ಅವತಾರವಾಗದೆ ಪ್ರಾಣದ ಉದ್ಧಾರವಾಗುವಂತೆ ಇಲ್ಲ. ಈ ಅವತಾರವಾಗಬೇಕಾಗಿದೆ ಮಾನವನ ಮನೋಲೋಕದಿಂದ. ಆದರೆ ಅಲ್ಲಿ ಭಾವ ಕಷಾಯದಿಂದ ಜ್ಞಾನ ಕರ್ಮಗಳ ಹಾದಿ ಹೀನವಾಗಿಬಿಟ್ಟಿದೆ..........ಅನ್ನ ವಿಚಾರದಲ್ಲಿ ಮಾನವನಿಗಿದ್ದ ದುರ್ಬುದ್ಧಿ ಅವನ ಮನೋದೌರ್ಬಲ್ಯದ ಪರಮಾವಧಿ..... ಇಂದಿನ ರಾಜ್ಯನೀತಿಯ ದುರ್ವಿಪಾಕದ ಒಂದು ಭಾಗ ಎಂದರೆ ಜಗತ್ತಿನ ಅನ್ನವನ್ನು ಬೆಳೆಸುವ ಒಕ್ಕಲಿಗನಿಗೆ ಒಂದು ಸಾಮಾನ್ಯ ಸುಖಜೀವನವನ್ನು ನಡೆಸಲು ಎಲ್ಲರ ಮುಖ ನೋಡಬೇಕಾಗುತ್ತದೆ. ಇಂಥ ದುಷ್ಕಾಲದಲ್ಲಿ ಜೀವನಕ್ಕಿಂತ ಮರಣದ ಮಹತಿಯನ್ನು ವರ್ಣಿಸುವ ತತ್ತ್ವಜ್ಞಾನದ ಭಾಸ ಹುಟ್ಟುತ್ತದೆ.''

ನೀರ ದೇವ, ತೀರದೇವ, ದುಡುಕು ದೇವ, ಮಿಡುಕು ದೇವ..........ದೇವರು ಹತ್ತು ಅವತಾರಗಳ ರೂಪದಲ್ಲಿ ಬಂದಿದ್ದಾನೆ, ಹೋಗಿದ್ದಾನೆ. ಆದರೆ

**"ಬಡವರ ಹೊಟ್ಟೆ, ತಣ್ಣಗಿರಲಿಲ್ಲಾ**

**ತಣ್ಣಗಿರಲಿಲ್ಲ" (ಬೇಂ.ಸ.ಕಾ.ಸಂ.4, ಅನ್ನಾವತಾರ, ಪು. 90)**

ಮಾನವೀಯತೆ ಮೂಡದ ಅವತಾರ ಪ್ರಕ್ರಿಯೆ ವ್ಯರ್ಥವೆಂಬುದು ಕವಿಯ ಇಂಗಿತ. ಯಾವ ದೇವರು ಬಂದರೂ ಬಡವರ ಹೊಟ್ಟೆ ತಣ್ಣಗಾಗದು. ಬಡವರ ಹಸಿವು ಜೀವಂತವಾಗಿಯೇ ಇದೆ. "ಒಂದು ವೇಳೆ ಬರುವುದಾದರೆ ಯಾವ ದೇವನೇ ಆಗಲಿ, ಅವನು ಅನ್ನಾವತಾರಿಯಾಗಿಯೇ ಬರಬೇಕು ಎಂಬುದು ಕವಿ ಆಜ್ಞೆ! ಏಕೆಂದರೆ ಹತ್ತವತಾರದ ಹೇಡಿತನಕ್ಕೆ ಮನಗೊಣಗುಟ್ಟುವುದು. ಗಾಳಿಗೆ ಗಾಳಿಯು ಬಯಲಿಗೆ ಬಯಲು ತಲೆ ರಣಗುಟ್ಟುವುದು."

ಕವನದ ಕೊನೆಯ ಸಾಲು ಅತ್ಯಂತ ಪರಿಣಾಮಕಾರಿ. ಕವಿಯ ಅನ್ನಾವತಾರದ ಪರಿಕಲ್ಪನೆಯ ಪೂರ್ಣರೂಪ ಇದು. ಇದು ಅವರ ಕಾವ್ಯಶಿಲ್ಪದ ಗಟ್ಟಿತನಕ್ಕೆ ನಿದರ್ಶನ. 'ಎಲ್ಲಾ ದೇವರು ಬಂದು ತಲ್ಲಣಗೊಂಡರು ಇಲ್ಲಿಯವರ ಕಾಟ ಇಲ್ಲ್ಯುಳಿಯತಲ್ಲಾ ಇಲ್ಲ್ಯುಳಿತಲ್ಲಾ'

**"ಪ್ರಾಣದೇವನು ನಿ**

**ತ್ರಾಣನಾಗುತ ಅಂದಾ:**

**ಅನ್ನದೇವರು ಮಾತ್ರ ಇನ್ನೂ ಬರಲಿಲ್ಲೋ**

**ಇನ್ನೂ ಬರಲಿಲ್ಲಾ" (ಅದೇ, ಪು. 91)**

'ಎಲ್ಲಾ ದೇವರು ಬಂದು ತಲ್ಲಣಗೊಂಡರೂ ಅನ್ನದೇವರು ಮಾತ್ರ ಇನ್ನೂ ಬರಲಿಲ್ಲಾ' ಎಂಬ ಆಕ್ರಂದನ ನಮ್ಮ ಕಿವಿಗಳಲ್ಲಿ ಇನ್ನೂ ಪಡಿನುಡಿಯುತ್ತಿದೆ

'ಅನ್ನಯಜ್ಞ' ಬೇಂದ್ರೆಯವರ ಮುಖ್ಯ ಕವನ. 'ಯಜ್ಞ' ಕವನಕ್ಕೆ ಕವಿ ಕೊಟ್ಟ ಸಂದರ್ಭಸೂಚಿ ಇಲ್ಲಿಗೂ ಹೊಂದುತ್ತದೆ. "ಅನ್ನಕ್ಕೂ ಪ್ರಾಣಕ್ಕೂ ಇರುವ ನಿಕಟ ಸಂಬಂಧವನ್ನು ಅರಿತೇ ಮನುಷ್ಯ ಮನುಷ್ಯನನ್ನು ಕಾಡುವ ದೌರ್ಜನ್ಯದ ಮಾರ್ಗವನ್ನು ಕಂಡುಕೊಂಡಿದ್ದಾನೆ. ಅನ್ನವನ್ನು ನಾಶಗೊಳಿಸುವ ಅಪಚಾರ, ಅಪಚಾರಿಗಳ ಪ್ರಾಣಕ್ಕೆ ಮುಳುವು. ಅನ್ನಕ್ಕೆ ಮಾಡಿದ ಅನ್ಯಾಯ ಪ್ರಾಣಕ್ಕೆ ಮಾಡಿದ ಅನ್ಯಾಯ.........." ಸ್ವಾತಂತ್ರ್ಯಪೂರ್ವದ ಈ ಕವನ ಯುದ್ಧದಿಂದ ಜರ್ಜರಿತವಾದ ಜಗತ್ತಿನ, ಭಾರತದ ಅಶಾಂತ ವಾತಾವರಣಕ್ಕೆ ಕನ್ನಡಿ ಹಿಡಿಯುತ್ತದೆ. "ಕೂಸುಗಳಿಗೆ ಹಾಲು ಇಲ್ಲ, ಪಶುಬಲಿಯೇ ನಡೆದಿದೆ

**ಕಾಳು ಇದೆ ಕೂಳು ಇಲ್ಲ, ಹಣದ ಹುಚ್ಚು ಹಿಡಿದಿದೆ."**

**(ಬೇಂ.ಸ.ಕಾ.ಸಂ.4, ಅನ್ನಯಜ್ಞ, ಪು.92)**

ಒಂದು ಅನ್ನ ನಮ್ಮ ಸುತ್ತಮುತ್ತಲೂ ಇದೆ, ಆದರೆ ಅದು ಕೆಲವರಲ್ಲಿ ಹೆಚ್ಚು, ಕೆಲವರಲ್ಲಿ ಕಡಿಮೆ, ಮತ್ತೆ ಕೆಲವರಲ್ಲಿ ಇಲ್ಲವೇನೋ ಎನ್ನುವಷ್ಟಿದೆ. ಇದು ಸಮಾನವಾಗಿ ವಿತರಣೆಯಾಗಬೇಕು ಎಂಬುದು ಒಂದು ಭಾವ. ಸಾಮಾಜಿಕ ವಿಷಮತೆಗೆ ಪರಿಹಾರ ಇಲ್ಲದಿಲ್ಲ. ಆದರೆ ಅಂಥ ಮಾನವೀಯ ಮನಸ್ಸು ಅತ್ಯವಶ್ಯ. 'ಸಾಕು ಎಂಬುವಂತೆ ನೀಡು, ಬೇಕು ಎಂಬ ಹೊತ್ತಿಗೆ ಬೆಣ್ಣೆ ಎಣ್ಣೆ ಎರೆಯಬನ್ನಿ ಹಸಿದ ಹೊಟ್ಟೆ ನೆತ್ತಿಗೆ' ಎಂಬ ವಿಶಾಲ ದೃಷ್ಟಿ ಅತ್ಯಗತ್ಯ. ಕವಿ ನಿರಾಶವಾದಿಯಲ್ಲ, ಮುಂದೆ ಸಮೃದ್ಧಕಾಲ

ಬರುವುದೆಂಬ ನಂಬಿಕೆ ಕವಿಯದು. ಆಗ

**"ಹೊನ್ನ ನೆಕ್ಕಿ ಬಾಳ್ವರಿಲ್ಲ, ಅನ್ನ ಸೂರೆ ಮಾಡಿರಿ**

**ಅಣ್ಣಗಳಿರಾ ಅನ್ನದಲ್ಲಿ ಮಣ್ಣ ಕಲಸಬೇಡಿರಿ" (ಅದೇ, ಪು. 93)**

ಕವಿಯ ಮಹಾಮಂತ್ರ 'ಅನ್ನಯಜ್ಞ'. ಈ ಯಜ್ಞದಲ್ಲಿ ಬಲಿ ಇರುವುದಿಲ್ಲ. ಬಲಿಯಾಗಬೇಕಾದ ಜನರಿಗೆ ಉಸಿರು ಕೊಡುವ ಜೀವಂತಿಕೆಯ ಲಕ್ಷಣ ಇಲ್ಲಿದೆ.

'ಅನ್ನಬೇಕು' ಕವನ ಬಡತನದ ಹಿನ್ನೆಲೆಯಲ್ಲಿ ಬಹುಮುಖ್ಯ. 'ಅನ್ನಬೇಕು ಅನ್ನ ನೀಡಬೇಕಣ್ಣಾ', 'ಒಳ್ಳೆ ಮನೆ ಇರಬೇಕು, ಸರಿ ವಸ್ತ್ರಬೇಕು' – ಈ ಸಾಲುಗಳು ಬಡತನದ ಸ್ವರೂಪಕ್ಕೆ ಬರೆದ ವ್ಯಾಖ್ಯೆಗಳಂತಿವೆ. ಅನ್ನದ ಜೀವಂತಿಕೆಯ ಶಕ್ತಿ ಎಲ್ಲರಿಗೂ ದೊರೆತಾಗ ಸಮಾನತೆ, ಸಮೃದ್ಧಿ ಸಮಾಜದಲ್ಲಿ ನೆಲೆಸುತ್ತದೆ. 'ಅನ್ನ ಬಕಾಸುರ ರಾಜ್ಯದಲ್ಲಿ' ಕವಿತೆಯೂ ಅನ್ನ ಶುದ್ಧಿಯ ಮಹತ್ವ, ಮತ್ತದರ ಅವಶ್ಯಕತೆ ಹೇಳುವ ಮುಖೇನ ಮುಖ್ಯವಾಗುತ್ತದೆ.

'ಅನ್ನವೆಲ್ಲವೂ ಆಯಿತು ಚಿನ್ನ, ತಿನ್ನುವುದೇನನ್ನ?' ಎಂದು ನಮ್ಮನ್ನು ಪ್ರಶ್ನಿಸುವ ಬೇಂದ್ರೆಯವರ ಕವನ 'ಕೆಲಸವಿಲ್ಲದವರ ಹಾಡು'. ಅನ್ನದ ಪ್ರಾಮುಖ್ಯತೆ ಕವನದ ತುಂಬ ಅಭಿವ್ಯಕ್ತಿ ಪಡೆದಿದೆ.

**"ಬತ್ತಿತು ಅನ್ನ ಹೊತ್ತಿತು ಚಿನ್ನ**

**ಚಂಚಲ ಲಕ್ಷ್ಮಿಯ ಕಟಾಕ್ಷದನ್ನ**

**ಹುಟ್ಟಿದ ಕೂಡಲೆ ಹಾರಿತೊ ಅಣ್ಣ"**

**(ಬೇಂ.ಸ.ಕಾ.ಸಂ.4, ಕೆಲಸವಿಲ್ಲದವರ ಹಾಡು, ಪು. 98)**

ಚಿನ್ನವನ್ನು ತಿನ್ನಲಾಗುವುದಿಲ್ಲವೆಂಬುದನ್ನು ದೃಷ್ಟಾಂತಗಳ ಮೂಲಕ ಮಾರ್ಮಿಕವಾಗಿ ವಿಶದಪಡಿಸಲಾಗಿದೆ.

**"ಅನ್ನ ಅನ್ನ ಪ್ರಾಣದ ಕೂಗು**

**ಪ್ರಳಯಕೆ ಔತಣ ಹಾಗೂ ಹೀಗೂ**

**ಈ ಹಸಿವೆಯ ಕೊಲ್ಲುವ ಸುತ್ರಾಣ**

**ಎಲ್ಲಿದೆ?ಎಲ್ಲಿದೆ ಬಿಲ್ಲೂ ಬಾಣ?**

**ಚಿನ್ನದ ಸೆರೆಯನು ಮೊದಲೇ ಬಿಡಿಸಿ!" (ಅದೇ, ಪು. 100)**

ಮನುಷ್ಯ ದುರಾಸೆಯ ಸಂಕೇತವಾಗಿ ಬಳಕೆಯಾಗಿರುವ ಚಿನ್ನದ ಜೊತೆ ಜೊತೆಗೇ 'ಅನ್ನ'ದ ಬೆಲೆ ಗಗನಕ್ಕೇರಿದುದರ ದೃಢ ವಾಸ್ತವದ ದುಃಸ್ಥಿತಿಯನ್ನು ಹೇಳುತ್ತದೆ. ಎಲ್ಲ ಜೀವಿಗಳ ಮೂಲಭೂತ ಅವಶ್ಯಕತೆಯಾದ ಅನ್ನ ಚಿನ್ನವಾದುದು ಮಾನವ ಸಮಾಜದ ದುರಂತ, ಎಂಬುದನ್ನು ಕವನ ಧ್ವನಿಸುತ್ತದೆ.

ಬಡತನದಲ್ಲಿ ಬೆಂದ ರೈತನ ಸ್ಥಿತಿಯನ್ನು ವಸ್ತುವಾಗುಳ್ಳ ಕವನ 'ಭೂಮಿ ತಾಯಿಯ ಚೊಚ್ಚಿಲ ಮಗ'. ರೈತ ಇಡೀ ದೇಶಕ್ಕೆ ಅನ್ನಕೊಡುವ ಅನ್ನದಾತ. ಆದರೆ ಅವನ ಸ್ಥಿತಿ–

**"ಉಸಿರಿನ ಕೂಳಿಗೆ**

**ಕಂಬನಿ ನೀರು!!**

**ಹೊಟ್ಟೆಯ ಹತ್ತಿತು**

**ಬೆನ್ನಿನ ಬೆನ್ನು" (ಬೇಂ.ಸ.ಕಾ.ಸಂ–4, ಭೂಮಿತಾಯಿಯ ಚೊಚ್ಚಿಲಮಗ, ಪು. 14)**

ಇದರಷ್ಟು ಪರಿಣಾಮಕಾರಿಯಾಗಿ ಬಡರೈತನ ಜೀವನವನ್ನು ಬೇರೆ ಯಾರೂ ಚಿತ್ರಿಸಿಲ್ಲವೇನೋ ಎನಿಸುತ್ತದೆ.

'ನಾಡ ಜಾಣರಿಗೆ ನಾಕು ಮಾತು' ಅನ್ನದ ದುಡಿಮೆಯ ಮಹತ್ವವನ್ನು, ಯೋಜನೆಯ ಸ್ಪಷ್ಟ ಅನುಷ್ಠಾನವನ್ನು ಸಾರುವ ಕವಿತೆ. 'ಅನ್ನವೆ ಧರ್ಮದ ಮೂಲ ಪ್ರೀತಿಯೆ ಮೋಕ್ಷಕ್ಕೆ ಬಲ ಇದೇ ಕೀಲ ಸರ್ವಕಾಲ' ಎನ್ನುವ 'ಬೈರಾಗಿಯ ಹಾಡು' ಅವರ ವಿಶ್ವದೃಷ್ಟಿಕೋನವನ್ನು ಪ್ರಸ್ತುತಪಡಿಸುತ್ತದೆ. 'ಇಂದು ನಮಗೆ ಬೇಕಾಗಿಹುದು: ಅನ್ನಛತ್ರ ಇದು ಪ್ರಜಾರಾಜ್ಯ' ಎಂದು 'ಯಾರಮೂರ್ತಿ' ಕವನ ನುಡಿದರೆ, 'ಒಡೆತನದಲಿ ಬಡತನವನೆ ಬಿತ್ತಬೇಡ ಹೊಲದಲಿ' ಎಂದು 'ಹಲವು ಮಾತೆ' ಕವನ ಹೇಳುವುದು. ಇದೇ ಸಂದರ್ಭದಲ್ಲಿ 'ಪತಿತ', 'ಎಚ್ಚರದ ಕಣ್ಣು', 'ನಾ ಕವಿತಾ ಬರೀಬಾರ್ದಿತ್ತು', 'ಆಹಾ –ಊಹಾ', 'ಸೌಭಾಗ್ಯದರ್ಶನ', 'ದೇಮವ್ವನ ಮೆರವಣಿಗೆ', 'ಓ ಚಾರ್ವಾಕು!', 'ಮಧುವಾತಾ ಋತಾಯತೇ!', 'ಇಲಿ', 'ಅನಸೂಯೆಯ ಕನಸು', 'ಸಂಧಿಕಾಲ', 'ತತಃಕಿ', 'ಕಣ್‌ಪಾಪೆ', 'ಪಂಚಾರತಿ', 'ನೀಲಿಕೆಟ್ಟ ಸುದ್ದಿ', 'ವೆಂಕಾ', 'ಲೋಕಾರೂಢಿ', 'ಅದೇ ಬಿಗಿ ಬಂದೈತಿ', 'ಕಲ್ಲಾಗಿದ್ದೇನೇನೋ', 'ಸ್ವಾತಂತ್ರ್ಯದೇವಿಗೆ', 'ಅಘನಾಶಿನಿ' ಈ ಕವನಗಳು ಸಾಮಾಜಿಕ ಸ್ಪಂದನೆಯಿಂದ ಗಮನ ಸೆಳೆಯುವಂಥವು ಎಂದು ಹೇಳಬಹುದು.

**ಕೊನೆ ಟಿಪ್ಪಣಿಗಳು**

1. ಗೋಪಾಲಕೃಷ್ಣ ಅಡಿಗ, ಯುಗದ ವಾಣಿ ಬೇಂದ್ರೆ, ಬೇಂದ್ರೆ–ಕಾವ್ಯ (ಸಂ. ಡಾ. ಜಿ.ಎಸ್. ಆಮೂರ), 2003, ಪು. 42
2. ನಿ.ಶ್ರೀತ ಬಲ್ಲಾಳ, ಅಂಬಿಕಾತನಯರ ಕವನಗಳಲ್ಲಿ ಮಾನವ ಭವಿಷ್ಯ ದರ್ಶನ, ಇಳಿದು ಬಾ ತಾಯಿ, (ಸಂ. ಡಾ. ಬುದ್ದಣ್ಣ ಹಿಂಗಮಿರೆ) 1977, ಪು. 762
3. ಸಾ.ಶಿ.ಮರುಳಯ್ಯ, ಬೇಂದ್ರೆಯವರ ಕಾವ್ಯದಲ್ಲಿ ದೈವೋಪಾಸನೆ, ಇಳಿದು ಬಾ ತಾಯಿ (ಸಂ. ಡಾ. ಬುದ್ದಣ್ಣ ಹಿಂಗಮಿರೆ) 1977, ಪು. 107
4. ಉದ್ಧೃತ: ಜಿ.ಎಸ್.ಆಮೂರ, ಭುವನದ ಭಾಗ್ಯ, 1996, ಪು. 169

**ಪರಾಮರ್ಶನ ಗ್ರಂಥಗಳು**

1. ಆಮೂರ.ಜಿ.ಎಸ್. ಭುವನದ ಭಾಗ್ಯ, 1996, ಪ್ರಿಯದರ್ಶಿ ಪ್ರಕಾಶನ, ಬೆಂಗಳೂರು
2. ಆಮೂರ.ಜಿ.ಎಸ್.(ಸಂ) ಬೇಂದ್ರೆ ಕಾವ್ಯ, 2003, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
3. ಬುದ್ಧಣ್ಣ ಹಿಂಗಮಿರೆ(ಸಂ), ಇಳಿದು ಬಾ ತಾಯಿ, 1977, ಸಾಹಿತ್ಯ ಮಂಟಪ, ಧಾರವಾಡ
4. ರಾಘವೇಂದ್ರರಾವ್ ಎಚ್.ಎಸ್., ಹಾಡೆ ಹಾದಿಯ ತೋರಿತು, 1995, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು
5. ವಾಮನ ಬೇಂದ್ರೆ(ಸಂ), ಔದುಂಬರ ಗಾಥೆ, ದ.ರಾ. ಬೇಂದ್ರೆ ಜೀವನ ಮಹಾಕಾವ್ಯ, ಸಂ.1–6, 2003, ವರಕವಿ ಡಾ.ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ
6. ಶಂಕರ ಮೊಕಾಶಿ ಪುಣೇಕರ, ಬೇಂದ್ರೆ ಕಾವ್ಯ ಮೀಮಾಂಸೆ, 1989, ಸಾಹಿತ್ಯ ಭಂಡಾರ, ಬೆಂಗಳೂರು

❖❖❖

# ಸಾಂಸ್ಕೃತಿಕ ಕೇಂದ್ರ : ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ

**ಡಾ. ಮಹಾಂತ ಗೌಡ ಪಾಟೀಲ**
ಕನ್ನಡ ಸಹಪ್ರಾಧ್ಯಾಪಕರು
ದೇವಾನಾಂಪ್ರಿಯ ಅಶೋಕ ಸ.ಪ್ರ.ದ. ಕಾಲೇಜು, ಮಸ್ಕಿ, ರಾಯಚೂರು ಜಿಲ್ಲೆ– 584124

ಹೈದ್ರಾಬಾದ ಕರ್ನಾಟಕ ವ್ಯಾಪ್ತಿಗೆ ಒಳಪಡುವ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ಇಂದಿನ ಯಾದಗಿರಿ ಜಿಲ್ಲೆಯ ಸುರಪುರ ಮತ್ತು ಶಹಾಪುರ ಈ ಮೂರು ತಾಲೂಕಗಳ ಗಡಿಯಾದ ಕೃಷ್ಣಾ, ಮತ್ತು ಭೀಮಾ ನದಿಗಳ ಹರಿವಿನ ವ್ಯಾಪ್ತಿಯುಳ್ಳ ಪ್ರದೇಶವೇ 'ಸಗರನಾಡು'. ಪ್ರಾಚೀನ ಕಾಲದಿಂದಲೂ ಐತಿಹಾಸಿಕವಾಗಿ ಹಾಗೂ ಪೌರಾಣಿಕ ಮತ್ತು ಧಾರ್ಮಿಕವಾಗಿ ಹೆಸರು ಪಡೆದಿರುವ ಈ ನಾಡು ಚಾರಿತ್ರಿಕ ದೃಷ್ಟಿಯಿಂದ ಅತ್ಯಂತ ಮಹತ್ವ ಪಡಿದಿದೆ. ಈ ಸಗರ ನಾಡಿನ ಕೇಂದ್ರ ಸ್ಥಾನವೇ ಸುರಪುರ. ಈ ಪ್ರದೇಶ ಅನೇಕ ಅರಸುಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು. 1634ರಲ್ಲಿ ಗೋಸಲ ವಂಶದ ಬಹರಿ ಪಿತಾಂಬರಿ ಪಿಡ್ಡನಾಯಕನಿಂದ ಸುರಪುರ ಸಂಸ್ಥಾನ ಸ್ಥಾಪನೆಯಾಯಿತ್ತು. 222 ವರ್ಷಗಳಕಾಲ ಸುದೀರ್ಘ ಆಳ್ವಿಕೆ ನೆಡೆಸಿತು. ಶೂರರ ಪುರವೇ "ಸುರಪುರ" ಈ ಸುರಪುರ ಪುರಸಭೆಯ ವ್ಯಾಪ್ತಿಯಲ್ಲಿ ಬರುವ "ರಂಗಂಪೇಟೆ" ಸುರಪುರರಾಜ ವಂಶದ ಪರಂಪರೆಯಲ್ಲಿ ಬಂದ ಮುಮ್ಮಡಿ ರಾಜ ವೆಂಕಟಪ್ಪನಾಯಕನ ರಾಣಿಯಾಗಿದ್ದ 'ರಂಗಮ್ಮ'ನ ಸವಿನೆನಪಿಗಾಗಿ 1882ರಲ್ಲಿ 'ರಂಗಮ್ಮ'ನ ಪೇಟೆಯನ್ನು ಸ್ಥಾಪಿಸಲಾಯಿತು. ರಂಗಮ್ಮ ಒಳ್ಳೆಯ ಕವಿಯತ್ರಿಯಾಗಿದ್ದಳು. ಎಂದು ಪುರುಷಕಾರಿ 'ಲೋಕಯ್ಯ'ನವರು ತಮ್ಮಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. 182 ವರ್ಷಗಳ ಇತಿಹಾಸವಿರುವ ರಂಗಂಪೇಟೆ ಅಂದು ಬ್ರಾಹ್ಮಣರ ಅಗ್ರಹಾರವಾಗಿತ್ತು.

ಸ್ವಾತಂತ್ರ್ಯ ಪೂರ್ವದಲ್ಲಿ ನಿಜಾಮನ ಆಳ್ವಿಕೆಗೆ ಒಳಪಟ್ಟ ಈ ನಾಡು ಮರಾಠಿ, ಉರ್ದು, ಅಲ್ಲದೆ ಇತರ ಅನ್ಯಭಾಷೆಗಳ ಪ್ರಾಬಲ್ಯಕ್ಕೆ ಸಿಲುಕಿ ನರಳುತಿತ್ತು. ಹೀಗಾಗಿ ಇಲ್ಲಿಕನ್ನಡ ಭಾಷೆಗೆ ಯಾವುದೇ ಪ್ರಾಧಾನ್ಯವಿಲ್ಲದೆ ತಿರಸ್ಕಾರಕ್ಕೆ ಒಳಗಾಗಿತ್ತು. ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ಸುರಪುರದ ಕೇಂದ್ರಬಿಂದುವಾದ ರಂಗಂಪೇಟೆ ಎಂಬಲ್ಲಿ ಕನ್ನಡ ಮಾತನಾಡುವ ಪ್ರೇಮಿಗಳು ಒಂದೆಡೆ ಸೇರಿ ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಪ್ರಸಾರ ಮತ್ತು ಪ್ರಚಾರಕ್ಕೆ ಕಂಕಣಬದ್ದರಾದರು. ಇದರ ಪ್ರತಿಫಲವೇ "ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘ". ಇದು 1943ರ ಎಪ್ರಿಲ್ 15ರಂದು ಸ್ಥಾಪನೆಯಾಯಿತು.

**ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಸ್ಥಾಪನೆಯ ಸಂದರ್ಭ**

"ರಾಜ ಪ್ರತ್ಯೇಕ್ಷ ದೇವತ" ಎನ್ನುವ ಮಾತು 1942–43ರಲ್ಲಿ ಸುರಪುರ ತಾಲೂಕಿನ ರಾಜಕೀಯ ಇತಿಹಾಸವನ್ನು ಅವಲೋಕಿಸಿದಾಗ ಸುಳ್ಳಾಗುತ್ತದೆ. ರಾಜನಾದವನು ಸರ್ವಧರ್ಮ ಸರ್ವಭಾಷಿಕರನ್ನು ಸಮಾನ ದೃಷ್ಟಿಯಿಂದ ನೋಡಬೇಕು. ಇದಕ್ಕೆ ವ್ಯತಿರಿಕ್ತವಾಗಿ ಹೈದ್ರಾಬಾದ ಸಂಸ್ಥಾನದ ನಿಜಾಮ ಆಳ್ವಿಕೆ ಸಂದರ್ಭದಲ್ಲಿ ಕನ್ನಡ ಭಾಷೆ ಕನ್ನಡ ಸಂಸ್ಕೃತಿಯು ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೊಳಗಾಗಿತ್ತು. ಕನ್ನಡ

ಜನರ ಕನ್ನಡ ಭಾಷೆಯ ಬೆಳವಣಿಗೆಗೆ ಅದೊಂದು ಅಗ್ನಿಪರೀಕ್ಷೆಯ ಕಾಲವಾಗಿತ್ತು. ಕೇವಲ ಉರ್ದುಭಾಷೆಯನ್ನು ರಾಜ್ಯಭಾಷೆಯನ್ನಾಗಿ ಮಾಡಿ ದೇಶಿ ಭಾಷೆಗಳಿಂದ ಕನ್ನಡ, ಮರಾಠಿ ಮತ್ತುತೆಲಗು ಭಾಷೆಗಳ ಬೆಳವಣಿಗೆಗೆ ಕಡಿವಾಣ ಹಾಕಲಾಗಿತ್ತು. ಶಿಕ್ಷಣ ಮಾಧ್ಯಮವು ಉರ್ದುವೆಂದು ರಾಜಾಜ್ಞೆಯನ್ನು ಮಾಡಲಾಗಿತ್ತು. ನಿಜಾಮರ ಭಾಷಾ ದಬ್ಬಾಳಿಕೆಯ ಧೋರಣೆಯಿಂದ ಕನ್ನಡ ಭಾಷೆ ಮತ್ತು ಸಂಸ್ಕೃತಿ ಬೆಳವಣಿಗೆ ಕುಂಠಿತವಾಗಿತ್ತು. ಆಳುವ ವರ್ಗದ ಭಾಷೆಯಾದ ಉರ್ದುವನ್ನು ಪ್ರಾಥಮಿಕ ಶಾಲೆಯಿಂದ ಸ್ನಾತಕೋತ್ತರ ಪದವಿಯವರೆಗೂ ಕಲಿಯಬೇಕಾಗಿತ್ತು. ಇಂತಹ ಕಠಿಣ ಪರಿಸ್ಥಿತಿಯ ಸಂದರ್ಭದಲ್ಲಿ ಪ್ರಭುತ್ವವನ್ನು ಎದುರುಹಾಕಿಕೊಂಡು ಕನ್ನಡಭಾಷೆ ಸಂಸ್ಕೃತಿಯನ್ನು ಕಟ್ಟಿಬೆಳೆಸಲು ಸಂಘ-ಸಂಸ್ಥೆಗಳ ಅವಶ್ಯಕತೆಯಿತ್ತು. ಹೀಗೆ ಕಠಿಣ ಪರಿಸ್ಥಿತಿಯಲ್ಲಿ ಈ ಸಂಘವು ಸ್ಥಾಪನೆಯಾಯಿತು.

ಹೈದ್ರಬಾದ ನಿಜಾಮನ ಆಳ್ವಿಕೆಗೆ ತೆಲಂಗಾಣದ ಎಂಟು, ಮರಾಠವಾಡದ ಐದು, ಹಾಗೂ ಕರ್ನಾಟಕದ ಮೂರು ಜಿಲ್ಲೆಗಳು ಸೇರಿ ಒಟ್ಟು 16 ಜಿಲ್ಲೆಗಳು ಸೇರಿದ್ದವು. ತೆಲಂಗಾಣದಲ್ಲಿ 80 ಲಕ್ಷ, ಮರಾಠವಾಡದಲ್ಲಿ 40 ಲಕ್ಷ, ಕರ್ನಾಟಕದಲ್ಲಿ 20 ಲಕ್ಷ ಹೀಗೆ ಒಂದೂವರೆ ಕೋಟಿ ಜನಸಂಖ್ಯೆ ಸಂಸ್ಥಾನಗಳಲ್ಲಿತ್ತು. 1931ರ ಜನಗಣತಿಯ ಪ್ರಕಾರ ಮರಾಠಿ 32,86,336, ತೆಲುಗು-16,72,094 ಹಾಗೂ ಉರ್ದು 15,02,272 ಜನ ಮಾತನಾಡುತ್ತಿದ್ದರು. ಇನ್ನುಳಿದ ಸುತ್ತಮುತ್ತಲಿನ ಸಂಸ್ಥಾನಗಳಲ್ಲಿ ಬಹುಸಂಖ್ಯಾತ ಕನ್ನಡಿಗರೂ ಇದ್ದರು. ಈ ಸಂಸ್ಥಾನಗಳ ಅಧಿಪತಿಗಳು ಮರಾಠರಾಗಿದ್ದರು. ಇಲ್ಲಿ ಕರ್ನಾಟಕದ ಆಂದ್ರ ಗಡಿಭಾಗಗಳಲ್ಲಿ ಉಸ್ಮಾನಬಾದ, ನಾಂದೇವಾಡ್, ಮಹಿಬೂಬನಗರಗಳಲ್ಲಿ ಹೆಚ್ಚಿನ ಜನರು ಕನ್ನಡ  ಮಾತೃಭಾಷೆಯವರು.

ಕಪಟರಾಳ ಕೃಷ್ಣರಾವ್ ಹೇಳುವಂತೆ "ಕನ್ನಡ ಭಾಷೆಯ ಅವಸ್ಥೆ ಕನ್ನಡಿಗರ ರಾಜ್ಯವು ಹೋದೊಡನೇ ರಾಜಕೀಯ ಸಂಸ್ಥೆಗೆ ಸಂಬಂಧಪಟ್ಟ ಪಾರಿಭಾಷಿಕ ಶಬ್ದಗಳನ್ನು ಜನರು ಮರೆತುಬಿಟ್ಟರು", ಪೇಶ್ವೆ ರಾಜ್ಯದ ಉದಯದಿಂದ ಮರಾಠಿಯೇ ಸಾರ್ವತ್ರಿಕವಾಗಿ ಬರಹದ ಭಾಷೆಯಾಗಿತ್ತು. ಕನ್ನಡವು ಬರೀ ಮಾತನಾಡುವ ಭಾಷೆಯಾಗಿ ಸಂತೆ, ಪೇಟೆ, ಹಳ್ಳಿ ಮನೆ-ಮಾರುಗಳಲ್ಲಿ ಮಾತ್ರ ಉಳಿಯುತು. ಬಾಲಕರ ಅಕ್ಷರ ಅಭ್ಯಾಸವು 'ಮೋಡಿ' ಭಾಷೆಯಲ್ಲಿ ಮೊದಲಾಯಿತು. ಇದರಿಂದ ಜನರಿಗೆ ಕನ್ನಡ ಇಲ್ಲದಂತಾಯಿತು. ಈ ಭಾಗದಲ್ಲಿ ಇಂದಿಗೂ 'ಮೋಡಿ' ಭಾಷೆ ವ್ಯಾಪಾರಿಗಳಲ್ಲಿ ಬಳಕೆಯಾಗುತ್ತಿದೆ. ಶಿಕ್ಷಣ, ಸಂಸ್ಕೃತಿ ಹೀಗೆ ವಿವಿಧ ನೆಲೆಗಳಲ್ಲಿ ಕನ್ನಡಪರ ಸಂಘಟನೆಯ ಅಗತ್ಯ ತುಂಬಾ ಇತ್ತು.

**ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಗುರಿ ಉದ್ದೇಶಗಳು**

ಕನ್ನಡ ಶಿಕ್ಷಣದ ಬಗೆಗಿನ ಜಾಗೃತಿ ಒಂದಡೆಯಾದರೆ, ಕನ್ನಡ ಸಾಹಿತ್ಯ, ಸಂಸ್ಕೃತಿ ಭಾಷೆ ಮತ್ತಿತರ ಭಾಗದ ಕನ್ನಡಿಗರ ಸಮಸ್ಯೆಗಳನ್ನು ಅರ್ಥೈಸಿ, ನಿವಾರಿಸಿ ಕನ್ನಡ ಭಾಷಿಕರನ್ನು ಒಂದಾಗಿಸುವ ಪ್ರಯತ್ನಗಳನ್ನು ತೆರೆಮರೆಯಲ್ಲಿಯೇ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ನಡೆಸಿತು. ಸಾಹಿತ್ಯ ಸಂಘವು ಆರಂಭದಲ್ಲಿ ಕನ್ನಡ ನಾಡು ನುಡಿಯ ಸೇವೆ ಮಾಡುತ್ತಲೇ ಈ ಭಾಗವನ್ನು ಸಾಂಸ್ಕೃತಿಕವಾಗಿ ಬೆಳೆಸುವ ಪ್ರಯತ್ನ ಮಾಡಿತು. ಅದು ವ್ಯಾಪಕವಾಗಿ ಬೆಳೆದು ಒಂದು ಪ್ರಾಂತಿಯ ಮಟ್ಟದ ಸಂಘವಾಗಿ ಬೆಳೆಯಿತು.

ಸಂಘದ ಆರಂಭದ ಧ್ಯೇಯೊದ್ದೇಶಗಳು ಹೀಗಿದ್ದವು.

1. ಈ ಭಾಗದ ಬರಹಗಾರರ, ಸಾಹಿತಿಗಳ ಬರಹರೂಪದ ಸಾಹಿತ್ಯವನ್ನು ಸಂಗ್ರಹಿಸುವುದು ಮತ್ತು ಪ್ರಕಟಿಸುವುದು.
2. ತತ್ವಶಾಸ್ತ್ರ, ಪ್ರಕೃತಿ ಶಾಸ್ತ್ರ, ಚರಿತ್ರೆ, ಸಾಹಿತ್ಯ ಇವೇ ಮೊದಲಾದ ವಿಷಯಗಳಿಗೆ ಸಬಂಧಪಟ್ಟ ಕನ್ನಡದಲ್ಲಿ ಬರೆಯುವದಕ್ಕೆ ಪ್ರೋತ್ಸಾಹ ನೀಡುವುದು.
3. ಉತ್ಕೃಷ್ಟವಾದ ಪ್ರಾಚೀನ ಗ್ರಂಥಗಳನ್ನು ಕನ್ನಡ ದೇಶಗಳ ಚರಿತ್ರೆಯನ್ನೊಳಗೊಂಡ ಗ್ರಂಥಗಳನ್ನು ಸಂಗ್ರಹಿಸಿ ಪರಿಷ್ಕರಿಸಿ ಪ್ರಕಟಿಸುವುದು.
4. ಭಾರತ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ಲೇಖನಗಳನ್ನು, ಹೈದರಾಬಾದ ನಿಜಾಂನಿಂದ ವಿಮೋಚನೆಗಾಗಿ ರಚಿಸುವ ಲೇಖನಗಳನ್ನು ಸಂಘದ ಪತ್ರಿಕೆಯಾದ "ಅರುಣಾ"ದಲ್ಲಿ ಪ್ರಕಟಿಸುವುದು.
5. ನಾಡಹಬ್ಬಗಳ ಮೂಲಕ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಈ ಭಾಗದಲ್ಲಿ ಜೀವಂತವಾಗಿರಿಸುವುದು.
6. ಕನ್ನಡ ಭಾಷೆ, ಸಾಹಿತ್ಯ, ಸಮಾಜ, ಜಾಗೃತಿ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿದ ವಿದ್ವಾಂಸರಿಗೆ ಸಾಧಕರಿಗೆ ಸಮಾಜ ಕಾರ್ಯಕರ್ತರಿಗೆ ಗುರ್ತಿಸಿ ಸಂಘದ ವಾರ್ಷಿಕೋತ್ಸವದಲ್ಲಿ ಮತ್ತು ನಾಡಹಬ್ಬದಲ್ಲಿ ಸನ್ಮಾನಿಸುವುದು.
7. ಕನ್ನಡ ನಾಡಿನ ಖ್ಯಾತಕವಿಗಳನ್ನು, ಸಾಹಿತಿಗಳನ್ನು ಕರೆಯಿಸಿ ಆಗಾಗ ಸಭೆ ಸಮಾರಂಭಗಳನ್ನು ಏರ್ಪಡಿಸಿ ಉಪನ್ಯಾಸಗಳನ್ನು ಮಾಡಿಸುವುದು.
8. ದತ್ತಿ–ಉಪನ್ಯಾಸಮಾಲೆಗಳನ್ನು ಆರಂಭಿಸುವುದು.
9. ಕವಿಗೋಷ್ಠಿ, ಸಾಹಿತ್ಯಗೋಷ್ಠಿ ಮತ್ತು ಸಂಗೀತಗೋಷ್ಠಿಗಳನ್ನು ನಡೆಸುವುದು.
10. ಪುಸ್ತಕ ಪ್ರಕಟಣೆ ಮತ್ತು ಪ್ರಸಾರ.

ಹೀಗೆ ಹತ್ತು ಹಲವಾರು ಗುರಿಗಳನ್ನು ಇಟ್ಟುಕೊಂಡು ಆರಂಭವಾದ ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘದ ಗುರಿಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತ ಮುನ್ನಡೆದವು.

**ಕನ್ನಡ ಭಾಷಾ ಬೆಳವಣಿಗೆಯಲ್ಲಿ ಸಂಘದ ಪಾತ್ರ**

ಕನ್ನಡ ಭಾಷೆ ಬೆಳೆಯಲು ಆಸ್ಪದ ನೀಡಬಾರದು ಎನ್ನುವುದು ನಿಜಾಂನ ಮನೋಭಾವ. ಈಗ ಇಂಗ್ಲಿಷ್ ಭಾಷೆಯ ಮೋಹವಿದ್ದಂತೆ ಆಗ ಜನರಿಗೆ ಉರ್ದು ಭಾಷೆಯ ಮೋಹ ಹೆಚ್ಚಾಗಿತ್ತು. ಕನ್ನಡ ಭಾಷೆ ಸಂಸ್ಕೃತ ಶಬ್ದಗಳಿಂದ ಪರಿಪುಷ್ಟವಾಗಿ ಬೆಳೆಸಿದಂತೆ, ಉರ್ದು ಭಾಷೆಯು ಅರಬ್ಬಿ ಹಾಗೂ ಫಾರಸಿ ಭಾಷೆಗಳ ಸತ್ವ ಹೀರಿಕೊಂಡು ಶ್ರೀಮಂತ ಭಾಷೆಯಾಗಿ ಬೆಳೆಯಿತು. ಪಂಡಿತರ ಹಾಗೂ ಅಧಿಕಾರಿಗಳ ಆಡಳಿತ ಭಾಷೆಯಾಗಿತ್ತು. ಹೀಗೆ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಕಡ್ಡಾಯವಾಗಿ "ತಾಬದೇ ಖಾಲಿ ಕೇ ಅಲಂ ಯಹಾರಿಯಾಸತ್‌ರಖೇತುಜಕೋ ಉಸ್ಮಾಬಸದ್‌ಇಜಲಾಲ ಸಲಾಮತ್‌ರಖೆ. (ನಿಜಾಂಉಸ್ಮಾನ ಅಲಿ ಖಾನ್ ಹಾಗೂ ಆತನ ಕುಟುಂಬದವರಿಗೆ ಅಲ್ಲಾಹ ಒಳ್ಳೆಯದು ಮಾಡಲಿ ಹೈದ್ರಾಬಾದ ರಾಜ್ಯ ಹಾಗೂ ಅಸಫೀಯಾ ಮನೆತನ ಸೂರ್ಯಚಂದ್ರರಿರುವವರೆಗೂ ಮುಂದುವರಿಯಲಿ, ದೇವರು ನಿನಗೆ ಸಂಪತ್ತು ಕರುಣಿಸಲಿ ಪ್ರಜೆಗಳು ನಿನ್ನ ಹುಟ್ಟು ಹಬ್ಬವನ್ನು ಆಚರಿಸುವಂತಾಗಲಿ)

ಎಂದು ಹೇಳಬೇಕಿತ್ತು.

ಕನ್ನಡಿಗರ ಪರವಾದ ಕೆಲಸವನ್ನು ಮಾಡಿ ಕನ್ನಡಿಗರಲ್ಲಿ ಜಾಗೃತಿಯನ್ನುಂಟುಮಾಡಿತು. ಜೊತೆಗೆ ನಿಜಾಂ ಅವರ ಸರ್ಕಾರದ ವಿರುದ್ಧ ಈ ಭಾಗದ ಜನರನ್ನು ಎತ್ತಿಕಟ್ಟುವಲ್ಲಿ ಮತ್ತು ಸಂಘಟಿತರಾಗುವಲ್ಲಿ ಕನ್ನಡ ಸಾಹಿತ್ಯ ಸಂಘ ಅಪಾರವಾದ ಶ್ರಮ ಪಟ್ಟಿತು. ಕನ್ನಡವನ್ನು ಬೆಳೆಸುವ ಕಾರ್ಯಕ್ರಮಗಳು ಆರಂಭದಲ್ಲಿ ಗುಪ್ತ ರೀತಿಯಲ್ಲಿ ನಡೆದವು. ಈ ರೀತಿಯ ಬೆಳೆವಣಿಗೆಯನ್ನು ಶೇಷಾಶಾಸ್ತ್ರಿಗಳು ಪತ್ರಿಕೆಗಳಲ್ಲಿ ಬರೆದರೆ ಸಾಹಿತ್ಯ ಸಂಘದ ಸದಸ್ಯರು ಮನೆ ಮನೆಗೆ ಕನ್ನಡದ ಕರಪತ್ರಗಳನ್ನು ಹಂಚುತ್ತಿದ್ದರು. ಕೀರ್ತನೆಗಳನ್ನು ಹೇಳುವುದರ ಜೊತೆಗೆ ರಾಜ್ಯದಲ್ಲಿನ, ದೇಶದಲ್ಲಿನ ವಿದ್ಯಮಾನಗಳ ಬಗ್ಗೆ ತಿಳಿಸುತ್ತಿದ್ದರು. ಮುಂದೆ ಆಗಬಹುದಾದ ಬೆಳವಣಿಗೆಗಳನ್ನು ಹಾಗೂ ಅದಕ್ಕೆ ಪೂರ್ವತಯಾರಿಯನ್ನು ಹೇಗೆ ಮಾಡಿ ಕೊಳ್ಳಬೇಕು ಎನ್ನುವುದನ್ನು ಹರಿಕೀರ್ತನೆಗಳ ನೆಪದಲ್ಲಿ ತಿಳುವಳಿಕೆ ಕೊಡುತ್ತಿದ್ದರು. ನಿಜಾಮನಿಗೆ ತಿಳಿಯದಂತೆ ಗುಪ್ತವಾದ ಕಾರ್ಯ ಚಟುವಟಿಕೆಗಳು ನಡೆಸುವ ಕೇಂದ್ರವಾಗಿ ಈ ಸಂಘವು ಕೆಲಸಮಾಡಿರುವುದನ್ನು ಕಾಣುತ್ತೇವೆ.

ಯಾವುದೇ ಕನ್ನಡದ ಕಾರ್ಯಕ್ರಮಗಳನ್ನು ಮಾಡಲು ನಿಜಾಂ ಸರ್ಕಾರದಿಂದ ಪರವಾನಿಗೆ ಇರಲಿಲ್ಲ. ಆದರೆ ಉರ್ದು ಮಾದ್ಯಮದಲ್ಲಿ ಮಾಡುವುದಾದರೆ ಸರ್ಕಾರದ ಪರವಾನಿಗೆ ಇತ್ತು. ಇಂತಹ ಸಂದರ್ಭದಲ್ಲಿ ಅಧಿಕೃತವಾಗಿ ನಿಜಾಂನಿಂದ ಪರವಾನಿಗೆಯನ್ನು ಪಡೆಯದೇ ನಿಜಾಂನ ವಿರುದ್ದ ಬಂಡಾಯದ ಕಹಳೆಯನ್ನು ಊದಿ ಕನ್ನಡ ಪ್ರಸಾರ ಮತ್ತು ಪ್ರಚಾರದ ಉದ್ದೇಶದಿಂದ ಸಂಘವು ಆರಂಭವಾಗಿತ್ತು. ಬೀದರನಲ್ಲಿ ಭಾಲ್ಕಿ ಮಠದ ಶಾಲೆಗಳಲ್ಲಿ ಉರ್ದು ಮಾಧ್ಯಮದ ಶಾಲೆಗಳೆಂದು ನಾಮ ಫಲಕಗಳನ್ನು ಹಾಕಿ ಶಾಲೆಯ ಒಳಗಡೆ ಕನ್ನಡವನ್ನು ಕಲಿಸುತ್ತಿದ್ದರು. ಹಾಗೆಯೇ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘಕ್ಕೆ ಕನ್ನಡದ ಬದ್ಧತೆಯೇ ಇದರ ಅಡಿಪಾಯವಾಗಿತ್ತು. ರಜಾಕಾರರ ಹಾವಳಿ ಸಂದರ್ಭದಲ್ಲಿ ಈ ಸಂಘದ ಅನೇಕ ಕಾರ್ಯಕರ್ತರನ್ನು ಬಂಧಿಸಿ ಮೂರು ವರ್ಷಗಳ ಕಾಲ ಹೈದರಾಬಾದ ಸೆರೆಮನೆಗೆ ಹಾಕಲಾಯಿತು.

**ಕನ್ನಡ ಕಟ್ಟುವಲ್ಲಿ ಅರುಣಾ ಪತ್ರಿಕೆ**

ಒಂದಡೆ ಈ ಭಾಗ ಹೈದ್ರಾಬಾದ ನಿಜಾಂನ ಕಪಿಮುಷ್ಠಿಯಲ್ಲಿ ಕನ್ನಡ ಭಾಷೆ ಮತ್ತು ಹಿಂದೂಗಳು ನಲುಗಿದ ಕಾಲ ಅದು. ನಿಜಾಂನನ್ನು ಹೊಗಳಿ ಬರೆದ ಪತ್ರಿಕೆಗಳು ಸಂಭಾವನೆಯನ್ನು ಪಡೆದುಕೊಂಡರೆ ವಿರುದ್ದ ಹಾಗೂ ಕನ್ನಡ ಪರವಾಗಿ ಪತ್ರಿಕೆಗಳು ಬರೆದರೆ ಅವು ಕೆಂಗಣ್ಣಿಗೆ ಗುರಿಯಗುತ್ತಿದ್ದವು. ಹೀಗೆ ಅವನ ಆಳ್ವಿಕೆ ವಿರುದ್ಧ ಸಮರ ಸಾರಿದ ಸಾಹಿತ್ಯ ಸಂಘ ಉರ್ದುಮಯವಾಗಿದ್ದಂತಹ ಕನ್ನಡ–ನಾಡು–ನುಡಿ ಮತ್ತು ಸಂಸ್ಕೃತಿಯನ್ನು ಮತ್ತು ಈ ಭಾಗದಲ್ಲಿ ಸಾಹಿತ್ಯಕ ಚಟುವಟಿಕೆಗಳ ಮೂಲಕ ಸಾಹಿತ್ಯವನ್ನು ಪ್ರಸಾರ ಮಾಡುವ ಗುರಿಯೊಂದಿಗೆ 'ಅರುಣಾ' ಕೈಬರಹದ ಮಾಸ ಪತ್ರಿಕೆ ಹೈದ್ರಾಬಾದ್ ಕರ್ನಾಟಕ ಹೋರಾಟಗಾರರಾದ ಮಣ್ಣೂರು ಜಯತೀರ್ಥಚಾರ್ಯ ಹಾಗೂ ರೇವಣಿಸಿದ್ದಯ್ಯ ರುದ್ರಸ್ವಾಮಿ ಮಠ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು.

**ಪ್ರಕಟಣೆ ಮತ್ತು ಪ್ರಸಾರ**

ಕನ್ನಡ ಸಾಹಿತ್ಯ ಸಂಘದ ವಿವರ ಗ್ರಂಥಮಾಲೆಗಳಿಂದ ಸುಮಾರು 14 ಕೃತಿಗಳನ್ನು

ಇದುವರೆಗೆ ಪ್ರಕಟಿಸಿದೆ. ವಿವಿಧ ಕ್ಷೇತ್ರಗಳಲ್ಲಿ ಸೇವೆಸಲ್ಲಿಸಿದ ರಂಗಂಪೇಟ ಕನ್ನಡ ಸಾಹಿತ್ಯ ಸಂಘ. 1992ರಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿತು. 2004ರಲ್ಲಿ ಏಪ್ರಿಲ್‌ನಲ್ಲಿ ಎರಡು ದಿನಗಳ ಕಾಲ ಸಹಸ್ರಾರು ಕನ್ನಡ ಅಭಿಮಾನಿಗಳ ಸಂಭ್ರಮ ಮತ್ತು ಸಡಗರದಿಂದ ವಜ್ರಮಹೊತ್ಸವವನ್ನು ಆಚರಿಸಿಕೊಂಡಿತು. ಹೀಗೆ ಸ್ವಾತಂತ್ರ ಪೂರ್ವ ಕಾಲದಿಂದಲೂ ಈ ನಾಡಿನ ಸಂಸ್ಕೃತಿಯನ್ನು, ಭಾಷೆಯನ್ನು ರಕ್ಷಿಸುತ್ತಾ ಒಂದು ಸಾಂಸ್ಕೃತಿಕ ಕೇಂದ್ರವಾಗಿ ಹೈದ್ರಾಬಾದ ಕರ್ನಾಟಕದ ಚಟುವಟಿಕೆಯ ಕೇಂದ್ರ ಬಿಂದುವಾಗಿ ಕೆಲಸ ಮಾಡಿ ಜನರ ಜೀವನದ ಉಸಿರಿನೊಂದಿಗೆ ಬೆರೆತು ಹೋಗಿದೆ. ಸ್ವಾತಂತ್ರ್ಯ ಪೂರ್ವಕಾಲದಿಂದಲೂ ನಾಡು ನುಡಿ ಜಾಗೃತಿಯ ರಥವಾಗಿ ಸುರಪುರದ ಬೀದಿಯುದ್ದಕ್ಕೂ ಸಾಗಿ ಕನ್ನಡ ನಾಡಿನಾದ್ಯಂತ ಮತ್ತು ನಾಡಿನ ಸೀಮೋಲ್ಲಂಘನೆಗೈದು ಮಹಾರಾಷ್ಟ್ರದ ಸೊಲ್ಲಾಪುರ ನಾಂದೇಡ್ ಹಾಗೂ ಆಂಧ್ರಪ್ರದೇಶದ ಮೈಹಿಬೂಬ ನಗರದ ಕನ್ನಡ ಭಾಷಿಕ ಸಮುದಾಯಗಳ ಹೃದಯ ತಟ್ಟಿ ತನ್ನ ಇರುವಿಕೆಯನ್ನು ಸಾಬೀತುಪಡಿಸಿದ್ದು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಹೆಗ್ಗಳಿಕೆಯಾಗಿದೆ.

**ಆಕರಗ್ರಂಥಗಳು**


1. ಮಹಾಬಲೇಶ್ವರಪ್ಪ, 'ಹೈದ್ರಾಬಾದ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು', 1997
2. ಗೋಪಾಲ ರಾವ್ ಹೆಜಿಬ್, 'ಹೈದ್ರಾಬಾದ ಮುಕ್ತಿ ಸಂಘರ್ಷ', 2001
3. ಟಿ. ಎಮ್ ಭಾಸ್ಕರ್. 'ಕಲ್ಬುರ್ಗಿ ಜಿಲ್ಲಾ ದರ್ಶನ', 2005
4. ನಾಗಪ್ಪ ತ್ರಿವೇದಿ 'ವಜ್ರದೀಪ್ತಿ', 2004
5. ಅಮರೇಶ ನುಗಡೋಣಿ 'ಹೈದ್ರಾಬಾದ ಕರ್ನಾಟಕದ ಹಾಡು–ಪಾಡು', 2003
6. ಸಂದರ್ಶನ ನಾಗಪ್ಪ ತ್ರಿವೇದಿ, ಎ. ಕೃಷ್ಣ ಸುರಪುರ. ಗುರುಬಸಯ್ಯ ಅಮ್ಮಾಪುರ, 23–08–2008


❖❖❖

ಭವದಾಗಸದೊಳು ಗಂಟೆಯ ನಾದ
ದೇವನ ನೆನೆದೆನು ಮನದಲ್ಲೀಗ

# ಮಹಿಳಾ ಆತ್ಮಕಥನಗಳಲ್ಲಿ ಸ್ವಪ್ರಜ್ಞೆಯ ನೆಲೆಗಳು

**ಅಕ್ಷತ ಕೆ.**
ಸಂಶೋಧನಾರ್ಥಿ, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ

ಆಧುನಿಕ ಶಿಕ್ಷಣದ ಪ್ರಭಾವದಿಂದ ವಾಸ್ತವದಲ್ಲಿ ಹೆಣ್ಣು ಬದುಕು ಸಾಮಾಜಿಕವಾಗಿ ತನಗೊಂದು ಅಸ್ತಿತ್ವವಿದೆ ಮತ್ತು ಆತಂಕವಿದೆ ಎಂದು ಗುರುತಿಸಿಕೊಳ್ಳಲಾರಂಭಿಸಿದಳು. ಇದು ಯಾವುದೇ ಕೆಲವು ಹೆಂಗಸರ ವೈಯಕ್ತಿಕ ಪ್ರಶ್ನೆಯಾಗಿಲ್ಲ. ಒಟ್ಟು ಹೆಣ್ಣು ಸಮುದಾಯದ ಎಲ್ಲರಿಗೆ ಸಂಬಂಧಿಸಿದ್ದು. ಹಾಗಾಗಿ ಉತ್ತರಗಳೂ ಕೂಡ ಸಮುದಾಯದ ನೆಲೆಯಲ್ಲೇ ದೊರೆಯಬೇಕಿತ್ತು. ಹೀಗೆ ಸ್ತ್ರೀ ಸಮುದಾಯದ ಹಲವು ಸಮಸ್ಯೆಗಳನ್ನು ವಿವರವಾಗಿ ಅರ್ಥೈಸಿಕೊಳ್ಳುವ ಹಾಗೂ ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನವಾಗಿ ಮಹಿಳಾ ಬದುಕಿನ ಅಧ್ಯಯನ, ಬರಹಗಳು ಹೆಚ್ಚುತ್ತಾ ಬಂದವು. ಈ ಮೂಲಕ ಮಹಿಳೆಯರ ಅಂತರಂಗದ ಭಾವನೆಗಳನ್ನು ಮತ್ತು ಬಹಿರಂಗದ ಬದುಕನ್ನು ಸರಿಯಾಗಿ ಗ್ರಹಿಸುವ ಮಾರ್ಗಗಳನ್ನು ಕಂಡುಕೊಳ್ಳಲು ಮಹಿಳಾ ಅಧ್ಯಯನ ಯತ್ನಿಸುತ್ತದೆ.

ಹೀಗೆ ತಮ್ಮ ಹಲವು ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಂಡು ದಿಟ್ಟತನದಿಂದ ಬದುಕಿದ, ಸ್ವ-ಅರಿವಿನ ನೆಲೆಯಲ್ಲಿ ಹಾದಿ ಸವೆಸಿ ಯಶಸ್ವಿಯಾದ ಹಲವು ಮಹಿಳೆಯರು ತಮ್ಮ ಅನುಭವಗಳನ್ನು ಸಮಾಜಕ್ಕೆ ಪರಿಚಯಿಸಿ ಇತರ ಮಹಿಳೆಯರ ಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ನೆರವಾಗಿದ್ದಾರೆ. ಅವರ ಅನುಭವದ ಮೂಸೆಯಿಂದ ಹೊರಮೂಡಿದ ಆತ್ಮಕಥೆಗಳೂ ಸಹ ಸ್ತ್ರೀ ಜಗತ್ತಿಗೆ ಹೊಸ ಮಾರ್ಗಗಳನ್ನು ತೋರುವ ಕೈಪಿಡಿಗಳಂತಿವೆ. ಆತ್ಮಕತೆಗಳು ಅನುಭವದ ಅಧಿಕೃತ ದಾಖಲೆಗಳು ಎನಿಸಿರುವುದರಿಂದ ಅವಗಳಿಗೆ ವಿಶೇಷ ಮಹತ್ತ್ವವಿದೆ.

ಈ ಅಧ್ಯಯನದಲ್ಲಿ ಚರ್ಚಿಸಲಾದ ಮಹಿಳೆಯರ ಅನುಭವಗಳು ಒಬ್ಬ ಮಹಿಳೆಯ ಅನುಭವ ಮಾತ್ರವಲ್ಲದೇ ಮಹಿಳೆಯರ ಪ್ರಾತಿನಿಧಿಕ ಅನುಭವವೂ ಆಗಿರುತ್ತದೆ. ಇಂತಹ ಅನೇಕ ಆತ್ಮಕಥೆಗಳಲ್ಲಿ ಹೆಣ್ಣು ಹೆಣ್ತನದ ಬಗೆಗಿನ ಅರಿವನ್ನು ತನ್ನ ಜೀವನದೃಷ್ಟಿಯ ಹಾಗೂ ಅನುಭವದ ನೆಲೆಯಲ್ಲಿ ವಿವರಿಸಿರುವುದನ್ನು ಕಾಣಬಹುದು. ನ್ಯಾನ್ಸಿ ಚೋಡೊರೋವ್ ಎಂಬವರು ಮನೋವಿಶ್ಲೇಷಣಾತ್ಮಕ ನೆಲೆಯಲ್ಲಿ "ಹೆಣ್ಣು ವ್ಯಕ್ತಿತ್ವದ ಚಹರೆಯು ಏಕಘನರೂಪಿಯಾಗಿರದೆ ನಿರ್ದಿಷ್ಟ ಆಕಾರ ಪಡೆಯದೆ ಸದಾ ಚಲನಶೀಲವಾಗಿರುತ್ತದೆ."[1] ಎಂದಿದ್ದಾರೆ. ಹೀಗೆ ಚಲನಶೀಲವಾದ ಬದುಕಿನ ಅನುಭವಗಳನ್ನು ಹೆಣ್ಣಿನ ಆತ್ಮಕಥೆಗಳು ತೆರೆದಿಡುತ್ತವೆ.

ಸಾಮಾಜಿಕ ಸಂರಚನೆಯ ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ ಹೆಣ್ಣು ತಾನು ಯಾರು, ತನ್ನ ಸ್ವಂತ ಆಲೋಚನೆಗಳೇನು ಎಂದು ಪ್ರಶ್ನಿಸಿಕೊಳ್ಳುವ ಕಡೆಗೆ ಸ್ತ್ರೀಸಮಾಜ ಹೊರಳುತ್ತಿರುವುದನ್ನು ಆತ್ಮಕಥೆಗಳು ಬಂಬಿಸುತ್ತವೆ. ಅಸಹಜವಾದ ಸಾಮಾಜಿಕ ರಚನೆಗಳನ್ನು ಒಡೆದು ವಾಸ್ತವದ ಅರಿವಿನೊಂದಿಗೆ ತಮ್ಮನ್ನು ತಾವು ಪುನರ್‌ರಚಿಸಿ

ವ್ಯಾಖ್ಯಾನಿಸಿಕೊಳ್ಳ ಹೊರಟ ಮಹಿಳೆಯರ ಅನುಭವ ಕಥನಗಳಿವು.

ತನಗೆ ನಿಜವಾಗಿ ಬೇಕಿರುವುದೇನು ಎಂಬ ಹುಡುಕಾಟದಲ್ಲಿ ತೊಡಗಿ ಬದುಕಿನ ಹೊಸ ದಾರಿಗಳನ್ನು ರೂಪಿಸಿಕೊಳ್ಳತೊಡಗಿದ ವಾಸ್ತವದ ಕಥೆಗಳಿವು. ಸರಸ್ವತೀಬಾಯಿ ರಾಜವಾಡೆ ಮುಂತಾದವರು ಹೇಳುವ ಹಾಗೆ ಮಹಡಿಯಿಂದ ಕೆಳಗಿಳಿದು ಬರಲೂ ಸ್ವಾತಂತ್ರ್ಯವಿಲ್ಲದ ಸನ್ನಿವೇಶದಲ್ಲಿ ಒಂಟಿ ಬದುಕಿನ ಒತ್ತಡಗಳಿಂದ ಜಾಗೃತರಾಗಿ ಅವರು ಅನಿವಾರ್ಯವಾಗಿ ಪ್ರತಿಭಟನೆಯ ಮೂಲಕ ತನ್ನ ಆಯ್ಕೆಗಳಿಗೆ ಮಹತ್ವಕೊಡುವ ಸನ್ನಿವೇಶ ಮಹತ್ವಪೂರ್ಣವಾದುದು. ಅವರು ಅಂದಿನ ಮಹಿಳೆಯರ ಸ್ಥಿತಿ–ಗತಿಗಳನ್ನು ಸಮಾಜದ ಚೌಕಟ್ಟಿನೊಳಗೆ ಬಂದಿಗಳಾಗಿ ಮುದುರಿ ಕುಳಿತ ಮನಸ್ಸುಗಳನ್ನು ಧೈರ್ಯದಿಂದ ಎಚ್ಚರಿಸುವ, ಪತ್ರಿಕೆಗಳಲ್ಲಿ ಬರಹಗಳ ಮೂಲಕ ಪ್ರಶ್ನಿಸುವ ಸ್ವತಂತ್ರ ಮನೋವೃತ್ತಿಯ ಲೇಖಕಿಯಾಗಿ ರೂಪುಗೊಳ್ಳುತ್ತಾರೆ.

ತಮಗೊದಗಿದ ಮಿತಿ ಇಲ್ಲದ ಕಷ್ಟ–ಕಾರ್ಪಣ್ಯಗಳನ್ನು ಎದುರಿಸಿ ನಿಂತು ಬೆಳೆವ ಪ್ರಜ್ಞೆಯನ್ನು ಹೊಂದಿದವರಲ್ಲಿ ವೃತ್ತಿರಂಗಭೂಮಿ ಹಿನ್ನೆಲೆಯಲ್ಲಿ ಬಂದ ಬಿ. ಜಯಶ್ರೀರವರ ಆತ್ಮಕಥೆ 'ಕಣ್ಣಾ ಮುಚ್ಚೇ ಕಾಡೇಗೂಡೇ' ಗಮನಾರ್ಹವಾದುದು. ರಂಗಭೂಮಿ, ರಾಜಕಾರಣ ಕ್ಷೇತ್ರಗಳಲ್ಲಿ ತೊಡಗಿ ಸಾಧನೆಗೈದ ಇಂತಹ ಸ್ತ್ರೀಯರು ಸ್ವಂತ ಅಸ್ಥಿತ್ವವನ್ನು ಕಟ್ಟಿಕೊಳ್ಳುವಲ್ಲಿ ನಿರಂತರ ಹೋರಾಟದ ಮೂಲಕ ಬದುಕನ್ನು ಕಟ್ಟಿಕೊಂಡವರು.

ಜಯಶ್ರೀರವರು ಅನಿಶ್ಚಿತತೆಯ ಬದುಕನ್ನು ಎದುರಿಸಿ ತಂದೆ ಪ್ರೀತಿ ಕಾಣದೆ, ನಾಟಕ ಕಂಪನಿಯನ್ನೆ ತನ್ನ ನೆಲೆಯನ್ನಾಗಿಸಿಕೊಂಡು ಕಾಲು ಕಳೆದುಕೊಂಡ ತಾಯಿಯ ಆರೈಕೆ ಮಾಡುತ್ತಾ, ಗಂಡನ ಪ್ರೀತಿಯಿಂದ ದೂರಾಗಿ ಸಾಂಸಾರಿಕ ಬದುಕಿನ ನೆಮ್ಮದಿಯನ್ನು ಕಳೆದುಕೊಂಡರೂ ಛಲ ಬಿಡದೆ ಅಭಿನಯವನ್ನೇ ವೃತ್ತಿಯನ್ನಾಗಿಸಿಕೊಂಡು ಮಗಳ ಪೋಷಣೆ ಮಾಡುತ್ತಾ ಸ್ವಾಭಿಮಾನದ ಬದುಕನ್ನು ನಡೆಸಿದವರು. ಮುಂದೊಮ್ಮೆ ಸಾಮಾಜಿಕ ಮನ್ನಣೆಗಳಿಸಿ ರಾಜ್ಯ ಸಭಾ ಸದಸ್ಯೆಯಾಗಿ ನಿಲ್ಲುವ ಮಟ್ಟಿಗೆ ಸ್ವಂತ ಅಸ್ಥಿತ್ವವನ್ನು ಉಳಿಸಿಕೊಂಡು ಬೆಳೆದು ನಿಲ್ಲುವ ಅವರ ಗಟ್ಟಿತನ, ಪುಂಖಾನುಪುಂಖವಾಗಿ ಬಂದ ಕಷ್ಟಗಳನ್ನೆದುರಿಸುವ ಸಂದರ್ಭದ ಸ್ವ–ಅರಿವಿನಿಂದ ಮೂಡಿರುವಂಥದ್ದು. ರೋಚಕ ಅನುಭವ ಲೋಕವು, ನಿಜವಾದ ಹೆಣ್ಣಿನ ಮನೋವಿಕಾಸದ ಸ್ಥೈರ್ಯದ ಸ್ವರೂಪವನ್ನು ಬಿಂಬಿಸುತ್ತದೆ.

ಪ್ರತಿಭಾನಂದಕುಮಾರ್‌ರವರ ಅನುದಿನದ ಅಂತರಗಂಗೆ ಆತ್ಮಕಥೆಯಲ್ಲಿ ಸಮಾಜದ ಬಂಧನಗಳಿಂದ ಸಿಕ್ಕುಗಳಿಂದ ಬಿಡಿಸಿಕೊಂಡು ಸ್ವತಂತ್ರ ನೆಲೆಯನ್ನು ಕಂಡುಕೊಳ್ಳುವ ಹಂಬಲ ತೀವ್ರವಾಗಿರುವುದನ್ನು, ಸ್ವಪ್ರಜ್ಞೆಯ ಉತ್ತುಂಗ ಸ್ಥಿತಿಯನ್ನು ಕಾಣಬಹುದು, ಪರಿಪೂರ್ಣ ಪ್ರೀತಿಯ ಹುಡುಕಾಟವೇ ಅವರ ಆತ್ಮಕಥೆಯಲ್ಲಿ ಮುಖ್ಯವಾಗಿ ಗೋಚರಿಸುತ್ತದೆ.

ಡಾ. ವಿಜಯಾರವರ 'ಕುದಿ ಎಸರು' ಆತ್ಮಕಥೆಯು ಛಲದಿಂದ ಬದುಕನ್ನು ಕಟ್ಟಿಕೊಂಡ ಚಿತ್ರಣವನ್ನು ನೀಡುತ್ತದೆ. ವಿಜಯಾರವರ ಸಾಂಸಾರಿಕ ಅನುಭವಗಳು ಹೆಣ್ಣಿನ ಆಸೆ ಅಭಿರುಚಿಗಳಿಗೆ ತದ್ವಿರುದ್ಧವಾಗಿ, ಕಲ್ಪಿಸಿಕೊಳ್ಳಲು ಕೂಡ ಆಗದ ಸನ್ನಿವೇಶಗಳನ್ನು ನಿರ್ಮಿಸುತ್ತವೆ. ತನ್ನ ಬದುಕಿನ ನೆಲೆಯನ್ನು ತಾನೇ ಕಂಡುಕೊಳ್ಳಬೇಕಾದ ಸ್ಥಿತಿಯನ್ನು ಮನಗಂಡು, ಮಿತಿಮೀರಿದ ಶೋಷಣೆಯಿಂದ ಮುಕ್ತವಾಗಿ ಹೊಸ ಬದುಕಿನ ಸ್ವತಂತ್ರ

ಹಾದಿಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಪತಿಯ ಕ್ರೌರ್ಯ ಮತ್ತು ದೌರ್ಜನ್ಯವನ್ನು ತಾಳ್ಮೆಯಿಂದ ಸಹಿಸಿ, ಕಡೆಗೆ ಸಹಿಸಲಾಗದ ಸ್ಥಿತಿಯಲ್ಲಿ ಆತನನ್ನು ತೊರೆದು ರಂಗಭೂಮಿ ಕಡೆ ಒಲವು ತೋರುವ ಸಂದರ್ಭದಲ್ಲಿ ತಾಳ್ಮೆ ಮೀರಿದ ಸ್ಥಿತಿಯನ್ನು ಅವರು "ಅದುವರೆಗಿನ ಅನಪೇಕ್ಷಣೀಯ ಮೌನ, ಸಹನೆಯನ್ನು ಕಿತ್ತೆಸೆಯಬೇಕಿತ್ತು, ಅಸಾಧ್ಯಗಳನ್ನೆಲ್ಲಾ ಸಾಧ್ಯಮಾಡಿಕೊಳ್ಳುತ್ತಾ ಹೆಣ್ತನವನ್ನು ಮರುವ್ಯಾಖ್ಯಾನಿಸಬೇಕಿತ್ತು ಅದೊಂದು ಮುರಿದು ಕಟ್ಟುವ ಪ್ರಕ್ರಿಯೆ"[2] ಎನ್ನುತ್ತಾರೆ, ಅಸಹಜವಾದ ಬದುಕನ್ನು ಮುರಿದು ಕಟ್ಟಬೇಕೆಂಬ ಅರಿವು ಮೂಡಿದುದರ ಚಿತ್ರಣವು ಆತ್ಮಕಥೆಯಾಗಿ ಹೊಮ್ಮಿದೆ. ಹೆಣ್ಣು ಎಂದರೆ ಅವಳ ಗುಣಸ್ವಭಾವಗಳ ಜೊತೆ ಅವಳು ಒಪ್ಪುವ ಮೌಲ್ಯಗಳು ಹಾಗೂ ಅವಳ ಆಯ್ಕೆಗಳು ಎಂಬುದನ್ನು ಆತ್ಮಕಥೆಗಳು ತೋರಿಸಿಕೊಡುತ್ತವೆ.

ಆತ್ಮಕಥೆಗಳನ್ನು ಬರೆಯುವ ಪುರುಷರು ಸಾಮಾನ್ಯವಾಗಿ ಪ್ರಜ್ಞಾಪೂರ್ವಕವಾಗಿ 'ಪುರುಷಪ್ರಜ್ಞೆ'ಯನ್ನು ಇಟ್ಟುಕೊಂಡು ಬರೆಯುವುದು ಕಾಣುವುದಿಲ್ಲ. ಆದರೆ, ಹೋರಾಟದ ಬದುಕನ್ನು ಬದುಕಿ ಆತ್ಮಕಥನವನ್ನು ಹೇಳುವ ಮಹಿಳೆಯರು ತಾವು 'ಹೆಣ್ಣು' ಆಗಿರುವ ಕಾರಣಕ್ಕೇ ಬದುಕು ಹೇಗೆಲ್ಲಾ ತಿರುವನ್ನು ಪಡೆಯಿತು ಎನ್ನುವುದನ್ನು ಪ್ರಜ್ಞಾಪೂರ್ವಕವಾಗಿ ನಿರೂಪಿಸುವುದು ಕಾಣುತ್ತದೆ. 'ಹೆಣ್ಣು ಪ್ರಜ್ಞೆ' ಎಂಬುದು ಆಯಾ ಕಾಲ, ಸಂದರ್ಭ, ಜಾತಿ, ಜನಾಂಗ, ವರ್ಗ, ಸಂಸ್ಕೃತಿ, ಚರಿತ್ರೆಗಳನ್ನು ಪ್ರಜ್ಞಾಪೂರ್ವಕವಾಗಿ ವಾಸ್ತವದ ನೆಲೆಗಟ್ಟಿನಲ್ಲಿ ನಿಂತು ಗ್ರಹಿಸಿ ನೋಡುವ ಕ್ರಮವಾಗಿದೆ. ಹಾಗೆ ಮುಸ್ಲಿಂ ಸಮುದಾಯದವರಾಗಿ ತನ್ನ ಸಮಾಜದ ಮಹಿಳಾ ಪ್ರತಿನಿಧಿಯಾಗಿ, ಕನ್ನಡ ಸಾಹಿತ್ಯದಲ್ಲೂ ಕೃಷಿ ಮಾಡಿ ಅಪಾರ ಸಾಧನೆ ಮಾಡಿ, ತಮ್ಮ ಬದುಕಿನ ಯಶಸ್ಸನ್ನು ಆತ್ಮಕಥೆಯೊಳಗೆ ಹಿಡಿದಿಟ್ಟು ಸಮಾಜದ ಎಲ್ಲ ಸಂಪ್ರದಾಯದ ಹೆಣ್ಣುಗಳಿಗೆ ಮಾದರಿಯಾಗಿರುವ ಸಾರಾ ಅಬೂಬಕರ್‌ರವರ 'ಹೊತ್ತು ಕಂತುವ ಮುನ್ನ' ಆತ್ಮಕಥೆಯಲ್ಲಿ ಹೇಳಿರುವ ಹಾಗೆ ಅವರು ಮುಸ್ಲಿಂ ಸಮುದಾಯದ ಧಾರ್ಮಿಕ, ಸಾಮಾಜಿಕ ನೈತಿಕ ವ್ಯವಸ್ಥೆಯ ಸ್ತ್ರೀ ವಿರೋಧಿ ನೀತಿಯನ್ನು ಅತ್ಯಂತ ನಿರ್ಭೀತಿಯಿಂದ ಮತ್ತು ಪ್ರಾಮಾಣಿಕತೆಯಿಂದ ತಮ್ಮ ಬರಹಗಳ ಮೂಲಕ ಪ್ರಶ್ನಿಸುತ್ತಾ ಸ್ತ್ರೀ ಪರವಾದ, ಜೀವಪರ ವ್ಯವಸ್ಥೆಯ ನಿರ್ಮಾಣಕ್ಕಾಗಿ ತುಡಿದಿದ್ದಾರೆ. ಆತ್ಮಕಥೆಯ ಮೂಲಕ ಜಾಗೃತ ಮುಸ್ಲಿಂ ಮಹಿಳಾ ಸಂವೇದನೆಯನ್ನು ಅಭಿವ್ಯಕ್ತಿಸುವ ಸಾರಾರವರು ಮೌಢ್ಯದ ಬದುಕನ್ನು ವಿರೋಧಿಸುತ್ತಾ, ವಿವಾಹವಾಗಿ ಹೊಸ ವಾತಾವರಣದ ಆಚರಣೆಗಳನ್ನು, ನೀತಿ ನಿಯಮಗಳನ್ನು ಅನಿವಾರ್ಯವಾಗಿ ಒಪ್ಪಿ ಬದುಕಿದರೂ ಸಹ ಅವರ ಪುಸ್ತಕ ಪ್ರೀತಿ ಕಡಿಮೆಯಾಗುವುದಿಲ್ಲ. ಹೆಂಗಸರು ಹೊರಗಿನ ಪ್ರಪಂಚಕ್ಕೆ ಇಣುಕಲೇ ಬಾರದೆಂಬ ಸ್ಥಿತಿಯನ್ನು ಸಹಿಸಲಾರದೆ ಮಾನಸಿಕ ಯಾತನೆ ಉಂಟಾದ ಸಂದರ್ಭದಲ್ಲಿ ಅವರು ನೇರವಾಗಿ ಪತಿಯನ್ನು ಪ್ರಶ್ನಿಸುವ ಧೈರ್ಯವನ್ನು, ಬದಲಾವಣೆಗೆ ತುಡಿವ ತುಡಿತವನ್ನು ಎಂದಿಗೂ ಬಿಡುವುದಿಲ್ಲ. ವಿದ್ಯೆಯ ಮೂಲಕ ಪ್ರಪಂಚಜ್ಞಾನ ಪಡೆದ ಹೆಣ್ಣಿನ ಮನೋಲೋಕದಲ್ಲಿ ಸಾವಿರಾರು ಪ್ರಶ್ನೆಗಳು, ಬದುಕುವ ಹಕ್ಕಿಗಾಗಿ ಪ್ರತಿಭಟನೆಗಳು, ಮಿತಿಯೊಳಗಿನ ಬದುಕಿನಲ್ಲಿ ಕಟ್ಟಿಹಾಕಲು ಸುತ್ತಲಿನ ಸಮಾಜ ಎಷ್ಟೇ ಪ್ರಯತ್ನಿಸಿದರೂ ಇಂತಹ ಹೆಣ್ಣು ಮನಸ್ಸುಗಳು ಸಿಡಿದೇಳುತ್ತವೆಂಬುದಕ್ಕೆ ಸಾರರವರು ಮಾದರಿಯಾಗಿದ್ದಾರೆ.

ಹೆಣ್ಣು ಬರಹಗಳು, ಸುಪ್ತಪ್ರಜ್ಞೆಯಿಂದ ಮೂಡಿದ ಅವಳ ಬುದ್ಧಿ–ಭಾವನೆಗಳಿಗೆ

ಹೊರದಾರಿಗಳಾಗಿವೆ, ಆಕೆಯ ಒಳಮನಸ್ಸಿನಲ್ಲಿ ನಡೆವುದನ್ನು ಸೃಜನಶೀಲ ಕ್ರಿಯೆಗಳಲ್ಲಿ ಗಮನಿಸುವ ಅವಳ ಕಲ್ಪನಾ ಸಾಮ್ರಾಜ್ಯವನ್ನು ಭೇದಿಸಿ ಆನಂದದ ಅನುಭೂತಿಯನ್ನು ಒದಗಿಸುವ ಕಾರ್ಯವನ್ನು ಸಾಹಿತ್ಯ ಬರಹಗಳು ಮಾಡುತ್ತವೆ. ಇಂತಹ ಬರಹಗಳಲ್ಲಿ ಅನುಪಮಾ ನಿರಂಜನರವರ ನೆನಪು ಸಿಹಿ–ಕಹಿ, ಉಷಾ ಪಿ. ರೈರವರ 'ಯಾವ ನಾಳೆಯೂ ನಮ್ಮದಲ್ಲ' ಆತ್ಮಕಥೆ ಈ ರೀತಿಯ ಮಾನಸಿಕ ಹಾಗೂ ಬೌದ್ಧಿಕ ಚೈತನ್ಯ ಮಹತ್ವವಾದುದೆಂದು ಅರಿವುಂಟಾದ ಮಹಿಳೆಯರ ಯಶಸ್ವಿ ಬದುಕಿನ ಅನುಭವ ಕಥನಗಳಾಗಿವೆ.

ಹೆಣ್ಣು ಹೇಗೆ ತನ್ನ ಸಬಲತೆಯನ್ನು ಸಮರ್ಥಿಸಬಲ್ಲಳೆಂಬುದಕ್ಕೆ ಅನುಪಮಾರ ಬದುಕು ಸಾಕ್ಷಿಪ್ರಜ್ಞೆಯಾಗಿದೆ. ಅವರ ಬದುಕಿನಲ್ಲಿನ ವಸ್ತುನಿಷ್ಠತೆ, ಮನೋವೈಜ್ಞಾನಿಕ ವಿಶ್ಲೇಷಣೆ, ವೈಚಾರಿಕತೆ, ಬಂಡಾಯ ಪ್ರವೃತ್ತಿ, ಮಾನವೀಯ ಸಂಬಂಧಗಳ ನಿರೂಪಣೆ ಇವು ತನ್ನತನದ ವಿಶೇಷತೆಗಳಾಗಿ ಅವರ ಆತ್ಮಕಥೆಯುದ್ದಕ್ಕೂ ನಿರೂಪಿತವಾಗಿವೆ. ತನ್ನಮನಸ್ಸಿನ ಭಾವನೆಗಳನ್ನು ಹೇಗಾದರೂ ಹೊರಹಾಕಿ ನೆಮ್ಮದಿ ಕಂಡುಕೊಳ್ಳಬೇಕೆಂಬ ಸಂದರ್ಭದಲ್ಲಿ ಸಾಹಿತ್ಯದ ಮೂಲಕ ಅಭಿವ್ಯಕ್ತಿಸುವ ಹವ್ಯಾಸವನ್ನು ಬೆಳೆಸಿಕೊಳ್ಳುತ್ತಾ ಬರುವ ಅನುಪಮಾರಲ್ಲಿ ಸ್ವ–ಆಯ್ಕೆಯ, ಸ್ವ ಅಸ್ಥಿತ್ವದ, ಹೋರಾಟದ ಅರಿವು ಆಗಲೇ ಮೊಳೆತಿದ್ದವು. ಸಾಹಿತ್ಯದ ಒಡನಾಟದಿಂದ ಮಾನಸಿಕ ಸ್ಥೈರ್ಯವನ್ನು ಪಡೆದು, ಸಾಹಿತ್ಯ ಹಾಗೂ ಕರ್ತವ್ಯದ ಅಸ್ತ್ರಗಳಿಂದ ಕ್ಯಾನ್ಸರ್‌ನಂತಹ ಖಾಯಿಲೆಯನ್ನೇ ಗೆಲ್ಲುವ ಧೈರ್ಯ ಬೆಳೆಸಿಕೊಂಡದ್ದು ಸಾಮಾನ್ಯ ಸಂಗತಿಯಲ್ಲ. ಇದು ಹೆಣ್ಣಿನ ಅದಮ್ಯಚೇತನದ ಅರಿವಿನ ಸ್ವರೂಪವಾಗಿದೆ. ಪ್ರಸಿದ್ಧ ಚಿತ್ರಕಲಾವಿದೆಯೂ, ಸಾಹಿತಿಯೂ ಆಗಿ ಬೆಳೆದ ಉಷಾ, ಪಿ. ರೈರವರ ಆತ್ಮಕಥೆಯೂ ಅವರ ಬದುಕಿನ ಅನಿಶ್ಚಿತ ಘಟನೆಗಳನ್ನು ಎದುರಿಸಿದ ಬಗೆಯನ್ನು ಹೇಳುತ್ತದೆ. ಉಷಾರವರು ಇಳಿವಯಸ್ಸಿನಲ್ಲಿ ಅಪಘಾತಕ್ಕೀಡಾಗಿ ಮನೆಯಲ್ಲೇ ಕೂರಬೇಕಾದ ಪರಿಸ್ಥಿತಿಯನ್ನು ಧೈರ್ಯದಿಂದ ತಮ್ಮ ನೋವನ್ನು ಸಹಿಸಿ ನಗುಮುಖಿಯಾಗಿ ಸಮಸ್ಯೆಗಳನ್ನು ಸವಾಲುಗಳಂತೆ ಎದುರಿಸುವಲ್ಲಿ ಯಶಸ್ವಿಯಾಗುತ್ತಾರೆ. ಅವರೇ ಹೇಳುವಂತೆ ಸಕಾರಾತ್ಮಕ ಹಠದ ಮನಸ್ಥಿತಿಯೇ ಸಮಸ್ಯೆಗಳನ್ನು ಗೆಲ್ಲುವ ಸೂತ್ರ ಎಂಬುದು ಉಷಾರವರ ನಿಲುವು.

ಸಮಸ್ಯೆಗಳನ್ನು ಸಕಾರಾತ್ಮಕವಾಗಿ ನೋಡುವ ಅರಿವುಂಟಾದವರಿಗೆ ಸಾಧನೆ ಸಾಧ್ಯ ಎಂಬುದನ್ನು ಇಂತಹ ಆತ್ಮಕಥೆಗಳು ಹೆಣ್ಣು–ಗಂಡೆಂಬ ಯಾವ ಭೇದವಿಲ್ಲದೆ ತೋರಿಸಿಕೊಡುತ್ತವೆ.

**ಕೊನೆ ಟಿಪ್ಪಣಿಗಳು**

1. ಶ್ರೀಮತಿ ಎಚ್.ಎಸ್. ಸ್ತ್ರೀವಾದ ಪದವಿವರಣ ಕೋಶ, ಪುಟ–09
2. ಡಾ. ವಿಜಯ, ಕುದಿಹೆಸರು, ಪುಟ–45

**ಗ್ರಂಥಋಣ**


1. ನಂದಕುಮಾರ್ ಪ್ರತಿಭಾ, 2019, ಅನುದಿನದ ಅಂತರಗಂತೆ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
2. ಸರಸ್ವತಿ ಬಾಯಿ ರಾಜವಾಡೆ, 2008, ಮುಂತಾದ ಕೆಲ ಪುಟಗಳು, ಅಕ್ಷರ ಪ್ರಕಾಶನ, ಹೆಗ್ಗೋಡು.

3. ಉಮಾಶ್ರೀ, 2013, ಬೆಂಕಿಬೆಡಗು 'ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
4. ನಿರಂಜನ ಅನುಪಮಾ–1985 ನೆನಪು ಸಿಹಿ–ಕಹಿ, ಡಿ.ವಿ.ಕೆ. ಮೂರ್ತಿ, ಮೈಸೂರು
5. ಜಯಶ್ರೀ ಬಿ. 2018, ಕಣ್ಣಾಮುಚ್ಚೇ ಕಾಡೇಗೂಡೇ, ಮನೊಹರ ಗ್ರಂಥಮಾಲಾ, ಧಾರವಾಡ
6. ಲಂಕೇಶ್ ಇಂದಿರಾ, 2013 ಹುಳಿಮಾವು ಮತ್ತು ನಾನು, ಲಂಕೇಶ್ ಪ್ರಕಾಶನ, ಬೆಂಗಳೂರು
7. ಡಾ. ವಿಜಯ, 2017, ಕುದಿಎಸರು, ನಾಕುತಂತಿ ಪ್ರಕಾಶನ, ಬೆಂಗಳೂರು
8. ರೈ.ಪಿ ಉಷಾ, 2011, ಯಾವನಾಳೆಯೂ ನಮ್ಮದಲ್ಲ, ಪ್ರಿಯದರ್ಶಿನಿ ಪ್ರಕಾಶನ,ಬೆಂಗಳೂರು
9. ಕಾರಂತ ಪ್ರೇಮ, 2010, ಸೋಲಿಸಬೇಡ ಗೆಲಿಸಯ್ಯ, ಮನೋಹರ ಗ್ರಂಥಮಾಲಾ, ಧಾರವಾಡ,
10. ನಾರಾಯಣ್ ಭಾರ್ಗವಿ, 2012, ನಾನು, ಭಾರ್ಗವಿ, ಅಂಕಿತ ಪುಸ್ತಕ ಪ್ರಕಾಶನ,ಬೆಂಗಳೂರು
11. ಶ್ರೀಮತಿ ಎಚ್.ಎಸ್. 2018, ಸ್ತ್ರೀವಾದ ಪದವಿವರಣ ಕೋಶ, ಅಭಿನವ ಪ್ರಕಾಶನ,ಬೆಂಗಳೂರು
12. ಕೇಶವಶರ್ಮ, ಕೆ. 2013, ಸ್ತ್ರೀವಾದಿ ಪರಿಕಲ್ಪನೆಗಳು, ಪುಸ್ತಕ ಪ್ರಕಾಶನ, ಬೆಂಗಳೂರು
13. ಶ್ರೀಮತಿ ಎಚ್.ಎಸ್.2012 ಸ್ತ್ರೀವಾದಿ ಸಂಶೋಧನೆ ವಿಧಿ–ವಿಧಾನಗಳು, ಬಪಹೌ, ಬೆಂಗಳೂರು
14. ಡಾ. ಸುಮಿತ್ರಾಬಾಯಿ ಬಿ.ಎಸ್., 2006, ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು
15. ಡಾ. ಉಷಾ ಎಂ 2017, ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
16. ಸತ್ಯನಾರಾಯಣ ಕೆ. 2021, ಅವರ ಭವಕ್ಕೆ ಓದುಗರ ಭಕುತಿಗೆ; ಪರಸ್ಪರ ಪ್ರಕಾಶನ ಬೆಂಗಳೂರು

❖❖❖

ತಿಳಿಗೊಳದೊಳಗಣ ಕಿರುದೆರೆ ಉರುಳಿ
ತಿಳಿಸಿತು ಗಾಳಿಯ ಇರವನು ಮರಳಿ

# ಮಾಸ್ತಿಯವರ ಕಾವ್ಯದಲ್ಲಿ ಆಸ್ತಿಕತೆ

**ಡಾ. ಜ್ಯೋತಿ ಎಸ್.ಬಿ.**
ಕನ್ನಡ ಸಹ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ), ಮಂಡ್ಯ

ಆಸ್ತಿಕತೆಯು ಮಾಸ್ತಿಯವರ ಕಾವ್ಯದ ಪ್ರಧಾನ ನೆಲೆಯಾಗಿದ್ದು, ಕವಿಯ ಮನೋಧರ್ಮವನ್ನು ಅರಿಯುವಲ್ಲಿ ಇದು ಬಹುಮುಖ್ಯವಾಗಿ ನೆರವಾಗುತ್ತದೆ. ಅವರಲ್ಲಿ ಆಸ್ತಿಕ ಭಾವ ನಿಚ್ಚಳವಾಗಿ ಮೂಡಿ ಬರಲು ಬಹುಮುಖ್ಯ ಕಾರಣ ಅವರ ಕೌಟುಂಬಿಕ ಪರಿಸರ. ಶ್ರೀವೈಷ್ಣವ ಪರಂಪರೆಗೆ ಸೇರಿದ ಮಾಸ್ತಿಯವರ ಕುಟುಂಬದಲ್ಲಿ ಜರುಗುತ್ತಿದ್ದ ದೈವೋಪಾಸನೆಯ ಆಚರಣೆಗಳು ಎಳೆಯ ಮನಸ್ಸಿನ ಮೇಲೆ ಅಪಾರವಾದ ಪ್ರಭಾವವನ್ನುಂಟು ಮಾಡಿದ್ದವು. ಇದಲ್ಲದೇ 'ಮಾಸ್ತಿ'ಯ ಗ್ರಾಮೀಣ ಪರಿಸರ, ಧಾರ್ಮಿಕ ಮತ್ತು ಸಾಮಾಜಿಕ ವಾತಾವರಣ, ಹಬ್ಬ ಹರಿದಿನಗಳಲ್ಲಿ ಜಾತಿ, ಮತ, ಧರ್ಮ, ಭೇದ ಮರೆತು ಊರಿಗೆ ಊರೇ ಸಂಭ್ರಮಿಸುವ ಸಂದರ್ಭಗಳು ಕವಿಯ ಬಾಲ್ಯ ಜೀವನದಲ್ಲಿಯೇ ಪ್ರಭಾವ ಬೀರಿದವು. ಎಳವೆಯಲ್ಲಿ ಚಿಗುರಿದ ದೈವಭಕ್ತಿ ಎಂಬ ಸಸಿಗೆ ತಾಯಿ ಮತ್ತು ತಾತ ನೀರೆರೆದು ಪೋಷಿಸಿ ಹೆಮ್ಮರವಾಗುವಂತೆ ನೋಡಿಕೊಂಡರು. ಹೀಗಾಗಿ 'ದೇವರು' ಎಂಬ ಪರಿಕಲ್ಪನೆ ಮಾಸ್ತಿಯವರ ಪಾಲಿನ ನಂಬಿಕೆಯ ಪ್ರಪಂಚವಾಯಿತೇ ಹೊರತು ಕಲ್ಪನೆಯ ವಸ್ತುವಾಗಲಿಲ್ಲ.

ಸ್ವತಃ ಮಾಸ್ತಿಯವರೇ ಹೇಳಿರುವಂತೆ "ನನ್ನ ಪದ್ಯರಚನೆಯೆಲ್ಲ ನನ್ನ ಆಧ್ಯಾತ್ಮಿಕ ಅನುಭವಕ್ಕೆ ಸಂಬಂಧಿಸಿದೆ. ಅನೇಕ ಪದ್ಯ ಇಂಥವು ಎನ್ನುವುದು ಅದನ್ನು ಓದುತ್ತಿರುವಂತೆಯೇ ಕಾಣುತ್ತದೆ. ಇತರ ಅನೇಕ ಪದ್ಯಗಳಲ್ಲಿ ಇದು ಅಷ್ಟು ಸ್ಪಷ್ಟವಾಗಿರುವುದಿಲ್ಲ. ಆದರೂ ದಿಟದಲ್ಲಿ ಅವುಗಳ ಹಿಂದೆಯೂ ಒಂದು ಅಧ್ಯಾತ್ಮ ಅನುಭವವೇ ಇರುತ್ತದೆ" (ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಾಹಿತ್ಯ ಪ್ರೇರಣೆ, ಪು.ಸಂ.49–50) ಈ ಮಾತುಗಳ ಹಿನ್ನೆಲೆಯಲ್ಲಿ ಮಾಸ್ತಿಯವರ ಆಸ್ತಿಕ ಶ್ರದ್ಧೆ ಕಾವ್ಯ ನಿರ್ಮಾಣಕ್ಕೆ ವಸ್ತುವಾದ ಬಗೆಯನ್ನು ಗುರುತಿಸಬಹುದು.

'ಬಿನ್ನಹ' ಮತ್ತು 'ಮನವಿ' ಕವನ ಸಂಕಲನಗಳು ಗೇಯ ಪ್ರಧಾನವಾದ ಭಕ್ತಿಗೀತೆಗಳಿಂದ ತುಂಬಿವೆ. ಇಲ್ಲಿ ಕವಿಯ, ಅನನ್ಯ ಭಕ್ತಿಯ ಸಮರ್ಪಣ ಭಾವವನ್ನು ಅದರ ವಿಲಾಸವನ್ನು ಸಾರುವ ವ್ಯಕ್ತಿನಿಷ್ಠ ಗೀತೆಗಳು ಪ್ರಧಾನವಾಗಿವೆ. ಅವುಗಳನ್ನು ರಚಿಸಿರುವುದರ ಹಿಂದೆ ಅವರ ಭಗವದ್ಭಕ್ತಿ ಮತ್ತು ಸಂಗೀತಾಸಕ್ತಿಗಳು ಕೆಲಸ ಮಾಡಿವೆ. ಇಲ್ಲಿನ "ಬಹುಪಾಲು ಕವನಗಳು ಪರಮಾತ್ಮನ ಸ್ವರೂಪ, 'ದರ್ಶನ' ಸುಖವನ್ನು ದಕ್ಕಿಸಿಕೊಳ್ಳುವ ಕವಿಯ ಏಕೋನಿಷ್ಠ, ಭಾವನಾತ್ಮಕ ಸಾಧನೆ–ಸಿದ್ಧಿಗಳ ಹೊಳಹನ್ನು ಸುಳಿವುಗೊಡುವ ಸಾರ್ಥಕ, ಸುಂದರ ಪ್ರಯತ್ನಗಳು; ಅವರ ಅಂತರಂಗವನ್ನು ವ್ಯಾಪಿಸಿ ಬೆಳಗುವ ಬೆಳಕನ್ನು ತೋರುವ ಬೆಳಕಿನ ಕಿಂಡಿಗಳು." (ರಂಗನಾಥನ್ ಮಾವಿನಕೆರೆ (ಸಂ), ಸೀತಾರಾಮಯ್ಯ ಎಂ.ವಿ. (ಲೇ), ಶ್ರೀನಿವಾಸ, ಪು.ಸಂ.180).

ದೈವಶಕ್ತಿಯಲ್ಲಿ ಅಪಾರ ಶ್ರದ್ಧೆಯಿದ್ದ ಕವಿ ತಮ್ಮ ಕಾವ್ಯರಚನೆಗೆ ಅದೇ ಪ್ರೇರಕ

ಎಂದು ಬಲವಾಗಿ ನಂಬಿದ್ದರು. ದೇವರ ಸಾನ್ನಿಧ್ಯದ ಅರಿವು, ಆತನ ಕೃಪಾಶೀರ್ವಾದದ ನಿರೀಕ್ಷೆ ಅವರ ಕಾವ್ಯದ ಪ್ರಧಾನ ನೆಲೆ ಎಂದು ಗುರುತಿಸಬಹುದು. ಹೀಗೆ ರಚನೆಗೊಂಡ ಭಕ್ತಿಗೀತೆಗಳು ಸ್ವಾನುಭವಜನ್ಯವಾದ ಭಕ್ತಿಯ ಕಾಂತಿಯಿಂದ ಕಾವ್ಯಕಲೆಯಾಗಿ ಅರಳಿವೆ. ಇಂತಹ ಭಕ್ತಿಗೀತೆಗಳಲ್ಲಿ ಕವಿಜೀವದೇವನಿಗಾಗಿ ನಿರೀಕ್ಷಿಸಿದೆ, ಹಂಬಲಿಸಿದೆ, ಸಾಕ್ಷಾತ್ಕಾರಕ್ಕಾಗಿ ಕಾದಿದೆ. ಅದಕ್ಕಾಗಿ ಬಿನ್ನಹ, ಪ್ರಾರ್ಥನೆ, ಮನವಿ, ಸಂದೇಹ, ಎಚ್ಚರ, ಪೂಜೆ, ಆರಾಧನೆ, ಲೀಲೆ, ಸಮರ್ಪಣೆಯ ಭಾವಗಳನ್ನು ಪ್ರಕಟಿಸಿ ತಮ್ಮ ಬದುಕಿನ ಸಮಸ್ತವನ್ನು ಅರ್ಪಿಸಿದ್ದಾರೆ.

ಈ ಬಗೆಯ ಭಕ್ತಿಗೀತೆಗಳಲ್ಲಿ ಕವಿಯು ತಮ್ಮ ವೈಯಕ್ತಿಕ ಸಂವೇದನೆಗಳನ್ನು, ಭಗವಂತನಲ್ಲಿ ಆತ್ಮ ನಿವೇದನೆಯ ಭಾವಗಳನ್ನು ಹೃದ್ಯವಾಗಿ ಅಭಿವ್ಯಕ್ತಿಸಿದ್ದಾರೆ. ಅವರ ದೈವಭಕ್ತಿ ಎಷ್ಟು ಅಚಲವಾಗಿತ್ತೆಂಬುದನ್ನು 'ಭಾವ' ಆತ್ಮಕಥೆಯ ಸಂದರ್ಭದಲ್ಲಿ ಹೇಳುವ ಮಾತುಗಳು ತೋರಿಸುತ್ತವೆ. "ಬರಬರುತ್ತ ನನ್ನ ಮನಸ್ಸಿಗೆ ನನ್ನ ಒಂದೊಂದು ಉಸಿರೂ ನನಗೆ ದೈವದ ಅನುಗ್ರಹದಿಂದ ಬರುತ್ತಿದೆ, ನನ್ನ ಒಂದೊಂದು ಎಣಿಕೆಯೂ ಅದೇ ಮೂಲದಿಂದ ಬರುತ್ತಿದೆ, ಮಾತೆಲ್ಲ ಬರುವುದು ಅಲ್ಲಿಂದಲೇ, ಎಲ್ಲ ಕ್ರಿಯೆಯ ಪ್ರೇರಣೆ ಅಲ್ಲಿಂದಲೇ ಬರುತ್ತಿದೆ ಎನ್ನುವುದು ಮನದಟ್ಟಾಯಿತು" (ಮಾಸ್ತಿ ವೆಂಕಟೇಶ ಅಯ್ಯಂಗಾರ್, ಭಾವ, ಪು.ಸಂ.375).

ಕಾವ್ಯದಲ್ಲಿ ದೈವಪರವಾದ ಮತ್ತು ಆತ್ಮ ನಿವೇದನಾತ್ಮಕವಾದ ಗೀತೆಗಳು ಪರಿಮಾಣದಲ್ಲಿ ಸಮೃದ್ಧವಾಗಿಯೇ ಇವೆ. ಭಗವನ್ಮಹಿಮೆಯನ್ನು ಕುರಿತು ಹಾಡುತ್ತಲೇ ಕವಿ ತಮ್ಮ ದೈವಭಕ್ತಿಯನ್ನು ಅತ್ಯಂತ ಪ್ರಾಮಾಣಿಕವಾಗಿ ನಿರೂಪಿಸಿದ್ದಾರೆ. ಈ ಬಗೆಯ ಕವಿತೆಗಳ ಅಧ್ಯಯನದಿಂದ ಕವಿಯ ವ್ಯಕ್ತಿತ್ವ, ಅವರ ಮನೋಧರ್ಮದ ಹಿಂದಿರುವ ಆಸ್ತಿಕ ಪರವಾದ ಚಿಂತನೆಗಳು, ಬದುಕಿನ ಶಿವ ಮೌಲ್ಯಗಳಲ್ಲಿ ಅವರಿಗಿರುವ ಅಚಲವಾದ ಶ್ರದ್ಧೆ, ನಿಷ್ಠೆಗಳನ್ನು ಒರೆಗೆ ಹಚ್ಚಲು ಹೆಚ್ಚಿನ ಅವಕಾಶಗಳಿವೆ.

'ಬಿನ್ನಹ' ಭಕ್ತಿ ಮತ್ತು ಸಾಧನೆಯಲ್ಲಿ ತೊಡಗಿದ ಕವಿಯ ನಿರ್ಮಲಾಂತಃಕರಣವನ್ನು ಪರಿಚಯಿಸುವ ಭಕ್ತಿಗೀತಾ ಸಂಕಲನ. ಮಾಸ್ತಿಯವರು ಮೈಸೂರು ಸಂಸ್ಥಾನದ ಅಧಿಕಾರಿಯಾಗಿ ಕಾರ್ಯನಿರ್ವಹಿಸುವಾಗ ಬೇಲೂರಿನ 'ಚನ್ನಕೇಶವ'ನ ದರ್ಶನದಿಂದ ಮೂಡಿದ ಭಾವಗಳನ್ನು ದೇವರ ನಾಮದ ರೀತಿಯಲ್ಲಿ ಬರೆಯಲು ಯೋಚಿಸಿದರು. "ಹೀಗೆ ಬರೆಯುವ ಹಾಡುಗಳಲ್ಲಿ ಭಕ್ತಿಯನ್ನು ಪ್ರಕಟಿಸಬೇಕು ಎನ್ನುವುದಲ್ಲ, ನನ್ನ ಅನುಭವದ ಭಾವ ಪ್ರಕಟಿಸುವುದು ಉದ್ದೇಶ. ಆಗ ನನ್ನ ಮನಸ್ಸಿನಲ್ಲಿ ಪ್ರಬಲವಾಗಿದ್ದ ಭಾವ ನನಗೆ ಚನ್ನಕೇಶವನ ಮೂರ್ತಿಯನ್ನು ಕಂಡ ಹೊತ್ತಿಗೆ ಅನುಭವದಿಂದ ಹುಟ್ಟಿದ್ದು" ಎಂದು ಹೇಳಿಕೊಂಡಿದ್ದಾರೆ(ಮಾಸ್ತಿ ವೆಂಕಟೇಶ ಅಯ್ಯಂಗಾರ್, ಭಾವ, ಸಂ. 2, ಪು.ಸಂ. 133).

ದೈವವನ್ನು ಕುರಿತು ತಮ್ಮದೇ ಆದ ವಿಶಿಷ್ಟ ಸಂವೇದನೆಗಳನ್ನು ಬೆಳೆಸಿಕೊಂಡು ಮುಂದೆ 'ಚನ್ನಕೇಶವ', 'ಶ್ರೀನಿವಾಸ', 'ಶ್ರೀಹರಿ'ಯ ರೂಪದಲ್ಲಿ ಆರಾಧಿಸಿದ್ದಾರೆ. ಭಗವಂತನ ಕೃಪಾಶೀರ್ವಾದಕ್ಕಾಗಿ ಹಗಲಿರುಳು ಧ್ಯಾನಿಸಿದ್ದಾರೆ. ಕವಿಯ ಲೇಖನಿಯಿಂದ ಹರಿದ ಈ ಭಕ್ತಿಸುಧೆ 'ಬಿನ್ನಹ' ಮತ್ತು 'ಮನವಿ'ಯಲ್ಲಿ ಪ್ರಧಾನಧಾರೆಗಳಾಗಿ ಹರಿದರೆ ಉಳಿದ ಸಂಕಲನಗಳಲ್ಲಿ ಅಲ್ಲಲ್ಲಿ ಒಳಸುಳಿಗಳಾಗಿ ಪ್ರವಹಿಸಿದೆ. ಇಲ್ಲೆಲ್ಲ "ಶ್ರೀನಿವಾಸ ಭಕ್ತಿಯ ಹಲವು ಪರಿಗಳನ್ನು ಒಳಗೊಂಡು ತಮ್ಮ ಸೌಮ್ಯಕಾಂತಿಯಿಂದ ನಮ್ಮ ಮನ

ಸೆಳೆಯುತ್ತವೆ. ಸ್ವಾನುಭವಜನ್ಯವಾದ ಮತ್ತು ವ್ಯಕ್ತಿತ್ವದ ಸಹಜ ಭಾಗವಾದ ಭಕ್ತಿಸ್ಥಾಯಿಯ ಮೂಲಕವೇ ಈ ಗೀತೆಗಳಿಗೆ ಕಾಂತಿ ಬಂದಿದೆ, ಕಾವ್ಯ ಕಲೆ ಇಲ್ಲಿ ಅರಳಿ ನಿಂತಿದೆ." (ರಂಗನಾಥನ್ ಮಾವಿನಕೆರೆ (ಸಂ), ಮುಗಳಿ ರಂ.ಶ್ರೀ.(ಲೇ), ಶ್ರೀನಿವಾಸ, ಪು.ಸಂ.170)

ಈ ಕೃತಿಗಳಲ್ಲಷ್ಟೇ ಅಲ್ಲದೆ ಮಾಸ್ತಿಯವರ ದೈವಚಿಂತನೆ ಅವರ ಇಡೀ ಬದುಕನ್ನು ಆವರಿಸಿದೆ. 1984ರಲ್ಲಿ ಬರೆದ 'Thinking of My Life' ಎಂಬ ಕೃತಿಯಲ್ಲಿ ಹೇಳಿರುವ "ನನ್ನ ಬದುಕನ್ನು ಇಡಿಯಾಗಿ ತೆಗೆದುಕೊಂಡರೆ ಅದರ ಪಾರದೇವರನ್ನು ನಂಬು, ನನ್ನ ಬದುಕಿನ ಕ್ಷಣಕ್ಷಣವೂ ಅವನು ನಿನ್ನನ್ನು ನೋಡುತ್ತಿದ್ದಾನೆ ಎಂದು ತಿಳಿದುಕೋ" (ಉದ್ಧೃತ: ಶೇಷಗಿರಿರಾವ್ ಎಲ್. ಎಸ್., ಮಾಸ್ತಿ: ಜೀವನ ಮತ್ತು ಸಾಹಿತ್ಯ, ಪು.ಸಂ. 65) ಎಂಬ ಮಾತುಗಳ ಹಿಂದಿರುವ ದೈವಪರವಾದ ನಿಲುವು ಕವಿಯ ಬದುಕು ಮತ್ತುಕಾವ್ಯದ ತುಂಬ ಪ್ರಧಾನಧಾರೆಯಾಗಿ ಪ್ರವಹಿಸಿದೆ ಎಂಬುದಕ್ಕೆ ಪೂರಕವಾಗಿದೆ.

**ಪಂಚಮದ ಕಲಕಂಠದಿಂದೆ ಪ್ರ**
**ಪಂಚವ ನಲಿಸುವ ಕೋಗಿಲೆ ಬೇಡ;**
**ಅಂಚಿನೊಳಿರಲಹ ಕಾಗೆಯೆ ಆದರೂ**
**ವಂಚನೆಯಿಲ್ಲದದನಿಯನು ನೀಡು.** **(ಹಾರಯಿಕೆ, ಬಿನ್ನಹ, ಪು.ಸಂ.2)**

ಎಂದು ಬೇಡುವಲ್ಲಿ ಭಕ್ತನ ಆತ್ಮನಿವೇದನೆಯಿದೆ. ಗಾನಕೋಗಿಲೆಯ ಇಂಪಾದ ಸ್ವರವಿಲ್ಲದಿದ್ದರೂ ಕಾಗೆಯ ದನಿಯನ್ನಾದರೂ ವಂಚನೆಯಿಲ್ಲದೆ ತನಗೆ ನೀಡಬೇಕೆಂದು ಭಗವಂತನಲ್ಲಿ ಮೊರೆಯಿಟ್ಟಿದ್ದಾರೆ. ಈ ಬಗೆಯ ಸಹಜತೆಯು ಕಾವ್ಯದಲ್ಲಿ ಹೊರಹೊಮ್ಮಲು ಕವಿಯ ಸಾತ್ವಿಕ ಮನೋಧರ್ಮವೇ ಕಾರಣಎನ್ನಬಹುದು.

ಇಹದ ಬದುಕಿನಲ್ಲಿ ಸ್ವಾರ್ಥ, ಲೋಭ, ವಂಚನೆ, ಮೋಸದಂತಹ ದುರ್ಗುಣಗಳಿಗೆ ಒಳಗಾಗದೆ ಮಾನವ ಪ್ರೇಮಿಯಾಗಿ, ಬದುಕನ್ನು ಸ್ನೇಹಮಯವಾಗಿ ಕಾಣಬೇಕೆಂಬ ಆಶಯದೊಂದಿಗೆ ಭಗವಂತನ ಕೃಪೆಗಾಗಿ ಎಲ್ಲವನ್ನು ಬಿಡಲು ಸಿದ್ಧರಾಗುತ್ತಾರೆ. "ಬದುಕು ಅನನ್ಯವಾದಾಗ, ಕಾವ್ಯವಾದಾಗ, ಚೆಲುವಾದಾಗ, ದೇವರಲ್ಲಿ ಅರ್ಪಿತವಾದಾಗ ಯಾವುದೇ ರೀತಿಯ ಅಪರಾಧವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಜೀವನದ ಒಳಗಿನ ಸ್ತರವನ್ನು, ಹೊರಗಿನ ಸ್ತರವನ್ನು ಆಳವಾಗಿ ಕಂಡವರು ಮಾಸ್ತಿಯವರು. ಕವಿತೆಗಳನ್ನು ಓದುವಾಗ ಅವರ ಅಖಂಡ ವ್ಯಕ್ತಿತ್ವ ಕಾಣುತ್ತದೆ."(ದೊಡ್ಡರಂಗೇಗೌಡ (ಲೇ), ಕೃತಿಚಿಂತನ, ಪು.ಸಂ.98). ತಮ್ಮ ಸಮಸ್ತ ಬದುಕನ್ನು ಹೀಗೆ ಭಗವಂತನಿಗೆ ಅರ್ಪಿಸುವ ಕವಿ ಮನುಷ್ಯ ಸಹಜ ದೌರ್ಬಲ್ಯಗಳ ಸೆಳೆತಕ್ಕೆ ಒಳಗಾಗದೆ ಅವುಗಳಿಂದ ಬಿಡುಗಡೆಗೊಳಿಸಿ ಶುದ್ಧಾಂತಃಕರಣವನ್ನು ನೀಡೆಂದು ಮೊರೆಯಿಡುತ್ತಾರೆ.

ಮಾಸ್ತಿಯವರ ಪ್ರಾರ್ಥನೆಯಲ್ಲಿ ಲೋಭವಾಗಲಿ, ಸ್ವಾರ್ಥವಾಗಲಿ ಇಲ್ಲ. ಇಲ್ಲಿರುವುದು ಭಕ್ತನ ನಿರ್ಮಲವಾದ ಮನಸ್ಥಿತಿ ಮಾತ್ರ. ದೇಹ ಮತ್ತು ಜೀವ ದೈವದತ್ತವಾದುದೆಂಬುದೇ ಮಾಸ್ತಿಯವರ ಅಚಲವಾದ ನಂಬಿಕೆ. ಹೀಗಿದ್ದೂ ಒಮ್ಮೊಮ್ಮೆ ಮನುಷ್ಯ ಮಾತ್ರರಾದ ನಾವು; ನಾನು, ನನ್ನದು ಎಂಬ ಅಹಂಕಾರ ಮಮಕಾರಗಳಿಗೆ ಒಳಗಾಗಿ ಮೂಢತನದಿಂದ ವರ್ತಿಸುವ ಬಗೆಯನ್ನು ಕವಿ ಸಹಜವಾದ ಭಾವಗಳಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ.

**ಎನ್ನದು ಎನ್ನುವುದೆಲ್ಲವು ಸಂತತ**
**ಚೆನ್ನಕೇಶವಾ ನಿನ್ನೊಳು ನಿಲಲಿ** **(ಪ್ರಣಾಮ, ಬಿನ್ನಹ, ಪು.ಸಂ.49)**

ತಮ್ಮ ಸಮಸ್ತವನ್ನು ಭಗವಂತನ ಪಾದಕಮಲಗಳಿಗೆ ಅರ್ಪಿಸಿದ್ದಾರೆ. ಇಷ್ಟದೈವವಾದ ಚನ್ನಕೇಶವನಲ್ಲಿ ಭಕ್ತಿಯು ಸಂತತವಾಗಿ ನೆಲೆಸಿರಲಿ ಎಂದು ಬೇಡುತ್ತ 'ಬಿನ್ನಹ'ವೆಂಬ ಗೀತ ಕುಸುಮಗಳನ್ನೊಳಗೊಂಡ ಭಕ್ತಿಗೀತಾ ಸಂಕಲನವನ್ನು ದೇವನ ಅಡಿಗಳಿಗೆ ಒಪ್ಪಿಸಿದ್ದಾರೆ.

'ಮನವಿ' ಕವನ ಸಂಕಲನದಲ್ಲೂ ಈ ಬಗೆಯ ಭಾವಗಳೇ ಮುಂದುವರೆದಿವೆ. ತನ್ನದು ಈಗಲೂ ಭಗವಂತನ ಮನೆಯಲ್ಲಿ ತಿರಿಯುವ ಬದುಕು ಎಂದೇ ಭಾವಿಸಿದ್ದಾರೆ. ಸುಖದ ದಿನಗಳಲ್ಲೂ ಅವನನ್ನು ಮರೆತುಬಿಡದೆ ಭಗವದ್ ಸ್ವರೂಪದ ಇರುವಿಕೆಯನ್ನು ನಂಬಿ ಮುನ್ನಡೆದಿದ್ದಾರೆ.

**ನೀನೆ ಗಮನದೊಳೆಲ್ಲವ ಪ್ರೇರಿಸಿದಾ ಆದಿಚೇತನ**
**ನೀನೇ ಸರ್ವವು ಎಂಬುದನರಿಯಲಿ ಈ ಆತ್ಮ ಹರಿಯೆ**
**(ಅರ್ಪಣ, ಮನವಿ, ಪು.ಸಂ.100)**

ತಮ್ಮ ಸಮಸ್ತವೂ ನೀನೇ ಎಂದು ಅರ್ಪಣಾ ಭಾವವನ್ನು ಇಲ್ಲಿ ತೋರಿದ್ದಾರೆ. ಪರಮಾತ್ಮ ತನ್ನ ಜೀವನದ ಪರಮ ಎಂದು ಭಾವಿಸಿರುವ ಕವಿ ಒಳಿತಾಗಲಿ ಕೆಡುಕಾಗಲಿ ಅವನು ನೀಡಿದ್ದನ್ನು ದ್ವಂದ್ವಾತೀತವಾಗಿ ಸ್ವೀಕರಿಸಿ ತಮ್ಮ ಬದುಕಿನ ಸರ್ವವೂ ಶ್ರೀನಿವಾಸನೇ ಎಂಬ ನಂಬಿಕೆಯ ನೆಲೆಯಲ್ಲಿ ದಿವ್ಯ ಸುಖವನ್ನು ಅನುಭವಿಸಿದ್ದಾರೆ.

ಒಟ್ಟಾರೆ 'ಬಿನ್ನಹ' ಮತ್ತು 'ಮನವಿ' ಕವನ ಸಂಕಲನಗಳು ಸಂಪೂರ್ಣವಾಗಿ ಭಕ್ತಿಸಾಧನೆಯಲ್ಲಿ ತೊಡಗಿದ ಮಾಸ್ತಿಯವರ ಆಸ್ತಿಕ ನಿಲುವುಗಳ ವ್ಯಕ್ತ ರೂಪಗಳು. ಎಳೆಯ ವಯಸ್ಸಿನಿಂದಲೂ ಗುಪ್ತವಾಗಿದ್ದ ಭಕ್ತಿಯ ನಿರ್ಭರತೆ ಇಲ್ಲಿ ಭೋರ್ಗರೆದು ಹರಿದಿದೆ. ಕವಿಯ ಅನನ್ಯ ಶರಣ ಭಾವದ ಭಕ್ತಿ, ಒಂದೊಂದು ಕವಿತೆಯಲ್ಲೂ ಅನಾವರಣಗೊಂಡು ಪರಮಾತ್ಮನ ಇರವನ್ನು, ಸ್ವರೂಪವನ್ನು ಕಾಣುವ ಸಾಧಕ ಭಕ್ತನ ಪ್ರಯತ್ನವಿದೆ.

ಹರಿದಾಸ ಪರಂಪರೆಯನ್ನು ಮುಂದುವರೆಸಿದ ಮಾಸ್ತಿಯವರ ಭಕ್ತಿಗೀತೆಗಳು ಸಮರ್ಪಣಾ ಭಾವವನ್ನು ಪ್ರದರ್ಶಿಸುತ್ತವೆ. ಆದರೆ ದಾಸರಂತೆ ಸಮಾಜಕ್ಕೆ ಮಾರ್ಗದರ್ಶನ ಮಾಡುವ ಉದ್ದೇಶವನ್ನು ಹೊಂದಿಲ್ಲ. ಆದರೂ ಮಾಸ್ತಿಯವರ ಭಕ್ತಿಕಾವ್ಯದಲ್ಲಿ "ಸಾಹಿತ್ಯದ ಭಾಷೆಯಲ್ಲಿ ಧಾರ್ಮಿಕ ಆಚರಣೆಗಳನ್ನು ನೀಡುತ್ತ ನಡೆಯುವ, ಆ ಮೂಲಕ ಕಲಾತ್ಮಕ ಚಿತ್ರಣವನ್ನು ಸಾಧ್ಯವಾಗಿಸುವ, ಇಷ್ಟಾಗಿಯೂ ವಾಸ್ತವಿಕ ಅಂಶಗಳಿಗೆ ಎಲ್ಲೂ ಮುಕ್ಕಾಗದಂತೆ ನೋಡಿಕೊಳ್ಳುವ ಜಾಣ್ಮೆ ಸಿದ್ಧಿಸಿದೆ" (ರಂಗನಾಥನ್ ಮಾವಿನಕೆರೆ (ಸಂ.), ರಾಮಣ್ಣ ಎಂ. (ಲೇ), ಶ್ರೀನಿವಾಸ, ಪು.ಸಂ.461) ಎನ್ನಬಹುದು. ದೈವದ ಮೇಲಿನ ಈ ಬಗೆಯ ನಂಬಿಕೆಯ ಬಲದಿಂದಲೇ ತಮಗೆ ಮಂತ್ರಿ ಪದವಿ ಕೈ ತಪ್ಪಿದ್ದಕ್ಕೆ ಮೈಸೂರು ಸರ್ಕಾರವನ್ನಾಗಲಿ, ಮಹಾರಾಜರನ್ನಾಗಲಿ, ಯಾವುದೇ ಅಧಿಕಾರಿಯನ್ನಾಗಲೀ ದೂಷಿಸದೆ ತನ್ನ ಬದುಕಿನಲ್ಲಿ ನಡೆದ ಎಲ್ಲಾ ಆಕಸ್ಮಿಕಗಳು, ಅನಿರೀಕ್ಷಿತಗಳಿಗೆ ದೈವ ಸಂಕಲ್ಪವೇ ಕಾರಣ ಎಂದುಕೊಂಡು ಸಮಚಿತ್ತತೆಯಿಂದ ಮುನ್ನಡೆಯಲು ಸಾಧ್ಯವಾಯಿತು.

ಹೀಗೆ ಮಾಸ್ತಿಯವರ ಕಾವ್ಯದ ಪ್ರಧಾನ ನೆಲೆಯಾಗಿ ಅವರ ಆಸ್ತಿಕ ಭಾವವನ್ನು ಪ್ರದರ್ಶಿಸುವ ಭಕ್ತಿಗೀತೆಗಳು ರಚನೆಗೊಂಡಿವೆ. ಮಾಸ್ತಿಯವರು ಪರಂಪರಾಗತವಾಗಿ ಬಂದ ಸಂಪ್ರದಾಯ ಮನೋಧರ್ಮಕ್ಕೆ ಸೆಡ್ಡು ಹೊಡೆಯದೆ ದೇವರಲ್ಲಿ ಮೊರೆಯಿಡುವ

ಆರ್ತಭಕ್ತನ ದಾಸ್ಯಭಾವಗಳನ್ನು ಕವಿತೆಗಳಾಗಿ ರಚಿಸಿದ್ದಾರೆ. ದಾಸರ ಕೀರ್ತನೆಗಳಂತೆ ಸರ್ವಶಕ್ತನಾದ ಭಗವಂತನಲ್ಲಿ ತಾದಾತ್ಮ್ಯ ಹೊಂದಿ ಆತ್ಮಶೋಧನೆಯನ್ನು ಪ್ರದರ್ಶಿಸುವ ಭಾವವನ್ನು ಅವರ ಭಕ್ತಿಗೀತೆಗಳಲ್ಲಿ ಕಾಣಬಹುದು. ಆದರೆ ಈ ಬಗೆಯ ಭಕ್ತಿ ಕವಿಯ ವೈಯಕ್ತಿಕ ನೆಲೆಯಲ್ಲಿ ಮಾತ್ರ ವಿಹರಿಸುತ್ತದೆ. ಇದನ್ನು ಸಾಮಾಜೀಕರಿಸುವ ಆಸಕ್ತಿಯನ್ನು ಅವರು ತೋರುವುದಿಲ್ಲ. ಅಲ್ಲದೆ, ತಮ್ಮ ಈ ಬಗೆಯ ನಿಲುವುಗಳನ್ನು ಓದುಗರ ಮೇಲೆ ಹೇರುವ ಯಾವ ಪ್ರಯತ್ನವನ್ನೂ ಕವಿ ಮಾಡುವುದಿಲ್ಲ.

ಸೃಷ್ಟಿಯ ಚರಾಚರಗಳಲ್ಲಿ ಭಗವಂತನನ್ನು ಕಾಣುವ, ಒಪ್ಪುವ ಮೂಲಕ ಕವಿಯ ಮನೋಧರ್ಮ ಅವರ ಭಾವವನ್ನು ಸಂಕುಚಿತತೆಯಿಂದ ಪಾರುಮಾಡಿ ಅಂಗೀಕೃತ ಎನ್ನಬಹುದಾದ ನಂಬಿಕೆಗಳು, ಆಚರಣೆಗಳನ್ನು ಹೊಸ ಬಗೆಯಲ್ಲಿ ಪುನರ್‌ಸೃಷ್ಟಿಸಿರುವ ಪರಿಯನ್ನೂ ಇಲ್ಲಿ ಕಾಣಬಹುದು.

**ಗ್ರಂಥಋಣ**


1. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಾಹಿತ್ಯ ಪ್ರೇರಣೆ, ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು, 2016.
2. ರಂಗನಾಥನ್ ಮಾವಿನಕೆರೆ (ಸಂ), ಸೀತಾರಾಮಯ್ಯ ಎಂ.ವಿ. (ಲೇ), ಶ್ರೀನಿವಾಸ, ಮಾಸ್ತಿ ಶತಮಾನೋತ್ಸವ ಸಮಿತಿ, ಬೆಂಗಳೂರು, 1992.
3. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಭಾವ, ಸಂ. 1, ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು, 2008.
4. ರಂಗನಾಥನ್ ಮಾವಿನಕೆರೆ (ಸಂ), ಮುಗಳಿರಂ.ಶ್ರೀ. (ಲೇ) ಶ್ರೀನಿವಾಸ, ಮಾಸ್ತಿ ಶತಮಾನೋತ್ಸವ ಸಮಿತಿ, ಬೆಂಗಳೂರು, 1992.
5. ಶೇಷಗಿರಿ ರಾವ್ ಎಲ್. ಎಸ್., ಮಾಸ್ತಿ :ಜೀವನ ಮತ್ತು ಸಾಹಿತ್ಯ, ಹೇಮಂತ ಸಾಹಿತ್ಯ, ಬೆಂಗಳೂರು, 2014
6. ದೊಡ್ಡರಂಗೇಗೌಡ (ಲೇ), ಕೃತಿಚಿಂತನ, ಮಾಸ್ತಿ ಅಧ್ಯಯನ ಪೀಠ, ಬೆಂಗಳೂರು, 2001
7. ರಂಗನಾಥನ್ ಮಾವಿನಕೆರೆ (ಸಂ), ಸೀತಾರಾಮಯ್ಯ ಎಂ.ವಿ. (ಲೇ), ಮಾಸ್ತಿ ಸಮಗ್ರ ಕಾವ್ಯ ಅವಲೋಕನ, ಸಂಪುಟ 1, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2010
8. ರಂಗನಾಥನ್ ಮಾವಿನಕೆರೆ (ಸಂ.), ರಾಮಣ್ಣ ಎಂ. (ಲೇ), ಶ್ರೀನಿವಾಸ, ಮಾಸ್ತಿ ಶತಮಾನೋತ್ಸವ ಸಮಿತಿ, ಬೆಂಗಳೂರು, 1992.


❖❖❖

# ಅ.ನ.ಕೃ : ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನಮಾನದ ತಾತ್ವೀಕ ಚಿಂತನೆಗಳು

**ಡಾ. ಮಹೇಶ ಎಂ.ಕೆ.**
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಕಾಲೇಜು, ಉದಯಪುರ–573225

## ಪ್ರಸ್ತಾವನೆ

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚರಿತ್ರೆಯನ್ನು ರೂಪಿಸಿದ ಪ್ರಮುಖ ಲೇಖಕರಲ್ಲಿ ಅ.ನ.ಕೃ. ಒಬ್ಬರು. ಸಾಹಿತ್ಯ, ಸಂಗೀತ, ಶಿಲ್ಪ, ರಂಗಭೂಮಿ, ಚಳವಳಿ ಹೀಗೆ ಹಲವಾರು ವೈವಿಧ್ಯಮಯವಾದ ಕ್ಷೇತ್ರಗಳಲ್ಲಿ ಆಸಕ್ತಿಯನ್ನು ಹೊಂದಿದ್ದವರು. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಎಲ್ಲ ದಿಕ್ಕುಗಳಲ್ಲಿಯೂ ಬೆಳೆಸುವುದು ಅವರ ಹಂಬಲವಾಗಿತ್ತು. ಸಾಹಿತ್ಯ ಕೇವಲ ವಿಲಾಸ ಸಾಧನವಾಗದೆ, ವಿಕಾಸ ಸಾಧನವಾಗಬೇಕು, ಸಾಹಿತ್ಯ ಜನಸಮುದಾಯಕ್ಕೆ ಶಿಕ್ಷಣ ನೀಡುವಂತಾಗಬೇಕು ಎಂಬ ಆಶಯವನ್ನು ಹೊಂದಿದ್ದವರು ಅ.ನ.ಕೃಷ್ಣರಾಯರು. ಈ ಚಿಂತನೆಗಳೇ ಅವರ ಬರಹಗಳಾಗಿ ರೂಪುಗೊಂಡವು.

ಕಲೆಯು ಮಾನವನ ಆತ್ಮದ ನೆರಳಾಗಿ ಕಾಣಿಸುತ್ತದೆ. ಕಲೆ, ಲಲಿತಕಲೆ, ಚಿತ್ರಕಲೆ ಪದಗಳನ್ನು ನಿರರ್ಗಳವಾಗಿ ರೂಢಿಯಲ್ಲಿ ಬಳಸುತ್ತಿದ್ದರೂ ಸಂಪೂರ್ಣವಾದ ಜ್ಞಾನದ ಅರಿವು ನಮಗಿಲ್ಲ. ಸತ್ಯಸೌಂದರ್ಯಗಳೆ ಕಲೆಯೆನಿಸಿಕೊಳ್ಳುವುದು ಎಂಬುದು ಸಾಮಾನ್ಯವಾದ ಹೇಳಿಕೆಯಾದರೂ ವಾಸ್ತವದ ಕರೆಗೆ ಮಾನವನ ಸೃಜನಶೀಲತೆಯು ಕೊಡುವ ಪ್ರತಿಧ್ವನಿಯೇ ಕಲೆ. ಬಂಧನಾತೀತವಾದ ಸಂಬಂಧವನ್ನು ಮಾನವರಲ್ಲಿ ಕಟ್ಟಿಕೊಡುವುದು ಮತ್ತು ಜೀವನದ ಅನುಭವಗಳನ್ನು ಹೆಚ್ಚಿಸಿಕೊಡುವುದೆ ಕಲೆಯಾಗಿದೆ. ಸತ್ಯ ಸೌಂದರ್ಯಗಳು ಬೆರೆಯದ ಹೊರತು ಕಲೆಯು ಸೃಷ್ಟಿಯಾಗದು. ಪರಿಪೂರ್ಣತೆಯನ್ನು ಅರಸುತ್ತಾ ಹೋಗುವುದೇ ಅದರ ಕೆಲಸವಾಗಿದೆ. ಅವ್ಯಕ್ತವಾದ ವಿಷಯಗಳಸತ್ಯ ಸೌಂದರ್ಯಗಳನ್ನು ವಿವಿಧ ಅಚ್ಚಿನಲ್ಲಿ ಹೊಯ್ದು ವಿಶಿಷ್ಟ ಮೂರ್ತಿಗಳನ್ನು ರಚಿಸುವುದೇ ಕಲೆ. ಅದು ಬಹುಸ್ತರಗಳಲ್ಲಿ ಕಾಣಿಸಿಕೊಳ್ಳುತ್ತವೆ.

## ರಾಜಾ ರವಿವರ್ಮ

ರವಿವರ್ಮನು 1848ರಲ್ಲಿ ತಿರುವಾಂಕೂರು ಸಂಸ್ಥಾನದ ಕಿಲಿಮಾನೂರು ಎಂಬಲ್ಲಿ ಕ್ಷತ್ರಿಯ ವಂಶದಲ್ಲಿ ಜನಿಸಿದನು. ತಾಯಿ ಉಮಾ ಅಂಬಾಬಾಯ್ ಕವಿಯೂ ಆಗಿದ್ದರಿಂದ ಮಗನಿಗೆ ಸಂಸ್ಕೃತ ಶಿಕ್ಷಣವನ್ನು ಕಲಿಸಿದಳು. ಬಾಲ್ಯದಿಂದಲೂ ಪಾಠ ಪ್ರವಚನಗಳಿಗಿಂತ ಚಿತ್ರಕಲೆಯ ಮೇಲೆ ಆಸಕ್ತಿ. ಹಿತೈಷಿಗಳು ಅಪಮಾನಿಸಿದರೂ ಲೆಕ್ಕಿಸದೆ ಚಿತ್ರಕಲೆಯನ್ನು ಮುಂದುವರಿಸಿದನು. ರವಿವರ್ಮ 13 ವರ್ಷದವನಿದ್ದಾಗ ಅವರ ಮಾವನು ತಿರವಾಂಕೂರು ಆಸ್ಥಾನಕ್ಕೆ ಕರೆದುಕೊಂಡು ಹೋಗಿ ರಾಜನಿಗೆ ಈತನ ಚಿತ್ರಗಳನ್ನು ತೋರಿಸಿದನು. ಅರಸನು ಕಲೆಯನ್ನು ಮೆಚ್ಚಿ ಪ್ರೋತ್ಸಾಹಿಸಿದನು. 1866ರಲ್ಲಿ ರವಿವರ್ಮನಿಗೆ ತನ್ನ ತಂಗಿಯನ್ನು ನೀಡಿ ವಿವಾಹ ಮಾಡಿದನು. ಅವಿಶ್ರಾಂತವಾಗಿ

ದುಡಿದ ರಾಜಾರವಿವರ್ಮನು 1906ರಲ್ಲಿ 58ನೇ ವಯಸ್ಸಿನಲ್ಲಿ ಮರಣಹೊಂದಿದನು.

**ಅ.ನ.ಕೃ. ದೃಷ್ಟಿಯಲ್ಲಿ ರಾಜಾ ರವಿವರ್ಮನ ಸ್ಥಾನ**

'ಭಾರತೀಯ ಚಿತ್ರಕಲೆಯಲ್ಲಿ ರಾಜಾರವಿವರ್ಮನ ಸ್ಥಾನ' ಕೃತಿ ಪ್ರಕಟವಾದದ್ದು 1932ರಲ್ಲಿ. ಚಿತ್ರಕಲೆಯ ಇತಿಹಾಸವನ್ನು ವಿವರಿಸುತ್ತಾ ರವಿವರ್ಮನ ಹಿನ್ನೆಲೆಯನ್ನು, ಪ್ರಭಾವವನ್ನು ಗುರುತಿಸುತ್ತಾ ಕೆಲವು ಚಿತ್ರಗಳನ್ನು ವಿಮರ್ಶೆ ಮಾಡಿದ್ದಾರೆ. ಆ ಯುಗಮಾನದಲ್ಲಿ ನಗರ ಮತ್ತು ಹಳ್ಳಿಗಳಲ್ಲಿ ರವಿವರ್ಮನ ಚಿತ್ರಗಳಿರುತ್ತಿದ್ದವು. ಜಗತ್ತಿನ ಶ್ರೇಷ್ಠ ಕಲಾವಿದ ಎಂದು ಭಾವಿಸಿದ್ದ ಕಾಲಘಟ್ಟದಲ್ಲಿ ಕೃಷ್ಣರಾಯರು ಭಾರತೀಯ ಮತ್ತು ಜಗತ್ತಿನ ಶ್ರೇಷ್ಠ ಚಿತ್ರಕಾರರನ್ನು ಅಧ್ಯಯನ ಮಾಡಿ, ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನಮಾನವನ್ನು ನಿರ್ಧರಿಸಿದ್ದಾರೆ. ಪರೀಕ್ಷಿಸುವ ಸಂದರ್ಭದಲ್ಲಿ ಸ್ವದೇಶಿ ಸಂಸ್ಕೃತಿ ಹಾಗೂ ವಿದೇಶಿ ಸಂಸ್ಕೃತಿಗಳ ನಡುವೆ ಇರುವ ವ್ಯತ್ಯಾಸಗಳ ಆಧಾರದಲ್ಲಿ ರವಿವರ್ಮನ ಚಿತ್ರಗಳನ್ನು ಪರೀಕ್ಷಿಸಿ ಮೌಲ್ಯಮಾಪನ ಮಾಡಿದ್ದಾರೆ.

ಡಾ. ಜಿ.ಎಸ್. ಅಮೂರರು "ಕನ್ನಡದ ಕೆಲವೇ ಕಲಾವಿಮರ್ಶಕರಲ್ಲಿ ಅ.ನ.ಕೃ. ಮೊದಲಿಗರು ಮತ್ತು ಮುಖ್ಯರು. ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಕೃತಿ ಅಲ್ಲದೆ ಅಜಂತ ಚಿತ್ರಕಲೆ ಮತ್ತು ಭಾರತೀಯ ಚಿತ್ರಕಲೆಯಂಥ ಲೇಖನಗಳನ್ನು ಅವರು ಬರೆದರು. ಇವುಗಳಲ್ಲಿ ಬಹಳಷ್ಟು ಪರಿಚಯಾತ್ಮಕವಾದ ಬರವಣಿಗೆಗಳಾಗಿದ್ದು ಅವುಗಳಲ್ಲಿ ಗಮನಾರ್ಹವಾದ ಪುನರ್ವಿಮರ್ಶೆಯೇನು ಇಲ್ಲ. ರವಿವರ್ಮನ ಬಗ್ಗೆ ಬರೆದ ಪುಸ್ತಕ ಮಾತ್ರ ಸೋಪಜ್ಞತೆಯಿಂದ ಕೂಡಿದೆ. ಆನಂದಕುಮಾರ ಸ್ವಾಮಿಯವರಂತೆ ಅ.ನ.ಕೃ. ಕೂಡ ಭಾರತೀಯ ಕಲೆ ತನ್ನ ಭಾರತೀಯತೆಯನ್ನು ಕಳೆದುಕೊಳ್ಳಬಾರದು ಎಂದು ವಾದಿಸಿದವರು. ರಾಜಾ ರವಿವರ್ಮನಲ್ಲಿ ಇಂಥ ಭಾರತೀಯತೆಯ ಅಭಾವದಿಂದಾಗಿ ಆತ ಪಾಶ್ಚಾತ್ಯ ಮಾದರಿಗಳ ಅನುಕರಣದಿಂದಲೇ ತೃಪ್ತಿ ಹೊಂದಬೇಕಾಯಿತು. ಮತ್ತು ತನ್ನ ಪರಂಪರೆಗೆ ಎದುರಾಗಬೇಕಾಯಿತು ಎಂಬ ಸತ್ಯವನ್ನು ಅ.ನ.ಕೃ. ಒಪ್ಪಿಕೊಳ್ಳುತ್ತಾರೆ." (ಅ.ನ. ಕೃಷ್ಣರಾಯ: ಜಿ.ಎಸ್‌ಅಮೂರ, ಪುಟ ಸಂಖ್ಯೆ–65)

ರವಿವರ್ಮನ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಭಾರತೀಯ ಚಿತ್ರಕಲಾ ಇತಿಹಾಸದಲ್ಲಿ ರಾಜಾ ರವಿವರ್ಮನಿಗೆ ಸ್ಥಾನವಿಲ್ಲದಿಲ್ಲ, ಇಂದಿನ ಪುನುರುಜ್ಜೀವಿತ ಕಲೆಯ ಸ್ಥಿತಿಗತಿಗೆ ರವಿವರ್ಮನ ಸೇವೆಯೂ ಸಹಾಯವಾಯಿತು ಎನ್ನುವಲ್ಲಿ ಅನುಮಾನವಿಲ್ಲ, ರವಿವರ್ಮನಿಗೆ ಭಾರತೀಯ ಚಿತ್ರಕಲಾ ಇತಿಹಾಸದಲ್ಲಿ ಸ್ಥಾನವಿದೆ, ಕಲಾವಿದರ ಶ್ರೇಣಿಯಲ್ಲಿ ಸ್ಥಾನವಿಲ್ಲ ಎಂದಿದ್ದಾರೆ. ಭಾರತೀಯ ಕಲಾವಿದರ ಜೊತೆ ಸೇರಿಸಲು ಒಪ್ಪಿಲ್ಲಲ್ಲ, ಕಾರಣ ರವಿವರ್ಮನ ಚಿತ್ರಗಳಲ್ಲಿನ ದೋಷ ಕಾರಣವಿರಬಹುದೊ ಅಥವಾ ಬಂಗಾಳಿ ಸಂಪ್ರದಾಯದ ಮೆಚ್ಚುಗೆ ಕಾರಣವಾಗಿರಬೇಕು. ಅ.ನ.ಕೃ. ಅವರು ಭಾರತೀಯ ಚಿತ್ರಕಲೆಗಳ ಪುನರ್ ನಿರ್ಮಾಣ ಮಾಡುವಲ್ಲಿ ರವಿವರ್ಮನ ಪಾತ್ರವನ್ನು ಒಪ್ಪಿಕೊಳ್ಳುತ್ತಾರೆಯೇ ವಿನಃ, ಚಿತ್ರಕಲೆಯಲ್ಲಿ ನೆಲದ ದೇಸಿಯ ಸೊಗಡು ಇಲ್ಲ ಎಂದು ಟೀಕಿಸಿದ್ದಾರೆ. ಅ.ನ.ಕೃ ಅವರು ಪೂರ್ವಾಗ್ರಹದಿಂದ ವಿಮರ್ಶೆ ಮಾಡುತ್ತಿಲ್ಲ; ಬದಲಾಗಿ ಚಿತ್ರಕಲೆಯಲ್ಲಿ ಆತನ ಸ್ಥಾನಮಾನವೇನು ಎಂಬುದನ್ನು ತೋರಿಸಲು ಯತ್ನಿಸಿದ್ದಾರೆ.

ರವಿವರ್ಮನ ವ್ಯಕ್ತಿತ್ವದ ಬಗೆಗೆ ಅ.ನ.ಕೃ. ಅವರಿಗೆ ಯಾವುದೇ ಆಕ್ಷೇಪಣೆಗಳಿಲ್ಲ

ಮತ್ತು ವೈಯಕ್ತಿಕ ಭಿನ್ನಾಭಿಪ್ರಾಯವಿಲ್ಲ, ತಕರಾರು ಏನಿದ್ದರೂ ಆತನ ಚಿತ್ರಕಲೆಯ ಬಗೆಗೆ. "ರವಿವರ್ಮನ ಬಗ್ಗೆ ಅ.ನ.ಕೃ. ಬರೆದಿರುವ ಪುಸ್ತಕ ವಸಾಹತುಶಾಹಿ ಸಂಸ್ಕೃತಿ ನಮ್ಮನ್ನು ಆವರಿಸಿಕೊಂಡಿರುವ ಸ್ವರೂಪ ಹಾಗೂ ಪರಿಣಾಮಗಳ ದೃಷ್ಟಿಯಿಂದ ಅನೇಕ ಸೂಕ್ಷ್ಮ ವಿವರಗಳನ್ನು ನೀಡುತ್ತದೆ. ಭಾರತೀಯ ಚಿತ್ರಕಲೆಯ ವೈಶಿಷ್ಟ್ಯದ ದೃಷ್ಟಿಯಲ್ಲಿ ಅವುಗಳಿಗೆ ಸ್ಥಾನವಿಲ್ಲದಿದ್ದರೂ, ದೇಶದ ಇತಿಹಾಸಕ್ಕೆ ಆ ಕಾಲದ ಅಭಿರುಚಿಯ ಸ್ಥಿತಿಗತಿಯನ್ನೊದಗಿಸುವುದಕ್ಕೆ ಅವು ಹೇರಳವಾದ ಪ್ರಯೋಜನವನ್ನುಂಟು ಮಾಡುತ್ತವೆ. ಭಾರತೀಯ ಚಿತ್ರಕಲಾ ಸಂಪತ್ತು ಭಾರತೀಯ ಸಂಸ್ಕೃತಿಯನ್ನು ಸ್ಫುಟಗೊಳಿಸಿ ಬೆಳೆಸಿಕೊಂಡು ಬಂದಿದೆ ಅದಕ್ಕೆ ತನ್ನದೆ ಆದ ಪರಂಪರೆಯಿದೆ. ಈ ಪರಂಪರೆಗೆ ಹೊರತಾದದ್ದು ರವಿವರ್ಮನ ಕಲೆ ಎಂಬ ನೆಲೆಯಲ್ಲಿ ಈ ಕೃತಿ ಪ್ರಕಟಗೊಂಡಿದೆ." (ಅ.ನ.ಕೃ. ಮತ್ತು ಕನ್ನಡ ಸಂಸ್ಕೃತಿ, ನರಹಳ್ಳಿ ಬಾಲಸುಬ್ರಹ್ಮಣ್ಯ, ಪು.87)

ಭಾರತೀಯ ಚಿತ್ರಕಲಾ ಪ್ರಪಂಚದಲ್ಲಿ ರಾಜಾ ರವಿವರ್ಮನ ಚಿತ್ರಗಳಲ್ಲಿ ಭಾರತೀಯತೆಯು ಕಂಡು ಬರದೆ ಪಾಶ್ಚಾತ್ಯ ಚಿತ್ರಕಲೆಯ ಅನುಕರಣೆಯನ್ನು ಮಾಡಿರುವುದನ್ನು ತೋರಿಸಿದವರು ಅ.ನ.ಕೃ. ಚಿತ್ರಕಲೆಯ ಪ್ರಭಾವ ಮತ್ತು ಪರಿಣಾಮವನ್ನು ಭಾರತೀಯ ತತ್ವಶಾಸ್ತ್ರದ ಹಿನ್ನಲೆಯಲ್ಲಿ ಗಮನಿಸಿದ್ದಾರೆ. 'ರವಿವರ್ಮನ ಚಿತ್ರಗಳನ್ನು ಯಾವ ಮಾನದಂಡದಿಂದ ಅಳೆಯಬೇಕು, ಅನಾದಿ ಕಾಲದಿಂದ ರೂಢಿಯಲ್ಲಿ ಬಂದ ಭಾರತೀಯ ಚಿತ್ರಲಕ್ಷಣ ಮಾನದಂಡದಿಂದಲೆ, ಇಲ್ಲ ಸಾವಿರಾರು ಜನರು ಒಪ್ಪಿಕೊಂಡರು ಎನ್ನುವ ಜನಮಾನ್ಯತೆಯ ದಂಡದಿಂದಲೇ?' ಎಂದು ಪ್ರಶ್ನೆ ಮಾಡಿದ್ದಾರೆ.

"ಯಾವುದು ಕೇವಲ ಸೌಂದರ್ಯದ ಪಿಪಾಸೆಯನ್ನು ಹಿಂಗಿಸುವುದು ಅದು ಅಧಮಕಲೆ–ಯಾವುದು ಜ್ಞಾನಪಿಪಾಸೆಯನ್ನು ಹಿಂಗಿಸುವುದೋ ಅದು ಮಧ್ಯಮ ತರಗತಿಯ ಕಲೆ ಮತ್ತು ಯಾವುದು ಉದ್ಬೋಧವನ್ನುಂಟು ಮಾಡುವುದೋ ಅದು ಉತ್ತಮ ಕಲೆ"[3] ಎಂದು ಅ.ನ.ಕೃ. ನಿರ್ಧರಿಸಿದ್ದರು (ಅ.ನ.ಕೃಷ್ಣರಾಯರ ಸಾಹಿತ್ಯ ಶ್ರೇಣಿ, ಸಂಪುಟ–5, ಪು. 37). ರವಿವರ್ಮನ ದೇವತೆಗಳ ಕಲಾಚಿತ್ರದಲ್ಲಿ ಅನೇಕ ನ್ಯೂನತೆ ಇರುವುದನ್ನು ಗುರುತಿಸಿ, ಅವನ ಮಿತಿಗಳನ್ನು ಹೇಳುತ್ತಾ ಕಾರಣಗಳನ್ನು ಗುರುತಿಸಿದ್ದಾರೆ. ರವಿವರ್ಮನು ಅರಮನೆಯ ಸುಖದ ವಾತಾವರಣದಲ್ಲಿ ಬೆಳೆದವನು. ಸಂಕಟಗಳು, ನೋವುಗಳ ಅರಿವಿರಲಿಲ್ಲ ಜೊತೆಗೆ ತನ್ನ ಅನುಭವ ಪ್ರಾಪಂಚಿಕ ಎಲ್ಲೆಯನ್ನು ಮೀರಿ ಹೋಗುವಂತಹ ಚೈತನ್ಯವು ಇರಲಿಲ್ಲ. ರಾಜರ, ಮಹಾರಾಜರ, ಶ್ರೀಮಂತರ ಚಿತ್ರಗಳನ್ನು ರಚಿಸುತ್ತಾ ಹೋದ ರವಿವರ್ಮನಿಗೆ ಅಂತರಂಗದ ಬೆಳವಣಿಗೆ ಆಗಲೇ ಇಲ್ಲ ಎಂದಿದ್ದಾರೆ.

ಭಾರತೀಯ ಚಿತ್ರಕಲಾ ಜಗತ್ತಿನಲ್ಲಿ ರವಿವರ್ಮನಿಗೆ ಸ್ಥಾನಮಾನವಿಲ್ಲ ಎಂಬ ವಿಮರ್ಶೆಯನ್ನು ಗಮನಿಸಿದಾಗ ರವಿವರ್ಮನ ಚಿತ್ರಗಳಲ್ಲಿ ಕಲೆಯೇ ಇಲ್ಲವೇನೋ, ರಚಿಸಿದ ಚಿತ್ರಗಳೆಲ್ಲಾ ನಿರರ್ಥಕವೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಆದರೆ ಚಿತ್ರಕಲಾ ಇತಿಹಾಸದಲ್ಲಿ ರವಿವರ್ಮನಿಗೆ ಇರುವ ಸ್ಥಾನವನ್ನು, ಅವನ ಚಿತ್ರಕಲೆಯಲ್ಲಿ ಕಂಡುಬರುವ ಗುಣಗಳನ್ನು ಅ.ನ.ಕೃ. ಪ್ರಸ್ತಾಪಿಸಿದ್ದಾರೆ. ಜೀವನದಲ್ಲಿ ಸದಾ ಭೋಗಿಯಾಗಿದ್ದ ರವಿವರ್ಮನು ಅನುಭವಿಸಿದ ಭೋಗಜೀವನವನ್ನೆ ಚಿತ್ರಿಸಿದ್ದಾನೆ ಎಂಬುದು ಅ.ನ.ಕೃ. ಅಭಿಪ್ರಾಯ.

ಇಹಲೋಕದ ಜಂಜಾಟಗಳನ್ನು ಮರೆತು ಶಾಂತಿನಿಕೇತನದಲ್ಲಿ ಜೀವನವನ್ನು ನಡೆಸಿದ ನಂದಲಾಲರಂತೆ ಮತ್ತು ವೆಂಕಟಪ್ಪನವರಂತೆ ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಗುಣವಿದ್ದಾಗ ಮಾತ್ರ ಸುಂದರವಾದ ಚಿತ್ರಕಲೆ ಮೂಡಿಬರಲು ಸಾಧ್ಯ. ಅದು ರವಿವರ್ಮನಲ್ಲಿ ಕಾಣಲು ಸಾಧ್ಯವಿಲ್ಲ. ಬದಲಾಗುತ್ತಿರುವ ಸಂದರ್ಭಗಳೊಂದಿಗೆ ನಮ್ಮ ಜೀವನವು ಕೂಡ ಬದಲಾಗುತ್ತದೆ. ಹಿಂದಿನ ಚಿತ್ರಗಳೆಲ್ಲವು ಶ್ರೇಷ್ಠವೆಂದು ಇಂದಿನ ಚಿತ್ರಗಳೆಲ್ಲವು ಕನಿಷ್ಠವೆಂಬ ಭಾವನೆ ಇಲ್ಲ. ರವಿವರ್ಮನು ಜೀವನ ದೃಶ್ಯಗಳು ಹಾಗೂ ಪ್ರಾಂತೀಯ ಅಸ್ಮೀಯತೆಯನ್ನೊಳಗೊಂಡ ಚಿತ್ರಗಳನ್ನು ರಚಿಸಿದ್ದಾನೆ. ತಾರಾ, ವಾರಿಣಿ, ಪದ್ಮಿನಿ, ಮಾನಿನಿ, ಮನೋರಮಾ, ಮಲೆಯಾಳಿ ಸುಂದರಿಯರ ಚಿತ್ರಗಳು ಉತ್ತಮವಾಗಿವೆ ಎಂದು ಅಭಿನಂದಿಸಿದ್ದಾರೆ.

ರಜಪೂತ ಸಂಪ್ರದಾಯವು ಅವನತಿಯನ್ನು ಹೊಂದುತ್ತಿರುವ ಸಂದರ್ಭ, ಅಳಿದುಳಿದಿದ್ದ ಕಲೆ ಮೊಗಲ್ ಸಂಪ್ರದಾಯದೊಂದಿಗೆ ಬೆರೆತುಹೋಯಿತು. ಔರಂಗಜೇಬನ ದಾಳಿಯಿಂದಾಗಿ ಭಾರತೀಯ ಸಂಸ್ಕೃತಿಯು ನಾಶಹೊಂದಿತು. ಪಾಶ್ಚಾತ್ಯರು ಭಾರತವನ್ನು ಪ್ರವೇಶಿಸಿದ ನಂತರ ಭಾರತೀಯ ಕಲೆಗಳ ಬೆಳವಣಿಗೆ ಆಗಲಿಲ್ಲ. ಚಿತ್ರಕಲೆಯ ಇತಿಹಾಸವು ಏಳನೆಯ ಶತಮಾನದಿಂದ ಹದಿನಾರನೆ ಶತಮಾನದವರೆಗೆ ನಿಂತೆ ಹೋಯಿತು. ರಾಜಕೀಯ ಆಂದೋಲನದಲ್ಲಿ ಚಿತ್ರಕಲೆಯ ಕಡೆಗೆ ಗಮನವಿರಲೇ ಇಲ್ಲ. ಇಂತಹ ಸಂದರ್ಭದಲ್ಲಿ ರಂಗಪ್ರವೇಶ ಮಾಡಿದ ರವಿವರ್ಮನು ಸಮಕಾಲೀನ ಕಾಲಘಟ್ಟಕ್ಕೆ ಅನುಗುಣವಾಗಿ ಚಿತ್ರಗಳನ್ನು ರಚಿಸಿದ್ದಾನೆ.

ರವಿವರ್ಮನು ಭಾರತೀಯ ಸಂಪ್ರದಾಯವನ್ನು ಬಿಟ್ಟು ಪಾಶ್ಚಾತ್ಯ ಸಂಪ್ರದಾಯವನ್ನು ಆರಂಭಿಸಿದ್ದರಿಂದ ಅವನ ಉಜ್ವಲ ಪ್ರತಿಭೆಯು ನಾಶಹೊಂದಿತು. ವಂಗೀಯ ಚಿತ್ರಶಿಲ್ಪಗಳಂತೆ, ಅಜಂತಾ, ಎಲ್ಲೋರ, ಕಾಂಗ್ರಾ, ಮೊಗಲ್, ರಜಪೂತ ಸಂಪ್ರದಾಯಗಳನ್ನು ಆಧರಿಸಿ ಬರೆದಿದ್ದರೆ ರವಿವರ್ಮನು ಶ್ರೇಷ್ಠ ಕಲಾವಿದನಾಗುತ್ತಿದ್ದನು. ಭಾರತೀಯ ಚಿತ್ರಕಲೆಯು ಮೊದಲಿನಿಂದಲೂ ವಿಲಾಸದ ಕಡೆಗಿಂತ ಉಲ್ಲಾಸದ ಕಡೆಗೆ ಹೆಜ್ಜೆಯನ್ನಿರಿಸಿದೆ. ಪ್ರಣಯವನ್ನು ಚಿತ್ರಿಸಬೇಕಾದರೆ ರಾಧಾಕೃಷ್ಣರ ಪವಿತ್ರ ಪ್ರೇಮವನ್ನು, ಶೌರ್ಯವನ್ನುಚಿತ್ರಿಸಬೇಕಾದರೆರಾಮ–ರಾವಣರಯುದ್ಧ, ಶೋಕವನ್ನು ಹೇಳಲು ಸೀತಾ ವನವಾಸವನ್ನು ಬಿಂಬಿಸುವ ಚಿತ್ರಗಳು ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ನೋಟಕನ ಮನಸ್ಸನ್ನು ಸಂತೋಷಪಡಿಸುತ್ತವೆ. ಆದರೆ ಪರಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗಿ ರವಿವರ್ಮನು ದೇಶಿಯ ಸಂಸ್ಕೃತಿಗಳನ್ನು ಮರೆತನೆಂಬುದನ್ನು ಅ.ನ.ಕೃ. ಅವರ ವಾದವಾಗಿದೆ.

ಪಾಶ್ಚಾತ್ಯ ಜಗತ್ತು ಕ್ರಮೇಣ ರೂಪಕಲೆಯನ್ನು ನಿರಾಕರಣೆ ಮಾಡುತ್ತಾ ಆದರ್ಶ ಕಲೆಯ ಕಡೆಗೆ ಬರುತ್ತಿರುವಾಗ, ನಾವು ಆದರ್ಶಕಲೆಯನ್ನು ನಿರಾಕರಿಸುತ್ತಾ ರೂಪಕಲೆಯನ್ನು ಸಂಪೂರ್ಣವಾಗಿ ಅರಿಯದೆ ತ್ರಿಶಂಕು ಸ್ವರ್ಗದಲ್ಲಿ ಅಲೆಯುವಂತಾಗಿದೆ. ಪ್ರಾಚೀನ ಕೃತಿಗಳನ್ನು ಅರ್ಥ ಮಾಡಿಕೊಳ್ಳದೆ ಚಿತ್ರಗಳನ್ನು ರಚಿಸಿದ ರವಿವರ್ಮನು ಸೋಲಬೇಕಾಯಿತು. ಸಮಕಾಲೀನರು ಮಾಡಿರುವ ತಪ್ಪುಗಳನ್ನು ತಿಳಿದುಕೊಂಡು, ಅವರು ಮಾಡಿರುವ ಲೋಪದೋಷಗಳು ಪುನರಾವರ್ತಿತವಾಗದಂತೆ ಜಾಗೃತವಾಗಬೇಕಾದುದು ಇಂದಿನ ಕಲಾವಿದರ ಕರ್ತವ್ಯ ಎಂದು ಹೇಳುವುದರ ಮೂಲಕ ರವಿವರ್ಮನ ಅನುಕರಣೆ ಬೇಡವೇ ಬೇಡ ಎಂಬ ಅಭಿಪ್ರಾಯಕ್ಕೆ ಅ.ನ.ಕೃ. ಬಂದಿದ್ದಾರೆ.

**ಉಪಸಂಹಾರ**

ರವಿವರ್ಮನ ಚಿತ್ರಕಲೆಯಲ್ಲಿನ ಲೋಪದೋಷಗಳನ್ನು ಚರ್ಚಿಸಿ ತೋರಿಸುವುದು, ಆತನ ಸಂಪ್ರದಾಯವನ್ನು ಅನುಸರಿಸಿ ತಮ್ಮ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಭಾರತೀಯ ಚಿತ್ರಕಲಾವಿದರಿಗೆ ಎಚ್ಚರಿಕೆ ಕೊಡುವುದಕ್ಕಾಗಿ ಅಲ್ಲದೆ ಬೇರೆಯಲ್ಲ. ತೈಲವರ್ಣದ ಚಿತ್ರಗಳಲ್ಲಿ ರವಿವರ್ಮನಿಗೆ ಇದ್ದ ನೈಪುಣ್ಯವನ್ನು ಗೌರವಿಸಬೇಕು. ಅವನು ಚಿತ್ರಿಸಿರುವ ಹರಿಶ್ಚಂದ್ರ ನಳದಮಯಂತಿ, ಯಶೋಧಾ ಕೃಷ್ಣ ಮೊದಲಾದ ಚಿತ್ರಗಳು ರೆಮ್‌ಬ್ರ್ಯಾಂಡನ್ ಕಲೆಯ ನೆನಪನ್ನು ತರುತ್ತದೆ. ರವಿವರ್ಮನಿಗೆ ಆಧುನಿಕ ಚಿತ್ರಕಲೆಯಲ್ಲಿ ಸರಿದೂಗುವ ಶಿಲ್ಪಿಗಳೆಂದರೆ ಮದರಾಸಿನ ದೇವಿಪ್ರಸಾದ್ ರಾಯ್‌ಚೌಧುರಿಯವರು ಮತ್ತು ಶಾಂತಿನಿಕೇತನದ ಸುರೇಂದ್ರನಾಥ್ ಠಾಕೂರ್ ಅವರು ಮಾತ್ರ ಎಂದು ಅ.ನ.ಕೃ. ಅಭಿಪ್ರಾಯಪಟ್ಟಿದ್ದಾರೆ.

**ಪರಾಮರ್ಶನ ಗ್ರಂಥಗಳು**


1. ಅ.ನ.ಕೃ, ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ, ಸಾಗರ ಪ್ರಕಾಶನ, 2007
2. ಅ.ನ.ಕೃ. ಮತ್ತು ಕನ್ನಡ ಸಂಸ್ಕೃತಿ– ನರಹಳ್ಳಿ ಬಾಲಸುಬ್ರಹ್ಮಣ್ಯ. ಅಂಕಿತ ಪುಸ್ತಕ, 2006.
3. ಅ.ನ.ಕೃ– ತ.ರಾ.ಸು, ಹೇಮಂತ ಸಾಹಿತ್ಯ, 2011.
4. ಅ.ನ.ಕೃಷ್ಣರಾಯ– ಶಾ.ಮಂ.ಕೃಷ್ಣರಾಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, 2016.
5. ಡಾ.ಬಿ.ಎಸ್. ಸ್ವಾಮಿ, ಸಾಹಿತ್ಯ ಸಾರ್ವಭೌಮ ಅ.ನ.ಕೃ– ಕಲಾ ಪ್ರಕಾಶನ, 2014.
6. ಅ.ನ.ಕೃ. ಬದುಕು ಬರಹ– ಡಾ. ಎಸ್.ವಿದ್ಯಾಶಂಕರ, ಪ್ರಿಯದರ್ಶಿನಿ ಪ್ರಕಾಶನ, 2020.
7. ಶಾ.ಮಂ. ಕೃಷ್ಣರಾಯ(ಸಂ.), ರಸಚೇತನ, ಹೇಮಂತ ಸಾಹಿತ್ಯ, 2007.
8. ಶಾ.ಮಂ. ಕೃಷ್ಣರಾಯ(ಸಂ.), ಅಮರಚೇತನ, ಪೂರ್ಣಿಮ ಪ್ರಿಂಟರ್ಸ್, 2008.
9. ಅ.ನ.ಕೃ. ಸಾಹಿತ್ಯ ಶ್ರೇಣಿ ಸಂಪುಟ–5, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 2011.


❖❖❖

ಕುಲುಕಾಡುತ ಮರದೆಲೆಗಳು ಹೊರಳೆ
ಆಡುವ ದೇವನ ಉಸಿರಿನ ಎಲರೇ?

# ಸಂಶೋಧನೆಯ ಹಾದಿಯಲ್ಲಿನ ತೋರುಗಂಬ 'ಸಂಶೋಧಕರಾಜಮಾರ್ಗ'

**ಡಾ. ರವಿಶಂಕರ ಜಿ.ಕೆ.**
ಕೆದುಂಬಾಡಿ ಮನೆ, ಪಾಣಾಜೆ ಗ್ರಾಮ ಮತ್ತು ಅಂಚೆ
ಪುತ್ತೂರು ತಾಲೂಕು, ದ.ಕ.–574259

ಕನ್ನಡ ಭಾಷೆ, ವ್ಯಾಕರಣ, ಸಾಹಿತ್ಯ ವಿಮರ್ಶೆ, ಸಂಶೋಧನ ಕ್ಷೇತ್ರಗಳಿಗೆ ಮಹತ್ತ್ವದ ಕೊಡುಗೆಗಳನ್ನು ನೀಡಿರುವ ಅಜಕ್ಕಳ ಗಿರೀಶ ಭಟ್ ಅವರ ನೂತನ ಕೃತಿ 'ಸಂಶೋಧಕರಾಜಮಾರ್ಗ'ವು ಸಂಶೋಧನ ಕ್ಷೇತ್ರಕ್ಕೆ ಬಹು ಉಪಯುಕ್ತವಾಗಬಲ್ಲ ಕೃತಿ. ಇದು ಸಂಶೋಧನೆಯ ಹಾದಿಯಲ್ಲಿ ನಡೆಯುತ್ತಿರುವವರಿಗೆ ಗುರಿತಲುಪುವ ಸರಿಯಾದ ದಾರಿಗಳನ್ನು ತೋರಿಸಿಕೊಡುವುದರ ಜೊತೆಗೆ ಆ ಹಾದಿಯಲ್ಲಿ ಸಾಗುತ್ತಿರುವ ಸಂಶೋಧಕರು ವಹಿಸಬೇಕಾಗಿರುವ ಎಚ್ಚರಿಕೆಗಳನ್ನು ಕೂಡ ತಿಳಿಸಿಕೊಡುತ್ತದೆ. ಹಾಗಾಗಿ ಉನ್ನತ ಶಿಕ್ಷಣದ ಭಾಗವಾಗಿ ಪಿಹೆಚ್.ಡಿ.ಯಂತಹ ಅಕಾಡಮಿಕ್ ಸಂಶೋಧನೆಗಳನ್ನು ಕೈಗೊಳ್ಳುತ್ತಿರುವವರಿಗೆ ಮಾತ್ರವಲ್ಲದೆ ಸಾಮಾನ್ಯ ಜಿಜ್ಞಾಸುಗಳಿಗೂ ಕೂಡ ಈ ಕೃತಿ ನೆರವಾಗುವಂತಿದೆ.

ಇಂದಿನ ಆಧುನಿಕ ಯುಗದಲ್ಲಿ ಬಹುತೇಕ ಎಲ್ಲಾ ದೇಶಗಳು ಸಂಶೋಧನೆಗೆ ಬಹಳ ಪ್ರಾಮುಖ್ಯತೆಯನ್ನು ನೀಡುತ್ತಿವೆ. ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಸಂಶೋಧನೆಗಳಿಂದಾಗಿಯೇ ನಾವು ಕೃತಕ ಬುದ್ಧಿಮತ್ತೆಯ ಜಗತ್ತಿಗೆ ಬಂದಿದ್ದೇವೆ. ಆದರೆ ಸಮಾಜವಿಜ್ಞಾನ, ಸಾಹಿತ್ಯ, ಕಲೆ ಮುಂತಾದ ಮಾನವಿಕ ವಿಷಯಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳಿಂದ ಏನು ಲಾಭವಿದೆ ಎಂಬ ಪ್ರಶ್ನೆ ಬಂದಾಗ ಅದಕ್ಕೆ ನಕಾರಾತ್ಮಕವಾದ ಪ್ರತಿಕ್ರಿಯೆಯೇ ಬರುತ್ತದೆ. ಈ ವಿಚಾರವನ್ನು ವಿಸ್ತೃತವಾಗಿ ಚರ್ಚಿಸುವ 'ಸಂಶೋಧಕರಾಜಮಾರ್ಗ' ಕೃತಿಯು ಮಾನವಿಕ ವಿಷಯಗಳಲ್ಲಿ ಸಂಶೋಧನೆಗಳು ನಡೆದಾಗಲೇ ಒಂದು ದೇಶದ ಸಾಂಸ್ಕೃತಿಕ ಪರಿಸರವು ಸಮೃದ್ಧವಾಗಿರುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಪ್ರತಿಪಾದಿಸುತ್ತದೆ. ವಿಜ್ಞಾನ ತಂತ್ರಜ್ಞಾನಗಳಲ್ಲಿನ ಸಂಶೋಧನೆಯ ಪ್ರಯೋಜನಗಳನ್ನು ಹಣದ ಮೂಲಕ ಖರೀದಿಸಿ ಉಪಯೋಗಿಸಲು ಸಾಧ್ಯವಾಗುತ್ತದೆ. ಆದರೆ ಮಾನವಿಕ ವಿಷಯಗಳಲ್ಲಿನ ಸಂಶೋಧನೆಯ ಫಲಿತಗಳನ್ನು ಹಾಗೆ ಹಣದಿಂದ ಖರೀದಿಸಿ ಪಡೆದುಕೊಳ್ಳಲು ಯಾರಿಂದಲೂ ಸಾಧ್ಯವಾಗದು ಎಂಬ ಎಚ್ಚರಿಕೆಯನ್ನು ನೀಡುತ್ತದೆ.

'ಸಂಶೋಧಕರಾಜಮಾರ್ಗ' ಕೃತಿಯು ಸಂಶೋಧನ ಶಾಸ್ತ್ರವನ್ನು ಪರಿಚಯಿಸುವ ಮೊದಲು ಭಾರತೀಯ ಚಿಂತನಾ ಕ್ರಮವನ್ನು ಪರಿಚಯಿಸುತ್ತದೆ. ಆರಂಭದ ಒಂಬತ್ತು ಲೇಖನಗಳಲ್ಲಿ ಈ ಅಂಶಗಳನ್ನು ಸವಿವರವಾಗಿ ಪರಿಶೀಲಿಸಲಾಗಿದ್ದು, ಜ್ಞಾನದ ಅನ್ವೇಷಣೆಗೆ ಅತ್ಯಗತ್ಯವಾಗಿರುವ ಮನೋಸ್ಥಿತಿಯೊಂದನ್ನು ಮೊದಲಿಗೆ ನಿರ್ಮಿಸಿ ಕೊಡುತ್ತದೆ. ಹೀಗೆ ಭಾರತೀಯತೆಯ ಸದೃಢವಾದ ತಳಪಾಯವನ್ನು ನಿರ್ಮಿಸಿಕೊಂಡ ಮೇಲೆ ಅನಂತರದ ಹದಿಮೂರು ಲೇಖನಗಳಲ್ಲಿ ಕನ್ನಡದ ಸಂಶೋಧನಾ ಶಾಸ್ತ್ರವನ್ನು

ಪರಿಚಯಿಸಲಾಗಿದೆ. ನಮ್ಮ ಪರಂಪರೆಯ ದೇಸೀಯ ಚಿಂತನಾಕ್ರಮದ ಅನನ್ಯತೆಯನ್ನು ಎತ್ತಿ ಹಿಡಿಯುತ್ತಲೇ ಸಂಶೋಧನೆಗೆ ಸಂಬಂಧಿಸಿದ ಆಧುನಿಕ ಪರಿಭಾಷೆಗಳನ್ನು, ಪರಿಕಲ್ಪನೆಗಳನ್ನು ಒಂದೊಂದಾಗಿ ಸ್ಪಷ್ಟಪಡಿಸಿಕೊಳ್ಳುವ ಈ ಕೃತಿಯು ಸಂಶೋಧಕನು ಯಾವೆಲ್ಲ ಬಗೆಗಳಲ್ಲಿ ವೈಚಾರಿಕ ಅಥವಾ ಬೌದ್ಧಿಕ ಹತ್ಯಾರುಗಳನ್ನು ಬಳಸಿಕೊಳ್ಳಬಹುದು ಎಂಬುದನ್ನು ಆಳವಾಗಿ ವಿಶ್ಲೇಷಿಸುತ್ತದೆ.

ಭಾರತದಲ್ಲಿ ಸಮಾಜವಿಜ್ಞಾನ ಮತ್ತು ಮಾನವಿಕ ಕ್ಷೇತ್ರಗಳ ಸಂಶೋಧನೆಯನ್ನು ಕೈಗೊಳ್ಳುವುದಕ್ಕೆ ನಮ್ಮದೇ ಆದ ಅಧ್ಯಯನದ ಮಾದರಿಗಳನ್ನು ರೂಪಿಸಿಕೊಳ್ಳಬೇಕಾಗಿರುವ ಅನಿವಾರ್ಯತೆಯ ಕಡೆಗೆ ಈ ಕೃತಿಯ ಬೆಳಕು ಬೀರುತ್ತದೆ. ಭಾರತೀಯ ಸಮಾಜದ ಬಗ್ಗೆ ಪಶ್ಚಿಮದ ವಿದ್ವಾಂಸರು ಕಟ್ಟಿರುವ ಕಥನಗಳನ್ನೇ ನಾವು ಬಳಸಿಕೊಳ್ಳುತ್ತಿರುವುದರಿಂದಾಗಿ ನಮಗೆ ನಮ್ಮ ಸಮಾಜದ ನಿಜವಾದ ಸ್ವರೂಪವನ್ನು ಅರಿತುಕೊಂಡು ಅಧ್ಯಯನ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಪಶ್ಚಿಮದ ವಿದ್ವಾಂಸರು ಯಥಾರ್ಥಗಳನ್ನು ಅರಿತುಕೊಳ್ಳದೆ, ಭಾರತೀಯ ಸಮಾಜವನ್ನು ತಪ್ಪಾಗಿ ಅರ್ಥೈಸಿಕೊಂಡು ದೋಷಪೂರಿತವಾಗಿ ಕಟ್ಟಿರುವ ಕಥನಗಳನ್ನೇ ನಾವು ಇಂದಿಗೂ ಬಳಸಿಕೊಳ್ಳುತ್ತಿರುವುದರಿಂದಾಗಿ ನಮ್ಮ ನೀತಿನಿರೂಪಣೆ ಮತ್ತು ಕಾನೂನುಗಳಲ್ಲಿಯೂ ದೋಷಗಳು ಕಾಣಿಸಿಕೊಳ್ಳುತ್ತಿದೆ ಎಂಬ ನಿಲುವು ಈ ಕೃತಿಯಲ್ಲಿದೆ. ಹಾಗಾಗಿ ವಸಾಹತುಶಾಹಿಯಿಂದ ನಾವು ಆಡಳಿತಾತ್ಮಕವಾಗಿ ಮುಕ್ತರಾಗಿದ್ದರೂ ಬೌದ್ಧಿಕವಾಗಿ ಇನ್ನೂ ಅದರ ಹಿಡಿತದಲ್ಲಿಯೇ ಸಿಕ್ಕಿಕೊಂಡಿರುವುದನ್ನು ಈ ಕೃತಿಯು ಆಧಾರಬದ್ಧವಾಗಿ ನಿರೂಪಿಸುತ್ತಾ ಬೌದ್ಧಿಕ ವಸಾಹತೀಕರಣದಿಂದ ಬಿಡುಗಡೆಯಾಗಬೇಕಾದ ಅಗತ್ಯತೆಗೆ ಒತ್ತು ಕೊಡುತ್ತದೆ. ಈ ಬೌದ್ಧಿಕ ನಿರ್ವಸಾಹತೀಕರಣವನ್ನು ನಾವು ಸಾಧಿಸದ ಹೊರತು ನಮ್ಮಲ್ಲಿ ಸಾಕಷ್ಟು ಪ್ರಮಾಣದಲ್ಲಿ ಉತ್ತಮ ಗುಣಮಟ್ಟದ ಸಂಶೋಧನೆಗಳು ಹೊರಬರಲು ಸಾಧ್ಯವಾಗದು ಎಂಬುದನ್ನು ಗಿರೀಶ ಭಟ್ಟರು ಈ ಕೃತಿಯಲ್ಲಿ ಪ್ರತಿಪಾದಿಸುತ್ತಾರೆ. ಹಾಗೆಂದು ಆಧುನಿಕ ಅಧ್ಯಯನ ಕ್ರಮವನ್ನು ಸಂಪೂರ್ಣವಾಗಿ ತಿರಸ್ಕರಿಸಿ ಭಾರತೀಯ ಜ್ಞಾನ ಪರಂಪರೆಯ ಕ್ರಮವನ್ನು ಮಾತ್ರ ಕುರುಡು ಅಭಿಮಾನದಿಂದ ಅನುಸರಿಸಬೇಕೆಂಬುದು ಈ ಕೃತಿಯ ನಿಲುವು ಖಂಡಿತಾ ಅಲ್ಲ. ಬದಲಿಗೆ, ಆಧುನಿಕ ಸಂಶೋಧನ ಶಿಸ್ತಿನಲ್ಲಿ ಕಾರ್ಯಕಾರಣಗಳ ಸಂಬಂಧದ ವಿವೇಚನೆಯಿಂದ ಕೂಡಿರುವ, ವಾಸ್ತವದ ನೆಲೆಗಟ್ಟಿನ ತರ್ಕಬದ್ಧ ಚಿಂತನೆಗಳು ಇನ್ನಷ್ಟು ಗಟ್ಟಿಯಾಗಬೇಕಿವೆ ಎಂಬ ಚಿಂತನೆ ಇದರಲ್ಲಿದೆ; ನಮ್ಮ ಹಿಂದಿನವರು ಜ್ಞಾನದ ಅನ್ವೇಷಣೆಯ ದಾರಿಯಲ್ಲಿ ತರ್ಕ ಮತ್ತು ತತ್ತ್ವದ ಕುರಿತಾಗಿ ನಡೆಸಿರುವ ಜಿಜ್ಞಾಸೆಗಳು ನಮಗೆ ಇಂದಿಗೂ ಹೇಗೆ ಅನುಕರಣೀಯವಾಗಬಲ್ಲದು ಎಂಬ ನೆಲೆಯಲ್ಲಿ ಚಿಂತಿಸಲಾಗಿದೆ.

ಭಾರತೀಯ ಜ್ಞಾನಪರಂಪರೆಯ ವೈಶಿಷ್ಟ್ಯಗಳನ್ನು ಚರ್ಚಿಸುವ ಸಂದರ್ಭದಲ್ಲಿ ಗಿರೀಶ ಭಟ್ಟರು ಜ್ಞಾನ ಮತ್ತು ಮಾಹಿತಿಗಳ ನಡುವಿರುವ ವ್ಯತ್ಯಾಸಗಳನ್ನು ಚರ್ಚಿಸುತ್ತಾ, ನಮ್ಮ ಇಂದಿನ ಕಲಿಕೆಯ ಪ್ರಕ್ರಿಯೆಯು ಮಾಹಿತಿಯನ್ನು ಪಡೆದುಕೊಳ್ಳುವುದಕ್ಕೆಯೇ ಸೀಮಿತಗೊಳ್ಳುತ್ತಾ ಬರುತ್ತಿರುವುದನ್ನು ಗುರುತಿಸುತ್ತಾರೆ. ಪರಂಪರೆಯಲ್ಲಿ ಬಳಕೆಯಾಗುತ್ತಿದ್ದ ವಿದ್ಯೆ, ವಿಜ್ಞಾನ, ದರ್ಶನ, ತತ್ತ್ವ ಮುಂತಾದ ಪರಿಕಲ್ಪನೆಗಳು ಜ್ಞಾನದ ಬೇರೆ ಬೇರೆ ಮುಖಗಳನ್ನು ಯಾವೆಲ್ಲ ರೀತಿಯಲ್ಲಿ ಪ್ರತಿನಿಧಿಸುವಂತಿತ್ತು ಎಂಬುದನ್ನು ಸೋದಾಹರಣವಾಗಿ ಚರ್ಚಿಸುತ್ತಾರೆ.

ಭಾರತೀಯ ತತ್ತ್ವಶಾಸ್ತ್ರವು ಅಜ್ಞಾನ, ಅವಿದ್ಯೆ, ಮಿಥ್ಯಾಜ್ಞಾನವನ್ನು ಮನುಷ್ಯನ ಏಳಿಗೆಗೆ ಕಂಟಕ ಎಂಬುದಾಗಿ ಪರಿಭಾವಿಸುತ್ತಿದ್ದದ್ದನ್ನು ಗುರುತಿಸುತ್ತಾ ಈ ಕೃತಿಯಲ್ಲಿ ಪ್ರಕಟವಾಗಿರುವ ನಿಲುವುಗಳು ಮುಖ್ಯವಾದದ್ದು– "ಜ್ಞಾನದ ಮೂಲಕ ಮನುಷ್ಯನ ಸಂಕಷ್ಟಗಳ ನಿವಾರಣೆಯಾಗುತ್ತದೆ; ಅಜ್ಞಾನವೆಂದರೆ ತಿಮಿರ–ಕತ್ತಲೆ; ಅದು ಕಷ್ಟಕ್ಕೆ ಕಾರಣ; ಜ್ಞಾನವು ಬೆಳಕು; ನಮ್ಮ ಎಲ್ಲ ಪುರುಷಾರ್ಥಗಳನ್ನು ಈಡೇರಿಸಿಕೊಳ್ಳಲು ಜ್ಞಾನದ ಬೆಳಕು ಅಗತ್ಯ ಎಂಬ ನಿಲುವು ಭಾರತೀಯ ದರ್ಶನಗಳದು"(ಪು.30). ಮುಂದುವರೆದು, ಈ ಮಾತುಗಳು ಕೇವಲ ವೈದಿಕ ದರ್ಶನಕ್ಕೆ ಮಾತ್ರ ಸೀಮಿತವಾಗಿರದೆ ಬೌದ್ಧ, ಜೈನ ದರ್ಶನಗಳಲ್ಲಿ ಇದೇ ಅರ್ಥ ಬರುವಂಥದ್ದೇ ನಿಲುವುಗಳು ಪ್ರಕಟಗೊಂಡಿರುವುದನ್ನು ಗುರುತಿಸುತ್ತಾರೆ. ಹಾಗಾಗಿ "ಭಾರತದ ಪರಂಪರೆಯಲ್ಲಿ ವ್ಯಕ್ತಿಯ ಜ್ಞಾನವು ತನ್ನ ಮೇಲೆಯೇ ಅಧಿಕಾರವನ್ನು ಹೊಂದಲು ಅಂದರೆ, ತನ್ನನ್ನು ತಾನು ಬಿಡುಗಡೆಗೊಳಿಸಿಕೊಳ್ಳಲು ಇರುವ ದಾರಿ ಎಂದೇ ಗ್ರಹಿಕೆಯಿರುವುದು. ಇನ್ನೂ ಸರಳವಾಗಿ ಹೇಳಬೇಕೆಂದರೆ ಅದು ಮೋಕ್ಷಕ್ಕೆ ದಾರಿ. ಆತ್ಯಂತಿಕ ಬಿಡುಗಡೆಯೆಂದರೆ ಮೋಕ್ಷವೇ ತಾನೇ? ಕಾಮ–ಅರ್ಥಗಳ ಸುಳಿಯಿಂದ ಬಿಡಿಸಿಕೊಳ್ಳಲು ಜ್ಞಾನವೇ ಉಪಾಯ"(ಪು.31) ಎಂಬ ಸಮರ್ಥನೆ ಮುಖ್ಯದ್ದಾಗುತ್ತದೆ. ಇಷ್ಟು ಮಾತ್ರವಲ್ಲದೆ, ಈ ದಾರ್ಶನಿಕ ಹಿನ್ನಲೆಯ ಜ್ಞಾನದ ಅರಿವೇ ಇರದಿದ್ದ ಜನಪದರಲ್ಲಿನ ನಂಬಿಕೆ, ನಡವಳಿಕೆ, ಪಾಲಿಸಿಕೊಂಡು ಬಂದಿರುವ ಆಚರಣೆಗಳಿಗೆ ಮತ್ತು ವೇದೋಪನಿಷತ್ತು ಮೊದಲಾದ ವೈದಿಕ ಪಠ್ಯಗಳ ನಡುವಿನ ತಾತ್ತ್ವಿಕ ಸ್ವರೂಪದಲ್ಲಿ ಬಹಳ ದೊಡ್ಡ ವ್ಯತ್ಯಾಸವಿಲ್ಲ ಎಂಬುದನ್ನೂ ಗುರುತಿಸುತ್ತದೆ.

ಭಾರತೀಯ ಜ್ಞಾನಮೀಮಾಂಸೆಯಲ್ಲಿ ಜ್ಞಾನದ ಅನ್ವೇಷಣೆಗೆ ಸೂಚಿಸಲಾಗಿರುವ ಪ್ರತ್ಯಕ್ಷ, ಅನುಮಾನ, ಉಪಮಾನ, ಅರ್ಥಾಪತ್ತಿ, ಶಬ್ದ ಮತ್ತು ಅನುಪಲಬ್ಧಿ ಎಂಬ ಆರು ಪ್ರಮಾಣಗಳನ್ನು ಈ ಕೃತಿಯಲ್ಲಿ ಸೋದಾಹರಣವಾಗಿ ಚರ್ಚಿಸಲಾಗಿದೆ. ಇವುಗಳ ಬಗ್ಗೆ ಭಾರತದ ವಿವಿಧ ದರ್ಶನಗಳಲ್ಲಿ ಏಕ ರೀತಿಯ ನಿಲುವು ಇರದಿದ್ದರೂ ಈ ಭಿನ್ನತೆಗಳ ಕುರಿತು ತಾರ್ಕಿಕವಾಗಿ ಚಿಂತಿಸಿದಾಗ ಭಿನ್ನತೆಯೂ ಕೂಡ ಮುಖ್ಯವಾದದ್ದೇ ಅನಿಸುತ್ತದೆ. ಹಾಗಾಗಿ ಈ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು– "ಯಾವುದೇ ವಿಷಯದ ಬಗ್ಗೆ ತಿಳಿದುಕೊಳ್ಳುವ ಪ್ರಕ್ರಿಯೆಯಲ್ಲಿ ಈ ರೀತಿಯ ವಿವಿಧ ಪ್ರಮಾಣಗಳು ಸಹಾಯ ಮಾಡುತ್ತವೆ ಎಂಬುದು ಸಾಮಾನ್ಯ ಜ್ಞಾನವೇ ಹೌದು. ಆದರೆ ಜ್ಞಾನವನ್ನು ಗಳಿಸುವ ಪ್ರಕ್ರಿಯೆಯನ್ನು ಇಷ್ಟು ಗಂಭೀರವಾಗಿ ವಿವೇಚಿಸಿದೆ ಎನ್ನುವುದು ಭಾರತೀಯ ಜ್ಞಾನಪರಂಪರೆಯ ವಿಶೇಷತೆ. ಹೀಗಾಗಿ ಇಂತಹ ಸಾಮಾನ್ಯ ಜ್ಞಾನವೆನ್ನುವ ಸಂಗತಿಯ ಬಗ್ಗೆಯೂ ಅಷ್ಟೊಂದು ವಿಶದವಾಗಿ ಚರ್ಚೆ, ಜಿಜ್ಞಾಸೆ ನಡೆಸಿದುದು; ಇದು ಜೀವನ್ಮರಣದ ಪ್ರಶ್ನೆಯೋ ಎಂಬಂತೆ ಜಿಜ್ಞಾಸೆ ಮಾಡಿದ ಕಾರಣದಿಂದಲೇ ಒಂದು ದರ್ಶನ ಒಪ್ಪಿದ್ದನ್ನು ಮತ್ತೊಂದು ದರ್ಶನ ಒಪ್ಪದೇ ಇದ್ದುದು!"(ಪು.41)

ಇಂದಿನ ಕೆಲವು ಸಂಶೋಧನೆಗಳು ತರ್ಕಗಳನ್ನು ತಪ್ಪಾದ ನೆಲೆಗಟ್ಟಿನಲ್ಲಿ ಬಳಸಿಕೊಳ್ಳುತ್ತಿರುವುದು ಇಲ್ಲವೇ ತರ್ಕವೇ ಇಲ್ಲದೆ ತಪ್ಪು ತೀರ್ಮಾನಗಳಿಗೆ ಒಳಗಾಗುತ್ತಿರುವುದನ್ನು ಡಾ. ಗಿರೀಶ ಭಟ್ಟರು ತಮ್ಮ ಕೃತಿಯಲ್ಲಿ ಗುರುತಿಸುತ್ತಾರೆ. ಹೀಗೆ ತರ್ಕರಾಹಿತ್ಯ, ತರ್ಕಾಭಾಸದ ಉದಾಹರಣೆಗಳು ಮಾತ್ರವಲ್ಲದೆ ವೈಚಾರಿಕ ಪೂರ್ವಗ್ರಹಗಳು, ರಾಜಕೀಯದ ಐಡಿಯಾಲಜಿಗಳಿಗೆ ಸಿಲುಕಿ ತರ್ಕದ ಬದಲಿಗೆ

ಕುತರ್ಕದ ಹಾದಿಯಲ್ಲಿ, ಸತ್ಯದ ಬದಲು ಅಸತ್ಯದ ಹಾದಿಯಲ್ಲಿ ಸಾಗುತ್ತಿರುವ ಅಪಾಯಕಾರಿ ಪರಿಸ್ಥಿತಿ ನಿರ್ಮಾಣವಾಗಿರುವುದನ್ನೂ ಕೂಡ ಲೇಖಕರು ಉದಾಹರಿಸುತ್ತಾರೆ. ಹಾಗಾಗಿ ಅವರ ಈ ಮಾತುಗಳು ಮುಖ್ಯದ್ದಾಗುತ್ತದೆ– "ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ತರ್ಕಬದ್ಧ ಯೋಚನೆಯನ್ನು ಮಾಡುವ ತರಬೇತಿ ನೀಡುವುದು ಅತ್ಯಂತ ಅಗತ್ಯ. ಆದರೆ ನಮ್ಮ ಪ್ರಾಥಮಿಕ, ಪ್ರೌಢ ಅಥವಾ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕೂಡ ತರ್ಕಬದ್ಧವಾದ ಯೋಚನೆಯನ್ನು ಮಾಡಲು ಹೇಗೆ ತರಬೇತಿಯಿಲ್ಲವೋ ಹಾಗೆಯೇ ತತ್ತ್ವದ ಆಳಕ್ಕಿಳಿಯುವ ತರಬೇತಿಯೂ ಇಲ್ಲ. ಒಟ್ಟಿನಲ್ಲಿ ಇಂದಿನ ಕನ್ನಡ ಸಂಶೋಧನೆಯಲ್ಲಿ ಅಥವಾ ಚಿಂತನೆಯಲ್ಲಿ ತರ್ಕ ಮತ್ತು ತತ್ತ್ವಜ್ಞಾನ ಎರಡೂ ಮಹತ್ತ್ವ ಪಡೆಯದಿರುವುದೇ ಬಹಳ ದೊಡ್ಡ ಸಮಸ್ಯೆ.

ಉನ್ನತ ಮಟ್ಟದ ಬೌದ್ಧಿಕತೆಯತ್ತ ನಮ್ಮ ತುಡಿತ ಇಲ್ಲದಿದ್ದರೆ ತತ್ತ್ವಜ್ಞಾನದ ಆಳ ಚಿಂತನೆಯಾಗಲೀ ತರ್ಕಬದ್ಧ ಚಿಂತನೆಯಾಗಲೀ ಕಷ್ಟಸಾಧ್ಯ. ವಾಸ್ತವವಾಗಿ ತತ್ತ್ವಜ್ಞಾನ ಮತ್ತು ತರ್ಕ ಬೇರೆಬೇರೆಯಲ್ಲ. ಚಿಂತನೆಯು ತರ್ಕಬದ್ಧವಾಗಿದ್ದರೆ ಅದು ತತ್ತ್ವಜ್ಞಾನದ ಹಂತಕ್ಕೆ ಏರದೆ ಇರುವುದು ಸಾಧ್ಯವಿಲ್ಲ."(ಪು.115)

ಸಂಶೋಧನೆಯಲ್ಲಿ ತರ್ಕದ ಮೂಲಕ ತತ್ತ್ವಶೋಧ ನಡೆಯಬೇಕು ಎನ್ನುತ್ತಾ ಗಿರೀಶ ಭಟ್ಟರು ತಮ್ಮ ಕೃತಿಯಲ್ಲಿ ಸಂಶೋಧನೆಯಲ್ಲಿನ ತತ್ತ್ವಶೋಧವು ಕೇವಲ ಮೇಲುಸ್ತರದ ಸಮಾಜಶಾಸ್ತ್ರ, ಅರ್ಥಶಾಸ್ತ್ರಗಳ ನೆಲೆಯಲ್ಲಿ ನಿಂತುಬಿಡದೆ ಇನ್ನಷ್ಟು ಮುಂದಕ್ಕೆ ಅಂದರೆ ತತ್ತ್ವಶಾಸ್ತ್ರದ ಸ್ತರಕ್ಕೆ ಹೋಗಲು ಯತ್ನಿಸಬೇಕು ಎನ್ನುತ್ತಾರೆ. ಸಂಶೋಧನೆಯಂತಹ ಗಂಭೀರ ಬೌದ್ಧಿಕ ಚಟುವಟಿಕೆಯಲ್ಲಿ ಪ್ರತಿಯೊಂದು ಪದಕ್ಕೂ ಪ್ರಾಮುಖ್ಯತೆಯಿದ್ದು ಸಂಶೋಧಕ ಬಳಸುವ ಪ್ರತಿ ಪದಕ್ಕೂ ಅರ್ಥಸ್ಪಷ್ಟತೆಯನ್ನು ಹೊಂದಿರಬೇಕು ಎನ್ನುತ್ತಾರೆ. ಸಂಶೋಧನೆಯೆಂಬ ಒಟ್ಟು ಪ್ರಕ್ರಿಯೆಯು ತರ್ಕ, ಅರ್ಥ, ಜ್ಞಾನ, ಸತ್ಯ ಮೊದಲಾದವುಗಳಿಂದ ಕೂಡಿರುವ ಅಡಿಪಾಯದ ಮೇಲೆ ನಿಂತಿರುವುದರಿಂದ ಸಂಶೋಧನೆಯಲ್ಲಿ ಸತ್ಯದ ಮರೆಮಾಚುವಿಕೆ ಅಥವಾ ಅಸತ್ಯದ ಪ್ರತಿಪಾದನೆ ಇರಲೇಬಾರದು ಎಂಬುದನ್ನು ದೃಢವಾಗಿ ಪ್ರತಿಪಾದಿಸುತ್ತಾರೆ. ಸಂಶೋಧಕನು ಯಾವುದೇ ಐಡಿಯಾಲಜಿಗೆ ಬದ್ಧನಾಗಿಬಿಟ್ಟರೆ ಆತ ಅದರ ರಾಜಕೀಯ ಹಿತಾಸಕ್ತಿಗೆ ಪೂರಕವಾದದ್ದನ್ನು ಮಾತ್ರ ಹೇಳಬೇಕಾದ ಹಂಗಿಗೆ ಒಳಗಾಗುತ್ತಾನೆ. ಹೀಗಾಗಿ ಸಂಶೋಧನೆಯಲ್ಲಿ ಸತ್ಯಕ್ಕೆ ಬದ್ಧರಾಗಿ ನಿಂತುಕೊಳ್ಳುವ ಪ್ರವೃತ್ತಿ ಕಡಿಮೆಯಾಗುತ್ತಿರುವುದು ಮಾತ್ರವಲ್ಲದೆ, ಕಂಡುಕೊಂಡಿರುವ ಸತ್ಯವನ್ನು ಹೇಳದೆ ಸಾಪೇಕ್ಷಗೊಳಿಸಿ ಸಮಸ್ಯಾತ್ಮಕವಾಗಿಸುತ್ತಿರುವ ನಡೆಯನ್ನು ಗುರುತಿಸುತ್ತಾರೆ. ಹಾಗಾಗಿ ಈ ನಡೆಯನ್ನು ಖಚಿತವಾಗಿ ಖಂಡಿಸುತ್ತಾ ಹೇಳುವ ಮಾತುಗಳು ಉಲ್ಲೇಖನೀಯ– "ಸತ್ಯವನ್ನು ತಾಳಿಕೊಳ್ಳಲಾಗದ ಸಮಾಜ ಸುಧಾರಿಸದು. ವಾಸ್ತವವಾಗಿ ಸಾಮಾನ್ಯ ಜನರಲ್ಲಿ ಸತ್ಯವನ್ನು ಅರಗಿಸಿಕೊಳ್ಳುವ ಪ್ರೌಢತೆ ಇದ್ದೇ ಇದೆ. ಅದು ಇಲ್ಲದಿರುವುದು ನಮ್ಮ ಜ್ಞಾನಾಧಿಕಾರ ಕೇಂದ್ರಗಳಲ್ಲಿ ಇರುವವರಿಗೇ ಹೊರತು ಒಟ್ಟಾರೆ ಸಮಾಜಕ್ಕೆ ಅಲ್ಲ." (ಪು.123)

ಈ ಕೃತಿಯು ಸಂಶೋಧನೆಯ ಸಂದರ್ಭದಲ್ಲಿ ನಮ್ಮ ಚಿಂತನಾ ಕ್ರಮದಲ್ಲಿ ಆಗಬೇಕಿರುವ ಬದಲಾವಣೆಗಳನ್ನು, ಮಾಡಿಕೊಳ್ಳಬೇಕಾಗಿರುವ ಪೂರ್ವಸಿದ್ಧತೆಗಳನ್ನು, ವಹಿಸಬೇಕಾಗಿರುವ ಎಚ್ಚರಿಕೆಗಳನ್ನು ಚರ್ಚಿಸುತ್ತಲೇ ಸಂಶೋಧಕನು ತಾಂತ್ರಿಕವಾಗಿ

ಪಾಲಿಸಬೇಕಾದ ಅಂಶಗಳನ್ನು ತಿಳಿಸಿಕೊಡುತ್ತದೆ. ಸಂಶೋಧನ ವಿಷಯದ ಆಯ್ಕೆ, ಸಂಶೋಧನ ಪ್ರಸ್ತಾವದ ತಯಾರಿ, ಸಂಶೋಧನೆಯ ವಿವಿಧ ಹಂತಗಳು, ಸಂಶೋಧನ ಪ್ರಬಂಧದಲ್ಲಿ ವಿಷಯಗಳನ್ನು ಜೋಡಿಸುವ ಕ್ರಮ, ಇರಬೇಕಾದ ಅಧ್ಯಾಯಗಳು, ಸಂಶೋಧನ ಪ್ರಬಂಧದ ಬರವಣಿಗೆಯ ಶೈಲಿ ಇತ್ಯಾದಿ ಅಂಶಗಳನ್ನು ಸರಳವಾಗಿ ಮತ್ತು ಸ್ಪಷ್ಟವಾಗಿ ಮನದಟ್ಟು ಮಾಡಿಸುತ್ತದೆ.

ಒಟ್ಟಿನಲ್ಲಿ ಸಂಶೋಧನ ಪ್ರಕ್ರಿಯೆಯಲ್ಲಿನ ಸಮಗ್ರ ಸಂಗತಿಗಳನ್ನು ಕೂಲಂಕುಶವಾಗಿ ಚರ್ಚಿಸುವ ಈ ಕೃತಿಯು ಸಂಶೋಧನ ಕ್ಷೇತ್ರದಲ್ಲಿ ಆಗಬೇಕಾಗಿರುವ ಸುಧಾರಣೆಗಳತ್ತ ಗಮನಹರಿಸುತ್ತದೆ. ಕನ್ನಡದಲ್ಲಿ ಗುಣಮಟ್ಟದ ಸಂಶೋಧನೆಗಳ ಪ್ರಮಾಣ ಹೆಚ್ಚಳವಾಗಬೇಕೆಂಬ ಪ್ರಾಮಾಣಿಕವಾದ ಆಶಯ ಕೃತಿಯುದ್ದಕ್ಕೂ ಕಾಣಿಸಿಕೊಂಡಿದೆ. ಹಾಗಾಗಿ ಈ ಕೃತಿಯು ಸಂಶೋಧಕನಿಗೆ ತನ್ನ ಸಂಶೋಧನೆಯ ಪ್ರತಿ ಹಂತಗಳಲ್ಲೂ ಉಪಯುಕ್ತವಾಗಬಲ್ಲ ಕೈಪಿಡಿಯಂತಿದ್ದು ಸಂಶೋಧಕನು ಅಸತ್ಯ, ಅಪ್ರಮಾಣಿಕತೆಗಳ ದಾರಿಗಳಲ್ಲಿ ನಡೆಯದಿರುವಂತೆ ಮಾರ್ಗದರ್ಶನವನ್ನು ಮಾಡುತ್ತದೆ.

❖❖❖

ಮುಂದೋಡುತಲಿದೆ ಅರಳಿಯ ನೆರಳು
ನೆನಪಿಸಿ ನೆಲವದು ತಿರುಗುವ ಬೆರಗು

# ಗುರು–ಲಿಂಗ–ಜಂಗಮ : ವಿಶ್ಲೇಷಣಾತ್ಮಕ ಅಧ್ಯಯನ

**ಡಾ. ಆರ್.ವಿ. ಪಾಟೀಲ**
ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ವಿಭಾಗ, ಜೆ.ಎಸ್.ಎಸ್. ಬನಶಂಕರಿ ಕಲಾ,
ವಾಣಿಜ್ಯ ಮತ್ತು ಎಸ್.ಕೆ. ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ

**"ನಾನು ಆರಂಬವ ಮಾಡುವೆನಯ್ಯಾ, ಗುರುಪೂಜೆಗೆಂದು,**
**ನಾನು ಬೆವಹಾರವ ಮಾಡುವೆನಯ್ಯಾ, ಲಿಂಗಾರ್ಚನೆಗೆಂದು,**
**ನಾನು ಪರಸೇವೆಯ ಮಾಡುವೆನಯ್ಯಾ, ಜಂಗಮದಾಸೋಹಕ್ಕೆಂದು,..."**[1]

ಎಂದು ಬಸವಣ್ಣನವರು ಗುರು, ಲಿಂಗ, ಜಂಗಮ ಇವುಗಳನ್ನು ಕತೃ, ಕಾರಣ, ಕ್ರಿಯೆಯಾಗಿ ಅರಿತು ಆಚರಿಸುವ ಪರಿಯನ್ನು, ಅನುಭಾವಿಸಿ, ಆನಂದಿಸಿದ ಅಭಿವ್ಯಕ್ತಿ ಈ ವಚನವಾಗಿದೆ. ಈ ವಚನದಲ್ಲಿ ಬಸವಣ್ಣನವರು ಹೇಳುವಂತೆ, 'ನನ್ನ ಜೀವನದ ಆರಂಭವೆ ಗುರು ಪೂಜೆಯಿಂದ, ಲಿಂಗಾರ್ಚನೆಯೇ ನನ್ನ ಬದುಕಿನ ವ್ಯವಹಾರ, ನನ್ನ ಬಾಳೆಲ್ಲಾ ಜಂಗಮ ಸೇವೆಗೆ ಮೀಸಲು, ಏಕೆಂದರೆ ನಾನು ಯಾವ ಕರ್ಮಗಳನ್ನು ಮಾಡುವೆನೋ ಅದರ ಪ್ರತಿಯಾಗಿ ಕರ್ಮಫಲ ನೀ ಕೊಡುವೆ ಎಂಬುದು ನನಗೆ ಗೊತ್ತು, ಅದರ ನಿಜದರಿವಿನಿಂದ ಭವ ದಾಟಲು ಗುರು, ಲಿಂಗ, ಜಂಗಮವ ಭಕ್ತಿಯದಿ ಅಳವಡಿಸಿಕೊಂಡಿರುವೆ, ನೀನೆ ಕೊಟ್ಟ ಅಮೂಲ್ಯವಾದ ಶ್ರೇಷ್ಠ ದ್ರವ್ಯ, ನಿನಗೆ ಮೀಸಲು. ದೇವಾ ನೀ ಏನು ಕೊಡುವೆಯೋ ಅದನ್ನು ನಿನಗೆ ಮರಳಿ ಕೊಡುವೆ ದೇವಾ....'

ಭವದಲ್ಲಿ ಹುಟ್ಟಿದ ಮನುಷ್ಯ ಅಪೂರ್ಣ ಜೀವಿಯಾದ ಮಾನವ, ಪೂರ್ಣ ಮಾನವನಾಗಿ ದೈವತ್ವಕ್ಕೆ ಸಾಗಲು ಇಹ–ಪರಗಳ ಅನುಸಂಧಾನದ ಮಾರ್ಗ ಗುರು, ಲಿಂಗ, ಜಂಗಮಗಳಾಗಿವೆ. ಈ ಮಾರ್ಗವನ್ನು 12ನೇ ಶತಮಾನದ ಬಸವಾದಿ ಶರಣರು ತೋರಿಸಿ ಕೊಟ್ಟಿರುವರು. ಶರಣರು ತೋರಿಸಿದ ಆ ವಿಶಿಷ್ಟ ಮಾರ್ಗವು ಭಕ್ತಿ ಮಾರ್ಗ. ಈ ಭಕ್ತಿ ಸಾಧನೆಯನ್ನು ಮಾಡಲು ಅಂತರಂಗ ಬಹಿರಂಗಗಳ ಅರಿವಾಗಬೇಕು, ಅದರಿಂದ ಕಾಯ–ಕಾಯಕ ಶುದ್ಧಿಯನ್ನು ಹೊಂದಲು ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರಗಳೆಂಬ ಎಂಟು ಆವರಣಗಳ ಮೂಲಕ ಸಾಧ್ಯವೆಂದು ತೋರಿಸಿದ ಬಸವಾದಿ ಪ್ರಮಥರೆಲ್ಲ ಇಂದು ನಮ್ಮ ಆರಾಧ್ಯರು. ಬದುಕಿನ ನಿಜಜ್ಞಾನವನ್ನು ತಿಳಿಸಲು, ಅನುಭಾವದ ನೆಲೆಯಲ್ಲಿ ಹೇಳಿರುವ ಆವರಣದ ಮೊದಲ ಮಾತು ಗುರು, ಎರಡನೆಯದು ಲಿಂಗ, ಮೂರನೆಯದು ಜಂಗಮ ಇವುಗಳ ತಿಳುವಳಿಕೆ ಪ್ರತಿಯೊಬ್ಬರಿಗೂ ಆಗಬೇಕು. ಅಂದಾಗಲೆ ಶರಣರು ಕಟ್ಟಬಯಸಿದ ಮಾನವ ಸಮಾಜ ರೂಪುಗೊಳ್ಳಲು ಸಾಧ್ಯ ಸ್ಥೂಲದೇಹಕ್ಕಿಂತ ಇಂದ್ರಿಯಗಳು ಶ್ರೇಷ್ಠ, ಇಂದ್ರಿಯಕ್ಕಿಂತ ಮನಸ್ಸು ಶ್ರೇಷ್ಠ, ಮನಸ್ಸಿಗಿಂತ ಬುದ್ಧಿ ಶ್ರೇಷ್ಠ, ಬುದ್ಧಿಗಿಂತ ಆತ್ಮ ಶ್ರೇಷ್ಠ. ಗುರುವಿನಿಂದ ಭಕ್ತಿಯೋಗ, ಲಿಂಗದಿಂದ ಕರ್ಮಯೋಗ, ಜಂಗಮದಿಂದ–ಕಾಯಕಯೋಗವೆಂದು ಪ್ರತಿಪಾದನೆಗೊಂಡಿರುವುದನ್ನು ಕಾಣಬಹುದು.

ಗುರು : ಗುರು ಎಂದರೆ ಸೃಷ್ಟಿಕರ್ತನ ಮೂರ್ತರೂಪ, ಅಜ್ಞಾನ ಅಳಿದು ಜ್ಞಾನದೆಡೆಗೆ ಕರೆತರುವವನು, ಆಧ್ಯಾತ್ಮದ ಸವಿಯನುಣಿಸುವವನು, ಶಿವತ್ವದ

ಮಹಾಬೆಳಕಿನಲ್ಲಿ ನಡೆಸುವವನು ಗುರು. "ಲಿಂಗ ಸೃಷ್ಟಿಕರ್ತನ ಕುರುಹು, ಈ ಕುರುಹನು ಸಾಧಕನಿಗೆ ಕೊಟ್ಟವರು ಮತ್ತು ಅದರಲ್ಲಿ ಅರುಹನ್ನು ಮೂಡಿಸಿ ಅನುಭಾವವನ್ನು ಕೈಗೂಡಿಸಿಕೊಡಲು ಕಾರಣರಾದವರು ಗುರು ಜಂಗಮರು."[2] ಆದ್ದರಿಂದ ಗುರು ಮಹತಿಯನ್ನು ತುಂಬಾ ವಿಶಾಲವಾದ ಅರ್ಥದಲ್ಲಿ ನೋಡಲಾಗಿದೆ. ಗುರು ಬ್ರಹ್ಮ, ವಿಷ್ಣು, ಮಹೇಶ್ವರ. ಅಷ್ಟೆ ಅಲ್ಲ; ಸಾಕ್ಷಾತ್ ಪರಬ್ರಹ್ಮಸ್ವರೂಪ ಗುರು. ಅತೀತನಾದ ಗುರು ಆಧ್ಯಾತ್ಮ ಸಾಧನೆಗೆ ಮುಖ್ಯಸ್ಥ. ಬಸವಣ್ಣನವರು ಗುರುವನ್ನು ಕುರಿತು "ಮಡಿಕೆಯ ಮಾಡುವಡೆ ಮಣ್ಣೆ ಮೊದಲು, ತೊಡಿಗೆಯ ಮಾಡುವಡೆ ಹೊನ್ನೆ ಮೊದಲು, ಶಿವಪಥವನರಿವಡೆ ಗುರುಪಥವೆ ಮೊದಲು, ಕೂಡಲಸಂಗಮದೇವನರಿವಡೆ, ಶರಣರ ಸಂಗವೆ ಮೊದಲು"[3] ಎಂದಿದ್ದಾರೆ. ಗುರುವಿನಿಂದ ಸದಾಚಾರ, ಗುರುವಿನಿಂದ ಶಿವಾಚಾರ, ಗುರುವಿನಿಂದ ಆಚಾರ, ಗುರುವಿನಿಂದ ಲಿಂಗ, ಗುರುವಿನಿಂದ ದೀಕ್ಷೆ, ಗುರುವಿನಿಂದ ಮೋಕ್ಷ.

"ಚೈತನ್ಯಂ ಶಾಶ್ವತಂ ಶಾಂತಂ ವ್ಯೋಮಾತೀತಂ ನಿರಂಜನಂ, ನಾದ ಬಿಂದು ಕಲಾತೀತಂ ತಸ್ಮೈಶ್ರೀ ಗುರುವೇ ನಮಃ" ಅಂದರೆ ಗುರು ಚೈತನ್ಯ, ಶಾಶ್ವತ, ಶಾಂತ, ವ್ಯೋಮಾತೀತ, ಕಾಲಾತೀತ ಅವರ್ಣನೀಯ, ಅನಂತ ತತ್ವಾತ್ಮಕವಾದ ರೂಪವುಳ್ಳ ಜ್ಞಾನಮಾರ್ಗ ತೋರುವ ಬೆಳಕು, ಗುರುವಿನ ಉಪದೇಶದಿ ಭವ ಮುಕ್ತಿಗೊಂಡು ಶಿವಪಥವ ಪಡೆಯುವ ಸನ್ಮಾರ್ಗದತ್ತ ಕರೆದೊಯ್ಯುವ ಮಾರ್ಗದರ್ಶಕವಾದ ಆತ್ಮನೆ ಗುರು. ಸಾಕ್ಷಾತ್ ನಿರಂಜನ ತತ್ವದ ಸಾಕಾರರೂಪ ಎಂದು ವರ್ಣಿಸಿರುವುದು. ಸಿದ್ಧರಾಮ ಹೇಳುವಂತೆ, "ಕಣ್ಣಿಂಗೆ ಸತ್ವ ರಜ ತಮವೆಂಬ ತಿಮಿರ ಕವಿದು ಅಜ್ಞಾನವಶದಲ್ಲಿ ಸದ್ಗುರುವನು ಪರಿಭಾವಿಸಿ, ಔಷದವ ಬೇಡಲೊಡನೆ ಶಿವಜ್ಞಾನವೆಂಬ ಅಂಜನವ ನೆಚ್ಚಿ, ಎನ್ನ ಕಣ್ಣಮುಸುಕಿದ ಅಜ್ಞಾನವೆಂಬ ಕಾಳಿಕೆಯ ಬೇರ್ಪಡಿಸಿರುವನು ಗುರು". ಸವಣ್ಣನವರು "ಗುರುವಚನವಲ್ಲದೆ ಲಿಂಗವೆಂದೆನಿಸದು, ಗುರುವಚನವಲ್ಲದೆ ಜಂಗಮವೆಂದೆನಿಸದು, ಗುರುವಚನವಲ್ಲದೆ ನಿತ್ಯವೆಂದೆನಿಸದು, ಗುರುವಚನವಲ್ಲದೆ ನೇಮವೆಂದೆನಿಸದು, ತಲೆಯಿಲ್ಲದ ಅಟ್ಟಿಗೆ ಪಟ್ಟವ ಕಟ್ಟುವ, ಉಭಯ ಭ್ರಷ್ಟರ ಮೆಚ್ಚುವನೆ ನಮ್ಮ ಕೂಡಲಸಂಗಮದೇವ."[4] ಎಂದಿರುವರು.

ನಿಷ್ಠೆಯುಳ್ಳವರು, ಶಿವ ಪ್ರಸಾದವನ್ನು ಹೇಗೆ ಸ್ವೀಕರಿಸುವರೋ ಹಾಗೆಯೇ ಗುರು ಪ್ರಸಾದವನೂ, ಜಂಗಮ ಪ್ರಸಾದವನ್ನು ಸ್ವೀಕರಿಸಬೇಕು. ಈ ಸೃಷ್ಟಿಯೇ ಭೋಗ, ಮೋಕ್ಷ ರೂಪ ಸಕಲ ಸಿದ್ಧಿ ಕ್ರಿಯೆಗಳಿಗೆ ಗುರುವೇ ಮೂಲ ಕಾರಣನಾಗಿರುವನು. ಏಕೆಂದರೆ ಶಿವನೇ ಪ್ರತ್ಯಕ್ಷವಾಗಿ ಗುರುರೂಪದಿಂದ ಇರುವನು. ಹಾಗಾಗಿ "ನಗುರೋರಧಿಕಂ" "ನಾಸ್ತಿ ತತ್ವಂ ಗುರೋಪರಂ" ಹೀಗೆ ಗುರುವಿನ ಮಹಿಮೆ ಇರುವುದು! ನಿತ್ಯಜ್ಞಾನ ಸ್ವರೂಪನಾದ ಶಿವನು ಶರೀರ ರಹಿತನಾಗಿದ್ದರೂ, ಗುರು ರೂಪದಿಂದ ಶರೀರ ವಿಶಿಷ್ಟನಾಗಿ ಸರ್ವ ಪ್ರಾಣಿಗಳನ್ನು ಕಾಪಾಡುವವನು, ಅನುಗ್ರಹಿಸುವವನು ಅಂದರೆ ಯಾರು ಶಿವನೋ ಅವರೆ ಗುರು, ಯಾರು ಗುರುವೋ ಅವನೇ ಶಿವನು ಸಂಪೂರ್ಣ ಜ್ಞಾನಿಯೇ ಜ್ಞಾನ ಪ್ರಾಪ್ತಿಗೋಸ್ಕರ ಇವರಿಬ್ಬರಲ್ಲಿ ಭೇದ ಬುದ್ಧಿಯನ್ನು ಮಾಡಬಾರದು.

ಲಿಂಗ: ಗುರು ಮಹಿಮೆಯ ಯೋಗದಿಂದ, ಇದೇ ಅರ್ಥದ ಜ್ಞಾನದಿಂದ, ಲಿಂಗಮಹಿಮೆಯನ್ನು ತಿಳಿಯಬೇಕು. ಶಿವನು ಯಾವ ಚಿನ್ಮಯ ಲಿಂಗವಿದೆಯೋ, ಸರ್ವಕಾರಣೀಭೂತವಾದ ಆ ಲಿಂಗವನ್ನು ಗುರು ಭೋದನೆಯಲ್ಲಿರುವ ಮನಸ್ಸಿನಿಂದ ತಿಳಿಯಲು ಸರಳವಾಗುವುದು.

**"ದೀಯತೇ ಲಿಂಗ ಸಂಬಂಧಃ ಕ್ಷೀಯತೇ ಚ ಮಲತ್ರಯಂ**
**ದೀಯತೇ ಕ್ಷೀಯತೇ ಯಸ್ಯಾಃ ಸಾ ದೀಕ್ಷೇತಿ ನಿಗದ್ಯತೆ॥"**

ಅಂಗಕ್ಕೆ ಲಿಂಗ ಸಂಬಂಧವಾಗುವುದರಿಂದ ಮಲತ್ರಯ ನಾಶಗೊಳಿಸುವುದು. ಇದು ದೀಕ್ಷೆ. ಅಣವಮಲ, ಮಾಯಾಮಲ, ಕಾರ್ಮಿಕಮಲ ಕಳೆಯಲು ಲಿಂಗದೀಕ್ಷೆ ಬೇಕು. ಇಂದ್ರಿಯ ವಿಕಾರ ನಿಗ್ರಹವಾಗುವುದು. ಕಾಯಾ, ವಾಚಾ, ಮನಸಾ ಏಕ ಚಿತ್ತ ಶುದ್ಧಿಯಾಗುವನು. ಶ್ರೇಷ್ಠವೂ, ಪವಿತ್ರವೂ, ಆಣವಾದಿ ಮಲರಹಿತವೂ, ಬ್ರಹ್ಮ ಪದವಾಚ್ಯವೂ, ಸನಾತನವೂ, ಶಿವನಾಮಕವೂ, ಜ್ಞಾನಸ್ವರೂಪವು, ಸತ್ವರೂಪವೂ, ಆನಂದ ಸ್ವರೂಪವೂ, ನಿರಂಕುಶವೂ, ಸರ್ವಲೋಕಗಳಿಗೂ, ವೇದಗಳಿಗೂ ಕಾರಣವಾಗಿರುವುದು, ಷಟ್‌ತ್ರಿಂಶ ತತ್ವಪೂರಿತವೂ, ಭವ ಸಾಗರ ತಾರಕವೂ, ಜ್ಯೋತಿ ರೂಪವೂ, ಯೋಗಿಗಳಿಗೆ ಕಾಣದಿರುವಂತ ಸ್ವ ಸ್ವರೂಪ ಸ್ಥಿತ ಆದದು–ಲಿಂಗ ಇದು ಈ ಲೋಕದಲ್ಲಿ ಮಹಾಗುರುವಿನಿಂದ ತಿಳಿಯುವುದು. ಗುರುವಿನ ಅನುಗ್ರಹವಿಲ್ಲದೇ ಲಿಂಗಸ್ವರೂಪ ಜ್ಞಾನ ದೊರೆಯುವುದಿಲ್ಲ. ಲಿಂಗವೂ ನಿತ್ಯವಾದ ಬ್ರಹ್ಮವಾಗಿರುವುದು. ಪರಂಜ್ಯೋತಿ–ಪ್ರಕಾಶ–ಮಹಾಬೆಳಕು. ನಿಜಜ್ಞಾನ ಅರಿವಿನ ಪರಾಕಾಷ್ಠೆ. ಇದರ ಕುರಿತು ಬಸವಣ್ಣ ತನ್ನ ವಚನದಲ್ಲಿ ಹೇಳುವಂತೆ ಲಿಂಗವು, "ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ, ಅಗಮ್ಯ ಅಗೋಚರ ಅಪ್ರತಿಮ.. .."[5]

ದೇವನ ರೂಪವೇ ಲಿಂಗ ಅದರ ಛಾಯೆ ಈ ಸೃಷ್ಟಿ., ಬೆಳಕೆ ಭಾವ, ಭಕ್ತಿಯೇ ಬದುಕು, ಅದರ ಆನಂದವೇ ಮೋಕ್ಷ ಕಾಣುವುದೇ ದೀಕ್ಷೆ. ಇದರೊಳೊಂದಾಗುವ ಲಿಂಗಾಂಗ ಸಾಮರಸ್ಯವೇ ಶ್ಯೂನ್ಯ ಸಂಪಾದನೆ. ಲಿಂಗವೇ ಶಿವಾಗಮ ಶಕ್ತಿಯ ಪೀಠ. ಶಿವಶಕ್ತಿಯರ ಸಂಬಂಧವುಳ್ಳ ಆ ಲಿಂಗವು ವಿಶ್ವವೆನಿಸುವುದು. ಲಿಂಗತತ್ವ ಶರಣತ್ವದ ತಳಹದಿಯಾಗಿದೆ. ಧರ್ಮವಿವೇಚನೆ, ಆಚರಣೆ, ಸಾಮಾಜಿಕ, ನೈತಿಕ ನಿಯಮ, ನಿಷ್ಠೆ ಎಲ್ಲದಕ್ಕೂ ಲಿಂಗವೇ ಕೇಂದ್ರ ಶಕ್ತಿಯಾಗಿರುವುದು. ಈ ಲಿಂಗದ ಕಲ್ಪನೆ ಬಹಳ ಪ್ರಾಚೀನವಾದುದು. ವೇದಗಳಲ್ಲಿ, ಪೂರ್ವಯುಗದ ಸಿಂಧು ಸಂಸ್ಕೃತಿಯನ್ನು ಕಾಣಬಹುದು.

ಲಿಂಗ ಸ್ವರೂಪ : ಈ ಶಕ್ತಿ ಎರಡು ರೀತಿಯದು.

1. ಪರಾಶಕ್ತಿ ಅಥವಾ ವಿಮರ್ಶಶಕ್ತಿ: ಅಪಾರಶಕ್ತಿ ಅಥವಾ ಪ್ರಕೃತಿ, ಸತ್–ಚಿತ್ ಆನಂದಾತ್ಮಕ; ಊರ್ಧ್ವಮುಖ.
2. ಸತ್ವ ರಜಸ್ ತಮಸ್ಸು ಈ ತ್ರಿಗುಣಾತ್ಮಕ: ಅಧೋಮುಖ

ಇವೆರಡನ್ನು ತ್ರಿಕೋನಗಳಿಂದ ತೋರಿಸಬಹುದು. ಊರ್ಧ್ವಮುಖಿಯಾದ ಸಚ್ಚಿದಾನಂದ ತ್ರಿಕೋನದ ಮೇಲೆ ಅಧೋಮುಖಿಯಾದ ತ್ರಿಗುಣಾತ್ಮಕ ತ್ರಿಕೋನ ನಿಲ್ಲುತ್ತದೆ. ಇವೆರಡಕ್ಕೂ ಕಾರಣನಾದ ಪರಶಿವನನ್ನು ಶೂನ್ಯದಿಂದ ಸೂಚಿಸಬಹುದು. ಇವೆರಡರ ಮೇಲೆಯೇ ಜೀವ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ನಿಲ್ಲುತ್ತದೆ. ಆ ಶೂನ್ಯ ಆಗ ಅವರ ಒಟ್ಟು ಆಕಾರ ಲಿಂಗದ ಆಕಾರಕ್ಕೆ ಮೂಲವಾಯಿತು. ಈ ವಿವರಣೆಯ ಸಾರ ಹೀಗೆಲ್ಲಾ ಅರ್ಥೈಸಲು ಸಾಧ್ಯತೆಯಿರುವಷ್ಟು ಸೂಚ್ಯವಾಗಿದೆ ಲಿಂಗದ ರೂಪ.

**ಲೀಯತೇ ಗಮ್ಯತೇ ಯತ್ರಯೇನ ಸರ್ವಂ ಚರಾಚರಂ।**
**ತದೇ ತಲ್ಲಿಂಗಮಿತ್ಯುಕ್ತಂ ಲಿಂಗತತ್ತ್ವ ಪರಾಯಣೈಃ॥**

**ಲಿಂಗಮದೇ ಜಗತ್ ಸರ್ವಂ ತ್ರೈಲೋಕ್ಯ ಸಚರಾಚರಂ।**

**ಲಿಂಗ ಬಾಹ್ಯಾತ್ವರಂ ನಾಸ್ತಿ ತಸ್ಮಾಲ್ಲಿಂಗಂ ಪ್ರಪೂಜಯೆತ್।**

ಜಂಗಮ: ಗುರುವಿನಿಂದ ಲಿಂಗವನ್ನು ಪಡೆದು ಸಾಧನೆಯಲ್ಲಿ ನಿರತನಾದ ಭಕ್ತನು ಲಿಂಗ ದೇಹಿಯಾಗುವನು. ಆಗ ಇವನ ಬಳಿಗೆ ಜಂಗಮ ಬರುತ್ತಾನೆ. ಜಂಗಮ ತನ್ನ ಅತೀತ ನಿಲುವಿನಿಂದ ಭಕ್ತನಲ್ಲಿ ಶ್ರದ್ಧೆ, ನಿಷ್ಠೆಗಳನ್ನು ಪ್ರೇರೇಪಿಸುವನು. ಭಕ್ತನ ಇತಿಮಿತಿಯನ್ನು ಎತ್ತಿ ತೋರಿಸಿ ಆತನ ಏಳ್ಗೆಗೆ ಕಾರಣನಾಗುವವನೆ ಜಂಗಮ. ಗುರು ಉಪದೇಶ ಮಾತ್ರ ವೈದ್ಯ, ಜಂಗಮ ಉಪದೇಶ ಶಸ್ತ್ರ ವೈದ್ಯ ಎಂದು ಜಂಗಮನ ಪ್ರಭಾವಶಕ್ತಿಯನ್ನು ಬಸವಣ್ಣ ಹೇಳಿರುವನು. ಭಕ್ತನ ಭವ ರೋಗವನ್ನು ಜಂಗಮ ಕಳೆಯುವನು, ತೆಗೆಯುವನು. ಲಿಂಗ ಮತ್ತು ಜಂಗಮದಲ್ಲಿ ಒಂದು ಬಗೆ ಅವಿನಾಭಾವ ಸಂಬಂಧವನ್ನು ಶರಣರು ಕಂಡರು. ಆಚಾರವೇ ಲಿಂಗ, ಆ ಆಚಾರದ ಅರಿವೇ ಜಂಗಮ. ಅಂಗವೇ ಲಿಂಗ, ಚೈತನ್ಯವೇ ಜಂಗಮ. ತನುವಿನ ಪ್ರಾಣ ಲಿಂಗವಾದರೆ, ಮನದ ಪ್ರಾಣ ಜಂಗಮ ಎಂದು ಬಹುರೂಪಿ ಚೌಡಯ್ಯ ಹೇಳಿರುವಂತೆ ಲಿಂಗವೇ ಜಂಗಮನ ದೇಹ/ಮನವನ್ನು ಧರಿಸುವುದು.

**"ಲಿಂಗವಿಪ್ಪ ಸಜ್ಜೆಯೆಲ್ಲಾ ಜಂಗಮದ ಪ್ರಾಣವಲ್ಲವೆ?**
**ಲಿಂಗವು ರೇಕಣ್ಣಪ್ರಿಯ ನಾಗಿನಾಥ**
**ಜಂಗಮದ ಕಾಯವ ತೊಟ್ಟುಕೊಂಡು ಸುಳಿವನಾಗಿ"[6](ಬಹುರೂಪಿ ಚೌಡಯ್ಯ ವಚನ 31)**

ಲಿಂಗಕ್ಕೆ ತೃಪ್ತಿಯಾಗುವುದು ಜಂಗಮದ ಮೂಲಕವೇ. ಜಂಗಮ ಸೇವೆ ಇಲ್ಲದೇ ಲಿಂಗ ಸಾಧನೆ ಪೂರ್ಣವಾಗಲಾರದು. ಚೆನ್ನಬಸವಣ್ಣ ಹೇಳುವಂತೆ ಲಿಂಗವೇ ಕ್ಷೇತ್ರ, ಜಂಗಮವೇ ಬೀಜ. ಲಿಂಗ ಜಂಗಮರ ಸಂಬಂಧ ಅಭೇದ್ಯವಾಗಿರುವುದು. ಜ್ಞಾನಶಕ್ತಿ, ಕ್ರಿಯಾ ಶಕ್ತಿಗಳಿಂದ ಚರಾಚರ ಪ್ರಪಂಚವನ್ನು ಪ್ರಕಾಶಿಸುತ್ತಿರುವ ಶಿವನನ್ನು ಅತಿಶಯವಾಗಿ ಸ್ವಸ್ವರೂಪತ್ವದಿಂದ ಯಾರು ತಿಳಿಯುತ್ತಾರೋ ಅವರೇ ಜಂಗಮರು. ಈ ಜಂಗಮರೆಂದರೆ ಗುರುಸ್ಥಲದ ಚರಮೂರ್ತಿಗಳು.

ಭಕ್ತ–ಜಂಗಮರ ಸಂಬಂಧ : ಗುರು ಜಂಗಮ ಶರಣ ಸಂಸ್ಕೃತಿಯಲ್ಲಿ ದೊಡ್ಡ ಆದರ್ಶವನ್ನು ತಿಳಿಸುವ ಎರಡು ಶಕ್ತಿ ಕೇಂದ್ರಗಳು. ಧಾರ್ಮಿಕತೆಯಷ್ಟೆ ಅಲ್ಲದೆ– ಸಾಮಾಜಿಕ, ನೈತಿಕ, ಜೀವನ ಸಿದ್ಧಾಂತದಲ್ಲಿಯೂ ಗುರು ಜಂಗಮರು ನಿತ್ಯ ನಿಯಂತ್ರಿಸುತ್ತಾರೆ. ಬಸವಣ್ಣನವರು ಹೀಗೆ ಹೇಳಿದ್ದಾರೆ.

**'ಭಕ್ತಿಯಂಬ ಪೃಥ್ವಿಯ ಮೇಲೆ**
**ಗುರುವೆಂಬ ಬೀಜವಂಕುರಿಸಿ**
**ಲಿಂಗವೆಂಬ ಎಲೆಯಾಯಿತ್ತು**
**ಲಿಂಗವೆಂಬ ಎಲೆಯ ಮೇಲೆ**
**ವಿಚಾರವೆಂಬ ಹೂವಾಯಿತ್ತು**
**ಆಚಾರವೆಂಬ ಕಾಯಾಯಿತ್ತು**
**ನಿಷ್ಪತ್ತಿಯೆಂಬ ಹಣ್ಣಾಯಿತ್ತು**
**ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ**
**ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ"[7]**

ಒಟ್ಟಿನಲ್ಲಿ ಬಸವಾದಿ ದಾರ್ಶನಿಕರು ಹೇಳಿದ ಅಧ್ಯಾತ್ಮದ ಹಾದಿಯಲ್ಲಿ ಗುರು–ಲಿಂಗ

ಜಂಗಮವಿಲ್ಲದ ಜೀವನವೇ ಪೂರ್ಣಗೊಳ್ಳುವುದಿಲ್ಲ. ಶರಣರ ಪ್ರಕಾರ, ಗುರುವಿನಿಂದ ಜ್ಞಾನ, ಜಂಗಮನಿಂದ ಕಾಯಕ, ಲಿಂಗ ಭಕ್ತಿಯ ಸಂಯೋಗವೇ ಶಿವಲೋಕ; ಇದೇ ಶರಣರ ಬದುಕಿನ ಅಂತಿಮ ಗುರಿ.

**ಅಡಿಟಿಪ್ಪಣಿ**

1. ಡಾ. ವೀರಣ್ಣ ರಾಜೂರ ಸಂ.ಬಸವಣ್ಣನವರ ವಚನ ಸಂಪುಟ–1, ಪುಟ–193, ವ–709, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮು–2021.
2. ಡಾ. ಎಚ್. ತಿಪ್ಪೇರುದ್ರಸ್ವಾಮಿ–ವಚನಗಳಲ್ಲಿ ವೀರಶೈವಧರ್ಮ–ಪುಟ–188, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ಮು–1997.
3. ಡಾ. ವೀರಣ್ಣ ರಾಜೂರ ಸಂ.ಬಸವಣ್ಣನವರ ವಚನ ಸಂಪುಟ–1, ಪುಟ–22, ವ–70, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮು–2021.
4. ಡಾ. ವೀರಣ್ಣ ರಾಜೂರ ಸಂ.ಬಸವಣ್ಣನವರ ವಚನ ಸಂಪುಟ–1, ಪುಟ–22, ವ–72, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮು–2021.
5. ಡಾ. ವೀರಣ್ಣ ರಾಜೂರ ಸಂ.ಬಸವಣ್ಣನವರ ವಚನ ಸಂಪುಟ–1, ವ–744, ಪುಟ–202, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮು–2021
6. ಬಹುರೂಪಿ ಚೌಡಯ್ಯನ ವಚನಗಳು, ವಚನ 31, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕೃತ ಜಾಲತಾಣ– kanaja.karnataka.gov.in
7. ಡಾ. ವೀರಣ್ಣ ರಾಜೂರ ಸಂ.ಬಸವಣ್ಣನವರ ವಚನ ಸಂಪುಟ–1, ಪುಟ–138, ವ–526, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮು–2021.

**ಆಕರ ಗ್ರಂಥಗಳು**


1. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ, ಸಂಪುಟಗಳು, ವಚನ ಪಿತಾಮಹ ಡಾ.ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ಬಿ.ಎಲ್.ಡಿ.ಇ. ಸಂಸ್ಥೆ, ವಿಜಾಪುರ, ಮು– 2007
2. ಡಾ. ವೀರಣ್ಣ ರಾಜೂರ ಸಂ.ಬಸವಣ್ಣನವರ ವಚನ ಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮು–2021.
3. ಡಾ.ಎಚ್.ತಿಪ್ಪೇರುದ್ರಸ್ವಾಮಿ, –ವಚನಗಳಲ್ಲಿ ವೀರಶೈವಧರ್ಮ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ಮು–1997.
4. ಬಹುರೂಪಿ ಚೌಡಯ್ಯನ ವಚನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕೃತ ಜಾಲತಾಣ– kanaja.karnataka.gov.in
5. ಡಾ. ಆರ್.ವಿ.ಪಾಟೀಲ, ವೀರಶೈವ ಲಘು ಸಾಹಿತ್ಯ ಪ್ರಕಾರಗಳು, ಪಿಎಚ್.ಡಿ. ಮಹಾಪ್ರಬಂಧ, 2014.


❖❖❖

# ಮಹಾಸತಿ ಮತ್ತು ಬಿಗನಹಳ್ಳಿಯ ಮಾಸ್ತಮ್ಮ

**ಡಾ. ರಘುನಂದನ್ ಬಿ.ಆರ್**
ಸಹ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಪುರಾತನ ಭಾರತೀಯ ಪಠ್ಯಗಳನ್ನು ಗಮನಿಸಿದಾಗ ಅತ್ಯಂತ ಸದ್ಗುಣಶೀಲ ಮತ್ತು ಶ್ರದ್ಧೆಯುಳ್ಳ ಮಹಿಳೆಯನ್ನು ಮಹಾಸತಿ ಎಂದು ಉಲ್ಲೇಖಿಸಲಾಗುತ್ತದೆ. ವಿಶೇಷವಾಗಿ ತನ್ನ ಪತಿಗೆ ನಿಷ್ಠಳಾಗಿ, ತ್ಯಾಗದ ಹಂತಕ್ಕೆ ತಲುಪಿ ಸಹಗಮನ ಮಾಡುವ ಮಹಿಳೆ ವಿಮಹಾಸತಿಹಿ ಎಂದು ಗುರುತಿಸಲ್ಪಡುತ್ತಾಳೆ. ಸತಿ, ಮಹಾಸತಿ ಆಚರಣೆಯ ಕೇಂದ್ರ ಭಾಗವಾಗುತ್ತಾಳೆ. ಸತಿಯ ಆಚರಣೆಯನ್ನು ಮೀರಿ ಅಸಾಧಾರಣ ನೈತಿಕತೆ ಮತ್ತು ಸಮರ್ಪಣೆಯುಳ್ಳ ಮಹಿಳೆಯರನ್ನು ವಿವರಿಸಲೂ ಕೂಡ 'ಮಹಾಸತಿ' ಎಂಬ ಆದರ್ಶಪ್ರಾಯವಾದ ಪರಿಭಾಷೆಯನ್ನು ಬಳಸಲಾಗುತ್ತದೆ. ಚರಿತ್ರೆ, ಮಹಾಕಾವ್ಯ, ಪುರಾಣ ಮತ್ತು ಜನಪದಗಳೂ ಸೇರಿದಂತೆ ಮಹಾಸತಿ ಎಂಬ ಸ್ತ್ರೀವಾಚಕ ಪದ ಬಹುಬಗೆಯಲ್ಲಿ ಕನ್ನಡ ಹಾಗೂ ಭಾರತೀಯ ಸಾಂಸ್ಕೃತಿಕ ಆವರಣದೊಳಗೆ ನಿರ್ವಚನಗೊಂಡಿದೆ. ಸತಿ, ಮಹಾಸತಿ, ಮಾಸ್ತಿಯಾಗಿ ರೂಪಾಂತರಗೊಂಡು ಮನುಷ್ಯತ್ವದಿಂದ ದೈವತ್ವದ ಕಡೆಗೆ ಚಲಿಸಿದ ಹಾದಿ ಹಲವು ಚರ್ಚೆ ಮತ್ತು ಸಂವಾದಗಳನ್ನು ಹುಟ್ಟು ಹಾಕಿದೆ. ಅಧಿಕಾರ ಮತ್ತು ಆದರ್ಶ ಎರಡೂ ಮಹಿಳೆಯನ್ನು ಅಧೀನತೆಗೆ ತಳ್ಳಿದ ಯಜಮಾನ್ಯದ ನಿರೂಪಣೆಯನ್ನು ಕೂಡ ಸ್ಮಾರಕವಾದ ಮಹಾಸತಿಕಲ್ಲು, ಮಹಾಸತಿ ಹಬ್ಬ ಆಚರಣೆಗಳಲ್ಲಿ ಇರುವುದನ್ನು ಗಮನಿಸಲೇಬೇಕಾದ ಸಂಗತಿಗಳಾಗಿವೆ. ಕರ್ನಾಟಕವೂ ಸೇರಿದಂತೆ ಒಟ್ಟು ಭಾರತವೆಂಬ ಭೂ ಪ್ರದೇಶದ ಒಳಗೆ ಅಲ್ಲಲ್ಲಿಯ ಪ್ರಾದೇಶಿಕತೆಗೆ ಅನುಗುಣವಾಗಿ ಸತಿ ಐತಿಹಾಸಿಕವಾಗಿ, ಧಾರ್ಮಿಕವಾಗಿ ಮತ್ತುಜಾನಪದೀಯವಾಗಿ ಸ್ಥಾಪಿತಗೊಂಡಿದ್ದಾಳೆ.

ಮಾಸ್ತಮ್ಮ ಎಂದರೆ ಮಹಾಸತಿ ಅಮ್ಮ ಎಂಬ ಅರ್ಥದಲ್ಲಿ ಗ್ರಹಿಸಬೇಕಾಗುತ್ತದೆ. ಮರಣ ಹೊಂದಿದ ಸತಿಪತಿಯರ ನೆನಪಿಗೆ ವೀರಗಲ್ಲುಗಳು, ಮಾಸ್ತಿ ಕಲ್ಲುಗಳು ಸ್ಮಾರಕರೂಪಿಯಾಗಿ ಸ್ಥಾಪನೆಯಾಗುತ್ತ ಹೋದವು. ಮರಣ ಹೊಂದಿದ ಪತಿಯ ಸಾಂಗತ್ಯ ಮತ್ತೊಂದು ಲೋಕದಲ್ಲೂ ಇರಬೇಕು ಎನ್ನುವ ನಂಬಿಕೆ ಸಹಗಮನ ಪದ್ಧತಿಯ ಆಚರಣೆಗೆ ಪ್ರೇರಣೆಯಾಗಲು ಇರುವ ಅನೇಕ ಮುಖ್ಯ ಅಂಶಗಳಲ್ಲಿ ಒಂದಾಗಿದೆ. ಕೇವಲ ಭಾರತ ಮಾತ್ರವಲ್ಲದೆ ಪ್ರಪಂಚದ ಬೇರೆ ಬೇರೆ ಭೌಗೋಳಿಕ ಪ್ರದೇಶಗಳಲ್ಲಿ, ರಾಜ ಮನೆತನಗಳಲ್ಲಿ, ಬುಡಕಟ್ಟು ಜನಾಂಗಗಳಲ್ಲಿ ವಿಧವೆಯಾದ ಸತಿ ಗಂಡನೊಂದಿಗೆ ಚಿತೆಯಲ್ಲಿ ಹಾರಿ ಬಿದ್ದು ಪ್ರಾಣ ಬಿಡುವ ಉಲ್ಲೇಖಗಳು ಇವೆ. ಇಹಲೋಕ ಮತ್ತು ಪರಲೋಕದಲ್ಲಿ ಗಂಡನೊಂದಿಗೆ ಇರಬೇಕೆಂಬ ಸತಿ ಆಶಯ ಮತ್ತು ಹೆಣ್ಣಿನ ಅಧೀನತೆಗಳು ಈ ಎರಡೂ ಆಯಾಮಗಳಲ್ಲಿ ಈ ಪದ್ಧತಿಯನ್ನು ಗ್ರಹಿಸಬಹುದು.

ಸತಿ ಆಚರಣೆಯ ಮೂಲವನ್ನು ಕುರಿತು ಹಲವು ಭಿನ್ನಾಭಿಪ್ರಾಯಗಳಿವೆ. ವಿ.ಎ.

ಸ್ಮಿತ್ ಸತಿಪದ್ಧತಿ ಬಹುಶಃ ಸಿದಿಯನ್ ಮೂಲದ್ದು ಇರಬೇಕೆಂಬ ಅಭಿಪ್ರಾಯಪಡುತ್ತಾರೆ. ಮಧ್ಯಏಷ್ಯಾದಿಂದ ಬಂದಿರಬಹುದಾದಂತಹ ಆಚರಣೆ ಇದು ಎಂದು ಅವರ ಅಭಿಪ್ರಾಯ. ಇವರ ವಾದಕ್ಕೆ ಇರುವ ಮುಖ್ಯಕಾರಣವೆಂದರೆ, ತಕ್ಷಶಿಲೆಯ ಜನರ ನಾಗರಿಕತೆಯಲ್ಲಿ ಬ್ಯಾಬಿಲೋನಿಯನ್, ಇರಾನಿಯನ್, ಸಿದಿಯನ್ ಮುಂತಾದ ನಾಗರಿಕತೆಗಳ ಪ್ರಭಾವವಿದೆ. ನಾಲ್ಕನೇ ಶತಮಾನದಲ್ಲಿ ಅಲೆಕ್ಸಾಂಡರ್ ಇಲ್ಲಿಗೆ ಬಂದಾಗ ಪಂಜಾಬ್, ತಕ್ಷಶಿಲೆ ಹಾಗೂ ರಾವಿ ನದಿಯ ದಂಡೆಯ 'ಕಥೈ' ಜನರಲ್ಲಿ ಈ ಆಚರಣೆ ಇದ್ದುದ್ದನ್ನು ಗಮನಿಸಿದ್ದಾನೆ. ಸ್ಮಿತ್ ಪ್ರಕಾರ ಸಿದಿಯನ್ನರಲ್ಲಿ ಇದು ಮೊದಲು ಇರುವಂತದ್ದು. ಕ್ರಿಸ್ತಪೂರ್ವ ಹಾಗೂ ಕ್ರಿಸ್ತಶಕದ ಪ್ರಾರಂಭದಲ್ಲಿ ಸಿದಿಯನ್ ರಾಜರು ಈ ಸಹಗಮನ ಪದ್ಧತಿಯನ್ನು ಅನುಸರಿಸುತ್ತಿದ್ದರು. ಆದ್ದರಿಂದ ಅವರ ಪ್ರಭಾವವಾದಂಥ ಭಾರತದ ಕೆಲವು ಭಾಗಗಳಲ್ಲಿ ಸತಿ ಆಚರಣೆ ಪ್ರಾರಂಭವಾಗಿರಬೇಕು" (ಮಹಾಸತಿ ಆಚರಣೆ, ಬಸವರಾಜ ಕಲ್ಗುಡಿ, ಪು-9) ಇದೊಂದು ವಾದ ಮಾತ್ರವಲ್ಲದೆ ದುಬೈ, ಎಸ್.ಆರ್. ರಾವ್ ಅವರುಗಳು ಕೂಡ ಸತಿ ಪದ್ಧತಿಯ ಮೂಲವನ್ನು ಹುಡುಕುವ ನಿಟ್ಟಿನಲ್ಲಿ ಭಾರತೀಯ ಮತ್ತು ಭಾರತದ ಹೊರಗಿನ ಮೂಲಗಳನ್ನು ಕೆದಕುತ್ತಾರೆ. ಹಾಗಾಗಿ ಸತಿ ಪದ್ಧತಿಯ ಆರಂಭವನ್ನು ಕುರಿತು ಒಂದು ನಿಲುವನ್ನು ತಳೆಯಲು ಸಾಧ್ಯವಾಗುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಯ ಬಿಗನಹಳ್ಳಿ ಅಥವಾ ಕೆ ಆರ್ ಪೇಟೆ ಎಂಬ ಗ್ರಾಮವು ಬೇಲೂರು ಮತ್ತು ಗೆಂಡೆಹಳ್ಳಿಯ ಸಮೀಪವಿದೆ. ಈ ಗ್ರಾಮದಲ್ಲಿ ಒಂದು ಭೈರವೇಶ್ವರ ಮತ್ತು ಮಾಸ್ತಮ್ಮನನ್ನು ಪೂಜಿಸುವ ದೇವಾಲಯವಿದೆ. ಈ ದೇವಾಲಯಕ್ಕೆ ಬಹಳ ಮುಖ್ಯವಾಗಿ ನಾಕಲಗೋಡು ವಂಶಸ್ಥರು ಭೈರವ ಮತ್ತು ಮಾಸ್ತಮ್ಮನನ್ನು ಆರಾಧನೆ ಮಾಡುತ್ತಾರೆ. ನಾಕಲಗೋಡು, ಮಲೆನಾಡಿನ ಪ್ರಾದೇಶಿಕ ಸ್ಥಳ. ಈ ಸ್ಥಳ ಮೂಲದಿಂದ ವಿಘಟಿತರಾಗುತ್ತಾ, ಬೇರೆ ಬೇರೆ ಭೌಗೋಳಿಕ ಪರಿಸರಗಳಲ್ಲಿ ವಾಸಿಸುತ್ತಿರುವ ಇದೇ ವಂಶಸ್ಥರು ಇಂದಿಗೂ ಬಿಗನಹಳ್ಳಿಯಲ್ಲಿರುವ ಭೈರವ ಮತ್ತು ಮಾಸ್ತಮ್ಮನನ್ನು ತಮ್ಮ ಮನೆದೇವರಾಗಿ ಅತ್ಯಂತ ನಂಬಿಕೆ ಮತ್ತು ಪ್ರೀತಿ-ಭಕ್ತಿಗಳಿಂದ ಪೂಜಿಸುತ್ತಾರೆ. ಕರ್ನಾಟಕವೂ ಸೇರಿದಂತೆ ಭಾರತದಲ್ಲಿ ಮಹಾಸತಿ ಮತ್ತು ವೀರಗಲ್ಲುಗಳಿಗೆ ಸಾಮಾಜಿಕ-ಸಾಂಸ್ಕೃತಿಕವಾಗಿ, ಜಾನಪದೀಯವಾಗಿ ಮತ್ತು ಧಾರ್ಮಿಕವಾಗಿ ಭಿನ್ನ ನೆಲೆಯ ಆಯಾಮಗಳು ಮತ್ತು ಮಹತ್ವವಿದೆ. ಈ ಹಿನ್ನೆಲೆಯಲ್ಲಿ ಬಿಗನಹಳ್ಳಿಯಲ್ಲಿ ನಡೆಯುವ ಮಾಸ್ತಮ್ಮ ದೇವಿಯ ಪೂಜಾರಾಧನೆಗಳಿಗೂ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಹತ್ವವಿದೆ.

ಬಿಗನಹಳ್ಳಿಯಲ್ಲಿರುವ ಮಾಸ್ತಮ್ಮ ಮತ್ತು ಭೈರವನ ದೇವಾಲಯದಲ್ಲಿ ಯಾವುದೇ ವೀರಗಲ್ಲು ಮತ್ತು ಮಾಸ್ತಿ ಕಲ್ಲುಗಳಿಗೆ ಪೂಜೆ ನಡೆಯುವುದಿಲ್ಲ. ಭೈರವೇಶ್ವರನ ಜೊತೆ ಮಾಸ್ತಮ್ಮನ ದೇವಾಲಯ ಕರ್ನಾಟಕದ ಬೇರೆ ಬೇರೆ ಭೌಗೋಳಿಕ ಪರಿಸರದಲ್ಲಿರುವುದನ್ನು ಗಮನಿಸಬಹುದು. ಪುರಾಣದಲ್ಲಿ ಬರುವ ಶಿವ ಮತ್ತು ದಾಕ್ಷಾಯಿಣಿಯ ಕಥೆ, ದಾಕ್ಷಾಯಣಿಯ ಅಗ್ನಿ ಪ್ರವೇಶ, ಅಲ್ಲಿಗೆ ವೀರಭದ್ರನ ಪ್ರವೇಶ ಇತ್ಯಾದಿಗಳು ಜನಪದವಾಗಿ ರೂಪುಗೊಂಡಿರಲೂ ಸಾಧ್ಯತೆಗಳಿವೆ. ಈ ಅಂಶವೇ ಭೈರವ ಮತ್ತು ಮಾಸ್ತಮ್ಮನ ದೇವಾಲಯಗಳು ಒಟ್ಟಿಗೆ ಇರಲು ಕಾರಣವಾಗಿರಬಹುದು. ಬಿಗನಹಳ್ಳಿಯಲ್ಲಿ ಕಳಸ ರೂಪಿಯಾಗಿ ಪೂಜೆಗೊಳ್ಳುವ ಮಾಸ್ತಮ್ಮನ ತಾಳಿ ಅತ್ಯಂತ

ವಿಶಿಷ್ಟ ಮತ್ತು ಮಹತ್ವಪೂರ್ಣವಾದದ್ದಾಗಿದೆ. ಮೊದಲು ಈ ತಾಳಿಯನ್ನು ತಾಮ್ರದ ಗಿಂಡಿಯೊಂದಕ್ಕೆ ಕಟ್ಟಿ ಪೂಜಿಸುತ್ತಿದ್ದರು. ಆರ್ಥಿಕವಾಗಿ ಮತ್ತು ಆಧುನಿಕವಾಗಿ ಬೆಳೆದ ನಂತರ ನಾಕಲಗೋಡು ಕುಟುಂಬದವರು ಇದೇ ತಾಳಿಯನ್ನು ಈಗ ಬೆಳ್ಳಿಯ ಕಳಸಕ್ಕೆ ಕಟ್ಟಿ ಪೂಜಿಸುವ ಪದ್ಧತಿಯನ್ನು ಆರಂಭಿಸಿದ್ದಾರೆ. ಮೊದಲು ಗ್ರಾಮದ ಮುಖ್ಯರಸ್ತೆಯ ಬದಿಯಕಟ್ಟೆಯೊಂದರ ಮೇಲೆ ಪೂಜೆಗೊಳ್ಳುತ್ತಿದ್ದ ಭೈರವ ಮತ್ತು ಮಾಸ್ತಮ್ಮ ಈಗ ದೇವಾಲಯದಲ್ಲಿ ನೆಲೆಗೊಂಡಿದ್ದಾರೆ. ಇಲ್ಲಿ ಪೂಜೆಗೊಳ್ಳುವ ತಾಳಿಯು ಆಕೆ ಬಳಸಿದ್ದಿರಬಹುದು ಅಥವಾ ಆಕೆಯ ಸತಿಯ ನಂತರ ಸಂಬಂಧ ಪಟ್ಟವರು ಆರಾಧನೆಯ ಕಾರಣಕ್ಕೆ ಮಾಡಿಸಿದ್ದೂ ಇರಬಹುದು. ಪ್ರತಿಯೊಂದು ಮಹಾಸತಿಯ ಸಾವಿಗೂ ಬೇರೆ ಬೇರೆಯ ಕಾರಣಗಳು ಇರುತ್ತವೆ. ಹಾಗೆಯೇ ಇಲ್ಲಿ ಪೂಜೆಗೊಳ್ಳುವ ಮಾಸ್ತಮ್ಮನಿಗೆ ನಾಕಲಗೋಡು ವಂಶಕ್ಕೆ ಸೇರಿದ ಹೆಣ್ಣುಮಕ್ಕಳೆಂದರೆ ಬಹಳ ಪ್ರೀತಿ. ಆ ವಂಶಕ್ಕೆ ಸೇರಿದ ಸೊಸೆಯರು ಈಕೆಯನ್ನು ಪೂಜಿಸಿ ಆರಾಧಿಸುವಂತಿಲ್ಲ. ಸೊಸೆಯರ ನೆರಳೂ ಸೋಕಬಾರದು ಎಂಬ ಪ್ರತೀತಿಯೂ ಇದೆ. ಅಂದರೆ ಇಲ್ಲಿ ಮಹಾಸತಿಯಾದವಳಿಗೆ ಸೊಸೆಯರಿಂದ ಆಗಿರಬಹುದಾದ ಅನ್ಯಾಯವೋ, ಕಾಟವೋ ಅಥವಾ ತೊಂದರೆಯೋ ಇದ್ದಿರಬಹುದು ಎಂಬ ಕಲ್ಪನೆ ಮೂಡುತ್ತದೆ. ಇಲ್ಲಿ ಮಾಸ್ತಮ್ಮನ ಪೂಜೆ ಮಾಡುವ ಸಂದರ್ಭದಲ್ಲಿ ಮನೆಯ ಹೆಣ್ಣು ಮಕ್ಕಳು ಈ ದೇವಿಗೆ ಅಡುಗೆ ಮಾಡಿ, ತಳಿಗೆ ಬಡಿಸಿ ಎಡೆ ಇಡಬೇಕಾಗುತ್ತದೆ. ಹಾಗಾಗಿ ಮದುವೆ ಮಾಡಿಕೊಟ್ಟ ಹಾಗೂ ಕನ್ಯೆಯಾದ ಈ ವಂಶದ ಹೆಣ್ಣುಮಕ್ಕಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಇಂದಿಗೂ ಹೆಣ್ಣು ಮಕ್ಕಳ ಮುಖೇನ ನಡೆಯುವ ಆಚರಣಾಕ್ರಮ ನಡೆದು ಬರುತ್ತಿದೆ. ವಿಶೇಷವಾಗಿ ಕಪ್ಪು ಸೀರೆಯನ್ನು ಮಾಸ್ತಮ್ಮನಿಗೆ ಹಬ್ಬದ ಸಂದರ್ಭದಲ್ಲಿ ಉಡಿಸಲಾಗುತ್ತದೆ. ಕಪ್ಪು ಸೀರೆ ಸತಿಯಾದ ಹೆಣ್ಣಿಗೆ ಇಷ್ಟ ಇದ್ದಿರಬೇಕು ಅಥವಾ ಕರಾಳತೆಯ ಸಂಕೇತವಾಗಿಕಪ್ಪು ಸೀರೆಯನ್ನು ಬಳಸಿರಬಹುದು. ಕಪ್ಪು ಅಮಂಗಳದ ಸಂಕೇತವಾಗಿ ಬಹುತೇಕ ಎಲ್ಲಾ ಕಡೆ ಕಂಡರೆ, ಇಲ್ಲಿ ಮಂಗಳ ರೂಪಿಯಾಗಿ ಕಪ್ಪು ಕಾಣುತ್ತದೆ. ಈ ದೃಷ್ಟಿಯಲ್ಲಿ ಬಣ್ಣಗಳನ್ನು ರೂಢಿಗತಾತ್ಮಕವಾಗಿ ರೂಪಿಸಿರುವ ಪರಿಕಲ್ಪನಾತ್ಮಕ ಚಿಂತನೆಗಳನ್ನು ಮಾಸ್ತಮ್ಮನ ಹಬ್ಬ ಮತ್ತು ಧಾರ್ಮಿಕತೆಯ ನೆಲೆಯಲ್ಲಿ ಅತ್ಯಂತ ವಿಶಿಷ್ಟವಾಗಿ ಗಮನಿಸಿದಾಗ ಸಿದ್ದ ಮಾದರಿಯನ್ನು ಒಡೆದು ಹೊಸತೊಂದರ ಯೋಚನಾಕ್ರಮಕ್ಕೆ ನಾಂದಿಯಾಗಿದೆ. ಜೊತೆಗೆ ಮಾಸ್ತಮ್ಮ ದೇವಿಗೆ ಮಾಂಸಹಾರದ ನೈವೇದ್ಯವು ನಡೆಯುತ್ತದೆ. ಹಾಗೂ ಇದೇ ದೇವಾಲಯದಲ್ಲಿರುವ ಭೈರವನಿಗೆ ಹಣ್ಣು ತುಪ್ಪ ಸಮರ್ಪಣೆಯಾಗುತ್ತದೆ. ಶಿಷ್ಟ ಮತ್ತು ದೇಸಿ ಆಚರಣಾ ಕ್ರಮಗಳು ಒಂದೇ ದೇವಾಲಯದಲ್ಲಿ ಬೆಸೆದುಕೊಂಡಿರುವುದು ಧಾರ್ಮಿಕ ಆಚರಣಾ ಕ್ರಮಗಳು ರೂಪಾಂತರಗೊಂಡ ಮತ್ತು ಸಂಕರಗೊಂಡ ಕುರುಹುಗಳನ್ನು ಬಿಟ್ಟುಕೊಡುತ್ತವೆ.

"ಮಾಸ್ತಿಗೆ ಸಂಬಂಧಪಟ್ಟ ನಡೆಯುವ ಅನೇಕ ಆಚರಣೆಗಳಲ್ಲಿ ಅದರ ಐತಿಹಾಸಿಕ ಸಂಗತಿಗಳು ನಿರೂಪಿತವಾಗುವುದು ಒಂದು ವಿಶಿಷ್ಟವಾದರೆ, ಅನೇಕ ಭಾಗಗಳಲ್ಲಿ ಮಾಸ್ತಿ ದೇವತೆಯಾಗಿ ಪೂಜಿಸಲ್ಪಡುತ್ತಾಳೆ. ಇಂತಹ ಕಡೆ ಮಾಸ್ತಿಯ ಹಬ್ಬ ಅಥವಾ ಪೂಜೆಗಳು ನಡೆದಾಗ ಅದರ ಹಿನ್ನೆಲೆಯ ವಿವರಗಳೆಲ್ಲ ಅಳಿಸಿ ಹೋಗಿ ಬರಿಯ ದೇವತೆಯಾಗಿಯೇ ಉಳಿಯುವ ಸಂಭವ ಹೆಚ್ಚು"(ಮಹಾಸತಿ ಆಚರಣೆ, ಬಸವರಾಜ ಕಲ್ಗುಡಿ, ಪು–86) ಕುಟುಂಬದ ಹೆಣ್ಣೊಬ್ಬಳು ಹೀಗೆ ದಹಿಸಿಕೊಂಡ

ಘಟನೆ ಧಾರ್ಮಿಕವಾಗಿ ಪರ್ಯಾವರಣಗೊಂಡು ಮಾಸ್ತಿಗುಡಿಗಳಾಗಿ ಅಥವಾ ಆ ಕುಟುಂಬವನ್ನು ಪೊರೆಯುವ ಮನೆ ದೇವತೆಯಾಗಿ ಇರುವುದನ್ನು ಗಮನಿಸಬಹುದು. ಇದೇ ಮಾದರಿ ನಾಕಲುಗೋಡು ವಂಶದಲ್ಲಿ ಇರುವುದನ್ನೂ ನೋಡಬಹುದು. ಕೆಲವು ಸಂದರ್ಭಗಳಲ್ಲಿ ಸ್ವತಃ ಇಷ್ಟಪಟ್ಟು ಹೆಣ್ಣು ತನ್ನ ಪತಿಯೊಂದಿಗೆ ಸಹಗಮನ ಮಾಡಿದರೆ ಮತ್ತೆ ಕೆಲವು ಸಂದರ್ಭಗಳಲ್ಲಿ ಸಾಮಾಜಿಕ ಕಟ್ಟಳೆಯ ಒತ್ತಡಕ್ಕೆ ಮಣಿದು ಸತಿಯಾಗುತ್ತಿದ್ದಳು. ಹೀಗೆ ಸತಿಯಾಗಿದ್ದನ್ನು ಹೆಣ್ಣಿನ ವಿಜಯವೆಂದು ಭಾವಿಸಿ, ಅವಳನ್ನು ದೇವತೆಯಾಗಿಸಿ ಮಾಡುವ ಆರಾಧನಾ ಸಂಪ್ರದಾಯಗಳು ಆರಂಭವಾದವು.

ಬಿಗನಹಳ್ಳಿಯಲ್ಲಿ ನಡೆಯುವ ಮಾಸ್ತಮ್ಮನ ಪೂಜೆ ಅತ್ಯಂತ ವಿಶಿಷ್ಟವಾದುದಾಗಿದೆ. ಈ ಪೂಜೆಗೆ ಇರುವ ಐತಿಹಾಸಿಕ ಮತ್ತು ಚಾರಿತ್ರಿಕ ಮಹತ್ವಗಳು ಅಳಿಸಿ ಹೋಗಿ ದೇವಿಯಾಗಿ ಆ ವಂಶದಿಂದ ಆರಾಧನೆಗೊಳ್ಳುತ್ತಿದ್ದಾಳೆ. ಇದೇ ವಂಶದವರು ಗಣಪತಿ ಹಬ್ಬದಲ್ಲಿ ದೇವರಿಗೆ ಎಡೆ ಇಡುವಾಗ ವೀರಗಾರರಿಗೂ ಮತ್ತು ಮಾಸ್ತಮ್ಮನಿಗೂ ಎಡೆಯನ್ನು ಇಡುತ್ತಾರೆ. ಇದರ ಅರ್ಥ ಇವರು ಪೂಜಿಸುವ ಮಾಸ್ತಮ್ಮನಿಗೂ ಮತ್ತು ವೀರಗಾರರಿಗೂ ಸಂಬಂಧ ಕಲ್ಪಿಸಿ ನೋಡಲು ಸಾಕಷ್ಟು ಅವಕಾಶಗಳಿವೆ. ಅತ್ಯಂತ ವಿಜೃಂಭಣೆಯಿಂದ ಐದು ವರ್ಷಕ್ಕೆ ಒಮ್ಮೆ ಅಥವಾ ಒಂಬತ್ತು ವರ್ಷಕ್ಕೊಮ್ಮೆ ಗೌರಿ ಹಬ್ಬ ಆದ ಮೇಲೆ ಮಾಸ್ತಮ್ಮನ ಪೂಜೆ ಮಾಡುವ ನಾಕಲಗೋಡು ವಂಶಸ್ಥರು ಇಂದಿಗೂ ಮಹಾಸತಿಯ ಮಹಾಸಂತಾನವಾಗಿ ಬೆಳೆಯುತ್ತಿದ್ದಾರೆ. ಈಕೆಗೆ ಪೂಜೆ ಮಾಡುವಾಗ ವಂಶದ ಹೆಣ್ಣು ಮತ್ತು ಗಂಡು ಸಂತಾನಗಳು ಒಟ್ಟಾಗಿ ಪೂಜೆ ಮಾಡಬೇಕೆಂಬ ನಿಯಮ ಇದ್ದು, ಈ ನಿಯಮವು ವಂಶದ ಮತ್ತು ಕುಟುಂಬದ ಸಹಬಾಳ್ವೆಯನ್ನು ಪ್ರತಿನಿಧಿಸುತ್ತದೆ. ಈ ಹಬ್ಬ ಮಾಡುವ ಹೊತ್ತಿನಲ್ಲಿ ಕೌಟುಂಬಿಕವಾಗಿ ಯಾರದ್ದು ಯಾವುದೇ ಮನಸ್ತಾಪಗಳಿದ್ದರೂ ಮಾಸ್ತಮ್ಮನಿಗೆ ಪೂಜೆ ಮಾಡುವಾಗ ಎಲ್ಲರೂ ಒಟ್ಟಿಗೆ ಸೇರಿ ಹಬ್ಬವನ್ನು ಆಚರಿಸುತ್ತಾರೆ. ಈ ದೃಷ್ಟಿಯಲ್ಲಿ ವಿಘಟಿತವಾಗುತ್ತಿರುವ ಮನಸುಗಳು ಮತ್ತು ಕುಟುಂಬಗಳು ಒಟ್ಟಾಗಿ ದೇವರ ಆರಾಧನೆ ಮಾಡಬೇಕು ಎನ್ನುವ ಆಶಯ ಮುನ್ನೆಲೆಗೆ ಬರುತ್ತದೆ. ಹೀಗೆ ಈ ಆಚರಣೆಗಳು ರೂಪಗೊಳ್ಳುತ್ತಾ ಧಾರ್ಮಿಕ ಮಹತ್ವವನ್ನು ಪಡೆದು ಮನುಷ್ಯನ ಮನೋಧರ್ಮವನ್ನು ಮತ್ತು ಜೀವನಕ್ರಮವನ್ನು ನೈತಿಕವಾಗಿ ರೂಪಿಸುವಲ್ಲಿ ಪ್ರಯತ್ನಿಸಿರುವುದನ್ನು ಕಾಣಬಹುದು. ಈ ಅರ್ಥದಲ್ಲಿ ಸಂಕಟ ಉಂಡ ಸತಿ ಮಹಾಸತಿಯಾಗಿ, ದೇವತೆಯಾಗಿ ಮನುಷ್ಯನ ಬದುಕನ್ನು ರೂಪಿಸುತ್ತಿರುವ ಬಹುದೊಡ್ಡ ಆಶಯ ಭಾರತೀಯ ಜಾನಪದ ಧಾರ್ಮಿಕ ಸಂಸ್ಕೃತಿಯ ಭಾಗವಾಗಿದೆ. ಈ ದೃಷ್ಟಿಯಲ್ಲಿ ಮಾಸ್ತಮ್ಮನ ಹಬ್ಬ ಹೆಣ್ಣೊಬ್ಬಳ ಜೀವನಾನುಭವದ ಅನುಭೂತಿಯಾಗಿ ಎಲ್ಲರಲ್ಲಿ ನೆಲೆಗೊಳ್ಳುತ್ತದೆ.

**ಪರಾಮರ್ಶನ ಗ್ರಂಥಗಳು**

ಡಾ. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ ಒಂದು ಅಧ್ಯಯನ, ಅಭಿನವ ಪ್ರಕಾಶನ, ದ್ವಿತೀಯ ಮುದ್ರಣ–2019

ಡಾ. ಆರ್. ಶೇಷ ಶಾಸ್ತ್ರಿ, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು–2014

❖❖❖

# ಶ್ರೀಧರ ಬಳಗಾರರ ಆಡುಕಳ ಕಾದಂಬರಿ–ಒಂದು ವಿಶ್ಲೇಷಣೆ

**ಡಾ. ಪ್ರತಿಮಾ ಕೆ.ಪಿ.**
ಸಹ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪೇಟೆ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಶ್ರೀಧರ ಬಳಗಾರರ ಎರಡನೇ ಕಾದಂಬರಿ ಆಡುಕಳ. ಅಲ್ಲಿನ ಪ್ರಾದೇಶಿಕ ಕತೆಯನ್ನು ಆಯ್ಕೆ ಮಾಡಿರುವ ಲೇಖಕರು ಭೂ ಒಡೆತನದ ವಿಚಾರದಲ್ಲಿ ಆಗುವ ದಾಯಾದಿ ಕಲಹಗಳು ಮನುಷ್ಯರ ಅಂತಃಸತ್ವವನ್ನು ನಾಶಪಡಿಸುವ ರೀತಿಯನ್ನು ಹಂತಹಂತವಾಗಿ ಬಿಚ್ಚಿಡುತ್ತಾರೆ.

ಪ್ರಪಂಚದ ಮೂಲೆ ಮೂಲೆಯಲ್ಲಿ ಪ್ರತಿ ದಿನವೂ ಭೂಮಿ ಕಲಹ ನಡೆಯುತ್ತಲೇ ಇರುತ್ತದೆ. ಹೀಗೆ ಕಾಲಾತೀತವಾಗಿ ಮನುಷ್ಯ ಭೂಮಿಗಾಗಿ ಮಾಡುವ ನಿರರ್ಥಕ ಹೋರಾಟದ ಕತೆಯೇ 'ಆಡುಕಳ'. ಜೊತೆಗೆ ಕಾದಂಬರಿಯು ದಿನನಿತ್ಯದ ಲೌಕಿಕ ವ್ಯವಹಾರಗಳ ಜೊತೆ ಜೊತೆಗೆ ಅತೀಂದ್ರಿಯ, ಅಲೌಕಿಕ ಸಂಗತಿಗಳನ್ನು ಬಿಚ್ಚಿಡುತ್ತಾ, ಹಲವಾರು ನಿಗೂಢಗಳನ್ನು ಅನಾವರಣಗೊಳಿಸುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರಕ್ಕೆ ಸೇರಿದ ಬಿದ್ರಳ್ಳಿ ಗ್ರಾಮದಲ್ಲಿ ವಾಸವಾಗಿರುವ ಮಣ್ಕಿನೆ ಎಂಬ ಮನೆತನಕ್ಕೆ ಸೇರಿದ ನಾಲ್ಕೆಕರೆ ಭೂಮಿ ಇರುವ ಪ್ರದೇಶವೇ ಆಡುಕಳ. ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ನಡೆಯುವ ಹೋರಾಟ ಕಾದಂಬರಿಯ ಕೇಂದ್ರದಲ್ಲಿದೆ.

ಮಣ್ಕಿನೆಯ ಕೃಷ್ಣಪ್ಪ ಮತ್ತು ದಶರಥ ಅಣ್ಣತಮ್ಮಂದಿರು. ಹಿಸ್ಸೆಯಲ್ಲಿ ಕೃಷ್ಣಪ್ಪ ಬಿದ್ರಳ್ಳಿಯ ಆಸ್ತಿಗೂ, ದಶರಥ ಆಡುಕಳದ ಆಸ್ತಿಗೂ ವಾರಸುದಾರರಾಗುತ್ತಾರೆ. ಬಿದ್ರಳ್ಳಿಯ ಭೌಗೋಳಿಕ ನಕ್ಷೆಯಲ್ಲಿ ಸಂಪರ್ಕಹೀನ ದ್ವೀಪದಂತಿದ್ದ ಪ್ರಶಾಂತ ವಾತಾವರಣದ ಆಡುಕಳವು ಮಿತಭಾಷಿ. ಕಾಯಕಜೀವಿಯಾದ ದಶರಥನಿಗೆ ಸಂತಸವನ್ನೇ ನೀಡುತ್ತದೆ. ದುಡಿತಾವಳಿಗೆ ಯೋಗ್ಯಳಾದ, ಗಟ್ಟಿಮುಟ್ಟಾದ ಅವರ್ಸಾದ ಹೆಣ್ಣು ಸಾವಿತ್ರಿ, ದಶರಥನಿಗೆ ಸಕಲ ರೀತಿಯಿಂದಲೂ ಅನುರೂಪಳಾದ ಹೆಂಡತಿಯಾಗಿ ಬರುತ್ತಾಳೆ. ಮಕ್ಕಳಿಲ್ಲದ ಕೊರತೆಯಿದ್ದರೂ ಅನುರೂಪದ ಅನ್ಯೋನ್ಯ ದಾಂಪತ್ಯ ನಡೆಸುತ್ತಿದ್ದ ದಶರಥ–ಸಾವಿತ್ರಿಯ ಬದುಕಿನಲ್ಲಿ ದುರಂತವೊಂದು ಸಂಭವಿಸುತ್ತದೆ. ಅದು ಸಾವಿತ್ರಿಯ ಶಾರೀರಿಕ ರಚನೆಯಲ್ಲಿ ಉಂಟಾದ ಹಠಾತ್ ಬದಲಾವಣೆ. ಸಾವಿತ್ರಿಯ ಮೈ ಮತ್ತು ಮುಖದ ಮೇಲೆ ಇದ್ದಕ್ಕಿದ್ದಂತೆ ರೋಮಗಳು ಮೂಡಿ ಕುರೂಪಿತನ ಆವರಿಸಿ, ಮಾನಸಿಕ ಖಿನ್ನತೆಗೆ ಒಳಗಾಗಿ, ಒಂದು ದಿನ ಆಡುಕಳದಿಂದ ನಿಗೂಢವಾಗಿ ಕಣ್ಮರೆಯಾಗುತ್ತಾಳೆ.

ಹೆಂಡತಿಯ ಕಣ್ಮರೆಯಿಂದ ದಶರಥನಲ್ಲಿ ಖಾಲಿತನ ಆವರಿಸುತ್ತದೆ. ಆದರೂ ನೋವಿನಲ್ಲೇ ಒಂಟಿತನ ಅನುಭವಿಸುತ್ತಾನೆ. ಮಕ್ಕಳಿಲ್ಲದ ಒಂಟಿ ಜೀವನ ನಡೆಸುತ್ತಿದ್ದ ಫಲವತ್ತಾದ ದಶರಥನ ಆಸ್ತಿಯ ಮೇಲೆ ಹಲವರ ಕಣ್ಣು ಬೀಳುತ್ತದೆ. ಅದರಲ್ಲಿ ಪ್ರಮುಖವಾಗಿ ದಶರಥನ ಅಣ್ಣನ ಮಗ ಸೂರಣ್ಣ, ಖಾನಾವಳಿಯ ಗಂಗಣ್ಣ, ಮದ್ಗಣಿಯ

ವೈದ್ಯರು ಪ್ರಮುಖರು. ಆಡುಕಳ ಕೇವಲ ಫಲವತ್ತಾದ ಭೂಮಿಯನ್ನಷ್ಟೇ ಅಲ್ಲದೆ, ಹಲವು ವೈದ್ಯಕೀಯ ಸಸ್ಯಗಳು, ಜೇನುಗಳ ತಾಣ. ಗೊಂಬೆ ಮಾಡಲು ಅಗತ್ಯವಾದ ಜೇಡಿ ಮಣ್ಣಿನ ಆಗರವೂ ಆಗಿತ್ತು. ಹೀಗಾಗಿ ಆಡುಕಳವನ್ನು ವಶಪಡಿಸಿಕೊಳ್ಳಲು ಸೂರಣ್ಣ ಮತ್ತು ಗಂಗಣ್ಣ ಪೈಪೋಟಿಗೆ ಇಳಿಯುತ್ತಾರೆ.

ಗಂಗಣ್ಣ, ಪಿತ್ರಾರ್ಜಿತವಾಗಿ ಬಂದ ಅರ್ಧ ಎಕರೆ ಗದ್ದೆಯಲ್ಲಿ ಜೀವನ ಸಾಗಿಸಲಾರದೆ, ಅಲ್ಲಿ ಸಾಗುವಾನಿ ಗಿಡಗಳನ್ನು ನೆಟ್ಟು, ಅಡುಗೆ ಕೆಲಸ, ವೈವಾಹಿಕ ಮೇಲ್ವಿಚಾರಣೆಯ ಉಸ್ತುವಾರಿ ವಹಿಸುತ್ತಲೇ ಯಲ್ಲಾಪುರದ ಪೇಟೆಯಲ್ಲಿ ಖಾನಾವಳಿ ತೆರೆಯುತ್ತಾನೆ. ಇದೇ ಸಂದರ್ಭದಲ್ಲಿ ಇತ್ತ ಆಡುಕಳದಲ್ಲಿ ಹೆಂಡತಿಯ ನಿಗೂಢ ಕಣ್ಮರೆಯ ನಂತರ ಏಕಾಂಗಿಯಾಗಿಯೇ ಉಳಿದ ದಶರಥನ ಮನೆಯಲ್ಲಿ ಕಳವು ಮಾಡಲು ಬಂದವರು, ಏನೂ ಸಿಗದಿದ್ದರಿಂದ ಕೋಪಗೊಂಡು ದಶರಥನನ್ನು ಅಂಗಳದಲ್ಲಿ ಕಟ್ಟಿಹಾಕಿ ಎಮ್ಮೆಯನ್ನು ಹೊಡೆದುಕೊಂಡು ಹೋಗುತ್ತಾರೆ. ಅಲ್ಲಿ ಎಮ್ಮೆ ಕರುವಿನಿಂದಾದ ಅವಾಂತರದಿಂದ ದಶರಥ ಪ್ರಾಣಾಪಾಯಕ್ಕೀಡಾದಾಗ, ಆತನನ್ನು ಖಾನಾವಳಿಯಲ್ಲಿಟ್ಟುಕೊಂಡು ಉಪಚರಿಸುವ ಗಂಗಣ್ಣ ಆತನಿಂದ ಹೇಗಾದರೂ ಜಮೀನು ಪಡೆಯಬೇಕೆಂಬ ದುರುದ್ದೇಶದಿಂದ ಆತನನ್ನು ಮತ್ತೆ ಆಡುಕಳಕ್ಕೆ ಹೋಗಲು ಬಿಡದೆ, ತನ್ನ ಖಾನಾವಳಿಯಲ್ಲಿಯೇ ಒಂದು ರೂಮು ಕೊಟ್ಟು, ಮದ್ದಣಿ ವೈದ್ಯರಿಂದ ಉಪಚರಿಸುತ್ತಾನೆ.

ಕಾದಂಬರಿಯ ಮತ್ತೊಂದು ಪಾತ್ರ ಸೂರಣ್ಣ ದಶರಥನ ಅಣ್ಣ ಕೃಷ್ಣಪ್ಪನ ಹಿರಿಯ ಮಗ. ದಶರಥನಿಂದ ಗಂಗಣ್ಣ ಭೂಮಿ ಪಡೆಯಬಹುದೆಂಬ ಗುಮಾನಿ ಬಂದ ಸೂರಣ್ಣ, ತಂದೆ ಕೃಷ್ಣಪ್ಪನವರಿಂದ ಬೇರೆಯವರಿಗೆ ಭೂಮಿ ಕೊಡದಂತೆ ದಶರಥನಿಗೆ ತಾಕೀತು ಮಾಡಿಸುತ್ತಾನೆ. ತಮ್ಮ ವಾಸುದೇವನನ್ನು ಆಡುಕಳದಲ್ಲಿ ಪ್ರತಿಷ್ಠಾಪಿಸುತ್ತಾನೆ. ಹೀಗೆ ದಶರಥನ ಭೂಮಿಯನ್ನು ವಶಪಡಿಸಿಕೊಳ್ಳಲು ತಂತ್ರ–ಪ್ರತಿತಂತ್ರಗಳ ವ್ಯೂಹ ರಚನೆಯಾಗುತ್ತದೆ.

ಇದೇ ಸಂದರ್ಭದಲ್ಲಿ ಆಡುಕಳದ ಕೆಲಸಗಾರ ಹುಮಾಟಿಯ ಹೆಂಡತಿ ಕಾಮಾಕ್ಷಿಯ ಮೈಮೇಲೆ ದೇವಿ ಬರಲು ಆರಂಭವಾಗುತ್ತದೆ. ಅದನ್ನು ನಂಬಿದ ಭಕ್ತರ ಸಂಖ್ಯೆ ಹೆಚ್ಚಾಗುತ್ತಾ ಹೋಗುತ್ತದೆ. ಕಾಮಾಕ್ಷಿ ಮೈಮೇಲೆ ದೇವಿ ಬಂದು ಹೇಳಿದ ಭವಿಷ್ಯ ಸಿನಿಮಾ ನಟ ಕಾಂತರಾಜನ ಬದುಕಿನಲ್ಲಿ ನಿಜವಾಗಿ ಆತ ವೃತ್ತಿಜೀವನದ ಉತ್ತುಂಗವನ್ನು ತಲುಪುತ್ತಾನೆ. ಅದಕ್ಕೆ ಪ್ರತ್ಯುಪಕಾರವಾಗಿ ದೇವಿಗೆ ಗುಡಿ ಕಟ್ಟಿಕೊಡಲು ಮುಂದಾಗುತ್ತಾನೆ. ಆದರೆ ಕಾಮಾಕ್ಷಿ ದೇವರು ತನ್ನ ಮೈಮೇಲೆ ಬರುವ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಗುಡಿ ಕಟ್ಟುವುದನ್ನು ವಿರೋಧಿಸಿ, ಗುರು ಮಂದಿರ ನಿರ್ಮಾಣಕ್ಕೆ ಅಸ್ತು ಎನ್ನುತ್ತಾಳೆ. ಇಲ್ಲಿಯೂ ಗಂಗಣ್ಣ ಗುರುಮನೆಯ ನಿರ್ಮಾಣ ಕಾರ್ಯವನ್ನು ತನ್ನ ವಶದಲ್ಲಿರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಸೂರಣ್ಣನ ಬುದ್ಧಿವಂತಿಕೆಯ ಮುಂದೆ ಅದು ಸಾಧ್ಯವಾಗುವುದಿಲ್ಲ.

ಎಲ್ಲವನ್ನು ಲಾಭದಿಂದಲೇ ನೋಡುವ ಸೂರಣ್ಣ ಸಿನಿಮಾ ನಟ ಕಾಂತರಾಜನಿಂದ ನಿರ್ಮಾಣವಾದ ಗುರುಕುಲದಲ್ಲಿ ತನ್ನ ಚಿಕ್ಕಪ್ಪ ದಶರಥನನ್ನು ಆದಿಗುರು ಎಂಬಂತೆ ಬಿಂಬಿಸಿ, ಆತನನ್ನು ಗುರುಮನೆಯೊಳಗೆ ಬಂಧಿಸುತ್ತಾನೆ. ಗುರುಮನೆ ಸೂರಣ್ಣನ ಆಸೆ ಅಪೇಕ್ಷೆಗಳಿಂದ ಗುರುಮನೆಯಾಗಿ ಉಳಿಯದೆ

ವ್ಯಾವಹಾರಿಕ ಕೇಂದ್ರವಾಗುತ್ತದೆ. ಕಾಮಾಕ್ಷಿ ಬಯಲಿನಲ್ಲಿಯೇ ದೇವಿಯ ಆವಾಹನೆ ಕೈಗೊಂಡು ತನ್ನ ಸೇವೆಯನ್ನು ಮುಂದುವರೆಸುತ್ತಾಳೆ. ಗುರುಮನೆ ಕಟ್ಟಿಸಿ, ಜಮೀನನ್ನು ಪಡೆಯಲು ಸಾಧ್ಯವಾಗದ ಗಂಗಣ್ಣ, ಆಡುಕಳ ಸಾರ್ವತ್ರಿಕ ಆಸ್ತಿ, ಅದು ಕಾಮಾಕ್ಷಿಗೆ ಸೇರಿದ್ದು ಎಂದು ಹುಮಾಟಿಯನ್ನು, ಊರಿನವರನ್ನು ಎತ್ತಿ ಕಟ್ಟಿದರೂ ಯಾವುದೇ ಪ್ರಯೋಜನವಾಗುವುದಿಲ್ಲ.

ಕೊನೆಗೆ ಯಾವ ಸಂದರ್ಭವನ್ನೂ ತನ್ನ ನಿಯಂತ್ರಣದಲ್ಲಿರಿಸಿಕೊಳ್ಳಲಾಗದ ದಶರಥ ತನ್ನ ಅಸಹಾಯಕತೆ ಮತ್ತು ಅನಿವಾರ್ಯತೆಯಿಂದ ಆಡುಕಳದ ಬಂಗಾರದಂಥ ಭೂಮಿಯನ್ನು ಕಳೆದುಕೊಳ್ಳುತ್ತಾನೆ. ಕಾಮಾಕ್ಷಿಯ ಮೈಮೇಲೆ ಬರುವ ದೇವಿಯನ್ನೇ ಬಂಡವಾಳವಾಗಿಸಿಕೊಂಡ ಸೂರಣ್ಣ, ಅದನ್ನೊಂದು ಅಲೌಕಿಕ ಕ್ಷೇತ್ರವನ್ನಾಗಿಸಿದ್ದಲ್ಲದೆ, ದಶರಥನ ನಿಜರೂಪವನ್ನು ಮರೆಮಾಚಿ, ಜಗತ್ತಿನೆದುರು ಗುರುಸ್ವಾಮಿನ್ನಾಗಿ ಮಾಡಿ, ಅಲ್ಲಿ ನಿರಾಯಾಸವಾಗಿ ಹಣ ಸಂಪಾದನೆ ಮಾಡುತ್ತಾನೆ. ಸ್ವಭಾವತಃ ಅಂತರ್ಮುಖಿಯಾದ ದಶರಥ, ಭಕ್ತರಿಗೆ ಆಗುತ್ತಿರುವ ಮೋಸ ತಿಳಿದು ಬೇಸತ್ತು, ತಾನು ಬಾಳಿ ಬದುಕಿದ ಆಡುಕಳವನ್ನು ತೊರೆದು ಹೆಂಡತಿಯಂತೆಯೇ ನಿಗೂಢ ಕಣ್ಮರೆಯಾಗುತ್ತಾನೆ. ಆದರೆ ಸೂರಣ್ಣ ಮಾತ್ರ ಗುರುಗಳು ಉತ್ತರಕ್ಕೆ ಹೋಗಿದ್ದಾರೆ ಎಂಬ ವಂಚನೆಯ ಪರದೆಯ ಮೇಲೆ ಬದುಕಲು ನಿರ್ಧರಿಸುತ್ತಾನೆ. ಗುರುಸ್ವಾಮಿಗಳಾಗಿ ಬದಲಾಗಿದ್ದ ದಶರಥನ ಕಣ್ಮರೆಯನ್ನು ಸೂರಪ್ಪ ಸಮಾಜದೆದುರು ಲೀಲಾಜಾಲವಾಗಿ ತೇಲಿಸಿಬಿಡುತ್ತಾನೆ.

ಅಲ್ಲದೆ ಇಂದು ಪ್ರತಿಯೊಂದು ಸಮುದಾಯ ಎದುರಿಸುತ್ತಿರುವ ವಿವಾಹದ ವಿಚಾರಗಳನ್ನು ಕಾದಂಬರಿ ಚರ್ಚಿಸುತ್ತದೆ. ಜಾಗತೀಕರಣದ ಪರಿಣಾಮದಿಂದಾಗಿ ಎಲ್ಲಾ ಸಮುದಾಯಗಳು ಶೈಕ್ಷಣಿಕವಾಗಿ ಮುಂದುವರೆದಿದ್ದು, ಹೆಣ್ಣು ಮಕ್ಕಳು ಶಿಕ್ಷಣದಿಂದ ಮುಂದೆ ಬಂದು ಉದ್ಯೋಗಸ್ಥರಾಗುತ್ತಿದ್ದಾರೆ. ಓದಿನಲ್ಲಿ ಹಿಂದುಳಿದ, ಕೃಷಿಯನ್ನು ಉದ್ಯೋಗವನ್ನಾಗಿರಿಸಿಕೊಂಡ ಯುವಕರನ್ನು ವಿವಾಹವಾಗಲು ನಿರಾಕರಣೆ ಮಾಡುವ ವಿಚಾರಗಳು ಇಲ್ಲಿ ಸ್ಥಾನ ಪಡೆದಿವೆ. ಕಾದಂಬರಿಯಲ್ಲಿ ಸೂರಣ್ಣನ ತಮ್ಮ ವಾಸುದೇವ ವಯಸ್ಸು ಮೀರುತ್ತಿದ್ದರೂ ಹೆಣ್ಣು ಸಿಗದಿದ್ದರಿಂದ, ಲಿಂಗಾಯತರ ಹುಡುಗಿಯನ್ನು ವಿವಾಹವಾಗುತ್ತಾನೆ. ಅನಂತರ ಸೂರಣ್ಣನ ತಂತ್ರದಿಂದ ಬೇಸತ್ತು ಹೆಂಡತಿ ಮನೆ ಕಲಘಟಗಿಯನ್ನೇ ಸೇರುತ್ತಾನೆ. ಹಾಗೆಯೇ ಬಿಕ್ಕು ಗುಡಿಗಾರನಿಂದ ಗೊಂಬೆ ಮಾಡುವುದನ್ನು ಕಲಿತ ಸೂರಣ್ಣನ ಕೊನೆಯ ತಮ್ಮ ಪರಮೇಶ್ವರ ಪೇಟೆಯ ಹುಚ್ಚಿಗೆ ಬಲಿಯಾಗಿ ಮನೆ ಇಡುತ್ತಾನೆ.

ಕಾದಂಬರಿಯು ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿ ಮಾತನಾಡುವ ಹವ್ಯಕ ಭಾಷೆಯ ಸೊಗಡನ್ನು ಕಟ್ಟಿಕೊಡುತ್ತದೆ. ಪಾತ್ರಗಳ ಸಂಭಾಷಣೆಯಲ್ಲಿ ಅಲ್ಲಲ್ಲಿ ಹವ್ಯಕ ಭಾಷೆ ತರುವುದರ ಮೂಲಕ ಪ್ರಾದೇಶಿಕತೆಯ ಸೊಗಡನ್ನು ಮೈದುಂಬಿಕೊಂಡಿದೆ. ಉತ್ತರ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಆಚರಣೆಗಳೂ ಕಾದಂಬರಿಯಲ್ಲಿ ಜಾಗ ಪಡೆದುಕೊಂಡಿವೆ. ಪ್ರಮುಖವಾಗಿ ಮಣ್ಮನೆಯಲ್ಲಿ ಆಚರಿಸುವ ಚೌತಿ ಹಬ್ಬ. ಹಬ್ಬಕ್ಕೆ ತಿಂಗಳಿರುವಾಗಲೇ ಗಣೇಶನನ್ನು ಮಾಡುವ ಸಂಭ್ರಮ, ಅದಕ್ಕಾಗಿ ಯಲ್ಲಾಪುರದ ಬಿಕ್ಕು ಗುಡಿಗಾರನನ್ನು ಮನೆಗೆ ಕರೆಸಿ ಮೂರ್ತಿ ತಯಾರಿಸುವುದು, ಐದು ಅಡಿ ಎತ್ತರದ ಗಣೇಶಮೂರ್ತಿಯನ್ನು ಏಳು ದಿನಗಳ ಕಾಲ ವೈಭವದಿಂದ ಪೂಜಿಸಿ, ಅದ್ದೂರಿಯಾಗಿ ವಿಸರ್ಜನೆ ಮಾಡುವ ಪರಿಪಾಠ, ನೆಂಟರ ಆಗಮನ,

ಬಿದ್ರಳ್ಳಿಯ ಮನೆಗಳಿಗೆ, ಕೂಲಿಕಾರರಿಗೆ ಕೂಡ ಕಡಿಮೆ ಖರ್ಚಿನ ವಿಗ್ರಹಗಳನ್ನು ತಯಾರಿಸಿ ಕೊಡುವುದು ಎಲ್ಲವೂ ಅಲ್ಲಿನ ಸಾಂಸ್ಕೃತಿಕ ಆಚರಣೆಗಳನ್ನು ಬಿಂಬಿಸುತ್ತಿವೆ. ಹಾಗೆಯೇ ಆಡುಕಳದಲ್ಲಿ ಕಬ್ಬು ಬೆಳೆದ ಸಂದರ್ಭದಲ್ಲಿ ಬೆಲ್ಲ ತಯಾರಿಸುವ ಚಿತ್ರಣ, ಆಲೆಮನೆಯ ಸಂಭ್ರಮ, ಊರಿನವರಿಗೆ ಕಬ್ಬಿನ ಹಾಲಿನ ಉಪಚಾರ, ಊರಿಗೆ ಬರುವ ಅಲೆಮಾರಿಗಳಿಗೆ ಮಣ್ಮನೆ ಆಶ್ರಯ ತಾಣವಾದ ಬಗೆ, ಅಲ್ಲಿನ ಉಪಚಾರ ಎಲ್ಲವೂ ಸಾಂಸ್ಕೃತಿಕ ಆಚರಣೆಯ ಭಾಗವಾಗಿ ಕಾದಂಬರಿಯಲ್ಲಿದೆ.

ಅಂತಿಮವಾಗಿ ಕಾದಂಬರಿಯಲ್ಲಿ ಹಲವಾರು ವಿಲಕ್ಷಣಗಳು ಸಂಭವಿಸಿ, ಅವುಗಳಿಗೆ ಉತ್ತರವೇ ದೊರಕದ ಪರಿಸ್ಥಿತಿ ಇದೆ. ದಶರಥನ ಹೆಂಡತಿ ಸಾವಿತ್ರಿ ಹಾಗೂ ಜೇನು ಕೊಯ್ಯಲು ಬಂದ ಬಕಾಲ ಇದ್ದಕ್ಕಿದ್ದಂತೆ ಕಾಣೆಯಾಗುತ್ತಾರೆ. ಹಳ್ಳ ಒಡೆದು ಮೀನು ರಾಶಿ ರಾಶಿಯಾಗಿ ಸಾಯುವುದು, ಕಬ್ಬಿನ ಗಾಣ ಮಾಡುವಾಗ ಹರಿದು ಬರುವ ನೊಣಗಳ ರಾಶಿ, ದಶರಥನ ನಿಗೂಢ ಕಣ್ಮರೆ, ಕಾಮಾಕ್ಷಿ ಯಾರೆಂದು ತಿಳಿದಿದ್ದರೂ ಬಾಯಿ ಬಿಡದ ಯಜ್ಞೇಶ್ವರರು, ಹುಮಾಟಿ ಹೆಂಡತಿ ಕಾಮಾಕ್ಷಿಗೆ ಮೈ ಮೇಲೆ ದೇವರು ಬರುವುದು, ದಶರಥನ ಕಣ್ಮರೆ ನಂತರ ಕಾಮಾಕ್ಷಿಯ ಮುಂದಿನ ನಡೆ ಏನು? ಈ ಯಾವ ವಿಚಾರಗಳಿಗೂ ಕಾದಂಬರಿಯಲ್ಲಿ ಉತ್ತರ ದೊರಕುವುದಿಲ್ಲ. ಈ ಪ್ರಶ್ನೆಗಳು ಕಾದಂಬರಿ ಮುಗಿದ ನಂತರವೂ ಕೌತುಕವಾಗಿಯೇ ಉಳಿದು ಬಿಡುತ್ತವೆ.

**ಪರಾಮರ್ಶನ ಗ್ರಂಥಗಳು**


1. ಶ್ರೀಧರ ಬಳಗಾರ, ಆಡುಕಳ, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು, 2014
2. ಕೀರ್ತಿನಾಥ ಕುರ್ತುಕೋಟಿ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ, 2015
3. ಆಧುನಿಕ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಹೊನ್ನು ಸಿದ್ಧಾರ್ಥ(ಸಂ.) ಸಂಪುಟ–4, ಭಾಗ–2, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು, 2014.
4. ರಾಘವೇಂದ್ರ ರಾವ್ ಎಚ್.ಎಸ್, ಕಣ್ಣ ಹನಿಗಳ ಕಾಣಿಕೆ, ಇಳಾ ಮುದ್ರಣ, ಬೆಂಗಳೂರು, 2012.


❖❖❖

# ಬದಲಾಗುತ್ತಿರುವ ಕಾಲಘಟ್ಟದಲ್ಲಿ ಯಕ್ಷಗಾನ
# ಕೆಲವು ಸವಾಲುಗಳು

**ಡಾ ಪಿ ಬಿ ಪ್ರಸನ್ನ**
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ, ಜಿ. ಶಂಕರ್ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ಅಜ್ಜರಕಾಡು, ಉಡುಪಿ–576101

ಆಧುನಿಕತೆ ಎನ್ನುವುದು ವೈಜ್ಞಾನಿಕ ಕ್ಷೇತ್ರಗಳಲ್ಲಿ ಉಂಟಾದ ಬದಲಾವಣೆಗಳಿಂದ ರೂಪುಗೊಂಡ ಒಂದು ಜೀವನಕ್ರಮ. ಜೀವನಕ್ರಮದ ಬದಲಾವಣೆಯು ಸಮಾಜದ ಇತರ ಅಂಗಗಳ ಮೇಲೆ ಉಂಟಾಗುತ್ತದೆ. ಜಾನಪದ ಕ್ಷೇತ್ರವೂ ಕೂಡ ಹೀಗೆ ಬದಲಾವಣೆಗೆ ಒಳಗಾಗಬೇಕಾದ ಸಂದರ್ಭ ಸೃಷ್ಟಿಯಾಯಿತು. ಯಕ್ಷಗಾನದ ಕ್ಷೇತ್ರವು ಆಧುನಿಕತೆಯ ಕಾರಣದಿಂದ ಹೇಗೆ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತ, ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿದೆ ಎನ್ನುವುದನ್ನು ಈ ಪ್ರಬಂಧದಲ್ಲಿ ವಿವರಿಸಲಾಗಿದೆ. ಆಧುನಿಕತೆ ಉಂಟುಮಾಡುವ ತಲ್ಲಣಗಳು, ಹುಟ್ಟುಹಾಕುವ ದ್ವಂದ್ವದ ಸ್ಥಿತಿ ಇವುಗಳ ನಡುವೆ ಶಾಸ್ತ್ರೀಯ ಮತ್ತು ಜಾನಪದ ಎರಡೂ ಆಗಿರುವ ಕಲೆಯಾದ ಯಕ್ಷಗಾನವು ತನ್ನ ಚಹರೆಗಳನ್ನು ಹೇಗೆ ಬದಲಾಯಿಸಿಕೊಳ್ಳುತ್ತ ಸಾಗಿದೆ ಎನ್ನುವ ಕುರಿತು ಈ ಪ್ರಬಂಧದಲ್ಲಿ ಚರ್ಚೆಯನ್ನು ಮಾಡಲಾಗಿದೆ. ಆಧುನಿಕತೆಯ ಸ್ವರೂಪ, ಅದು ಹುಟ್ಟುಹಾಕುವ ಸಾಮಾಜಿಕ ಬದಲಾವಣೆಗಳೇ ಕಲಾಪ್ರಕಾರಗಳಲ್ಲಾಗುವ ಬದಲಾವಣೆಗಳಿಗೂ ಕಾರಣ ಎನ್ನುವ ಪ್ರಮೇಯದೊಂದಿಗೆ ಈ ಪ್ರಬಂಧವನ್ನು ನಿರೂಪಿಸಲಾಗಿದೆ.

ಸಮಾಜ ಇದ್ದಕ್ಕಿದ್ದಂತೆ ಬದಲಾಗುವುದಿಲ್ಲ. ವಿಜ್ಞಾನ ತಂತ್ರಜ್ಞಾನದ ಕೊಡುಗೆಗಳಿಂದಾಗಿ, ಯಂತ್ರಯುಗೀನ ನಾಗರಿಕತೆಯ ದಾಳಿಯಿಂದಾಗಿ ಸಾಮಾಜಿಕ ಪಲ್ಲಟಗಳು ಉಂಟಾಗುತ್ತವೆ. ಸಮಾಜಶಾಸ್ತ್ರಜ್ಞ ಬೌಮನ್ ಆಧುನಿಕತೆ ಎನ್ನುವುದು ಸಂಸ್ಕೃತಿಯ ಬಹುಮುಖ್ಯ ದೃಷ್ಟಿಕೋನಗಳನ್ನು ಚಿಂತನೆಗಳನ್ನು ನಾಶ ಮಾಡುವಂಥದ್ದು. ಅದೇ ಆಧುನಿಕತೆಯ ಲಕ್ಷಣ ಎಂದಿದ್ದಾನೆ. ಸಮೂಹದ ಅಥವಾ ಬಹುತ್ವದ ನಾಶಕ್ಕೆ ಕಾರಣವಾಗುವಂಥದ್ದು ನವ ಆಧುನಿಕದ ಚಿಂತನೆಯ ಒಂದು ಫಲ ಎಂದಿದ್ದಾನೆ.[1]

ವಿಜ್ಞಾನ ತಂತ್ರಜ್ಞಾನ ಮಾಹಿತಿ ತಂತ್ರಜ್ಞಾನ ಮುದ್ರಣ ಮಾಧ್ಯಮ ಇತ್ಯಾದಿಗಳೆಲ್ಲವೂ ಕಳೆದ ನಲುವತ್ತು ವರ್ಷಗಳಲ್ಲಿ ಕ್ಷಿಪ್ರವಾಗಿ ಬದಲಾವಣೆಯನ್ನು ಹೊಂದಿವೆ. ಈ ಬದಲಾವಣೆಗಳು ಪ್ರತಿ ಪ್ರದೇಶದ ಕಲಾಪ್ರಕಾರದ ಮೇಲೆಯೂ ಕೂಡ ಗಂಭೀರವಾದ ಪರಿಣಾಮವನ್ನು ಬೀರುತ್ತದೆ. ಜಾನಪದ ವಿದ್ವಾಂಸ ಎ ವಿ ನಾವಡ ಅವರು ಜಾಗತೀಕರಣ ಮತ್ತು ಜಾನಪದ ಲೇಖನದಲ್ಲಿ ಜಾಗತೀಕರಣವನ್ನುಹುಲಿ ಯನ್ನಾಗಿಯೂ  ಜಾನಪದವನ್ನು ಸಣ್ಣ ಸಣ್ಣ ಬಿಲವನ್ನು ತೋಡುತ್ತ ಪಾರಾಗುವ ಇಲಿಯನ್ನಾಗಿಯೂ ಕಲ್ಪಿಸಿ ವಿವರಿಸಿದ್ದಾರೆ. ಜಾಗತೀಕರಣದ ಎದುರು ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಜಾನಪದವು ತನ್ನ ಚಹರೆಗಳನ್ನು, ಜಾಡನ್ನು ಬದಲಾಯಿಸುತ್ತಿರುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[2] ಆಧುನಿಕತೆ ರೂಪಿಸಿದ ವಿಚಿತ್ರವಾದ ದ್ವಂದ್ವದ ಮನಸ್ಥಿತಿ ಹೆಚ್ಚಿನ ಜಾನಪದ ಕಲಾಪ್ರಕಾರಗಳ ಪ್ರದರ್ಶನದ ರೀತಿಗಳಲ್ಲಿ ಕಾಣಬಹುದು.

ಆಧುನಿಕತೆಯು ಸ್ಥಳೀಯ ಸಂಸ್ಕೃತಿಯನ್ನು ನಾಶ ಮಾಡುತ್ತದೆ ಹಾಗಾಗಿ ಸ್ಥಳೀಯ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು ಎಂಬ ಹೊಯ್ಲು ಒಂದು ಕಡೆಯಾದರೆ, ಸಮಾಜ ಬದಲಾವಣೆಗೆ ಆಧುನಿಕತೆ ಅನಿವಾರ್ಯ ಎಂಬ ಮೆಚ್ಚುಗೆಯ ದೃಷ್ಟಿಕೋನ ಮತ್ತೊಂದು ಕಡೆ.[3] ಈಗಾಗಲೇ ನಿರೂಪಿಸಿದಂತೆ ಆಧುನಿಕತೆ ಎನ್ನುವುದು ಮಾಹಿತಿ ತಂತ್ರಜ್ಞಾನ ಹಾಗೂ ವೈಜ್ಞಾನಿಕ ಆವಿಷ್ಕಾರಗಳ ಮುಖಾಂತರ ರೂಪುಗೊಂಡ ಬದಲಾದ ಮನೋಧರ್ಮ ಎನ್ನಬಹುದು. ಆಧುನಿಕತೆಯನ್ನು ಕೇಡುಗಳನ್ನು ತಂದೊಡ್ಡುವ ಕಾಲಘಟ್ಟ ಎಂದು ಭಾವಿಸಿದ ಸಮಾಜವಿಜ್ಞಾನಿಗಳೂ ಇದ್ದಾರೆ.[4]

**ಬದಲಾದ ಕಾಲಮಾನ ಒಡ್ಡಿದ ಸವಾಲುಗಳು**

21ನೇ ಶತಮಾನದ ಈ ಹೊತ್ತಿನಲ್ಲಿ ಅಂದರೆ ಕಾಲು ಶತಮಾನ ಕ್ರಮಿಸುತ್ತಿರುವ ಸಂದರ್ಭದಲ್ಲಿ ಯಕ್ಷಗಾನ ಕ್ಷೇತ್ರವು ಎದುರಿಸುತ್ತಿರುವ ಸವಾಲುಗಳು ಅಪಾರ. ಟಿವಿ ಮಾಧ್ಯಮ, ಸಿನಿಮಾ, ಕಂಪ್ಯೂಟರ್ ಮೊದಲಾದ ಸಮೂಹ ಮಾಧ್ಯಮದ ಸಂಪರ್ಕ ಮಾಧ್ಯಮದ ಕಾರಣಗಳಿಂದಾಗಿ ಯಕ್ಷಗಾನವು ತನ್ನ ಚಹರೆಗಳನ್ನು ಬದಲಾಯಿಸುವ ಸ್ಥಿತಿಗೆ ತಲುಪಿದೆ. ಒಂದು ಕಾಲಘಟ್ಟದಲ್ಲಿ ರಾಮಾಯಣ ಮಹಾಭಾರತ ಭಾಗವತಕ್ಕೆ ಸಂಬಂಧಿಸಿದ ಕಥೆಗಳನ್ನು ಪೌರಾಣಿಕ ನೆಲೆಯಿಂದ ಆಡುತ್ತಿದ್ದ ಯಕ್ಷಗಾನ ಮೇಳಗಳು 60–70ರ ದಶಕದ ಹೊತ್ತಿನಲ್ಲಿಯೇ ನಿಧಾನವಾಗಿ ತುಳು ಜಾನಪದ ಕಥೆಗಳನ್ನು ಪ್ರಯೋಗಗಳಲ್ಲಿ ಬಳಸತೊಡಗಿದವು. ಮಾತ್ರವಲ್ಲ ಕ್ಷೇತ್ರ ಮಹಾತ್ಮೆಯ ಪ್ರಸಂಗಗಳನ್ನು ತಮ್ಮ ಪ್ರದರ್ಶನಕ್ಕೆ ಸಿದ್ಧಗೊಳಿಸಿದವು. 1948–49ರ ತಿರುಗಾಟದಲ್ಲಿಯೇ ಇರಾ ಸೋಮನಾಥ ಮೇಳದವರು ಕೋಟಿಚೆನ್ನಯ ಪ್ರಸಂಗವನ್ನು ತುಳುವಿನಲ್ಲಿ ಆಡಿದ್ದರು. ಆದರೆ 70 ರ ದಶಕದ ಹೊತ್ತಿನಲ್ಲಿ ತುಳು ಪ್ರಸಂಗಗಳು ಮೆರೆದಾಡಲು ಪ್ರಾರಂಭವಾದವು.

ಬಡಗು ತಿಟ್ಟಿನಲ್ಲಿ ಕಾಲ್ಪನಿಕ ಪ್ರಸಂಗಗಳು ಹೆಚ್ಚು ಪ್ರಚಲಿತಕ್ಕೆ ಬಂದವು. 'ನಾಗಶ್ರೀ', 'ವಿಜಯಶ್ರೀ' 'ಚೆಲುವೆ ಚಿತ್ರಾವತಿ' ಇತ್ಯಾದಿ. ಇವು ಕಲಾವಿದರಿಗೆ ಅತಿಯಾದ ಸ್ವಾತಂತ್ರ್ಯವನ್ನು ಕೊಟ್ಟವು. ಯಾವ ರೀತಿಯಾದ ವೇಷವನ್ನು ಕೂಡ ಮಾಡಬಹುದು. ಮುಂಡಾಸು, ಬಿಟ್ಟ ಮಂಡೆ, ಕಿರೀಟ ಹೀಗೆ ಯಾವ ವೇಷವನ್ನು ಯಾವ ರೀತಿಯಿಂದಲಾದರೂ ಮಾಡಿಕೊಂಡು ಬರಬಹುದು ಎನ್ನುವ ಸ್ವಾತಂತ್ರ್ಯವನ್ನು ಕಲ್ಪಿಸಿ ಕೊಟ್ಟಿತು. ಆಧುನಿಕ ಪ್ರಸಂಗಗಳನ್ನು ಆಡುತ್ತಿರುವ ಮೇಳಗಳು ಹೆಚ್ಚು ಪ್ರಸಿದ್ಧಿಗೆ ಬಂದವು. ಸಾಂಪ್ರದಾಯಿಕ ಪುರಾಣ ಪುಣ್ಯ ಕಥೆಗಳನ್ನು ಆಧರಿಸಿ ಪ್ರದರ್ಶನವನ್ನು ಮಾಡುತ್ತಿದ್ದ ಮೇಳಗಳು ಜನರ ಆದರಣೆಗೆ ಪಾತ್ರವಾಗಲಿಲ್ಲ. ಕ್ಷೇತ್ರ ಮಹಾತ್ಮೆಯಂಥ ಪ್ರಸಂಗಗಳು ಒಂದು ಊರಿನ ಅಸ್ಮಿತೆಯ ಪ್ರಶ್ನೆಯಾಗಿ ಮೂಡಿಬರತೊಡಗಿದವು.

**ಕಾಲಮಿತಿಗೆ ಒಳಪಡುವ ಅನಿವಾರ್ಯ**

ಧರ್ಮಸ್ಥಳ ಮೇಳವು ಸುಮಾರು ಏಳು ವರ್ಷಗಳ ಹಿಂದೆ ತನ್ನ ಪ್ರದರ್ಶನವನ್ನು ಕಾಲಮಿತಿಗೆ ಒಳಪಡಿಸಿತು. ಇಡೀ ರಾತ್ರಿ ಪ್ರೇಕ್ಷಕರು ಲಭ್ಯವಿರುವುದಿಲ್ಲ ಎನ್ನುವ ಕಾರಣವನ್ನು ಮುಂದಿಟ್ಟುಕೊಂಡು ಸಂಜೆ 7ರಿಂದ ರಾತ್ರಿ ಹನ್ನೆರಡರವರೆಗೆ ಯಕ್ಷಗಾನ ಪ್ರದರ್ಶನವನ್ನು ಕಾಲಮಿತಿಗೆ ಒಳಪಡಿಸಿತು. ಡೇರೆ ಮೇಳಗಳು ಮುಖ್ಯವಾಗಿ ಟಿಕೆಟ್ ಸಂಗ್ರಹದ ಹಣವನ್ನೇ ನಂಬಿಕೊಂಡು ಕಲೆಕ್ಷನ್‌ಗೆ ಇಳಿಯುತ್ತಿದ್ದವು. ಇಂಥ ಮೇಳಗಳ

ಸಂಖ್ಯೆ ಕೆಲವೇ ವರ್ಷಗಳಲ್ಲಿ ಕುಸಿಯಿತು. ಬಡಗಿನಲ್ಲಿ ಕೇವಲ ಎರಡು ಮೇಳಗಳು ಮಾತ್ರ ಟಿಕೆಟ್ ಇಟ್ಟು ಆಟವನ್ನು ಆಡುವ ರಿಸ್ಕ್ ಅನ್ನು ತೆಗೆದುಕೊಳ್ಳುತ್ತಿವೆ.

**ಸಿನಿಮಾ ಕಥೆಗಳ ಪ್ರಭಾವ**

21ನೇ ಶತಮಾನದ ಎರಡನೆಯ ದಶಕದ ಹೊತ್ತಿನಲ್ಲಿ ಯಕ್ಷಗಾನದಲ್ಲಿ ಅತಿಯಾಗಿ ಕಾಡಿದ್ದು ಸಿನಿಮಾ ಕಥೆಗಳ ಪ್ರಭಾವ ಮುಂಗಾರು ಮಳೆ ಅಂತ ಸಿನಿಮಾಗಳ ಯಶಸ್ವಿ ಕಥೆಗಳನ್ನು ಯಕ್ಷಗಾನಕ್ಕೆ ಅಳವಡಿಸಿ ಕಾಲ್ಪನಿಕ ರಾಜ ರಾಣಿಯರ ಕಥೆಯನ್ನು ಸೃಷ್ಟಿಸಿ ಅದು ಯಕ್ಷಗಾನೋವಂತೆ ಪ್ರದರ್ಶಿಸಲಾಯಿತು. ಇಂಥ ಪ್ರದರ್ಶನಗಳಲ್ಲಿ ಅತಿರಂಜಕ ವಿಷಯಗಳು ಬಂಡವಾಳವಾಗಿರುತ್ತದೆ ಸಾಂಪ್ರದಾಯಿಕ ಕಲಾವಿದರಿಗೆ ಇಂಥ ಪ್ರಸಂಗಗಳಲ್ಲಿ ಯಾವ ಕಸುಬುದಾರಿಕೆಯೂ ಕೂಡ ಕಾಣದೆ ಹೋಯಿತು. ಇದರಿಂದ ಆದ ಪರಿಣಾಮ ಎಂದರೆ ಸಾಂಪ್ರದಾಯಿಕ ಕಲಾವಿದರು ಇಂಥ ಪ್ರದರ್ಶನಗಳಲ್ಲಿ ಆಸಕ್ತಿಯನ್ನು ಕಳೆದುಕೊಂಡರು. ಹೊಸ ಪಾತ್ರಧಾರಿಗಳು, ಬಗೆ ಬಗೆಯ ಕಲಾವಿದರು ಯಕ್ಷಗಾನ ಕ್ಷೇತ್ರದಲ್ಲಿ 21ನೇ ಶತಮಾನದಲ್ಲಿ ಕಾಣಿಸಿಕೊಂಡರು. ತಾಳಮದ್ದಲೆಯ ಕ್ಷೇತ್ರದಲ್ಲಿ ಅರ್ಥಧಾರಿಯಾಗಿ ರೂಪುಗೊಂಡವರು ವೇಷವನ್ನು ಹಾಕಿಕೊಂಡು ಕುಣಿಯದೆಯೇ ಪಾತ್ರವನ್ನು ನಿರ್ವಹಿಸುವ ಸ್ಥಿತಿಯು ಕೂಡ ರೂಪಗೊಂಡಿತು. ಹೆಣ್ಣು ಮಕ್ಕಳು ಕೂಡ ಪಾತ್ರಧಾರಿಗಳಾಗಿ ಹಿಮ್ಮೇಳದಲ್ಲಿ ಭಾಗವತರಾಗಿ ಪ್ರಮುಖ ಆಕರ್ಷಣೀಯ ಕೇಂದ್ರವಾಗಿ ಭಾಗವಹಿಸಿ ತೊಡಗಿದರು.

**ತಿಟ್ಟುಗಳ ಸಂಕರ**

ಬದಲಾದ ಕಾಲಮಾನದಲ್ಲಿ ಒಂದೇ ವೇದಿಕೆಯಲ್ಲಿ ತೆಂಕು ಬಡಗು ಹಿಮ್ಮೇಳಗಳನ್ನು ಇಟ್ಟುಕೊಂಡು ಯಕ್ಷಗಾನವನ್ನು ಪ್ರದರ್ಶಿಸುವ ಸ್ಥಿತಿ ಇಂದು ಮೂಡಿ ಬಂದಿದೆ ಉದಾಹರಣೆಗೆ ಗದಾಯುದ್ಧದಲ್ಲಿ ಭೀಮನಿಗೆ ತೆಂಕಿನ ಪದ್ಯಗಳು ಇದ್ದರೆ, ದುರ್ಯೋಧನನಿಗೆ ಬಡಗಿನ ಪದ್ಯಗಳು. ಆಯಾ ತಿಟ್ಟುಗಳ ಹಿನ್ನೆಲೆಗಳೊಂದಿಗೆ ವೇದಿಕೆಯಲ್ಲಿ ಪ್ರದರ್ಶಿತವಾಗುತ್ತಿವೆ. ಇದನ್ನು ಯಕ್ಷಗಾನ ವಿಮರ್ಶಕರು ವಿದ್ವಾಂಸರು ಸಾಕಷ್ಟು ಬಾರಿ ಖಂಡಿಸಿದ್ದು ಇದೆ. ವಿಚಿತ್ರ ಸಂಕರದ ಸೃಷ್ಟಿ ಇದು. ಅತ್ತ ಉತ್ತರವಲ್ಲ ಇತರ ದಕ್ಷಿಣವು ಅಲ್ಲ ಎನ್ನುವ ವಿಚಿತ್ರವಾದ ಮಿಶ್ರ ತಳಿ ಒಂದು ರೂಪಗೊಂಡಿದೆ ಎನ್ನುವ ವಿರೋಧದ ಮಾತುಗಳನ್ನು ಸಾಕಷ್ಟು ವಿಮರ್ಶಕರು ಎಚ್ಚರಿಸಿದ್ದು ಇದೆ. ಆದರೆ ಸುಮಾರು ಕಳೆದ ಒಂದು ದಶಕದಿಂದ ಏಕಕಾಲದಲ್ಲಿ ಒಂದೇ ವೇದಿಕೆಯಲ್ಲಿ ಉಭಯತಿಟ್ಟುಗಳ ಹಿನ್ನೆಲೆಗಳನ್ನು ಇಟ್ಟುಕೊಂಡು ವೇಷಗಳನ್ನು ರಂಗದ ಮೇಲೆ ತಂದು ಯಕ್ಷಗಾನ ಪ್ರದರ್ಶನ ಆಗುತ್ತಲೇ ಬಂದಿದೆ.

**ಖಂಡ ಪ್ರದರ್ಶನಗಳು**

ಕಳೆದ ಸುಮಾರು 15 ವರ್ಷಗಳಿಂದ ಭಾಗವತಿಕೆಯ ಕಾರ್ಯಕ್ರಮ, ಗಾನ ನಾಟ್ಯ ವೈಭವ ಇತ್ಯಾದಿಗಳು ತುಂಡು ತುಂಡಾಗಿ ಅಥವಾ ಭಾಗ ಭಾಗಗಳಾಗಿ ಪ್ರದರ್ಶನ ಕಾಣುತ್ತಿವೆ. ಗಾನ ವೈಭವಗಳಲ್ಲಿ ಭಾಗವತರು ಮುಖ್ಯರಾಗುತ್ತಾರೆ. ನಾಟ್ಯ ವೈಭವಗಳಲ್ಲಿ ಕುಣಿಯುವವರು ಪ್ರಧಾನ ರಾಗುತ್ತಾರೆ ಅವರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗುತ್ತದೆ. ಭಾಗವತಿಕೆ, ಕುಣಿತ ಚೆಂಡೆ ಮದ್ದಲೆ ನುಡಿತ ಇತ್ಯಾದಿಗಳು ಯಕ್ಷಗಾನದ ಒಂದು

ಭಾಗ ಅಷ್ಟೇ. ಆದರೆ ಇಂದು ಅವೇ ಪ್ರಧಾನವಾಗಿ ವೇದಿಕೆಗಳಲ್ಲಿ ವಿಜೃಂಭಿಸುತ್ತಿವೆ. ಒಂದು-ಎರಡು ಗಂಟೆಯ ಕಾರ್ಯಕ್ರಮಗಳಾಗಿ ಅವು ಪ್ರದರ್ಶಿತವಾಗುತ್ತಿವೆ. ಗಾನ ವೈಭವ ಕಾರ್ಯಕ್ರಮದಲ್ಲಿ ಅತಿಯಾಗಿ ರಾಗಗಳ ಬಳಕೆ ಆಗುವುದನ್ನು ನಾವು ಕಾಣುತ್ತಿದ್ದೇವೆ. ಕಲ್ಯಾಣಿ, ಹಿಂದೋಳ, ಮೋಹನ ಇಂಥರಾಗಗಳು ತಾಸು ಗಟ್ಟಲೆ ಆಲಾಪ ಇತ್ಯಾದಿಗಳಿಂದಾಗಿ ತುಂಬಿಕೊಳ್ಳುವುದನ್ನು ನಾವು ಕಾಣುತ್ತಿದ್ದೇವೆ. ಕೆಲವು ಕಡೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದೊಂದಿಗೆ ಅಥವಾ ಕೊಳಲಿನ ಹಿಮ್ಮೇಳದೊಂದಿಗೆ ಜುಗಲ್ ಬಂದಿ ಕಾರ್ಯಕ್ರಮವನ್ನು ನಡೆಸುತ್ತಾ ಬಂದಿರುವುದನ್ನು ನಾವು ಕಾಣುತ್ತಿದ್ದೇವೆ. ನಾಟ್ಯ ವೈಭವದಲ್ಲಿಯೂ ಕೂಡ ಇದೇ ರೀತಿಯ ಅನುಭವ ಉಂಟಾಗುತ್ತದೆ. ರತಿ ಮನ್ಮಥ, ಕೃಷ್ಣ ರಾಧೆ ಇಂಥ ಕೆಲವು ಪ್ರಣಯದ ಅಂಶಗಳನ್ನು ಇರಿಸಿಕೊಂಡು ತಾಸುಗಟ್ಟಲೆ ನೃತ್ಯ ವೈವಿಧ್ಯವನ್ನು ಪ್ರದರ್ಶಿಸಲಾಗುತ್ತದೆ.

**ಸಾಮಾಜಿಕ ಮಾಧ್ಯಮಗಳ ಬಳಕೆ**

ಯಕ್ಷಗಾನ ಕಲಾವಿದರು ಇಂದು ವಾಟ್ಸಾಪ್ ಗ್ರೂಪ್‌ಗಳನ್ನು ರಚಿಸಿಕೊಂಡಿದ್ದಾರೆ. ಅಕ್ಷರಸ್ಥ ಯುವ ತಲೆಮಾರು ವಾಟ್ಸಾಪ್, ಫೇಸ್ಬುಕ್, ಟ್ವಿಟರ್, ಇನ್ಸ್ಟಾಗ್ರಾಮ್ ಮೊದಲಾದವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದ್ದಾರೆ. ಕಾರ್ಯಕ್ರಮಗಳ ಕುರಿತಾದ ಜಾಹೀರಾತು ಪ್ರಚಾರ ವಿಮರ್ಶೆ ಇತ್ಯಾದಿಗಳೆಲ್ಲವೂ ಈ ತಾಂತ್ರಿಕ ವಿಷಯಗಳನ್ನು ಆಧರಿಸಿ ಹೆಚ್ಚು ಹೆಚ್ಚು ಬಳಕೆಗೆ ಬರುತ್ತಿದೆ. ಇಲ್ಲಿಯೂ ತಾಂತ್ರಿಕತೆಗೆ ಒಗ್ಗಿಕೊಳ್ಳದ ಹಿರಿಯ ಕಲಾವಿದರ ವರ್ಗ ಯುವ ತಲೆಮಾರಿನ ತಾಂತ್ರಿಕ ವೇಗದ ಮುಂದೆ ಸೋತು ಹೋಗಿರುವುದನ್ನು ಮತ್ತು ಅದೇ ಕಾರಣ ದಿಂದಾಗಿ ಮೂಲೆಗುಂಪಾಗಿರುವುದನ್ನು ನಾವು ಕಾಣಬಹುದಾಗಿದೆ. ಲಾಕ್‌ಡೌನ್ ಸಂದರ್ಭದಲ್ಲಿ ಆನ್ಲೈನ್ ಮೂಲಕ ತಾಳಮದ್ದಳೆಯಂಥವನ್ನು ಸಂಘಟಿಸಿದಾಗ ಹೆಚ್ಚಿನ ಹಿರಿಯ ಕಲಾವಿದರು ಹೊಸ ತಾಂತ್ರಿಕತೆಗೆ ಒಗ್ಗಿಕೊಳ್ಳದೇ ಹೋದರು. ಒಗ್ಗಿಕೊಂಡ ಕಲಾವಿದರು ಬಹುಬೇಗನೇ ಪ್ರಚಾರಕ್ಕೆ ಬಂದರು.

**ಸಮಾರೋಪ**

ಬದಲಾದ ಕಾಲಕ್ಕೆ ತಕ್ಕಂತೆ ಯಕ್ಷಗಾನ ಅಂದಿನಿಂದ ಬದಲಾವಣೆ ಹೊಂದುತ್ತಲೇ ಬಂದಿದೆ. ಆಧುನಿಕತೆ ಮಹಾ ನಗರಗಳನ್ನು ರೂಪಿಸುತ್ತಿದೆ. ಆ ಮಹಾನಗರದ ಒಳಗೆ ಇರುವ ಜಾನಪದ ತನ್ನ ಅಸ್ಮಿತೆಗಾಗಿ ಚಹರೆಗಳನ್ನು ಬದಲಾಯಿಸುವುದು ಅನಿವಾರ್ಯ. ಎಂ. ಪ್ರಭಾಕರ ಜೋಶಿ ಅವರು ಗುರುತಿಸುವಂತೆ 'ಮಹಾನಗರ ಬೆಳೆಯುತ್ತಿದೆ. ಮೆಗಾ ಸಿಟಿ, ಸ್ಮಾರ್ಟ್‌ಸಿಟಿ ಆಗುವ ದಾರಿಯಲ್ಲಿದೆ. ಆದರೂ ನಮ್ಮ ನಗರಗಳು ಹಳ್ಳಿಗಳೂ ಆಗಿವೆ, ಆಗಿ ಇರುತ್ತವೆ. ಎತ್ತರದ ಕಟ್ಟಡ ಸಂಕೀರ್ಣಗಳು, ದೊಡ್ಡ ಬಜಾರ್‌ಗಳು, ಕಚೇರಿಗಳ ಸತತ ಕ್ರಿಯಾಶೀಲ ಮೌನ, ಕಾರ್ಖಾನೆಗಳ ಸದ್ದು, ಪೆಟ್ರೋ ಕೆಮಿಕಲ್ ಸ್ಥಾವರಗಳಿಂದ ಹಾರುವ ಜ್ವಾಲಾ ದೀಪಗಳ ಮಧ್ಯೆ ಯಕ್ಷಗಾನದ ದೀಪಗಳ ದೊಂದಿರಾಳಗಳ ಬೆಳಕು ಚೆಂಡೆಮದ್ದಳೆ ಜಾಗಟೆಗಳ ಸದ್ದು, ಅರ್ಥಗಾರಿಕೆಯ ವರಸೆಗಳು, ಕುಣಿತಗಳ ವಿನ್ಯಾಸಗಳು ಕೇಳುತ್ತಲೇ ಇರುತ್ತವೆ. ಅವು ಮರೆಯಾಗುವುದಿಲ್ಲ, ಸತತ ರೂಪಗಳಲ್ಲಿ ಉಳಿದು ಬೆಳೆಯಲಿವೆ. ಅದೇ ಮಹಾನಗರ ಗ್ರಾಮ ಸ್ವಾರಸ್ಯ.'[5]

**ಕೊನೆ ಟಿಪ್ಪಣಿಗಳು**

1 Zygmunt Bareman, Intimations of postmodernity, page 16

2 ಎ ವಿ ನಾವಡ ಅವರು ತಮ್ಮ ಜಾಗತೀಕರಣ ಮತ್ತು ಜಾನಪದ ಲೇಖನದಲ್ಲಿ ಜಾಗತೀಕರಣಕ್ಕೆ ಎದುರಾಗಿ ಜಾನಪದವು ನೆಲ ಮೂಲದಿಂದಲೇ ಬೇರೆ ಬೇರೆ ರೂಪವನ್ನು ತಾಳಿ ತನ್ನ ಅಸ್ಮಿತೆಯನ್ನು ಕಾಪಾಡಿಕೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

3 ಸುಧೀರ್ ಕಾಕರ್ ತಮ್ಮ ಛಿಣಟಣಣಾಡಿಜ ಚಿಟಿಜ ಛಿಂಟಿಜಿಟುಛಿಣ ಕೃತಿಯಲ್ಲಿ ವೈಜ್ಞಾನಿಕ ಚಿಂತನೆಗಳು ಸಾಂಪ್ರದಾಯಿಕ ಚಿಂತಕರಲ್ಲಿ ಹೇಗೆ ಸಂಘರ್ಷವನ್ನು ಹುಟ್ಟು ಹಾಕುತ್ತವೆ ಎಂದು ವಿವರಿಸಿದ್ದಾರೆ.

4 ಅಲ್ ರಿಚ್ ಬೆಕ್ ಈತನ ಕೃತಿ Risk society: Towards a new modernity ಈ ಕೃತಿಯು ಆಧುನಿಕತೆಯು ಕೇಡನ್ನು ಮೈಮೇಲೆ ಎಳೆದುಕೊಳ್ಳುವಂತೆ ಮಾಡುತ್ತದೆ ಎಂದು ವಿವರಿಸುತ್ತದೆ.

5 ಎಂ ಪ್ರಭಾಕರ ಜೋಶಿ ಅವರು 'ಕೊರಳಾರ' ಕೃತಿಯ ಮಂಗಳೂರಿನಲ್ಲಿ ಯಕ್ಷಗಾನ ಲೇಖನದಲ್ಲಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ..

**ಗ್ರಂಥ ಋಣ**


1 ಎಂ ಪ್ರಭಾಕರ ಜೋಶಿ–ಕೊರಳಾರ, ಆಶಯ ಆಕೃತಿ ಪಬ್ಲಿಕೇಶನ್ಸ್, ಮಂಗಳೂರು 20 17

2 ಅನಿಲ್ ಕುಮಾರ್, ನಾಗರಾಜ ವೈದ್ಯ, ಸುಜಾತಾ (ಸಂ)– ನುಡಿನೂಪುರ, ಪ್ರಸಾರಂಗ, ಮಂಗಳೂರು ವಿಶ್ವವಿದ್ಯಾನಿಲಯ, 2018

3 Gandhi Leela- 2011, Post colonial Theory, Oxford University press

4 Peter Childs- 2002, Modernism, Penguin books.


❖❖❖

ಬಿಳಿಮುಗಿಲಾಡಿದೆ ಬಾನಿನ ನಡುವೆ
ಕೊಳದಲಿ ತೇಲುವ ಹಂಸೆಯ ನಾವೆ

# ಮೈಸೂರಿನ ದಿವಾನ್ ಸಿ. ರಂಗಚಾರ್ಲುರವರ ಆಡಳಿತಾತ್ಮಕ ಒಳನೋಟಗಳು

**ಡಾ. ಉಷಾದೇವಿ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೀಜು, ಕುವೆಂಪುನಗರ–570023

**ಡಾ. ಬಿ.ಸಿ. ಸುರೇಶ ; ಡಾ. ಮೋಹನ್ ಕೆ.ಎನ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು

ಮೈಸೂರನ್ನು ಆಧುನಿಕ ಕಾಲದಲ್ಲಿ ಮಾದರಿ ಸಂಸ್ಥಾನವನ್ನಾಗಿಸಲು ಅಗತ್ಯ ತಳಹದಿಯನ್ನು ಹಾಕಿದವರು ಸಿ. ರಂಗಚಾರ್ಲುರವರು. 1881ರಲ್ಲಿ ಮೈಸೂರಿನ ರಾಜ ಮನೆತನಕ್ಕೆ ಬ್ರಿಟಿಷ್ ಸರ್ಕಾರ ಅಧಿಕಾರ ಪುನರ್ ಹಸ್ತಾಂತರ ಮಾಡಿದ ನಂತರ ಪ್ರಥಮ ದಿವಾನರಾಗಿ ನೇಮಕಗೊಂಡ ಸಿ.ವಿ. ರಂಗಚಾರ್ಲುರವರು (ವಿದ್ವಾನ್ ಶೆಟ್ಟಿಪುಣ್ಯಂ ವೀರವಳ್ಳಿ ರಂಗಚಾರ್ಲು) ಒಳ್ಳೆ ದಿಟ್ಟ ಆಡಳಿತಗಾರರು ಹಾಗೂ ಸಾರ್ವಜನಿಕ ಹಣಕಾಸಿನ ವಿಚಾರದಲ್ಲಿ ಆಳವಾದ ಜ್ಞಾನವುಳ್ಳವರಾಗಿದ್ದರು. ರಂಗಚಾರ್ಲು ಪ್ರಜಾಪ್ರತಿನಿಧಿ ಸಂಸ್ಥೆಗಳಲ್ಲಿ ಅಪಾರವಾದ ನಂಬಿಕೆಯನ್ನು ಹೊಂದಿದ್ದರು. ರಂಗಚಾರ್ಲುರವರು ಅಧಿಕಾರ ವಹಿಸಿಕೊಂಡಾಗ ಸಂಸ್ಥಾನದ ಪರಿಸ್ಥಿತಿಯು ತುಂಬಾ ಶೋಚನೀಯವಾಗಿತ್ತು. ರಂಗಾಚಾರ್ಲುರವರು ದಿವಾನರಾಗಿ ಸೇವೆಸಲ್ಲಿಸಿದ ಅವಧಿಯು ಕೇವಲ 21 ತಿಂಗಳುಗಳಾದರೂ ಕೂಡ ಕೆಲವೊಂದು ಅವಿಸ್ಮರಣೀಯ ಕೆಲಸ ಮಾಡಿದರು. ಅದರಲ್ಲಿ ಅವರು ಸ್ಥಾಪಿಸಿದ ಪ್ರಜಾಪ್ರತಿನಿಧಿ ಸಭೆ, ರೈಲ್ವೆ ಯೋಜನೆಗಳು ಹಾಗೂ ಆರ್ಥಿಕ ಬೆಳವಣಿಗೆಗೆ ಕೃಷಿ, ಕೈಗಾರಿಕಾ ಕಾರ್ಯಗಳಿಗೆ ಒತ್ತು ಕೊಟ್ಟದ್ದು ಮುಖ್ಯವಾದದ್ದು.

ರಂಗಚಾರ್ಲುರವರು 1831ರಲ್ಲಿ ಮದ್ರಾಸ್ ಪ್ರಾಂತ್ಯದ ಚಗಪಾಟ್ಟು ಜಿಲ್ಲೆಯ ಶೆಟ್ಟಿಪುಣ್ಯದಲ್ಲಿ ಜನಿಸಿದರು. ರಂಗಚಾರ್ಲುರವರು ತಮ್ಮ ಆರಂಭದ ಶಿಕ್ಷಣವನ್ನು ತಮ್ಮ ಗ್ರಾಮದಲ್ಲಿಯೇ ಆರಂಭಿಸಿದರು. ವಿದ್ಯಾರ್ಥಿ ದೆಸೆಯಲ್ಲಿಯೇ ಅಪಾರವಾದ ಪ್ರತಿಭೆ ಹಾಗೂ ಬುದ್ಧಿವಂತಿಕೆ ಆಂಗ್ಲ ಅಧಿಕಾರಿಗಳು ಮೆಚ್ಚುಗೆಯನ್ನು ಸೂಚಿಸಿದ್ದರು. ಎಲ್ಲನ್‌ಸ್ಟನ್ ನಿಧಿಯ ಕಾರ್ಯಾದರ್ಶಿಯಾಗಿದ್ದ ಜಿ.ಎನ್.ವೇಲರ್‌ರವರು ರಂಗಚಾರ್ಲುರವರಲ್ಲಿದ್ದ ಅಸಾಧಾರಣ ಪ್ರತಿಭೆಯನ್ನು ಹಾಗೂ ಕಾರ್ಯದಕ್ಷತೆಯನ್ನು ಗುರುತಿಸಿ 1850ರಲ್ಲಿ ಮದ್ರಾಸ್ ಕಲ್ಕಟರ್ ಕಛೇರಿಯಲ್ಲಿ ಹುಜೂರ್ ಅಕೌಂಟೆಂಟ್ ಆಗಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡರು. ನಂತರ ಆಗಸ್ಟ್ 20, 1850ರಲ್ಲಿ ಸಹಾಯಕ ಮುನ್ಷಿಯಾಗಿ ಚೆಂಗಲ್‌ಪೆಟ್ ಜಿಲ್ಲೆಯ ಕಲ್ಯಟರೇಟ್‌ನಲ್ಲಿ ಖಾಯಂ ಆಗಿ ನೇಮಕಗೊಂಡರು. ರಂಗಚಾರ್ಲುರವರು ಸರ್ಕಾರಿ ನೌಕರಿಗೆ ಸೇರಿದಾಗ ಕೇವಲ 19 ವರ್ಷ ವಯಸ್ಸಾಗಿತ್ತು.

ಮುಂದೆ ಜಿ.ಎನ್. ಟೇಲರ್‌ರವರ ಪ್ರಯತ್ನದ ಫಲವಾಗಿ ಶಿರಸ್ತೇದಾರ್ ಆಗಿ ನೆಲ್ಲೂರಿಗೆ ನಿಯುಕ್ತರಾದರು. ಟೇಲರ್‌ರವರು ರಂಗಚಾರ್ಲುರವರ ಬಗ್ಗೆ ಸದಭಿಪ್ರಾಯವನ್ನು ಹೊಂದಿದ್ದರು. ಜಿ.ಎನ್.ಟೇಲರ್ ಇಟ್ಟ ಭರವಸೆಯನ್ನು ಇವರು

ಸುಳ್ಳಾಗಿಸಲಿಲ್ಲ. ನಂತರ ರಂಗಚಾರ್ಲುರವರು 1864ರಲ್ಲಿ ಕಲ್ಲಿಕೋಟೆಯ ಖಜಾನೆಯ ಡೆಪ್ಯೂಟಿ ಕಲೆಕ್ಟರ್ ಆಗಿ ನೇಮಕಗೊಂಡರು.

ಮೈಸೂರಿನ ಸೇವೆಗೆ ರಂಗಚಾರ್ಲುರವರು 1868ರಲ್ಲಿ ತೊಡಗಿಸಿಕೊಂಡರು. ಈ ಸಂದರ್ಭದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ನಿಧನರಾಗಿದ್ದರು. ಈ ಸಂದರ್ಭದಲ್ಲಿ ಬೌರಿಂಗ್ ಕಮಿಷನರ್ ಆಗಿ ಆಡಳಿತ ನಡೆಸುತ್ತಿದ್ದ ಕಾಲವಾಗಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ ದತ್ತು ಪುತ್ರರಾದ ಚಾಮರಾಜೇಂದ್ರ ಒಡೆಯರು ಇನ್ನು ಅಪ್ರಾಪ್ತರಾಗಿದ್ದರಿಂದ ಅವರು ಪ್ರಾಪ್ತ ವಯಸ್ಕರೊಡನೆ ಅಧಿಕಾರವನ್ನು ಪುನರ್ ಪ್ರಧಾನವನ್ನು ಬ್ರಿಟಿಷ್ ಸರ್ಕಾರ ಮಾಡಬೇಕಾಗಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ತಿಯ ವಿವರ, ಅರಮನೆಯ ಖರ್ಚುವೆಚ್ಚಗಳು, ಮಹಾರಾಜರ ಸಾಲದ ಹಾಗೂ ಆಭರಣಗಳ ವಿವರಗಳನ್ನೊಳಗೊಂಡ ತಪಶೀಲು ಪಟ್ಟಿಯನ್ನು ತಯಾರು ಮಾಡುವುದು ಹಾಗೂ ಸಾಲಗಳನ್ನು ತೀರಿಸಲು ವ್ಯವಸ್ಥೆ ಮಾಡುವ ಸಲುವಾಗಿ ಮೇಜರ್ ಇಲಿಯಟ್‌ರನ್ನು ನೇಮಿಸಲಾಯಿತು. ಇವರಿಗೆ ಸಹಾಯ ಮಾಡಲು ಆಡಳಿತದಲ್ಲಿ ಅನುಭವವುಳ್ಳ ಸ್ಥಳೀಯ ಅಧಿಕಾರಿಯ ಅವಶ್ಯಕತೆಯನ್ನು ಮನಗಂಡು ಬೌರಿಂಗ್ ಭಾರತ ಸರ್ಕಾರದ ಜೊತೆ ಪತ್ರವ್ಯವಹಾರ ನಡೆಸಿ ಟೇಲರ್‌ರವರ ಸಲಹೆಯ ಮೇರೆಗೆ ರಂಗಚಾರ್ಲುರವರನ್ನು ನೇಮಿಸಲು ಕೋರಿದರು. ಈ ಕೋರಿಕೆಯ ಅನ್ವಯ ಮೇ 23, 1868ರಲ್ಲಿ ಭಾರತ ಸರ್ಕಾರ ರಂಗಚಾರ್ಲುರವರನ್ನು ನೇಮಿಸಲಾಯಿತು. ಈ ಹಿನ್ನೆಲೆಯು ಮೈಸೂರಿನ ಸೇವೆಗೆ ರಂಗಚಾರ್ಲು ತೊಡಗಿಸಿಕೊಳ್ಳಲು ಕಾರಣವಾಯಿತು.

ರಂಗಚಾರ್ಲುರವರು ಅಧಿಕಾರ ವಹಿಸಿಕೊಂಡ ದಿನದಿಂದಲೇ ಅರಮನೆಯ ಆಡಳಿತದಲ್ಲಿದ್ದ ದೋಷ ಅವ್ಯವಹಾರಗಳು ಗೋಚರಿಸಲಾರಂಭಿಸಿತು. ಅರಮನೆಯಲ್ಲಿ ಯಾವುದೇ ರೀತಿಯ ಆರ್ಥಿಕ ಶಿಸ್ತು ಇರದೆ ಅಪಾರ ಹಾಗೂ ಅನಾವಶ್ಯಕವಾಗಿ ಸಾಲದಲ್ಲಿ ಸಿಲುಕಿತ್ತು. ಅರಮನೆಯ ಖರ್ಚುವೆಚ್ಚಗಳಿಗೆ ಯಾವುದೇ ನಿರ್ಬಂಧವಿರಲಿಲ್ಲ. ಇದರಿಂದಾಗಿ ಅಲ್ಪಾವಧಿ ಸಾಲಗಳನ್ನು ಪಡೆಯಬೇಕಾದ ಅನಿವಾರ್ಯತೆ ಅರಮನೆಗೆ ಒದಗಿತು. ಮಹಾರಾಜರ ಸಂಬಂಧಿಕರು ಆಭರಣಗಳನ್ನು ಗಿರವಿ ಇಡುತ್ತಿದ್ದರು. ಅರಮನೆಯ ಆಭರಣಗಳ ದುರ್ಬಳಕೆಯನ್ನು ತಡೆದರು.9 ಅರಮನೆ ಆಡಳಿತದ 619 ರಾಜ ಸಂಬಂಧಿಗಳಿಗೆ ರಾಜಧನವಲ್ಲದೆ 9687 ಉದ್ಯೋಗಿಗಳನ್ನು ನಿರ್ವಹಣೆ ಮಾಡಲು ಅಪಾರ ಹಣ ಖರ್ಚಾಗುತ್ತಿತ್ತು. ಪ್ರತಿ ಮಾಹೆ 78,000 ರೂಪಾಯಿಗಳು ಖರ್ಚಾಗುತ್ತಿತ್ತು. ಎಲ್ಲಾ ಉದ್ಯೋಗಿಗಳು 24 ಇಲಾಖೆಗಳಲ್ಲಿ ಹಂಚಿಕೆಯಾಗಿದ್ದರು. ಇದಲ್ಲದೆ ಮಹಾರಾಜರು ಆರಂಭಿಸಿದ್ದ ಅನಾಥಾಲಯಗಳು, ಶಾಲೆಗಳು ಹಾಗೂ ಆಸ್ಪತ್ರೆಗಳ ನಿರ್ವಹಣೆ ಮಾಡಬೇಕಾಗಿತ್ತು. ಅರಮನೆಯ ವ್ಯವಹಾರವನ್ನು ಸೂಕ್ಷ್ಮವಾಗಿ ಗಮನಿಸಿ ವಿವಿಧ ಇಲಾಖೆಗಳನ್ನು ಪುನರ್ ರಚಿಸಬೇಕಾದ ಅನಿವಾರ್ಯತೆ ಇತ್ತು. ಅರಮನೆಯ ಥಪ್ತರ್ ಇಲಾಖೆಯನ್ನು ಅರಮನೆಯ ಪತ್ರವ್ಯವಹಾರವನ್ನು ನೋಡಿಕೊಳ್ಳುತ್ತಿತ್ತು. ಈ ವೆಚ್ಚವನ್ನು ತಗ್ಗಿಸಿ ಸಂಸ್ಥಾನದ ಅಭಿವೃದ್ಧಿ ಕೆಲಸಗಳಿಗೆ ಹಣ ಬಳಸುವುದು ಇಲಿಯಟ್ ಮತ್ತು ರಂಗಚಾರ್ಲುರವರ ಉದ್ದೇಶವಾಗಿತ್ತು. ಯೋಗ್ಯರನ್ನು ಮಾತ್ರ ಸೇವೆಯಲ್ಲಿ ಉಳಿಸಿಕೊಂಡು ಉಳಿದವರೆಗೆ ಗ್ರ್ಯಾಚ್ಯುಟಿ ಮತ್ತು ವಿಶ್ರಾಂತಿ ವೇತನವನ್ನು ನೀಡಿ ಅವರನ್ನು ಸೇವೆಯಿಂದ ನಿವೃತ್ತಿಗೊಳಿಸಲಾಯಿತು. ಇದರಿಂದಾಗಿ ವೇತನ ಬಾಬ್ತು 19,260/– ರೂಪಾಯಿಗೆ ಇಳಿಯಿತು.

ರಂಗಚಾರ್ಲುರವರು 1878ರಲ್ಲಿ ಜೇಮ್ಸ್ ಗೋರ್ಡನ್ ಮಹಾರಾಜರ ಪೋಷಕರ ಹುದ್ದೆಯಿಂದ ಮುಖ್ಯ ಕಮಿಷನರ್ ಹುದ್ದೆಗೆ ನಿಯುಕ್ತರಾದ ನಂತರ ರಂಗಚಾರ್ಲುರವರ 1879ರಲ್ಲಿ ರಂಗಚಾರ್ಲು ಕಂದಾಯ ಕಾರ್ಯದರ್ಶಿಯಾಗಿ ನೇಮಕಗೊಂಡರು. ಇಬ್ಬರ ಪ್ರಯತ್ನದ ಫಲವಾಗಿ ರಾಜ್ಯದ ಋಣಭಾರ ತಗ್ಗಲಾರಂಭಿಸಿತು. 1879–80ರ ಹೊತ್ತಿಗೆ ಸಂಸ್ಥಾನದ ಆರ್ಥಿಕ ಪರಿಸ್ಥಿತಿಗೆ ಉತ್ತಮಗೊಂಡು ಹಣ ಉಳಿತಾಯವಾಗಲು ಆರಂಭಿಸಿತು. ಈ ಸಾಧನೆಗೆ ಸರ್ಕಾರ ಸಿ.ಐ.ಇ. ಪದವಿ ನೀಡಿತು. ಒಂದು ಗುಂಪು ರಂಗಚಾರ್ಲುರವರನ್ನು ಅಧಿಕಾರದಿಂದ ಕೆಳಗಿಳಿಸಲು ಪ್ರಯತ್ನಿಸಿದರು. 1868ರಲ್ಲೆ ಮೈಸೂರಿನ ಕಮಿಷನರ್ ಆಗಿದ್ದ ಬೌರಿಂಗ್‌ರವರಿಗೆ ರಂಗಚಾರ್ಲು ವಿರುದ್ಧ ದೂರು ನೀಡಿ ಅವರನ್ನು ಸೇವೆಯಿಂದ ವಜಾ ಮಾಡಲು ಕೋರಿದ್ದರು. ಈ ಯಾವ ಪ್ರತಿಭಟನೆಗಳಿಗೂ ಬೇಡಿಕೆಗಳಿಗೆ ಸೊಪ್ಪು ಹಾಕದ ಬೌರಿಂಗ್ ರಂಗಚಾರ್ಲು ಕಾರ್ಯದಕ್ಷತೆಯಿಂದ ಕೆಲಸ ಮಾಡುತ್ತಿದ್ದುದು ತೃಪ್ತಿ ತಂದಿತ್ತು. ಇದು ಅರಮನೆಯ ಕಂಟ್ರೋಲರ್ ಹುದ್ದೆಗೆ ನೇಮಕ ಮಾಡಲು ಕಾರಣವಾಯಿತು.

ಗುಂಪುಗಾರಿಕೆ ಇದ್ದ ವಾತಾವರಣದಲ್ಲಿ ಮಹಾರಾಜರಿಗೆ ಮೈಸೂರಿನಲ್ಲಿ ಶಿಕ್ಷಣ ಕೊಡುವುದು ಉಚಿತವಲ್ಲವೆಂದು ಪರಿಗಣಿಸಿ ಸಾಧ್ಯವಾದರೆ ಬೆಂಗಳೂರಿನಲ್ಲಿ ನೀಡಲು ರಂಗಚಾರ್ಲು ಹಾಗೂ ಬೌರಿಂಗ್ ತೀರ್ಮಾನಿಸಿದರು. ಇದು ಕೂಡ ಮೈಸೂರಿಗರ ಕೆಂಗಣ್ಣಿಗೆ ಗುರಿಯಾಯಿತು. ಮದ್ರಾಸಿಗರ ಗುಂಪು ಬಲವಾಗುತ್ತದೆ ಎಂದು ಭಾವಿಸಿದ ಮೈಸೂರಿನ ಗುಂಪು ತನ್ನ ಅಸ್ತಿತ್ವಕ್ಕಾಗಿ ಹೋರಾಟ ಆರಂಭಿಸಿತು. ಅರಮನೆ ಗುಂಪು ಮತ್ತು ರಿಜೆನ್ಸಿ ಕೌನ್ಸಿಲ್‌ನ ನಡುವೆ ಸಂಘರ್ಷ ಆರಂಭವಾಯಿತು. ಈ ಹಂತದಲ್ಲಿ ರಂಗಚಾರ್ಲುರವರ ವ್ಯಕ್ತಿತ್ವಕ್ಕೆ ಕಳಂಕ ತರಲು ಕೂಡ ಪ್ರಯತ್ನಿಸಿದರು. ಕಮಿಷನರುಗಳ ಆಳ್ವಿಕೆಯ ಅವಧಿಯ ಕೊನೆಯಲ್ಲಿನ ಸಂಸ್ಥಾನದ ಆರ್ಥಿಕ ಪರಿಸ್ಥಿತಿಯು ತುಂಬಾ ಶೋಚನೀಯವಾಗಿತ್ತು. ಈ ಮಧ್ಯೆ ರಂಗಚಾರ್ಲುರವರ ವಿರೋಧಿ ಗುಂಪು ಎಷ್ಟು ಕ್ರಿಯಾಶೀಲವಾಗಿತ್ತೆಂದರೆ ಹೇಗಾದರೂ ಮಾಡಿ ರಂಗಚಾರ್ಲುರವರನ್ನು ಅಧಿಕಾರದಿಂದ ಕೆಳಗಿಳಿಸಲು ಶತಾಯಗತಾಯ ಹೋರಾಟ ಆರಂಭಿಸಿದ್ದವು. ಈ ಹಿನ್ನೆಲೆಯಲ್ಲಿ ಅರಮನೆಯ ಆಭರಣದ ಕಳುವಿನ ವಿಚಾರವನ್ನು ಪ್ರಸ್ತಾಪಿಸಲಾರಂಭಿಸಿದರು. ಇದಕ್ಕೆ ಕಾರಣ ಅಧಿಕಾರದ ಹಸ್ತಾಂತರದ ನಂತರ ರಂಗಚಾರ್ಲುರವರು ದಿವಾನರಾಗುವುದು ಈ ಗುಂಪಿಗೆ ಇಷ್ಟವಿರಲಿಲ್ಲ ಈ ಪ್ರಯತ್ನಗಳು ನಡೆದರೂ ಕೂಡ ಅಂತಿಮವಾಗಿ ಬ್ರಿಟಿಷ್ ಅಧಿಕಾರಶಾಹಿ ರಂಗಚಾರ್ಲು ಪರವಾಗಿತ್ತು. ದಿವಾನರ ಹುದ್ದೆಯ ಪೈಪೋಟಿಯಲ್ಲಿದ್ದ ಹೆಸರುಗಳೆಂದರೆ, ಪಿ.ಎನ್. ಕೃಷ್ಣಮೂರ್ತಿ, ಬಿ.ಆರ್.ಎ. ತಂಬು ಶೆಟ್ಟಿ, ಕೃಷ್ಣಮೂರ್ತಿಯವರು ಮೈಸೂರಿನ ಬ್ರಾಹ್ಮಣರಾಗಿದ್ದರು. ಇವರಿಗೆ ಬ್ರಿಟಿಷ್ ಅಧಿಕಾರಶಾಹಿಯ ಬೆಂಬಲವಿರಲಿಲ್ಲ. ತಂಬುಶೆಟ್ಟಿ ಕ್ರೈಸ್ತರಾಗಿದ್ದರಿಂದ ಮೈಸೂರು ಸಂಸ್ಥಾನದ ಜನ ಒಪ್ಪುವುದಿಲ್ಲವೆಂದು ತಿಳಿದು ರಂಗಚಾರ್ಲುರವರನ್ನು ದಿವಾನ್ ಹುದ್ದೆಗೆ ನೇಮಕ ಮಾಡಲಾಯಿತು.

**ದಿವಾನರಾಗಿ ವಿದಾನ್ ಶೆಟ್ಟಿಪುಣ್ಯಂ ವೀರವಳ್ಳಿ ರಂಗಚಾರ್ಲು**

ಚಾಮರಾಜೇಂದ್ರ ಒಡೆಯರು ಅಧಿಕಾರ ವಹಿಸಿಕೊಂಡ ದಿನವೇ ರಂಗಚಾರ್ಲು ದಿವಾನರಾಗಿ ನೇಮಕಗೊಂಡರು. ಮೈಸೂರಿನ ಗುಂಪು ಈ ನೇಮಕಾತಿಯನ್ನು

ಬಲವಾಗಿ ವಿರೋಧಿಸಿದರು. ಮಹಾರಾಜರು ಮದ್ರಾಸಿನ ಗುಂಪಿನ ಪ್ರಭಾವದಿಂದ ಸುತ್ತುವರೆಯಲ್ಪಟ್ಟಿದ್ದಾರೆ ಎಂದು  ರಂಗಚಾರ್ಲುರವರ ನೇಮಕಾತಿಯನ್ನು ಖಂಡಿಸಿ ಎಕ್ಸಾಮಿನರ್ ಪತ್ರಿಕೆ ಬರೆಯಿತು.

ರಂಗಚಾರ್ಲು ದಿವಾನರಾದಾಗ ಸಂಸ್ಥಾನದ ಆರ್ಥಿಕ ಪರಿಸ್ಥಿತಿಯು ತುಂಬಾ ಪ್ರತಿಕೂಲವಾಗಿತ್ತು. ರಂಗಚಾರ್ಲುರವರು ದಿವಾನರಾಗುವುದಕ್ಕೆ ಮೊದಲೆ ಅಂದರೆ 1878 ರಿಂದ 1880 ರವರೆವಿಗೆ ರಂಗಚಾರ್ಲುರವರು ಆರ್ಥಿಕ ಸುಧಾರಣೆ ಮಾಡಿ ರಾಜ್ಯದ ಖರ್ಚು ಕಡಿಮೆ ಮಾಡಿದರು. ಆದರೆ ಹೆಚ್ಚಿನ ಹಣ ಕ್ಷಾಮದ ನಿರ್ವಹಣೆಗೆ ಬಳಕೆಯಾಯಿತು. ಬ್ರಿಟಿಷ್ ಸರ್ಕಾರದಿಂದ ಪಡೆದಿದ್ದ 80 ಲಕ್ಷ ಸಾಲಕ್ಕೆ ಪ್ರತಿವರ್ಷ 4 ಲಕ್ಷ ರೂಪಾಯಿ ಬಡ್ಡಿಯನ್ನು ಪಾವತಿಸಬೇಕಾಗಿತ್ತು. ಆಡಳಿತದ ಮಿತವ್ಯಯ ಸಾಧಿಸಲು ಎರಡು ಜಿಲ್ಲೆಗಳನ್ನು (ಹಾಸನ ಮತ್ತು ಚಿತ್ರದುರ್ಗ) 9 ತಾಲ್ಲೂಕುಗಳನ್ನು ರದ್ದುಪಡಿಸಿದರು. ಇದಲ್ಲದೆ 4 ಮುನ್ಸಿಪ್ ನ್ಯಾಯಾಲಯ ಮತ್ತು 3 ಉಪನ್ಯಾಯಾಲಯಗಳನ್ನು ರದ್ದುಪಡಿಸಿದರು. ಸಂಸ್ಥಾನದಲ್ಲಿದ್ದ 9 ಜೈಲುಗಳಲ್ಲಿ 3ಕ್ಕೆ ಇಳಿಸಿದರು. ಕೆಲವು ಜಿಲ್ಲೆ ಮತ್ತು ತಾಲ್ಲೂಕುಗಳ ಗಡಿಗಳನ್ನು ಪುನರ್ ರಚಿಸಿದ್ದರು. ಅರಣ್ಯ ಇಲಾಖೆಯಿಂದ ಕಡಿಮೆ ಆದಾಯ ಬರುತ್ತಿತ್ತು. ಇಲ್ಲಿ ಬೆಳೆಯುತ್ತಿದ್ದ ಶ್ರೀಗಂಧವನ್ನು ಪೂರ್ಣವಾಗಿ ಅರಮನೆಗೆ ಬಳಸಿಕೊಳ್ಳುವುದನ್ನು ನಿಲ್ಲಿಸಲಾಯಿತು. ಈ ಬಾಬ್ತಿನಿಂದ ಲಾಭ ಬರುವಂತೆ ನೋಡಿಕೊಂಡರು.

ಸಂಸ್ಥಾನದ ವ್ಯಾಪಾರ ಮತ್ತು ವಾಣಿಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಹಾಗೂ ಜನತೆಯ ಸುಭಿಕ್ಷೆಗೆ ಸಾರಿಗೆ ಮತ್ತು ಸಂಪರ್ಕ ಸಾಧನಗಳ ಅವಶ್ಯಕತೆಯನ್ನು ಮನಗಂಡು ರೈಲ್ವೆ ಮತ್ತು ರಸ್ತೆ ಸಾರಿಗೆಯ ವ್ಯವಸ್ಥೆಯ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿದರು. ರಾಜ್ಯದ ಖರ್ಚಿನ ಬಾಬ್ತಿನ ಹಣವನ್ನು ಉಳಿತಾಯ ಮಾಡಿ ಉಳಿಸಿದ ಹಣವನ್ನು ರೈಲ್ವೆ ಯೋಜನೆಗೆ ಬಳಸಿಕೊಳ್ಳಲು ನಿರ್ಧರಿಸಿ ಮೈಸೂರು ಬೆಂಗಳೂರಿನ ರೈಲ್ವೆ ಯೋಜನೆಯನ್ನು ಪೂರ್ಣಗೊಳಿಸಿದರು.

ಸಂಸ್ಥಾನದಲ್ಲಿ ಚಿನ್ನದ ಗಣಿಗಾರಿಕೆಯನ್ನು ಆರಂಭಿಸಲು ಆಲೋಚಿಸುತ್ತಿದ್ದ ಸಂದರ್ಭದಲ್ಲಿ ಅದು ಬ್ರಿಟಿಷ್ ಬಂಡವಾಳಗಾರರನ್ನು ಆಕರ್ಷಿಸಿತು. ಇದರಿಂದ ಗಣಿಗಾರಿಕೆಯು ನಡೆಯಲು ಆರಂಬಿಸಿತು. ಕೃಷಿಯ ಅಭಿವೃದ್ಧಿಯಾಗಬೇಕು ಕ್ಷಾಮ ಪರಿಸ್ಥಿತಿಯನ್ನು ನಿಭಾಯಿಸಲು ವೈಜ್ಞಾನಿಕ ಕೃಷಿ ಪದ್ಧತಿ ಬಳಕೆಗೆ ಬರಬೇಕು, ಸಂಸ್ಥಾನದ ಬೆಳವಣಿಗೆಗೆ ವಿಜ್ಞಾನದ ಸದ್ಬಳಕೆ ಆಗಬೇಕೆಂದು ತಿಳಿದು ಮೈಸೂರಿಗೆ ವಿದ್ಯುಚ್ಛಕ್ತಿಯನ್ನು ಪರಿಚಯಿಸಿ ಅರಮನೆಗೆ 'ಡೈನಮೋ'ದ ಮೂಲಕ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿದರು. ಯುರೋಪಿಯನ್ನರಿಗೆ ಮತ್ತು ಆಂಗ್ಲೋ ಇಂಡಿಯನ್ನರಿಗೆ 1881ರಲ್ಲಿ 4000 ಎಕರೆ ಭೂಮಿಯನ್ನು ಬೆಂಗಳೂರಿನ ಹತ್ತಿರ ಕೊಟ್ಟರು. ಇದನ್ನು ವೈಟ್ ಫೀಲ್ಡ್ ಎಂದು ಕರೆಯಲಾಗುತ್ತದೆ. ರಂಗಚಾರ್ಲುರವರ ದೂರದರ್ಶಿತ್ವ ಸಂಸ್ಥಾನದ ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಯಿತು.

ರಂಗಚಾರ್ಲುರವರ ರಾಜನೀತಿ ನಿಪುಣತೆಗೆ ಸಾಕ್ಷಿಭೂತವಾಗಿರುವುದು ಅವರು ಆರಂಭಿಸಿದ 'ಪ್ರಜಾಪ್ರತಿನಿಧಿ ಸಭೆ'. ಈ ಸಭೆ ರಂಗಚಾರ್ಲುರವರ ಹೆಸರನ್ನು ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ಉಳಿಸಿದೆ. ಮಹಾರಾಜರ ಮಂತ್ರಾಲೋಚನಾ ಸಭೆಯ ಜೊತೆಗೆ ಒಂದು ಪ್ರಜಾಪ್ರತಿನಿಧಿ ಸಭೆ ಇರಬೇಕು. ಇದರಲ್ಲಿ ಅನುಭವಸ್ಥರು,

ಪ್ರತಿಷ್ಠಿತರು, ಸಂಸ್ಥಾನದ ಪ್ರಮುಖರು ಇದ್ದು, ರಾಜ್ಯದ ಪ್ರಮುಖ ವಿಷಯಗಳನ್ನು ಚರ್ಚಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ವೇದಿಕೆ ಕಲ್ಪಿಸಬೇಕೆಂಬುದು ರಂಗಚಾರ್ಲುರವರ ಆಶಯವಾಗಿತ್ತು.

ಅಧಿಕಾರವನ್ನು ದೇಶೀಯ ಪ್ರಭುತ್ವಕ್ಕೆ ನೀಡಿದರೆ ಪ್ರಭುತ್ವವನ್ನು ಯಾವ ನಿಯಮದ ಅಡಿಯಲ್ಲಿ ಒಳಪಡಿಸಬೇಕು ಎಂಬ ವಿಷಯದ ಚರ್ಚೆ 1878–79ರಲ್ಲಿಯೇ ನಡೆದಿತ್ತು. ಮುಖ್ಯ ಕಮಿಷನರ್ ಆಗಿದ್ದ ಗೋರ್ಡನ್ ಕೂಡ 1878ರಲ್ಲಿ ಭಾರತ ಸರ್ಕಾರಕ್ಕೆ ಪತ್ರ ಬರೆದು ಈ ವಿಷಯದಲ್ಲಿ ಕೆಲವೊಂದು ಸಲಹೆಗಳನ್ನು ನೀಡಿದ್ದರು. ಗೋರ್ಡನ್ ಈ ನಿರ್ಧಾರದ ಹಿಂದೆ ರಂಗಚಾರ್ಲುರವರ ಪಾತ್ರವು ಇತ್ತು ಎನ್ನುವುದು ಸ್ಪಷ್ಟ. 1881 Instrument of Transfer ಕರಾರಿನ ನಕಲನ್ನು ಪೂರ್ವಭಾವಿಯಾಗಿ ನೋಡಿ ಪರಿಷ್ಕರಿಸಿದ್ದರು. ರಂಗಚಾರ್ಲುರವರು ಮಾರ್ಚ್ 29, 1881ರಲ್ಲಿ ರಂಗಚಾರ್ಲುರವರು ಸಂಸ್ಥಾನದ ಪ್ರಮುಖ ವ್ಯಾಪಾರಿಗಳು ಕೃಷಿಕರ ಸಭೆಯನ್ನು ಸಾರ್ವಜನಿಕ ಅಭಿಪ್ರಾಯಗಳನ್ನು ಚರ್ಚಿಸಿ ಆ ಮೂಲಕ ಅಭಿಪ್ರಾಯ ಹಂಚಿಕೊಳ್ಳಲು ಸಭೆ ಕರೆದರು. ಈ ಸಂದರ್ಭದಲ್ಲಿ ಪ್ರಜಾಪ್ರತಿನಿಧಿಸಭೆಯಂತಹ ಸಭೆಯನ್ನು ಸ್ಥಾಪಿಸುವ ನಿರ್ಣಯವನ್ನು ಕೈಗೊಂಡರು. ಆಗಸ್ಟ್ 25, 1881ರ ಒಂದು ಆದೇಶ ಹೊರಡಿಸಿ ಪ್ರಜಾಪ್ರತಿನಿಧಿ ಸಭೆಯ ಸ್ವರೂಪ ಹಾಗೂ ಕಾರ್ಯಗಳನ್ನು ತಿಳಿಸಲಾಯಿತು. ಹೊಸ ರಾಜರಿಗೆ ಗೌರವ ಸೂಚಿಸುವುದು ದರ್ಬಾರನ್ನು ಪುನರುಜ್ಜೀವನಗೊಳಿಸುವುದು ಪ್ರಜಾಪ್ರತಿನಿಧಿಸಭೆಯ ಉದ್ದೇಶವಾಗಿತ್ತು ಎನ್ನುವ ಅಭಿಪ್ರಾಯವು ಕೂಡ ಇದೆ. ಅಧಿಕಾರದ ಪುನರ್ ಹಸ್ತಾಂತರದ ನಂತರ ಆಡಳಿತಾತ್ಮಕ ಅಧಿಕಾರ ದಿವಾನರು ಮತ್ತು ಅಧೀನದಲ್ಲಿದ್ದ ಮಂತ್ರಿಮಂಡಲದ ಹಿಡಿತಕ್ಕೆ ಬಂದಿತು. ಪ್ರಜಾಪ್ರತಿನಿಧಿ ಸಭೆಯ ಮೊದಲ ಸಭೆಯು 1881ರ ಅಕ್ಟೋಬರ್ 7ರಂದು 144 ಸದಸ್ಯರನ್ನೊಳಗೊಂಡ ಸಭೆಯು ಆರಂಭವಾಯಿತು. ಈ ಸದಸ್ಯರುಗಳನ್ನು ಜಿಲ್ಲಾ ಆಡಳಿತ ಆಯ್ಕೆ ಮಾಡಿತ್ತು. ಸಂಸ್ಥಾನದ ಎಲ್ಲಾ ವ್ಯಾಪಾರಿಗಳ ಹಾಗೂ ಭೂಮಾಲೀಕರ ಪ್ರತಿನಿಧಿಗಳ ಸಭೆ ಎಂದು ಬಣ್ಣಿಸಲಾಯಿತು.

ರಂಗಚಾರ್ಲುರವರು ಆಡಳಿತದಲ್ಲಿ ಹೆಚ್ಚು ಮಗ್ನರಾಗಿದ್ದುದರಿಂದ ಅವರ ಆರೋಗ್ಯದ ತೀವ್ರತರವಾದ ಪರಿಣಾಮ ಉಂಟಾಗಿ ಆರೋಗ್ಯ ಕ್ಷೀಣಿಸಿತು. ಜನವರಿ 20, 1883ರಲ್ಲಿ ನಿಧನರಾದರು. ರಂಗಚಾರ್ಲುರವರು ನಿಧನರಾಗುವ ಮುನ್ನ ತನ್ನ ನಂತರ ದಿವಾನರ ಹುದ್ದೆಗೆ ಕೆ.ಶೇಷಾದ್ರಿ ಐಯರ್ ಸೂಕ್ತ ವ್ಯಕ್ತಿ ಎಂದು ಮಹಾರಾಜರಿಗೆ ರಹಸ್ಯವಾಗಿ ತಿಳಿಸಿದ್ದರು. ಅದರಂತೆಯೆ ಶೇಷಾದ್ರಿ ಐಯರ್‌ರವರು ನಂತರದ ದಿವಾನರಾದರು. ಒಟ್ಟಾರೆ ಇವರ ಆಡಳಿತದಲ್ಲಿ ಮೈಸೂರು ಸಂಸ್ಥಾನಕ್ಕೆ ಒಳ್ಳೆಯ ಬುನಾದಿಯನ್ನು ಹಾಕಿಕೊಟ್ಟರು.

**ಆಕರಗಳು**

1. Chandrashekar N.S. Dewan Rangacharlu, New Delhi 1968.
2. Neela Manjunath (ed). Jewels of Administration Princhy Mysore State, Bangalore 2012.
3. Parameshwaram Pillai G.: Representation men of southern India,

Manchester, 1897.
4. A Brief sketch of life of Raja Dharma Pravina TRA THUMBOO CHETTY CIE Por said 1908.
5. Venkata Subba Shastry K.N. Londn 1937.
6. Rangasway Vanaja: The story of Integration a New interpretation in the context of democratic movement in the princly State of Mysore and Travancord, New Delhi -1981.
7. ಗುಂಡಪ್ಪ ಡಿ.ವಿ. : ದಿವಾನ್ ರಂಗಚಾರ್ಲು–ಬೆಂಗಳೂರು– 1937.
8. ಸಿಂಗರಯ್ಯ : ಜಯಚಾಮರಾಜೇಂದ್ರ ಒಡೆಯರ್, ಮೈಸೂರು. 1936
9. ಡಾ. ಅಶ್ವಥನಾರಾಯಣ: ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯ ಚಳುವಳಿಯ ಒಳನೋಟಗಳು–1870–1940, ಮೈಸೂರು.

❖❖❖

ಜಂಗಮವಾಗಿದೆ ಜಗಮೊಗವಿಲ್ಲಿ
ತೋರುತ ಅಚ್ಚರಿ ನೋಡುಗರಲ್ಲಿ

# ಅ.ನ.ಕೃ. ಕಾದಂಬರಿಗಳಲ್ಲಿ ಪರಂಪರೆ–ಆಧುನಿಕತೆ ಹಾಗೂ ಪೂರ್ವ–ಪಶ್ಚಿಮ ಸಂಸ್ಕೃತಿಗಳ ಮುಖಾಮುಖಿ

**ಡಾ. ಗಿರೀಶ ದೇಸೂರ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ

ಹೊಸಗನ್ನಡ ಸಾಹಿತ್ಯದಲ್ಲಿ ಅತ್ಯಂತ ಸಮೃದ್ಧವಾದ ಸಾಹಿತ್ಯ ಸೃಷ್ಟಿಯಾಗಿರುವುದು ಕಾದಂಬರಿ ಪ್ರಕಾರದಲ್ಲಿ. ಅದರಲ್ಲಿಯೂ ಪ್ರಗತಿಶೀಲ ಲೇಖಕರು ಸಣ್ಣಕಥೆ ಮತ್ತು ಕಾದಂಬರಿಗಳನ್ನೇ ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಉಪಯೋಗಿಸಿದರು. ಪ್ರಗತಿಶೀಲ ಚಳುವಳಿಯ ನೇತಾರರಾದ, ಕಾದಂಬರಿ ಸಾರ್ವಭೌಮರೆಂದು ಪ್ರಸಿದ್ಧರಾದ ಅ.ನ. ಕೃಷ್ಣರಾಯರು ಕನ್ನಡ ಕಾದಂಬರಿ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಮೂಲ್ಯವಾದುದು. ಆಧುನಿಕ ಕನ್ನಡ ಗದ್ಯಸಾಹಿತ್ಯದ ಇತಿಹಾಸ ಬರೆಯುವಾಗ ಮರೆಯದೆ ಕಾಣಿಸಬೇಕಾದ ಹೆಸರು ಅ.ನ.ಕೃಷ್ಣರಾಯರದು. ಪ್ರಗತಿಶೀಲ ಸಾಹಿತ್ಯದ ಮುಂದಾಳಾಗಿ ಅ.ನ.ಕೃ ನಮ್ಮ ಸಾಹಿತ್ಯಕ್ಕೆ ಹೊಸದನಿಯನ್ನು ಕೊಡಿಸಿದರು. ಅ.ನ.ಕೃ. ಅವರ ಕಾದಂಬರಿಗಳು ಸಮಕಾಲೀನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗೆ ಸ್ಪಂದಿಸಿದ್ದರ ಫಲ ಎಂಬುದು ಬಹುಮುಖ್ಯ ಸಂಗತಿ.

ಕಾದಂಬರಿಗಿರುವ ಜನಪ್ರಿಯತೆಯನ್ನು ಮನಗಂಡು ಅದರ ಮೂಲಕವೇ ಅ.ನ.ಕೃ ತಮ್ಮ ವಿಚಾರ ವಿಮರ್ಶಾಪರವಾದ ಹಲವಾರು ವಿಷಯಗಳನ್ನು ಪ್ರಸ್ತಾಪಿಸುವ ಉದ್ದೇಶವಿಟ್ಟುಕೊಂಡಿದ್ದರು. ಇವರ ಕಾದಂಬರಿಗಳು ಲೋಕಪ್ರಿಯತೆಯನ್ನು ಗಳಿಸಲು ಕಾರಣ–ವಿಷಯ ವೈವಿಧ್ಯತೆ, ಮೋಹಕ ಸಂಭಾಷಣೆ, ಹೃದಯವನ್ನು ನೇರವಾಗಿ ತಟ್ಟಬಲ್ಲ ಶೈಲಿ, ನಿರಾಯಾಸವಾಗಿ ಒಂದನ್ನೊಂದು ಅನುಸರಿಸಿ ಬರುವ ಘಟನೆಗಳು, ನಮ್ಮ ಸುತ್ತ ಮುತ್ತಣ ಓಡಾಡಿಕೊಂಡಿರುವ ವ್ಯಕ್ತಿಗಳ ಚಿತ್ರಣ ಇವೆಲ್ಲದರ ಸಮ್ಮಿಶ್ರಣವೇ ಅ.ನ.ಕೃ ಕಾದಂಬರಿಗಳಲ್ಲಿ ನಾವು ಕಂಡು ಪ್ರೀತಿಸುವುದು.

**ಪರಂಪರೆ–ಆಧುನಿಕತೆ ಹಾಗೂ ಪೂರ್ವ–ಪಶ್ಚಿಮ ಸಂಸ್ಕೃತಿಗಳ ಮುಖಾಮುಖಿ**

ಅ.ನ.ಕೃ.ರವರ ಕಾದಂಬರಿಗಳಲ್ಲಿ ಹಳೆಯ ತಲೆಮಾರಿನ ಜನರ ಆದರ್ಶಗಳು, ಸತ್ಯ–ಧರ್ಮ–ನೀತಿಯನ್ನಾಧರಿಸಿದ ಶಾಂತಿ ಸಮಾಧಾನಗಳ ಸಂಸ್ಕೃತಿ ಸಂಪನ್ನ ಬದುಕು, ಹಾಗೆಯೇ ಆಧುನಿಕ ತಲೆಮಾರಿನ ವಿದ್ಯಾವಂತ ಯುವಜನತೆಯ ಆಶೋತ್ತರಗಳು, ಅವರವೇ ಆದ ಸಾಮಾಜಿಕ ಸಮಸ್ಯೆಗಳು, ಸಂಘರ್ಷಗಳು, ನೀತಿರಹಿತ ಬದುಕು ಮತ್ತು ಅದರ ಫಲವಾದ ಸಾಂಸ್ಕೃತಿಕ ಪತನಗಳು ಚಿತ್ರಿಸಲ್ಪಟ್ಟಿವೆ. ಪರಂಪರೆ ಮತ್ತು ಆಧುನಿಕತೆಗಳ ಮುಖಾಮುಖಿಯನ್ನು ಅವರ ಅನೇಕ ಕಾದಂಬರಿಗಳಲ್ಲಿ ಕಾಣಬಹುದು. ಅಲ್ಲದೇ ಸಾಮಾಜಿಕ ಬದುಕಿನ ವ್ಯಕ್ತಿವಾದ ಹಾಗೂ ಸಮಷ್ಠಿವಾದಗಳು ಅವರ ಕಾದಂಬರಿಗಳಲ್ಲಿ ಚರ್ಚೆಗೆ ಬರುತ್ತವೆ. ಬಂಡವಾಳಶಾಹಿವಾದ, ಕಮ್ಯುನಿಜಂ, ಸಮಾಜವಾದಗಳ ಕುರಿತು ಅ.ನ.ಕೃ ತಮ್ಮ ಕಾದಂಬರಿಗಳಲ್ಲಿ ಚರ್ಚಿಸುತ್ತಾರೆ. ಸಮೃದ್ಧ ಬದುಕು ಕಟ್ಟಿಕೊಡುವ ಸುಖ–ಸಂತೋಷ–ನೆಮ್ಮದಿ; ಸಂಕೀರ್ಣ ಬದುಕು

ಹುಟ್ಟುಹಾಕಿದ ಸಮಸ್ಯೆಗಳು ಮತ್ತು ಅವು ತಂದೊಡ್ಡಿದ ಚಿಂತೆಗಳು, ನೋವುಗಳು– ಇವೂ ಸಹ ಅ.ನ.ಕೃ.ರವರ ಕಾದಂಬರಿಗಳಲ್ಲಿ ಎಡೆಪಡೆಯುತ್ತವೆ. ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ಕಾಲದಲ್ಲಾದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಪಲ್ಲಟಗಳು ಅ.ನ.ಕೃ. ಅವರಿಗೆ ಮುಖ್ಯವಾಗುತ್ತವೆ. ಹೀಗೆ ಅ.ನ.ಕೃ. ತಮ್ಮ ಕಾದಂಬರಿಗಳಲ್ಲಿ ವಿಶಾಲವಾದ ಅನುಭವ ಲೋಕವೊಂದನ್ನು ಸೃಷ್ಟಿಸುತ್ತಾರೆ.

ಸಾಂಪ್ರದಾಯಿಕ ಮೌಲ್ಯಗಳ ಮೇಲೆ ನಿಂತ ಸಾವಯವ ಸಮಾಜ ಮತ್ತು ಆಧುನಿಕ ಒತ್ತಡಗಳಿಂದ ಅದರ ವಿಘಟನೆ, ಸಂಪ್ರದಾಯ ಮತ್ತು ಆಧುನಿಕತೆಗಳ ಹೋರಾಟಗಳಲ್ಲಿ ಸಿಕ್ಕು ಬದಲಾಗುತ್ತಿರುವ ಸಮಾಜದ ಚಿತ್ರಣವನ್ನು ಅ.ನ.ಕೃ. ತಮ್ಮ ಕಾದಂಬರಿಗಳಲ್ಲಿ ಕಾಣಿಸುತ್ತಾರೆ. ಪರಂಪರೆ ಮತ್ತು ಆಧುನಿಕತೆಗಳಿಗೆ ಮುಖಾಮುಖಿಯಾಗುವ ಅ.ನ.ಕೃ. ಅವರ ನಿಲವುಗಳನ್ನು ಡಾ.ಎಸ್. ವಿದ್ಯಾಶಂಕರ ಅವರು ಹೀಗೆ ಗುರುತಿಸುತ್ತಾರೆ. "ಅ.ನ. ಕೃ. ಆರ್ಷೇಯ ಸಂಸ್ಕೃತಿಯಲ್ಲಿ ವಿಶ್ವಾಸವುಳ್ಳವರು. ಆ ಸಂಸ್ಕೃತಿಯನ್ನು ಪ್ರತಿನಿಧಿಸುವ ಪಾತ್ರಗಳು ಅವರ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಬರುತ್ತವೆ. ಆರ್ಷೇಯ ಸಂಸ್ಕೃತಿಯಲ್ಲಿ ವಿಶ್ವಾಸವಿದ್ದರೂ ಅವರ ಆಧುನಿಕ ಚಿಂತನೆ ಕಣ್ಣುಮುಚ್ಚಿ ಪ್ರತಿಪಾದಿಸ ಹೊರಡುವುದಿಲ್ಲ. ಅವರೇ ಹುಟ್ಟು ಹಾಕಿದ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಧೋರಣೆಗಳು ಸಂಪ್ರದಾಯವಾದಿಗಳನ್ನು ಕೆರಳಿಸಿದ್ದವು. ಅಷ್ಟರಮಟ್ಟಿಗೆ ಅವರ ನಿಲುವುಗಳು ಪ್ರಗತಿಪರವಾಗಿದ್ದವು. ಈ ದ್ವಿಮುಖ ಧೋರಣೆ ಅ.ನ.ಕೃ.ರವರ ವ್ಯಕ್ತಿತ್ವದ ಪ್ರಮುಖ ಆಕರ್ಷಣೆ. ಆದರೆ, ಅದು ಮುಖವಾಡತನದ್ದಲ್ಲ. ಆಷಾಢಭೂತಿತನದ್ದಲ್ಲ; ಅಂತರಂಗದ ನಿಜದ ದನಿ"

ಆಧುನಿಕತೆಯ ಪ್ರಭಾವಕ್ಕೆ ಸಿಕ್ಕ ಭಾರತೀಯ ಸಮಾಜದಲ್ಲಿ ಪಾರಂಪರಿಕ ಕೌಟುಂಬಿಕ ಮೌಲ್ಯಗಳು ನಾಶವಾಗುತ್ತಿವೆಯೆಂದು ಅ.ನ.ಕೃ ಭಾವಿಸಿದ್ದರು. ಅವರ ಬಹುಪಾಲು ಕಾದಂಬರಿಗಳಲ್ಲಿ ಪಾರಂಪರಿಕ ಮೌಲ್ಯಗಳಲ್ಲಿ ಶ್ರದ್ಧೆಯಿರುವ ಜೀವನಚಿತ್ರವನ್ನು ಕಾಣುತ್ತೇವೆ. ಈ ಚಿತ್ರ ಸಹಜವಾಗಿಯೇ ಗ್ರಾಮೀಣ ಪರಿಸರದ್ದು. 'ಸಂಧ್ಯಾರಾಗ'ದ ಮೀನಾಕ್ಷಮ್ಮ ಒಂದುರೀತಿ ಈ ಬಗೆಯ ಪ್ರಾತಿನಿಧಿಕ ಪಾತ್ರ. ಮನೆ ಮಕ್ಕಳನ್ನು ಮಾತ್ರವಲ್ಲ, ಹೊರಗಿನಿಂದ ಬಂದ ವೆಂಕಟೇಶನನ್ನೂ ಈ ಕುಟುಂಬ ಆದರಿಸುವ ಕ್ರಮ ಆ ಪರಿಸರಕ್ಕೇ ಇರುವ ಸಾತ್ವಿಕ ಶಕ್ತಿಯನ್ನು ಸೂಚಿಸುತ್ತದೆ. ಈ ಪರಿಸರಕ್ಕೆ ಪರಕೀಯನಾಗುವಂಥವನು ರಾಮಚಂದ್ರ. "ಭಾರತದರ್ಶನ, ಸಂಸ್ಕೃತಿ ಗತಕಾಲದ ಅವಶೇಷವಲ್ಲ. ಅದು ಇಂದಿಗೂ ಬೆಳೆಯುತ್ತಿರುವ ಜೀವಂತ ಶಕ್ತಿ, ........ ನಮ್ಮ ಸಂಸ್ಕತಿಯ ವೈಶಿಷ್ಟ್ಯ ಪರದೇಶಗಳ ಕೃತಕ ನಾಗರಿಕತೆಯ ಪ್ರಭಾವಕ್ಕೆ ಸಿಕ್ಕಿ ನಾಮಾವಶೇಷವಾಗುತ್ತಿರುವಾಗ ಇಂಥ ಪ್ರಯತ್ನಗಳು ಅಚ್ಚ ಭಾರತೀಯರಾಗಬೇಕೆಂಬ ಉತ್ಕಟೇಚ್ಛೆಯೇ ನನ್ನ ಕೃತಿಗಳ ಜೀವಸ್ವರ" ಎಂದು 'ಅನುಗ್ರಹ' ಕಾದಂಬರಿಯ ಮುನ್ನುಡಿಯಲ್ಲಿ ಅ.ನ.ಕೃ. ಹೇಳುತ್ತಾರೆ. ಇದೊಂದು ರೀತಿ ವಸಾಹತುಶಾಹಿಗೆ ಅ.ನ.ಕೃ. ಪ್ರತಿಕ್ರಿಯಿಸಿದ ರೀತಿಯೂ ಹೌದು.

ಪರಂಪರೆ ಮತ್ತು ಆಧುನಿಕತೆಗಳ ಮುಖಾಮುಖಿಯನ್ನು 'ಗೃಹಲಕ್ಷ್ಮಿ' ಕಾದಂಬರಿಯಲ್ಲಿ ಕಾಣುತ್ತೇವೆ. ಋಜುತ್ವ, ಪ್ರಾಮಾಣಿಕತೆ, ಸಹಬಾಳ್ವೆ – ಇವು ಕಳೆದ ತಲೆಮಾರಿನ ಜನತೆಯು ಗೌರವಿಸಿದ ಮೌಲ್ಯಗಳು. ಅದು ಸಮೃದ್ಧಿಯ, ನೆಮ್ಮದಿಯ ನಡುವೆ ಜನತೆ ಬದುಕಿದ್ದ ಕಾಲ. "ರೂಪಾಯಿಗೆ ಹತ್ತು ಸೇರುಅಕ್ಕಿ, ...ಆರು

ರೂಪಾಯಿಗೆ ಒಂದು ಖಂಡುಗ ಭತ್ತ, ದಿವಸಕ್ಕೆ ಅರ್ಧಾಣೆ, ಒಂದಾಣೆಖರ್ಚು ಮಾಡಿದರೆ ಮನೆಮಂದಿಗಾಗುವಷ್ಟು ತರಕಾರಿ ಸಿಗುತ್ತಿದ್ದ ಕಾಲ." ಎರಡು ತಲೆಮಾರಿನ ನಡುವಿನ ಸಂಘರ್ಷವನ್ನು ಲಕ್ಷ್ಯದಲ್ಲಿಟ್ಟುಕೊಂಡು "ವೈಜ್ಞಾನಿಕ ಮನೋಭಾವ ನಮ್ಮನ್ನೆಲ್ಲಿಗೆ ಕರೆದೊಯ್ಯುತ್ತಿದೆ? ಇದರಿಂದ ನಮ್ಮ ವ್ಯಕ್ತಿತ್ವ ವಿಕಾಸವಾಗುತ್ತಿದೆಯೇ?..... ಪ್ರಾಚೀನ ಪರಂಪರೆಯನ್ನು ತಿರಸ್ಕರಿಸಲು ಸಿದ್ಧವಾಗುತ್ತಿರುವ ನಾವು ಅದರ ಸ್ಥಾನದಲ್ಲಿ ಯಾವುದನ್ನು ಪ್ರತಿಷ್ಠಾಪಿಸಲು ಸಿದ್ಧರಾಗಿದ್ದೇವೆ– ಅಮೇರಿಕಾದ ಡಾಲರಿಸಮ್ಮೋ (Dollarism)– ರಷ್ಯಾದ ಕಮ್ಯುನಿಸಮ್ಮೋ! ...ಪರಂಪರೆ ಅಜ್ಞಾನ ಪೋಷಕವಾದಲ್ಲಿ ಅದನ್ನು ನಿರಾಕರಿಸಬೇಕು. ಅರ್ವಾಚೀನತತ್ವ ಸಮುದಾಯಅಜ್ಞಾನ, ಅಶಾಂತಿ, ಅನೈಕ್ಯ, ಪೋಷಕವಾದಲ್ಲಿ ಅದನ್ನೂ ನಿರಾಕರಿಸಬೇಕು. ಪ್ರಾಚೀನ, ಅರ್ವಾಚೀನಗಳೆರಡನ್ನೂ ನಿರಾಕರಿಸಿದ ಮಾನವನ ಗತ್ಯಂತರವೇನು?" ಎಂದು ಪ್ರಶ್ನಿಸಿ "ಈ ಸಮಸ್ಯೆಯನ್ನೆದುರಿಸಲು ಗೃಹಲಕ್ಷ್ಮಿಯಲ್ಲಿ ನಾನು ಪ್ರಯತ್ನಿಸಿದ್ದೇನೆ." ಎಂದು ಹೇಳುತ್ತಾರೆ. ಅ.ನ.ಕೃ. ಪರಂಪರೆ ಮತ್ತು ಆಧುನಿಕತೆಗಳನ್ನು ಸಂಘರ್ಷಾತ್ಮಕ ನೆಲೆಯಲ್ಲಿ ನೋಡದೆ, ಎರಡರಲ್ಲಿಯೂ ಉತ್ತಮವಾದದ್ದನ್ನು ಸ್ವೀಕರಿಸುವ ಸಾಮರಸ್ಯದ ನೆಲೆಗೆ ಪ್ರಾಧಾನ್ಯ ನೀಡುತ್ತಾರೆ.

ಅಲ್ಲದೆ ಅ.ನ.ಕೃ. ತಾವು ಒಪ್ಪದೇ ಇರುವ ಮೂಢಭಕ್ತಿಯಲ್ಲಿ ಶ್ರದ್ಧೆಯನ್ನಿಟ್ಟ ಗೋದಮ್ಮ, ರಾಮಣ್ಣಾಚಾರ್ಯರ ಪಾತ್ರಗಳನ್ನು ಗೌರವಿಸುತ್ತಾರಾದರೂ ಆಧುನಿಕ ವಿಚಾರ ಪರಂಪರೆಗೆ ಅವರ ಮೂಢಭಕ್ತಿ ಒಗ್ಗುವುದಿಲ್ಲ ಎಂದು ಹೇಳಿ ಅದನ್ನು ತಾವು ಅನುಸರಿಸಲು, ಅನುಕರಿಸಲು ಬಯಸುವುದಿಲ್ಲ ಎನ್ನುತ್ತಾರೆ. ಆದರೆ ಜೀವನದಲ್ಲಿ ವೈವಿಧ್ಯವಿದೆ. ಎಲ್ಲರೂ ತಮತಮಗೆ ಸರಿಕಂಡ ಧ್ಯೇಯದಲ್ಲಿ ನಂಬಿಕೆ ಇಟ್ಟಿರುತ್ತಾರೆ. ಈ ವೈವಿಧ್ಯವನ್ನು ಗೌರವಿಸಬೇಕು ಮತ್ತು ಸಹನೆ ಇರಬೇಕು ಎಂದು ಹೇಳುತ್ತಾ, ಸಹನೆ ಸಹೃದಯತೆಗಳೇ ಸಂಸ್ಕೃತಿಯ ಸಂಕೇತಗಳೆಂದು ನಾವು ಒಪ್ಪಬೇಕು ಎನ್ನುತ್ತಾರೆ.

'ಪರಂಪರೆ' ಮತ್ತು 'ಪ್ರಗತಿ' ಎನ್ನುವ ಅವಳಿ ಪದಗಳು ನಮ್ಮ ಸಾಮಾಜಿಕ ಬದುಕಿನಲ್ಲಿ ಅವಿಭಾಜ್ಯ ಭಾಗಗಳಾಗಿ ಸೇರಿಹೋಗಿವೆ. ಅ.ನ.ಕೃ.ರವರು ಅವುಗಳ ಅವಿನಾಭಾವ ಸಂಬಂಧವನ್ನು ತಮ್ಮ 'ಗೃಹಲಕ್ಷ್ಮಿ' ಕಾದಂಬರಿಯಲ್ಲಿ ಎತ್ತಿಹಿಡಿದಿದ್ದಾರೆ. ಅವರು ಅಭಿಪ್ರಾಯಪಡುವಂತೆ "ಪರಂಪರಾಗತ ಅನುಭವವೇ ಪ್ರಗತಿಯ ಆಧಾರಸ್ತಂಭ. ಪರಂಪರೆಯನ್ನು ಪೂರ್ಣವಾಗಿ ದುರ್ಲಕ್ಷಿಸಿ, ಪ್ರಾಗತಿಕವಾದ ನೂತನ ಮಾರ್ಗ ಆವಿಷ್ಕಾರ ಮಾಡುತ್ತೇವೆಂದು ಹೇಳುವವರು ನಮ್ಮ ನಾಡಿನ ಪರಂಪರೆಯನ್ನು ನಿರಾಕರಿಸಿ, ಪರನಾಡುಗಳ ಪರಂಪರೆಗೆ ತೆಕ್ಕೆ ಬೀಳುತ್ತಾರೆ. 'ಗೃಹಲಕ್ಷ್ಮಿ' ಭಾರತ ಪರಂಪರೆಯನ್ನು ನೆನಪಿಸಿಕೊಡುವುದಲ್ಲದೆ, ಆ ಪರಂಪರೆಯ ಉತ್ತಮಾಂಶಗಳು ಸರ್ವಕಾಲೀನವಾದವೆಂಬುವುದನ್ನು ಸಮರ್ಥಿಸುತ್ತದೆ." ಎಂದು ಹೇಳುತ್ತಾರೆ.

ಪಾಶ್ಚಾತ್ಯ ಮತ್ತು ಭಾರತೀಯ, ಆರ್ಷೇಯ ಮತ್ತು ಆಧುನಿಕತೆಗಳನ್ನು ಮುಖಾಮುಖಿಯಾಗಿಸುವ ಅ.ನ.ಕೃ. ಅವುಗಳಲ್ಲಿ ಆರ್ಷೇಯ ಭಾರತೀಯ ಸಂಸ್ಕೃತಿಯ ಪರವಾಗಿ ನಿಲ್ಲುತ್ತಾರೆ. 'ರುಕ್ಮಿಣಿ' ಕಾದಂಬರಿಯಲ್ಲಿ ಲೀಲಾವತಿ ಆಧುನಿಕತೆಯ ಪ್ರತಿನಿಧಿಯಾದರೆ, ಕಮಲಾ ಆರ್ಷೇಯ ಭಾರತೀಯ ಸಂಸ್ಕೃತಿಯ ಪ್ರತಿನಿಧಿಯಾಗಿ ನಿಲ್ಲುವಳು.

ಅ.ನ.ಕೃ. ತಮ್ಮ 'ಕಣ್ಣಿನಗೊಂಬೆ' ಕಾದಂಬರಿಯ ಮುನ್ನುಡಿಯಲ್ಲಿ 'ನನ್ನ ಎಲ್ಲ ಕೃತಿಗಳ ಜೀವಸ್ವರ ವಿಶ್ವಕುಟುಂಬ ಭಾವನೆ' ಎಂದು ಹೇಳಿಕೊಂಡಿದ್ದಾರೆ.

ಪರಧರ್ಮ–ಪರಸಂಸ್ಕೃತಿಯನ್ನು ಅಲ್ಲಗಳೆಯುವುದು ಎಷ್ಟು ಕೆಟ್ಟದ್ದೋ, ಅಷ್ಟೇ ಕೆಟ್ಟದ್ದು ಪರಸಂಸ್ಕೃತಿಯನ್ನು ಕಣ್ಣು ಮುಚ್ಚಿ ಅನುಕರಿಸುವುದು ಎನ್ನುತ್ತಾರೆ. ವಿಶ್ವಮಾನವನ ಅವತಾರವಾಗಲು ಹಾದಿ ಹಸನುಗೊಳಿಸುವ ಹೆಚ್ಚಿನ ಜವಾಬ್ದಾರಿ ಸ್ವತಂತ್ರ ಭಾರತದ ಪ್ರಜೆಗಳಾದ ನಮ್ಮ ಮೇಲೆ ಬಿದ್ದಿದೆ ಎಂದು ಹೇಳುವ ಅ.ನ.ಕೃ. ವಿಶ್ವಮಾನವ ಪ್ರಜ್ಞೆಯನ್ನು ರೂಢಿಸಿಕೊಳ್ಳಬೇಕಾದರೆ ಪಾಶ್ಚಾತ್ಯಲೋಕದಲ್ಲಿಯೂ ಋಜುಜೀವನ, ಆಧ್ಯಾತ್ಮ, ಮಾನವತೆ ಬೆಳೆದಿದೆಯೆನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಪ್ರಾಚ್ಯ ಪಾಶ್ಚಾತ್ಯ ಸಂಸ್ಕೃತಿಗಳ ಆದ್ಯತತ್ವಗಳನ್ನು ಸಮನ್ವಯದೃಷ್ಟಿಯಿಂದಲೇ ನಾವು ನೋಡಬೇಕು ಎಂಬುದು ಅ.ನ.ಕೃ.ರವರ ವಾದ. "ವಿಶ್ವಬಾಂಧವ್ಯದ ಕುಣಿಕೆ ಬೆಸೆಯಲು ಪೂರ್ವ–ಪಶ್ಚಿಮಗಳ ಸಂಸ್ಕೃತಿಗಳ ಆದ್ಯ ತತ್ವಗಳನ್ನು ಸಮನ್ವಯ ದೃಷ್ಟಿಯಿಂದ ನೋಡುವ ಅಗತ್ಯವಿದೆ. ರುಕ್ಮಿಣಿ, ಗೋದಮ್ಮ, ಕಮಲಾ, ವೆಂಕಟರಾಯರು, ಮೊದಲಾದವರು ಒಂದು ಸಂಸ್ಕೃತಿಗೆ ಸೇರಿದವರು. ಪ್ರೊ.ಡ್ರೂ, ನೀನಾ, ಪೀಟರ್‌ಬೇರೊಂದು ಸಂಸ್ಕೃತಿಗೆ ಸೇರಿದವರು. ಪೂರ್ವ–ಪಶ್ಚಿಮಗಳು ಎಂದೂ ಒಂದಾಗಲೂ ಸಾಧ್ಯವಿಲ್ಲ ಎಂಬ ಮಾತನ್ನು ಹುಸಿಗೊಳಿಸಿದವರು ಡಾ.ಚಂದ್ರಶೇಖರ ಹಾಗೂ ನಾರಾಯಣಸ್ವಾಮಿ. ಎರಡೂ ಪರಂಪರೆಗಳನ್ನು ಒಗ್ಗೂಡಿಸಲು ಕೊಂಡಿಯಾಗಿ ವ್ಯವಹರಿಸಿದವರು." ಎಂದು ಹೇಳುವ ಅ.ನ.ಕೃ ತಾಯಿಮಕ್ಕಳು ಕಾದಂಬರಿಯಲ್ಲಿ ಪೂರ್ವ–ಪಶ್ಚಿಮ ಸಂಸ್ಕೃತಿಗಳಲ್ಲಿರುವ ಒಳ್ಳೆಯದನ್ನು ಎತ್ತಿ ತೋರಿಸಿ ಅದರಂತೆ ನಡೆದರೆ ಬಾಳು ಉತ್ತಮಗೊಳ್ಳುತ್ತದೆ ಎನ್ನುತ್ತಾರೆ.

ಮಾನವನ ಉದಾತ್ತತೆ–ಕ್ಷುದ್ರತೆಗಳ ಚಿತ್ರಣ, ಪತಿತಲೋಕದ ಬಗೆಗಿನ ಅನುಕಂಪ, ಒಂದು ಹಂತದ ಆದರ್ಶದ ಆರಾಧನೆ, ಉದಾತ್ತ ಸಂಸ್ಕೃತಿಯನ್ನು ಹುಟ್ಟುಹಾಕುವ ಪ್ರಯತ್ನ, ನಮ್ಮ ಭವ್ಯ ಪರಂಪರೆ–ಆಚಾರ–ವಿಚಾರಗಳ ಬಗೆಗಿನ ಮೆಚ್ಚುಗೆ ಹಾಗೂ ಅವುಗಳನ್ನು ಪ್ರಸ್ತುತಗೊಳಿಸುವಲ್ಲಿ ಅ.ನ.ಕೃ.ರವರ ಆರೋಗ್ಯಪೂರ್ಣ ಮನಸ್ಸಿನ ಉತ್ಸಾಹ ಅವರ ಕಾದಂಬರಿಗಳಲ್ಲಿ ವ್ಯಾಪಕವಾಗಿ ಅಭಿವ್ಯಕ್ತಿ ಪಡೆದುಕೊಂಡಿದೆ.

ವಸಾಹತುಶಾಹಿಗೆ ತಮ್ಮ ಕಾದಂಬರಿಗಳ ಮೂಲಕ ಪ್ರತಿಕ್ರಿಯಿಸಿದ ಅ.ನ.ಕೃ. ರವರು ನಮ್ಮ ಸಂಸ್ಕೃತಿಯ ವೈಶಿಷ್ಟ್ಯ ಪರದೇಶಗಳ ಕೃತಕ ನಾಗರೀಕತೆಯ ಪ್ರಭಾವಕ್ಕೆ ಸಿಕ್ಕಿ ನಾಮಾವಶೇಷವಾಗದಂತೆ ತಡೆಗಟ್ಟುವ ಪ್ರಯತ್ನಗಳು ಹೆಚ್ಚಾಗಬೇಕೆಂದು ಅಭಿಪ್ರಾಯಪಡುತ್ತಾರೆ.

ಒಟ್ಟಾರೆಯಾಗಿ ನಮ್ಮ ಪ್ರಾಚೀನರ ಕೊಡುಗೆಯ ತಳಹದಿಯ ಮೇಲೆ ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ನಮ್ಮ ವರ್ತಮಾನವು ಭೃಂಗದ ಬೆನ್ನೇರಿ ಬರಬೇಕು ಎನ್ನುವ ಅ.ನ.ಕೃ. ಪಡೆದುದನ್ನು ಮುಕ್ಕಾಗದಂತೆ ಕಾಯ್ದಿಟ್ಟು ನಾಳಿನ ಜನಾಂಗಕ್ಕೆ ಜತನವಾಗಿಡಬೇಕು ಎಂಬ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಅವಿಚ್ಛಿನ್ನವಾಗಿ ಹಳತು–ಹೊಸದರ ಹಾಗೂ ಪೂರ್ವ–ಪಶ್ಚಿಮಗಳ ಸಂಗಮವನ್ನು ನವಿರಾಗಿಸಿ ಸಂದೇಶವನ್ನು ರವಾನಿಸಬೇಕಾದುದು ಸಾಂಸ್ಕೃತಿಕ ಕಾಳಜಿ ಇರುವವರ ಲಕ್ಷಣ, ಕರ್ತವ್ಯ ಎನ್ನುವ ಅ.ನ.ಕೃರವರು ಈ ಕರ್ತವ್ಯವನ್ನು ತಕ್ಕಮಟ್ಟಿಗಾದರೂ ತಮ್ಮ ಕಾದಂಬರಿಗಳ ಮೂಲಕ ಮಾಡಿದ್ದಾರೆ ಎಂದು ಹೇಳಬಹುದು.

**ಕೊನೆ ಟಿಪ್ಪಣಿಗಳು**

- ವಿದ್ಯಾಶಂಕರ, ಎಸ್ : ಅ.ನ.ಕೃ ಬದುಕು–ಬರಹ , ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು, 2010, ಪು–103
- ಕೃಷ್ಣರಾಯರು, ಅ.ನ. : ಅನುಗ್ರಹ, ಸಾಗರ್ ಪ್ರಕಾಶನ, ಬೆಂಗಳೂರು, 2006, ಮುನ್ನುಡಿ
- ಕೃಷ್ಣರಾಯರು, ಅ.ನ. : ಗೃಹಲಕ್ಷ್ಮೀ, ಸಾಗರ್ ಪ್ರಕಾಶನ, ಬೆಂಗಳೂರು, 2006, ಪು–110
- ಕೃಷ್ಣರಾಯರು, ಅ.ನ. : ಗೃಹಲಕ್ಷ್ಮೀ, ಸಾಗರ್ ಪ್ರಕಾಶನ, ಬೆಂಗಳೂರು, 2006,, ಮುನ್ನುಡಿ
- ಕೃಷ್ಣರಾಯರು, ಅ.ನ. : ಗೃಹಲಕ್ಷ್ಮೀ, ಸಾಗರ್ ಪ್ರಕಾಶನ, ಬೆಂಗಳೂರು, 2006, ಮುನ್ನುಡಿ
- ಕೃಷ್ಣರಾಯರು, ಅ.ನ. : ತಾಯಿಮಕ್ಕಳು,ಸಾಗರ್ ಪ್ರಕಾಶನ, ಬೆಂಗಳೂರು,2006, ಮುನ್ನುಡಿ

**ಪರಾಮರ್ಶನ ಗ್ರಂಥಗಳು**


1) ಆಮೂರ್ ಜಿ.ಎಸ್. : ಅ.ನ.ಕೃಷ್ಣರಾಯರು, ಸಾಹಿತ್ಯ ಅಕಾಡೆಮಿ, ನವದೆಹಲಿ, 1987
2) ಕೃಷ್ಣರಾಯರು, ಶಾ.ಮಂ.(ಸಂ): ಅಮರಚೇತನ, ಹೇಮಂತ ಸಾಹಿತ್ಯ ಬೆಂಗಳೂರು, 2008
3) ಕೃಷ್ಣರಾಯರು, ಶಾ.ಮಂ.(ಸಂ) : ಚಿರಚೇತನ, ವಿಶ್ವಭಾರತಿ ಪ್ರಕಾಶನ, ಮಡಗಾಂವ, 1972
4) ಕೃಷ್ಣರಾಯರು, ಶಾ.ಮಂ.(ಸಂ) : ರಸಚೇತನ, ಹೇಮಂತ ಸಾಹಿತ್ಯ ಬೆಂಗಳೂರು, 2007
5) ನರಹಳ್ಳಿ, ಬಾಲಸುಬ್ರಹ್ಮಣ್ಯ : ಅ.ನ.ಕೃ. ಮತ್ತು ಕನ್ನಡ ಸಂಸ್ಕೃತಿ, ಅಂಕಿತ ಪುಸ್ತಕ ಬೆಂಗಳೂರು, 2006


❖❖❖

ತೊಟ್ಟಿಲಾಡುತಿದೆ ಮಗುವದು ಹೊರಳಿ
ದೇವನೆ ಇರುವನೆ ಮಗುವಾಗಿಲ್ಲ?

# ಪ್ರಥಮ ಮಹಾಯುದ್ಧ ಕಾಲದ ಸ್ವಾತಂತ್ರ್ಯ ಚಳುವಳಿಯಲ್ಲಿ ಅನಿ ಬೆಸೆಂಟ್ ಮತ್ತು ಹೋಂರೂಲ್ ಚಳುವಳಿ(1847–1933)

**ಡಾ. ಹೇಮಲತ ಹೆಚ್. ಆರ್**
ಸಹಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸ.ಪ್ರ.ದ.ಕಾಲೇಜು, ನಂಜನಗೂಡು

ಹೋಮ್ ರೂಲ್ ಚಳುವಳಿಯಲ್ಲಿ ಅನಿ ಬೆಸೆಂಟರ ಪಾತ್ರವನ್ನು ಪರಿಶೀಲಿಸುವ ಮೊದಲು ಅವರ ಹಿನ್ನೆಲೆ ಹಾಗೂ ಕಾರ್ಯ ಕ್ಷೇತ್ರದ ಪರಿಚಯ ಮಾಡಿಕೊಳ್ಳುವುದು ಅಗತ್ಯವಾಗಿದೆ. ಬ್ರಿಟಿಷ್ ಸಮಾಜವಾದಿ, ಮಹಿಳಾ ಹಕ್ಕುಗಳ ಕಾರ್ಯಕರ್ತೆ, ಬರಹಗಾರರು, ಶ್ರೇಷ್ಠ ವಾಗ್ಮಿ ಹಾಗೂ ಭಾರತ ಮತ್ತು ಐರ್ಲೆಂಡ್ ಸ್ವಾತಂತ್ರ್ಯ ಹೋರಾಟದ ಬೆಂಬಲಿಗರೂ ಆದ ಅನಿಬೆಸೆಂಟ್ 1847ರಲ್ಲಿ ಅಕ್ಟೋಬರ್ 1ರಂದು ಲಂಡನ್ನಿನ ಮಧ್ಯಮ ವರ್ಗದ ಐರಿಷ್ ಮೂಲದ ಕುಟುಂಬದಲ್ಲಿ ಜನಿಸಿದರು. ಆರಂಭದಿಂದಲೂ ನಾಸ್ತಿಕರಾಗಿದ್ದು ಸ್ವತಂತ್ರ ಚಿಂತನೆಗಳನ್ನು ರೂಢಿಸಿಕೊಂಡಿದ್ದ ಅವರು 1874ರಲ್ಲಿ ಬ್ರಾಡ್ ಲಾ ನೇತೃತ್ವದ ನ್ಯಾಷನಲ್ ಸೆಕ್ಯುಲರ್ ಸೊಸೈಟಿಯ ಸಕ್ರಿಯ ಸದಸ್ಯರಾದರು. ಕ್ರೈಸ್ತಧರ್ಮಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ವಿರೋಧಿಸಿ ಜಾತ್ಯಾತೀತ ವ್ಯವಸ್ಥೆಯ ಪರವಾಗಿ ಭಾಷಣ ಮಾಡುತ್ತಾ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿದರು. ಬ್ರಾಡ್ಲಾ ಅವರ 'ನ್ಯಾಷನಲ್ ರಿಫಾರ್ಮರ್' ಪತ್ರಿಕೆಯಲ್ಲೂ ಕೆಲಸ ಮಾಡಿದರು. 'ಅಜಾಕ್ಸ್' ಎಂಬ ಹೆಸರಿನಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ಇಬ್ಬರೂ ಸೇರಿ ಅಮೆರಿಕದ ಜನನನಿಯಂತ್ರಣ ಹೋರಾಟಗಾರ ಚಾರ್ಲ್ಸ್ ನೋಲ್ಟನ್ ಅವರ 'ಫ್ರೂಟ್ಸ್ ಆಫ್ ಫಿಲಾಸಫಿ' ಪುಸ್ತಕವನ್ನು 1877ರಲ್ಲಿ ಪ್ರಕಟಿಸಿದರು. ಈ ಸಂಬಂಧದ ವಿವಾದದಿಂದಾಗಿ ಆನಿ ಬೆಸೆಂಟ್ ಮತ್ತು ಬ್ರಾಡ್ ಲಾ ಇಂಗ್ಲೆಂಡಿನಾದ್ಯಾಂತ ಮನೆಮಾತಾದರು. ಕ್ರಮೇಣ ಕ್ರಾಂತಿಕಾರಿ ಸಮಾಜವಾದಿಯಾಗಿ ಪರಿವರ್ತನೆಗೊಂಡ ಅವರು ಉದಾರವಾದಿ ಸಮಾಜವಾದಿಯಾಗಿದ್ದ ಬ್ರಾಡ್ಲಾರಿಂದ ದೂರವಾದರು. 1880ರ ಪ್ರಾರಂಭದಲ್ಲಿ ಅವರು ಬ್ರಿಟನ್ನಿನಲ್ಲಿ ಖ್ಯಾತನಾಮರಾಗಿದ್ದ ಸಿಡ್ನಿ ವೆಬ್, ಜಾರ್ಜ್ ಬರ್ನಾರ್ಡ್ ಷಾ ಮೊದಲಾದವರೊಂದಿಗೆ 'ಫಾಬಿಯನ್ ಸೊಸೈಟಿ' ಯ ಪರವಾಗಿ ಕೆಲಸಗಳನ್ನು ನಿರ್ವಹಿಸಿದರು. 1889ರಲ್ಲಿ ಮೇಡಮ್ ಬ್ಲಾವಟ್ ಸ್ಕಿಯವರ ಪ್ರಭಾವಕ್ಕೊಳಗಾಗಿ 'ಥಿಯೊಸೋಫಿಕಲ್ ಸೊಸೈಟಿ' ಯನ್ನು ಸೇರಿದರು. ಹೀಗೆ ನಿರೀಶ್ವರ(ನಾಸ್ತಿಕ)ವಾದಿಯಾಗಿದ್ದ ಅವರು ಕೊನೆಗೆ ಆಸ್ತಿಕರಾಗಿ ಪರಿವರ್ತನೆಗೊಂಡರು. 1893ರಲ್ಲಿ ಅಮೆರಿಕದ ಚಿಕಾಗೊ ನಗರದಲ್ಲಿ ಜರುಗಿದ ವಿಶ್ವಧರ್ಮ ಸಮ್ಮೇಳನದಲ್ಲಿ ಬೆಸೆಂಟ್, ಥಿಯೊಸೋಫಿಕಲ್ ಸೊಸೈಟಿಯ ಪ್ರತಿನಿಧಿಯಾಗಿ ಪಾಲ್ಗೊಂಡರು. ಅದೇ ವರ್ಷ ಭಾರತಕ್ಕೆ ಬಂದು ಇಲ್ಲಿನ ಸಂಸ್ಕೃತಿ ಮತ್ತು ಧರ್ಮದ ಪ್ರಭಾವಕ್ಕೊಳಗಾದರು. ಮುಂದಿನ ನಾಲ್ಕು ದಶಕಗಳ ಕಾಲ ಭಾರತದ ರಾಜಕೀಯ, ಸಾಮಾಜಿಕ ಹಾಗೂ ಶೈಕ್ಷಣಿಕ ಪುರೋಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸಿದರು.

ಅನಿ ಬೆಸೆಂಟ್ ಭಾರತದಲ್ಲಿ ಕೆಲಸ ಮಾಡುತ್ತಿದ್ದಾಗ ರಾಜಕೀಯ ಸ್ವಾತಂತ್ರ್ಯವಿಲ್ಲದೆ ಭಾರತದ ನಿಜವಾದ ಪ್ರಗತಿ ಸಾಧ್ಯವಿಲ್ಲ ಎಂಬುದನ್ನು ಮನಗಂಡರು. ಅಂತೆಯೇ ಮಂದಗಾಮಿಗಳ ನೇತೃತ್ವದ ಕಾಂಗ್ರೆಸ್ಸಿಗೆ ಹೆಚ್ಚಿನದೇನನ್ನು ಸಾಧಿಸುವುದು

ಸಾಧ್ಯವಿಲ್ಲವೆಂಬುದನ್ನು ಅರಿತರು. 1913ರಲ್ಲಿ ದೇಶದ ರಾಜಕಾರಣಕ್ಕೆ ಧುಮಿಕಿದ ಅವರು ಭಾರತಕ್ಕೆ ಸ್ವಯಂ ಅಡಳಿತವನ್ನು ನೀಡುವಂತೆ ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಿದರು. 1914ರಲ್ಲಿ ಕಾಂಗ್ರೆಸ್ಸ್ ಅನ್ನು ಸೇರಿದ ಅವರು ವಿಭಜಿತ ಕಾಂಗ್ರೆಸನ್ನು ಒಂದುಗೂಡಿಸಲು ತಿಲಕ್ ಮತ್ತು ಗೋಖಲೆಯವರೊಂದಿಗೆ ಚರ್ಚೆ ನಡೆಸಿದರು. ಅವರ ಪ್ರಯತ್ನಗಳ ಫಲವಾಗಿ 1916ರಲ್ಲಿ ಲಕ್ನೋದಲ್ಲಿ ಕಾಂಗ್ರೆಸ್ಸಿನ ಎರಡೂ ಬಣಗಳು ಒಗ್ಗೂಡಿದವು.

**ಹೋಮ್ ರೂಲ್ ಲೀಗ್ ಸ್ಥಾಪನೆ**

ಆನಿ ಬೆಸೆಂಟ್ 1908 ರಿಂದ 1913ರವರೆಗೆ ಥಿಯೊಸೋಫಿಕಲ್ ಸೊಸೈಟಿಯ ಅಧ್ಯಕ್ಷರಾಗಿ ಹಲವು ಬಾರಿ ಬ್ರಿಟನ್ನಿಗೆ ಬೇಟಿ ನೀಡಿದ್ದರು. ಈ ಅವಧಿಯಲ್ಲಿ ಅವರು ರೆಡ್ ಮಾಂಡ್ಸ್ ನೇತೃತ್ವದ ಐರ್ಲೆಂಡ್ ಪರವಾದ ಹೋಮ್ ರೂಲ್ ಚಳುವಳಿಯಿಂದ ಪ್ರಭಾವಿತರಾಗಿದ್ದರು. ಅದೇ ಬಗೆಯ ಚಳುವಳಿಯನ್ನು ಭಾರತದಲ್ಲೂ ನಡೆಸಲು ನಿರ್ಧರಿಸಿದರು. 1914ರಲ್ಲಿ ಕಾಂಗ್ರೆಸ್ ಸೇರಿದ ನಂತರ ತಮ್ಮ ಉದ್ದೇಶಗಳನ್ನು ಕುರಿತು ಕಾಂಗ್ರೆಸ್ ನಾಯಕರೊಂದಿಗೆ ಚರ್ಚಿಸಿದರು. ಭಾರತ ಬ್ರಿಟಿಷ್ ಸಾಮ್ರಾಜ್ಯದಿಂದ ಪ್ರತ್ಯೇಕಗೊಳ್ಳಬೇಕೆಂದು ಬಯಸದ ಅವರು ಸಾಮ್ರಾಜ್ಯದೊಳಗೆ ಇತರ ವಸಾಹತುಗಳಂತೆ ಸ್ವಯಮಾಡಳಿತ ಪಡೆಯಬೇಕೆಂದು ಆಶಿಸಿದರು.

ಪ್ರಥಮ ಮಹಾಯುದ್ಧ ಸ್ವಯಮಾಡಳಿತದ ಬೇಡಿಕೆಯನ್ನು ಮುಂದಿಡಲು ಭಾರತಕ್ಕೆ ಒಂದು ಉತ್ತಮ ಅವಕಾಶವನ್ನು ಕಲ್ಪಿಸಿತೆಂದು ಅನಿ ಬೆಸೆಂಟ್ ಭಾವಿಸಿದ್ದರು. ಯುದ್ಧ ಕಾಲದಲ್ಲಿ ಬ್ರಿಟನ್ ತನ್ನ ವಸಾಹತುಗಳ ಬೆಂಬಲವನ್ನು ಅಪೇಕ್ಷಿಸಿತ್ತು. ವಿಇಂಗ್ಲೆಂಡಿನ ಅಗತ್ಯ ಭಾರತದ ಅವಕಾಶವಾಗಿದೆಹಿ ಎಂದು ಹೇಳಿದ ಆನಿ ಬೆಸೆಂಟ್ ಭಾರತದ ವಸಾಹತುಶಾಹಿ ಸರ್ಕಾರವನ್ನು ಕಟುವಾಗಿ ಟೀಕಿಸಿದರು. ವಿಭಾರತ ಸ್ವಯಮಾಡಳಿತವನ್ನು ತಾನು ಯುದ್ಧ ಕಾಲದಲ್ಲಿ ಬ್ರಿಟಷರಿಗೆ ನೀಡಿರುವ ಸಹಾಯಕ್ಕೆ ಪ್ರತಿಫಲವಾಗಿ ಕೇಳುತ್ತಿಲ್ಲ, ಆದರೆ ಅದನ್ನು ತನ್ನ ಹಕ್ಕಿನ ರೀತಿಯಲ್ಲಿ ಕೇಳುತ್ತಿದೆಹಿ ಎಂದು ಹೇಳಿದ ಅವರು "ಭಾರತದ ರಾಜಭಕ್ತಿಯ ಬೆಲೆ ಭಾರತದ ಸ್ವಾತಂತ್ರ್ಯಹಿ ಎಂದು ಘೋಷಿಸಿದರು. 1914ರ ಜುಲೈ 14ರಂದು ತಮ್ಮ 'ನ್ಯೂ ಇಂಡಿಯಾ' ದಿನಪತ್ರಿಕೆಯ ಪ್ರಕಟಣೆ ಆರಂಭಿಸಿದರು. ಆ ದಿನ ಬಾಸ್ಟೀಲ್‌ನ ಪತನದ ದಿನವಾಗಿತ್ತು. 1914ರ ಕಾಂಗ್ರೆಸ್ಸಿನ ಮದ್ರಾಸ್ ಅಧಿವೇಶನದಲ್ಲಿ ಅವರು ವಿಭಾರತ ಸಾಮ್ರಾಜ್ಯದ ಶಿಶುವಿಹಾರದಲ್ಲಿ ಇನ್ನೂ ಮಗುವಾಗಿರಲು ಸಿದ್ಧವಾಗಿಲ್ಲ. ಆದ್ದರಿಂದ ಅದಕ್ಕೆ ಸ್ವಯಮಾಡಳಿತ ನೀಡುವುದು ಅಗತ್ಯವಾಗಿದೆ" ಎಂದು ಹೇಳಿದರು.

ಮಂದಗಾಮಿ ಕಾಂಗ್ರೆಸ್ಸಿಗರಿಂದ ಆನಿ ಬೆಸೆಂಟ್ ಯೋಜನೆಗಳಿಗೆ ಬೆಂಬಲ ದೊರೆಯಲಿಲ್ಲ. ಬಾಲ ಗಂಗಾಧರ ತಿಲಕರ ನೇತೃತ್ವದ ತೀವ್ರಗಾಮಿಗಳ ಬೆಂಬಲ ದೊರೆಯುವುದು ಖಚಿತವಾಯಿತು. ಆದರೂ ಸ್ವಯಮಾಡಳಿತದ ಪರವಾದ ಚಳುವಳಿ ಸಫಲವಾಗಬೇಕಾದರೆ ಕಾಂಗ್ರೆಸ್ಸಿನ ಎರಡೂ ಬಣಗಳು ಒಂದುಗೂಡುವುದು ಆಗತ್ಯ ಎಂದು ಭಾವಿಸಿದ್ದ ಅವರು ಈ ಸಂಬಂಧ ತಿಲಕ್ ಹಾಗೂ ಗೋಖಲೆಯವರೊಂದಿಗೆ ಮಾತುಕತೆ ನಡೆಸಿದರು. 1915ರ ಸೆಪ್ಟೆಂಬರ್ 25ರಂದು ಅವರು ಹೋಮ್ ರೂಲ್ ಲೀಗ್ ಪ್ರಾರಂಭಿಸುವ ನಿರ್ಧಾರವನ್ನು ಪ್ರಕಟಿಸಿದರು. ಸೆಪ್ಟೆಂಬರ್ 28ರಂದು ತಮ್ಮ 'ನ್ಯೂ ಇಂಡಿಯಾ' ಪತ್ರಿಕೆಯಲ್ಲಿ ಹೋಮ್ ರೂಲ್ ಲೀಗ್ ಪ್ರಣಾಳಿಕೆಯನ್ನು ಪ್ರಕಟಿಸಿದರು. ಲೀಗ್ ಕಾಂಗ್ರೆಸ್ಸಿಗೆ ಪ್ರತಿಸ್ಪರ್ಧಿಯಾಗಿರುವುದಿಲ್ಲ, ಆದರೆ ಪೂರಕವಾಗಿರುತ್ತದೆ. ಜನರಿಗೆ

ರಾಜಕೀಯ ಶಿಕ್ಷಣ ನೀಡುವುದು ಮತ್ತು ಸ್ವಯಮಾಡಳಿತದ ಕಾಂಗ್ರೆಸ್ಸಿನ ಬೇಡಿಕೆಗೆ ಬಲ ತಂದುಕೊಡುವುದು ಅದರ ಉದ್ದೇಶವಾಗಿದೆ ಎಂದು ಸ್ಪಷ್ಟಪಡಿಸಿದರು. 1915ರ ಡಿಸೆಂಬರ್‌ನಲ್ಲಿ ಬೊಂಬಾಯಿಯಲ್ಲಿ ನಡೆದ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನದಲ್ಲಿ ಹೋಮ್ ರೂಲ್ ಲೀಗ್ ಸ್ಥಾಪನೆಗೆ ಸಂಬಂಧಿಸಿದ ಒಂದು ನಿರ್ಣಯವನ್ನು ಮಂಡಿಸಿದರು. ಆದರೆ ಕಾಂಗ್ರೆಸ್ ಅಧ್ಯಕ್ಷ ಎಸ್.ಪಿ.ಸಿನ್ಹ ನಿರ್ಣಯವನ್ನು ತಿರಸ್ಕರಿಸಿದರು. ಆನಂತರ ಸ್ವತಂತ್ರವಾಗಿ ಕಾರ್ಯ ಮುಂದುವರಿಸಿದ ಅನಿ ಬೆಸೆಂಟ್ 1916ರ ಸೆಪ್ಟೆಂಬರ್ 1ರಂದು ಮದ್ರಾಸ್ (ಅಡ್ಯಾರ್)ನಲ್ಲಿ 'ಆಲ್ ಇಂಡಿಯಾ ಹೋಮ್ ರೂಲ್ ಲೀಗ್' ಸ್ಥಾಪಿಸಿದರು. ಆನಿ ಬೆಸೆಂಟ್ ಅವರೇ ಅದರ ಅಧ್ಯಕ್ಷರಾದರು.

**ಹೋಮ್ ರೂಲ್ ಚಳುವಳಿಯ ಮುನ್ನಡೆ**

ತಿಲಕರ ಮತ್ತು ಅನಿ ಬೆಸೆಂಟರ ನೇತೃತ್ವದ ಹೋಮ್ ರೂಲ್ ಲೀಗ್‌ಗಳು ಪರಸ್ಪರ ಸಹಕರಿಸಿ ಕೆಲಸ ಮಾಡಲು ನಿರ್ಧರಿಸಿದವು. ಎರಡು ಲೀಗ್ಗಳು ವಿಲೀನಗೊಳ್ಳದಿದ್ದಕ್ಕೆ ಕಾರಣಗಳನ್ನು ನೀಡುತ್ತಾ ಅನಿ ಬೆಸೆಂಟ್ ಹೀಗೆ ಹೇಳಿದರು. ವಿಅವರ (ತಿಲಕರ) ಕೆಲವು ಅನುಯಾಯಿಗಳಿಗೆ ನನ್ನ ಬಗ್ಗೆ ಮತ್ತು ನನ್ನ ಕೆಲವು ಅನುಯಾಯಿಗಳಿಗೆ ಅವರ ಬಗ್ಗೆ ಗೌರವ ಭಾವನೆಗಳಿರಲಿಲ್ಲ. ಆದರೆ ನಮ್ಮ ನಮ್ಮ ನಡುವೆ ಮಾತ್ರ ಜಗಳವಿರಲಿಲ್ಲ."

ತಿಲಕರ ನೇತೃತ್ವದ ಹೋಮ್ ರೂಲ್ ಲೀಗ್ ಆರು ಶಾಖೆಗಳನ್ನು ಹೊಂದಿತ್ತು. ಅವುಗಳು ಮಧ್ಯ ಮಹಾರಾಷ್ಟ್ರ, ಬೊಂಬಾಯಿ ನಗರ, ಕರ್ನಾಟಕ, ಕೇಂದ್ರ ಪ್ರಾಂತ್ಯಗಳು ಹಾಗೂ ಬೀರಾರ್ ಪ್ರಾಂತ್ಯದಲ್ಲಿ ಎರಡು ಶಾಖೆಗಳು, ಆನಿ ಬೆಸೆಂಟರ ಲೀಗ್ ದೇಶದ ವಿವಿಧ ಭಾಗಗಳಲ್ಲಿ 200ಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿತ್ತು. ಅವುಗಳಲ್ಲಿ 132 ಶಾಖೆಗಳು ಮದ್ರಾಸ್ ಪ್ರಾಂತ್ಯದಲ್ಲೇ ಇದ್ದವು. ತಿಲಕರು ಬೊಂಬಾಯಿ ಪ್ರಾಂತ್ಯ (ಬೊಂಬಾಯಿ ನಗರ ಹೊರತುಪಡಿಸಿ) ಕರ್ನಾಟಕ ಮತ್ತು ಕೇಂದ್ರ ಪ್ರಾಂತ್ಯಗಳಿಗೆ ತಮ್ಮ ಚಳುವಳಿಯನ್ನು ಸೀಮಿತಗೊಳಿಸಿದರು. ಭಾರತದ ಉಳಿದ ಭಾಗಗಳಲ್ಲಿ ಆನಿ ಬೆಸೆಂಟ್ ಚಳುವಳಿ ಸಂಘಟಿಸಿದರು. ತಿಲಕರ ಹೋಮ್ ರೂಲ್ ಲೀಗಿನ ಸದಸ್ಯರ ಸಂಖ್ಯೆ 1916ರ ಅಂತ್ಯ ಭಾಗದಲ್ಲಿ 14 ಸಾವಿರ ಇದ್ದದ್ದು 1918ರ ವೇಳೆಗೆ32 ಸಾವಿರಕ್ಕೆ ಏರಿತು. ಆನಿ ಬೆಸೆಂಟ್ ಲೀಗ್ 1917ರ ಮಧ್ಯ ಭಾಗದಲ್ಲಿ ಒಟ್ಟು 27 ಸಾವಿರ ಸದಸ್ಯರನ್ನು ಹೊಂದಿತ್ತು. ತಿಲಕರು ತಮ್ಮ 'ಕೇಸರಿ' ಮತ್ತು 'ಮರಾಠಾ' ಪತ್ರಿಕೆಗಳನ್ನು ಹಾಗೂ ತಮ್ಮ ಅಪಾರ ಸಂಖ್ಯೆಯ ಅನುಯಾಯಿಗಳನ್ನು ಚಳುವಳಿಯನ್ನು ಹರಡಲು ಬಳಸಿಕೊಂಡರು. ಅಂತೆಯೇ ಆನಿ ಬೆಸೆಂಟ್ ತಮ್ಮ 'ಕಾಮನ್‌ವೀಲ್' ಮತ್ತು 'ನ್ಯೂ ಇಂಡಿಯಾ' ಪತ್ರಿಕೆಗಳನ್ನು ಹಾಗೂ ಥಿಯೊಸೋಫಿಕಲ್ ಸೊಸೈಟಿಯ ಶಾಖೆಗಳನ್ನು ಪ್ರಚಾರ ಕಾರ್ಯಕ್ಕೆ ಬಳಸಿಕೊಂಡರು. ಬೆಸೆಂಟರ ಹೋಮ್ ರೂಲ್ ಲೀಗ್‌ಗಿಂತಲೂ ತಿಲಕರ ಹೋಮ್ ರೂಲ್ ಲೀಗ್ ಹೆಚ್ಚು ಸುಸಂಘಟಿತವಾಗಿತ್ತು ಹಾಗೂ ಹೆಚ್ಚು ಸಂಖ್ಯೆಯ ಅರ್ಪಣಾ ಮನೋಭಾವದ ಸ್ವಯಂ ಸೇವಕರನ್ನು ಹೊಂದಿತ್ತು.

ಆನಿ ಬೆಸೆಂಟ್ ಧಾರ್ಮಿಕ ಹಿನ್ನೆಲೆಯಿಂದ ಬಂದವರಾಗಿದ್ದರಿಂದ ಅವರಿಗೂ ಸಂಘರ್ಷದ ರಾಜಕೀಯಕ್ಕಿಂತ, ಜನರಲ್ಲಿ ಜಾಗೃತಿ ಮೂಡಿಸುವ ಆಂದೋಲನದಲ್ಲೇ ಹೆಚ್ಚು ನಂಬಿಕೆಯಿತ್ತು. ಹೀಗೆ ತಿಲಕ ಮತ್ತು ಅನಿ ಬೆಸೆಂಟರ ಉದ್ದೇಶ ಭಾರತಕ್ಕೆ ಸ್ವಯಮಾಡಳಿತ ನೀಡುವುದರ ಅಗತ್ಯ ಕುರಿತು ಬ್ರಿಟಿಷರಿಗೆ ಮನವರಿಕೆ ಮಾಡಿಕೊಡುವುದು

ಮತ್ತು ಜೊತೆಯಲ್ಲೇ ಜನಸಾಮಾನ್ಯರಲ್ಲಿ ರಾಜಕೀಯ ಅರಿವು ಮೂಡಿಸಿ ಒಂದು ನಿಜವಾದ ಜನಾಂದೋಲನಕ್ಕೆ ಅವರನ್ನು ಸಿದ್ದ ಮಾಡುವುದು ಆಗಿತ್ತು. ತಿಲಕರಾಗಲಿ ಅಥವಾ ಅನಿ ಬೆಸೆಂಟರಾಗಲಿ ಬ್ರಿಟಿಷ್ ಸಾಮ್ರಾಜ್ಯದೊಂದಿಗೆ ಭಾರತ ಸಂಬಂಧಗಳನ್ನು ಕಡಿದುಕೊಳ್ಳಬೇಕೆಂದು ಬಯಸಲಿಲ್ಲ. ಸಾಮ್ರಾಜ್ಯದೊಳಗೇ ಸ್ವಯಮಾಡಳಿತ ಪಡೆಯುವುದು ಅವರುಗಳ ನೇತೃತ್ವದ ಹೋಮ್ರೂಲ್ ಚಳುವಳಿಯ ಉದ್ದೇಶವಾಗಿತ್ತು.

**ಆನಿ ಬೆಸೆಂಟರ ಪ್ರಚಾರ ಪ್ರವಾಸ**

ತಿಲಕ್ ಮತ್ತು ಅನಿ ಬೆಸೆಂಟ್ ದೇಶಾದ್ಯಾಂತ ವ್ಯಾಪಕವಾಗಿ ಪ್ರವಾಸ ಕೈಗೊಂಡು ಹೋಮ್ ರೂಲ್ ಚಳುವಳಿಯ ಉದ್ದೇಶಗಳನ್ನು ವಿವರಿಸಿದರು. ತಮ್ಮ ವಾಗ್ಮಯಿಖರಿಯಿಂದ ಭಾರಿ ಸಂಖ್ಯೆಯ ಜನಸ್ತೋಮವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಅನಿ ಬೆಸೆಂಟ್ ಅವರಲ್ಲಿತ್ತು. ತಮ್ಮ 'ನ್ಯೂ ಇಂಡಿಯಾ' ಪತ್ರಿಕೆಯ ಒಂದು ಲೇಖನದಲ್ಲಿ ಅವರು ವಿನಾವು ಕಾಂಗ್ರೆಸ್ಸಿನ ವೇದಿಕೆಯಿಂದ ಬಹಳ ಕಾಲದಿಂದಲೂ ಸುಧಾರಣೆಗಳಿಗಾಗಿ ಒತ್ತಾಯಿಸಿದ್ದೇವೆ ಮತ್ತು ಅವುಗಳನ್ನು ನಾವು ಪಡೆದಿಲ್ಲ... ಅಧಿಕಾರಶಾಹಿ ಅಪನಂಬಿಕೆಯಿಂದ ಕೂಡಿದೆ. ಅದು ಹೋಗಬೇಕು; ಭಾರತದ ಬೇಡಿಕೆ ಸ್ವಾತಂತ್ರ್ಯಕ್ಕಾಗಿ. ಅದನ್ನು ಯಾವ ದೇಶವೂ ವರದ ರೂಪದಲ್ಲಿ ನೀಡಿಲ್ಲ. ಅದು ಹೋರಾಡಿ ಗಳಿಸಬೇಕಾದ ಹಕ್ಕಾಗಿದೆಹಿ ಎಂದು ಗುಡುಗಿದರು.

ಆನಿ ಬೆಸೆಂಟರ ನಿಲುವು ತೀವ್ರಗಾಮಿಗಳ ರಾಜಕೀಯ ನಿಲುವಿಗೆ ನಿಕಟವಾಗಿತ್ತೆಂಬುದಕ್ಕೆ ಮೇಲಿನ ಅವರ ಮಾತುಗಳು ನಿದರ್ಶನವಾಗಿವೆ. ಅದೇ ಲೇಖನದಲ್ಲಿ ಅವರು ವಿಭಾರತ ಇನ್ನು ನಿಮ್ಮ ವರಗಳನ್ನು, ನಿಮ್ಮ ರಿಯಾಯಿತಿಗಳನ್ನು ಮತ್ತು ನೀವು ನೀಡುವ ಕೊಡುಗೆಗಳನ್ನು ಬಯಸುವುದಿಲ್ಲ; ಭಾರತ ತನ್ನ ಮನೆಯ ಯಜಮಾನಿಯಾಗಲು ಬಯಸುತ್ತದೆಹಿ ಎಂದು ಬರೆದರು. ಒಟ್ಟಿನಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಒಬ್ಬ ವಿದೇಶಿ ಮಹಿಳೆಯಾಗಿ ಅವರು ಕೊಟ್ಟ ಕೊಡುಗೆ ಬಹಳ ಅಪಾರವಾದುದು.

**ಪರಾಮರ್ಶನ ಗ್ರಂಥಗಳು**


1. ಬಿಪನ್ ಚಂದ್ರ, 'ಮಾಡರ್ನ್ ಇಂಡಿಯಾ', ನವದೆಹಲಿ, 1971.
2. ಧನಂಜಯ ಕೀರ್, 'ಮಹಾತ್ಮ ಜೋತಿಬಾ ಫುಲೆ : ಪಾದರ್ ಆಫ್ ದಿ ಇಂಡಿಯನ್ ಸೋಷಿಯಲ್ ರೆವಲ್ಯೂಷನ್'. ಪಾಪ್ಯುಲರ್ ಪ್ರಕಾಶನ್, ಮುಂಬೈ, 1974.
3. ಗಾಂಧಿ ಎಂ.ಕೆ. 'ದಿ ಸ್ಟೋರಿ ಆಫ್ ಮೈ ಎಕ್ಸ್ ಪೆರಿಮೆಂಟ್ಸ್ ವಿಥ್ ಗ್ರೂಥ್', ಬೀ ಬೀಕನ್ ಪ್ರೆಸ್, 1993,
4. ಮೆನನ್ ವಿ.ಪಿ. 'ದಿ ಟ್ರಾನ್ಸ್‌ಫರ್ ಆಫ್ ಪವರ್ ಇನ್ ಇಂಡಿಯಾಹಿ, ಬಾಂಬೆ, 1957,
5. ಮಜುಂದಾರ್ ಆರ್.ಸಿ. 'ಬ್ರಿಟಿಷ್ ಪ್ಯಾರಮೌಂಟಿಸಿ ಆಂಡ್ ಇಂಡಿಯನ್ ರೆನೆಸಾನ್ಸ್' ಸಂಪುಟ 9 ಮತ್ತು 10, ಬಾಂಬೆ, 1963, 1965.
6. ಮಜುಂದಾರ್ ಆರ್.ಸಿ. 'ಸ್ಟ್ರಗಲ್ ಫಾರ್ ಫ್ರೀಡಂ' ಸಂಪುಟ 11, ಬಾಂಬೆ, 1969,
7. ಪಟ್ಟಾಭಿ ಸೀತಾರಾಮಯ್ಯ, 'ಹಿಸ್ಟರಿ ಆಫ್ ದಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್' ಸಂಪುಟ 1 ಮತ್ತು 2, ಬೊಂಬಾಯಿ. 1947.
8. ರಾಮ್ ಗೋಪಾಲ್, 'ಬ್ರಿಟಿಷ್ ರೂಲ್ ಇನ್ ಇಂಡಿಯಾ', ಬಾಂಬೆ, 1963.


❖❖❖

# ಇನಾಂದಾರರ 'ವಿಜಯಯಾತ್ರೆ' ಕಾದಂಬರಿ: ಒಂದು ವಿಶ್ಲೇಷಣೆ

**ಡಾ. ಸೀತಾ ಹೆಚ್. ಎನ್**
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನಂಜನಗೂಡು –571301

**ಡಾ. ಭೀಮೇಶ್ ಹೆಚ್.ಜೆ.**
ಕನ್ನಡ ಸಹ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು(ಸ್ವಾಯತ್ತ)
ಮೈಸೂರು–570008

ಇನಾಂದಾರರ ವಿಜಯಯಾತ್ರೆ ಕಾದಂಬರಿ ಪ್ರಕಟವಾದುದು 1984ರಲ್ಲಿ, ಈ ಕಾದಂಬರಿಯಲ್ಲಿನ ಕೇಂದ್ರ ಪಾತ್ರ ಒಬ್ಬ ಗಾಂಧಿಭಕ್ತ. ತನಗಿಂತ ದೇಶ ದೊಡ್ಡದು, ದೇಶ ಪಡೆಯಬೇಕಾದ ಸ್ವಾತಂತ್ರ್ಯ ಎಲ್ಲಕ್ಕಿಂತ ಹೆಚ್ಚಿನದು ಎಂದು ತಿಳಿದವನಾದ್ದರಿಂದ ತನ್ನದೆಲ್ಲವನ್ನೂ ತೊರೆದು ಕಾರಾಗೃಹದಲ್ಲಿ ಎಂಥ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದರೂ, ತನ್ನ ಧ್ಯೇಯನಿಷ್ಠೆಯನ್ನು ಕಳೆದುಕೊಳ್ಳದೆ, ನಿಸ್ವಾರ್ಥ ಬುದ್ಧಿಯಿಂದ ದುಡಿದವ. ಅವನ ವ್ಯಥೆಯ ಕತೆಯೇ ವಿಜಯಾತ್ರೆಯ ವಸ್ತು. 1947 ಆಗಸ್ಟ್ 15ರ ಬೆಳಿಗ್ಗೆ ಆರಂಭಗೊಂಡು ಸಂಜೆಯೊಳಗೆ ಮುಗಿಯುವ ಈ ಕಾದಂಬರಿಯ ವಸ್ತುವಿಗೆ ಕಾಲದ ಪರಿಮಿತಿಯಿದ್ದರೂ ಅನುಭವದ ವಿಸ್ತಾರವಿದೆ.

ಕಾದಂಬರಿಯಲ್ಲಿ ಸ್ವಾತಂತ್ರ್ಯ ಪಡೆಯುವವರೆಗಿನ ಹೋರಾಟ ಒಂದು ಘಟ್ಟವಾದರೆ, ಆನಂತರದ ಬೆಳವಣಿಗೆ ಇನ್ನೊಂದು ಘಟ್ಟ. 1947 ಆಗಸ್ಟ್ 15ನೇ ತಾರೀಖು ಭಾರತದ ಇತಿಹಾಸದಲ್ಲಿ ಮಹತ್ತರವಾದ ದಿನ. ಇಡೀ ದೇಶವೆಲ್ಲ ರಾಜಕೀಯವಾಗಿ ಒಂದು ಆಡಳಿತಕ್ಕೆ ಒಳಗಾದದ್ದು ಇದೇ ಮೊದಲು. ಆದರೆ ಅದನ್ನು ನಿರ್ವಹಣೆ ಮಾಡುವುದು ಅಷ್ಟು ಸುಲಭದ್ದಾಗಿರಲಿಲ್ಲ. ಹಾಗಾಗಿಯೇ ನಮ್ಮ ಮಹಾನಾಯಕರುಗಳ ಶಕ್ತಿಗೂ ಸವಾಲನ್ನೊಡ್ಡುವಂತಹ ಸಮಸ್ಯೆಗಳು ಉದ್ಭವಿಸಿದವು. ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರ ನೇತೃತ್ವದಲ್ಲಿ ದುಡಿದ ಪಕ್ಷ ಆ ಫಲವನ್ನು ಪಡೆದು ಅಧಿಕಾರಾರೂಢವಾದೊಡನೆ ಅದಕ್ಕೆ ಅಮಲೇರಿದಂತಾಯಿತು. ಅದುವರೆಗೂ ಸ್ವಾರ್ಥದ ಸೋಂಕಿಲ್ಲದೆ ದುಡಿದ ಅನೇಕರು ಹಿಂದೆ ಸರಿಯಬೇಕಾಯಿತು. ಖಾದಿಯನ್ನು ಧರಿಸಿದ್ದ ಒಂದು ಹೊಸ ವರ್ಗ ಅಧಿಕಾರದ ಬೆಳವಣಿಗೆಗೆ ಸಿದ್ಧವಾಯಿತು. ಪ್ರಜಾಪ್ರಭುತ್ವದ ಅನಿವಾರ್ಯ ಅಂಗವಾದ ಚುನಾವಣೆಗಳು ಜನಜಾಗೃತಿಗೆ ಕಾರಣವಾದಂತೆ ಸಾಕಷ್ಟು ಗೊಂದಲಗಳನ್ನು ಸೃಷ್ಟಿಸಿದವು. ಹಳ್ಳಿ ಹಳ್ಳಿಗಳಲ್ಲಿ ಜಾತಿ, ಮತ, ಭೂತಗಳನ್ನು ಬಡಿದೆಬ್ಬಿಸಿ ಅದರಿಂದ ತಮ್ಮ ಹಿತವನ್ನು ಸಾಧಿಸಿಕೊಳ್ಳುವ ರಾಜಕಾರಣಿ ಪುಢಾರಿಗಳು ತಲೆಯೆತ್ತಿದರು. ಇಂತಹ ರಾಜಕೀಯ ವ್ಯಕ್ತಿಗಳ ಅಯೋಗ್ಯತೆನ್ನೂ, ದೌರ್ಬಲ್ಯಗಳನ್ನೂ, ಅವರ ಅಪ್ರಮಾಣಿಕತೆಯನ್ನೂ ಸಾರ್ವಜನಿಕ ಜೀವನದ ಮೇಲಾಗುವ ಪರಿಣಾಮಗಳನ್ನೂ ಇನಾಂದಾರರು ವಿಜಯಾತ್ರೆಯಲ್ಲಿ ಚಿತ್ರಿಸಿದ್ದಾರೆ.

ವಿಜಯಯಾತ್ರೆಯ ಹಿನ್ನೆಲೆ ಸ್ವಾತಂತ್ರ್ಯ ಪ್ರಾಪ್ತಿಯ ಸಮಯದಲ್ಲಿಯೇ ಕಾಣಿಸಿಕೊಂಡು ಕಾಲಕ್ರಮದಲ್ಲಿ ಬೆಳೆದು ನಾಡಿನ ರಾಜಕೀಯ ಜೀವನವನ್ನೇ ವಿಕೃತಗೊಳಿಸಿದ ಸಂಕುಚಿತ ಮನೋವೃತ್ತಿಗಳಿಗೆ, ಆದರ್ಶದಿಂದ ದೂರವಾಗುತ್ತಾ ನಡೆದ ಸಮಯಾನುಕೂಲಗಳ ದೃಷ್ಟಿಗೆ ಸಂಬಂಧಿಸಿದ್ದಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ

ಖಾದಿ, ತ್ಯಾಗದ ಸರಳತೆಯ ಸಂಕೇತವಾಗಿ ಕಾಣಿಸಿಕೊಂಡು, ಸ್ವಾತಂತ್ರೋತ್ತರ ಭಾರತದಲ್ಲಿ ಭೋಗದ, ಸ್ವಾರ್ಥದ ಆಡಂಬರ ಅಟ್ಟಹಾಸಗಳ ಮುಖವಾಡವಾಗಿ ಹೇಗೆ ಕಾಣಿಸಿತು ಎಂಬ ಅಂಶವು ಕಾದಂಬರಿಯಲ್ಲಿ ಬರುವ ಕೆಲವು ಪಾತ್ರಗಳ ಮೂಲಕ ಗೋಚರಿಸುತ್ತದೆ.

ವಿಜಯಯಾತ್ರೆಯ ಕತೆ ಪ್ರಾರಂಭವಾಗುವುದು ಸ್ವಾತಂತ್ರ್ಯೋತ್ಸವದ ಮುಂಚಿನ ದಿನ. ಕಾಲೇಜಿಗೆ ಶರಣು ಹೊಡೆದು ಸ್ವಾತಂತ್ರ್ಯ ಸಮರದ ಯೋಧನಾಗಿದ್ದ ವಿಜಯ ಮತ್ತೆ ಜೈಲು ಸೇರಿ ಕರುಳು ಬೇನೆಯನ್ನು ತಂದುಕೊಂಡು ಆಸ್ಪತ್ರೆಯಲ್ಲಿ ನರಳುತ್ತಿರುತ್ತಾನೆ. ಆಸ್ಪತ್ರೆಯಲ್ಲಿ ಆತನ ಸಹಪಾಠಿ ಹಾಗೂ ಸ್ನೇಹಿತೆಯಾದ ಡಾ. ಮನೋರಮೆಯ ಪ್ರೀತಿಯ ಹಾರೈಕೆಯಲ್ಲಿದ್ದರೂ ಸ್ವಾತಂತ್ರ್ಯೋತ್ಸವವನ್ನು ವೀಕ್ಷಿಸುವ ಉತ್ಕಟೇಚ್ಛೆಯಿಂದ ಹೋಗಿ ತನ್ನ ಸಾವನ್ನು ತಾನೇ ತಂದುಕೊಳ್ಳುವ ಹೃದಯವಿದ್ರಾವಕ ಸನ್ನಿವೇಶದೊಂದಿಗೆ ಕಾದಂಬರಿ ಕೊನೆಯಾಗುತ್ತದೆ.

ವಿಜಯಯಾತ್ರೆಯಲ್ಲಿ ಸ್ವಾತಂತ್ರ್ಯೋದಯದ ವರ್ಣನೆಯಿದ್ದು, ಬಹುಕಾಲದ ತಪಸ್ಸು ಕನಸುಗಳು ಮೈತಳೆದು ಬಂದಂತೆ ಸ್ವಾತಂತ್ರ್ಯ ಪ್ರಾಪ್ತಿಯಾಯಿತೆಂಬುದು ನಿಜ. ಆದರೆ ಅದು ಹೇಗೆ ಬರಬೇಕಿತ್ತೋ ಹಾಗೆ ಬರಲಿಲ್ಲ. ದೇಶ ಇಭ್ಭಾಗವಾಯಿತು. ರಕ್ತಪಾತವಾಯಿತು ರಾಷ್ಟ್ರಪಿತ ಬಾಪೂಜಿಯ ಹೃದಯವೇ ಕ್ಷತವಿಕ್ಷತವಾಯಿತು. ನಾಯಕರೆಂಬುವರು ಅದನ್ನೆಲ್ಲ ಮರೆತು ಮಾರ್ಗದರ್ಶಕ ಮಹಾತ್ಮನನ್ನೂ ಮರೆತು ಸ್ವಾತಂತ್ರ್ಯೋತ್ಸವ ಆಚರಿಸಿದರು. ಅಧಿಕಾರ ಸ್ಥಾನಗಳನ್ನು ಹಂಚಿಕೊಂಡರು. ನೀತಿಭ್ರಷ್ಟತೆ, ಅಧಿಕಾರಲಾಲಸೆ – ಮುಂತಾದ ಅಪಮೌಲ್ಯಗಳು ಒಂದೊಂದಾಗಿ ತಲೆಯೆತ್ತತೊಡಗಿದವು. "ಮೊದಲು ಬಂದ ಕಿವಿಗಿಂತ, ಮತ್ತೆ ಬಂದ ಕೋಡು ಮೇಲು" ಎಂಬಂತೆ ದೇಶಕ್ಕಾಗಿ ಸರ್ವಾರ್ಪಣೆ ಮಾಡಿದವರು ಮೂಲೆಗುಂಪಾದರು. ಸ್ವಾರ್ಥಸಾಧಕರು ಗದ್ದುಗೆ ಏರಿ ಮೆರೆದರು! ಇನಾಂದಾರರು ಈ ಎಲ್ಲಾ ಅಂಶಗಳನ್ನು ವಿಜಯಯಾತ್ರೆಯಲ್ಲಿ ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ.

ವಿಜಯ ದೇಶದ ಸ್ವಾತಂತ್ರ್ಯಕ್ಕಾಗಿ ಸರ್ವತ್ಯಾಗ ಮಾಡಿ ಸೆರೆಮನೆವಾಸ, ಹಿಂಸೆಗಳಿಂದ ಅನಾರೋಗ್ಯ ಪೀಡಿತನಾಗಿ ರುಗ್ಣಶಯ್ಯೆಯಲ್ಲಿದ್ದರೂ, ಸ್ವತಂತ್ರ ಭಾರತದ ತ್ರಿವರ್ಣಧ್ವಜ ಬಾನಂಗಳಕ್ಕೆ ಏರುವುದನ್ನು ನೋಡಲೆಂದೇ ಉಸಿರಾಡುತ್ತಿದ್ದ, ಕಣ್ಣಾಗಿ ಕಾಯುತ್ತಿದ್ದ ಕಥಾನಾಯಕ ವಿಜಯನ, ನಿರ್ಮಲ ದೇಶಭಕ್ತಿ ನೀತಿ ನಿಷ್ಠೆಗಳ ಪ್ರತೀಕವಾದರೆ, ಆತನ ಮಿತ್ರ ರಂಗಣ್ಣ ಉಪಸಚಿವ ದುಷ್ಟನಲ್ಲ, ಆದರೆ ಅಧಿಕಾರ ಮೋಹಿ. ಈತ ಭಾರತದ ಭವ್ಯ ಪರಿಸ್ಥಿತಿಯ ಸಂಕೇತವಾಗಿ ಕಾಣಿಸುತ್ತಾನೆ. ಹೀಗೆ ರಂಗಣ್ಣನಂತಹ ಎಷ್ಟೋ ವ್ಯಕ್ತಿಗಳು ದೇಶಕ್ಕೆ ಸ್ವಾತಂತ್ರ್ಯ ಲಭಿಸುತ್ತದೆ ಎಂಬ ಸುದ್ದಿ ತಿಳಿದುದೇ ತಡ, ಅಧಿಕಾರ ಹಂಚಿಕೊಳ್ಳುವ ಉತ್ಸಾಹದಲ್ಲಿದ್ದಾರೆ. ಆದರೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವಿಜಯನಂತಹ ಎಷ್ಟೋ ದೇಶಾಭಿಮಾನಿಗಳಿಗೆ ನಿರಾಶೆ ಆವರಿಸುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗ ನಡೆಸಿದ ಉತ್ಸವದ ವೇಳೆಯಲ್ಲಿನ ಘಟನೆಗಳನ್ನು ಕಾದಂಬರಿಯಲ್ಲಿ ಸಾಂದರ್ಭಿಕವಾಗಿ ಸೂಚಿಸಿದ್ದಾರೆ. "ನಾಳೆಗೆ ದೊರಕುವುದು ರಾಜಕೀಯ ಸ್ವಾತಂತ್ರ, ನಿಜವಾದ ಸ್ವಾತಂತ್ರ್ಯದ ಅರ್ಥವನ್ನು ಗಳಿಸಬೇಕಾದ್ದು ಇನ್ನು ಇದೆ."(ಪುಟ101) ಸ್ವಾತಂತ್ರ್ಯಕ್ಕಾಗಿ ಹೋರಾಡಿದ ದೇಶಭಕ್ತರು ಆಸ್ಪತ್ರೆಯಲ್ಲಿ ನರಳುತ್ತಿದ್ದರೆ, ರಾಜಕೀಯ ನಾಯಕರು ಅವರನ್ನು ಗಮನಿಸದೆ ಉತ್ಸವಾಚರಣೆಯ ತವಕದಲ್ಲಿದ್ದಾರೆ– ಹೀಗೆ

ವಿಜಯ ಮತ್ತು ರಂಗಣ್ಣರ ಸಂಭಾಷಣೆಗಳಲ್ಲಿ ಜೀವನ ಮೌಲ್ಯ ಮತ್ತು ಸ್ವಾರ್ಥಭಾವಗಳ ಘರ್ಷಣೆ ನಡೆದಿರುವುದನ್ನು ಕಾಣಬಹುದು.

ಗಾಂಧಿಯ ಅಹಿಂಸಾವಾದವನ್ನು ಒಪ್ಪದವರೇ ರಾಷ್ಟ್ರದ ಆಡಳಿತ ಸೂತ್ರವನ್ನು ಹಿಡಿಯಲಿದ್ದಾರೆ. ಗಾಂಧೀಜಿಯವರು ಬೋಧಿಸುತ್ತಿದ್ದ ಆದರ್ಶವನ್ನು ವ್ಯವಹಾರಿಕವಾಗಿ ಹೊಂದಿಸಿಕೊಂಡು ಹೋಗುವುದು ಅಸಾಧ್ಯವೆಂಬುದನ್ನು ರಾಜಕೀಯ ಮುಂದಾಳುಗಳು ಸ್ವಾತಂತ್ರ್ಯ ಲಭಿಸುವ ಮೊದಲೇ ವ್ಯಕ್ತಪಡಿಸಿದ್ದರು. "ಕಾವಿಬಟ್ಟೆಯ ಜೋಳಿಗೆಯಲ್ಲಿ ಸ್ವಾತಂತ್ರ್ಯವನ್ನು ಭಿಕ್ಷೆಯಾಗಿ ಯಾರು ಹಾಕುವುದಿಲ್ಲ" (ಪುಟ 97) ಎಂಬ ಮೋರೋಪಂತನ ಮಾತನ್ನು ರಂಗಣ್ಣ ಸಹ ಒಪ್ಪುತ್ತಾನೆ. ರಂಗಣ್ಣನೂ ಚಳುವಳಿಯಲ್ಲಿ ಪಾಲ್ಗೊಂಡು ಜೈಲು ಸೇರಿ ಹೊರಬಂದು ಉಪಸಚಿವನಾಗಿದ್ದಾನೆ. ಆದರೆ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಕುರಿಗಳನ್ನು ಆಳಲಸಾಧ್ಯ ಎಂಬ ಸತ್ಯವನ್ನು ವಿಜಯ ರಂಗಣ್ಣನಿಗೆ ಮಾರ್ಮಿಕವಾಗಿ ಮುಟ್ಟಿಸುತ್ತಾನೆ. ಇದು ಸ್ವತಂತ್ರ ಭಾರತದ ಒಂದು ವೈಪರೀತ್ಯ.

ನಾವಿನ್ನೂ ಸ್ವಾತಂತ್ರ್ಯಕ್ಕೆ ಅರ್ಹರಾಗಿಲ್ಲ ಸ್ವಾತಂತ್ರ್ಯ ಸಿಕ್ಕರೂ ನಮ್ಮ ಪಾಲಿಗೆ ಸಮಸ್ಯೆಯೇ ಆದೀತು ಹೊರತಾಗಿ ಜನಗಳ ಸುಖಕ್ಕೆ ಸಾಧನವಾಗಲಿಕ್ಕಿಲ್ಲ(ಪುಟ–98) ಎಂಬ ಅಭಿಪ್ರಾಯ ವಿಜಯನ ಮೂಲಕ ವ್ಯಕ್ತವಾಗಿದೆ. ಅಂದು ಸ್ವಾತಂತ್ರ್ಯಕ್ಕಾಗಿ ಹೋರಾಡಲು ದೈಹಿಕವಾಗಿ ನಿಶಕ್ತ್ಯನಾದ ವಿಜಯನಿಗೆ ಆದರ್ಶವನ್ನು ಸಾಧಿಸಲಾಗದುದಕ್ಕಾಗಿ ಆತನಿಗಾದ ವಿಷಾದ ದಿನಚರಿಯ ಪುಟಗಳಲ್ಲಿ ಮನ ಕರಗುವಂತೆ ಮೂಡಿ ಬಂದಿದೆ.

ಇನಾಂದಾರರು ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚಿನ ದಿನಗಳಲ್ಲೇ ಸುಖವಿತ್ತು, ಗುರಿ ಸೇರುವುದಕ್ಕಿಂತ ದಾರಿ ನಡೆಯುವುದರಲ್ಲೇ ಹೆಚ್ಚಿನ ಸುಖವಿತ್ತು ಎಂಬುದನ್ನು ಹೇಳಿದ್ದಾರೆ. ದೇಶದ ಸ್ವಾಧೀನತೆಗಾಗಿ ನಮ್ಮ ಜನ ದಾರಿ ನಡೆಯುವಾಗ ಕಂಡುಬಂದ ಐಕ್ಯಮತ್ಯ, ಶ್ರದ್ಧೆ, ಉತ್ಸಾಹ, ಅರ್ಪಣಾಬುದ್ಧಿ, ನಿರೀಕ್ಷಣಾ ಸುಖಗಳು ಸೇರಿದಾಗ ಇರಲಿಲ್ಲ ಎಂದು ವಿಷಾದಪಡುತ್ತಾರೆ. ಸ್ವಾತಂತ್ರ್ಯ ಪ್ರಾಪ್ತಿಯೊಂದಿಗೆ ಅನಿಷ್ಟ ಪರಂಪರೆಗಳೇ ಹಲ್ಲುಕಿರಿದವು, ಸ್ವಾತಂತ್ರದ ಅಮೃತ ಬಿಂದುಗಳನ್ನೆಲ್ಲ ಸ್ವಾರ್ಥದ ನಂಜುನಾಲಿಗೆಗಳೇ ನೆಕ್ಕಿದವು! ಊರಹಳ್ಳಿಯ ಚಿಕ್ಕ ಬಯಲಿನಲ್ಲಿಗಾರ್ಡ್ ಆಫ್ ಹಾನರ್ ಮತ್ತು ಪೇರೆಡು ಅನುಕೂಲವಾಗುವುದಿಲ್ಲವೆಂದು ಪೊಲೀಸ ಅಧಿಕಾರಿ ಸೂಚಿಸಿದ್ದರೂ ಅವರಿಗೆ ಎದುರಾಗಿ ಇನ್ನು ಮುಂದೆ ನಿಮ್ಮ ಅಧಿಕಾರ ಮುಗಿಯಿತು ಇವರಿಗೆ ಇನ್ನು ಬೇರೆ ಮೊದಲಿನಂತೆ ತಮ್ಮ ದರ್ಪವನ್ನು ನಡೆಸಲಾಗುವುದಿಲ್ಲ ಎನ್ನುವುದು ತಿಳಿದಂತೆ ಕಾಣುವುದಿಲ್ಲ ಎನ್ನುವ ರಾಜಕೀಯ ಧುರೀಣರ ದುರಭಿಮಾನದ ನುಡಿಯನ್ನು ಕೇಳಿಯೇ ಗಾಂಧಿವಾದಿಗಳು ಪಶ್ಚಾತ್ತಾಪಪಟ್ಟರು. ಕಾರ್ಯಕ್ರಮಗಳನ್ನು ಗೊತ್ತುಪಡಿಸುವುದರಲ್ಲಿಯೇ ಇಷ್ಟು ಗೊಂದಲವನ್ನು ಎಬ್ಬಿಸಿದವರು ನಾಳೆ ಅವನ್ನು ನಡೆಸಿಕೊಂಡು ಹೋಗುವುದು ಹೇಗೆ? ಎಂಬ ಸಂದೇಶವನ್ನು ಕಾದಂಬರಿಕಾರರು ಅಂದೇ ವ್ಯಕ್ತಪಡಿಸಿದ್ದಾರೆ.

ಕಾದಂಬರಿಯಲ್ಲಿ ಬರುವ ಪ್ರಮುಖ ಸ್ತ್ರೀಪಾತ್ರ ಮನೋರಮೆ. ಕಾಲೇಜಿನ ದಿನಗಳಲ್ಲಿ ವಿಜಯನ ಸಹಪಾಠಿಯಾಗಿದ್ದ ಈಕೆ ವಿಜಯ ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಮದುವೆಯಾಗುತ್ತೇನೆಂದು ಮಾತುಕೊಟ್ಟುದರಿಂದ ಇಮ್ಮಡಿ ಉತ್ಸಾಹದಲ್ಲಿದ್ದಾಳೆ. ದೇಶಕ್ಕಾಗಿ ಹೋರಾಡಿದ ಅದೆಷ್ಟೋ ರೋಗಿಗಳ ಆರೈಕೆ ಅವಳ ಪಾಲಿಗೆ. ಜೊತೆಗೆ ವಿಜಯನದೂ ಸಹ. ವ್ಯಾಧಿಯ ವಜ್ರಮುಷ್ಟಿಗೆ ಸಿಲುಕಿರುವ ತನ್ನ ಪ್ರಾಣಾಧಿಕನನ್ನು

ಬಿಡಿಸುವುದಕ್ಕಾಗಿ ಸರ್ವ ಪ್ರಯತ್ನ ಮಾಡುವ ಆಕೆ ಸರ್ವತ್ಯಾಗಕ್ಕೂ ಸಿದ್ಧಳಾಗಿದ್ದವಳು. ಆದರೆ ಉತ್ಸವದ ದಿನ ವಿಜಯನ ಅಂತ್ಯವಾಗುತ್ತದೆ ಎಂದು ಅವಳೆನಿಸಿರಲಿಲ್ಲ. ದೇಶಪ್ರೇಮವನ್ನು ಎದೆಯಲ್ಲಿ ತುಂಬಿರುವ ಮೌಲ್ಯಗಳನ್ನು ಎತ್ತಿ ಹಿಡಿಯುವ ವ್ಯಕ್ತಿತ್ವ ಮನೋರಮೆಯದಾಗಿದ್ದು, ಆಕೆ ಅಸಹಾಯಕಳಾಗಿರುವ ಶುದ್ಧಚಾರಿತ್ರ್ಯದ ಒಂದು ಕೈಪಿಡಿಯಂತೆ ಕಾಣಿಸುತ್ತಾಳೆ.

ವಿಜಯಯಾತ್ರೆ ಕಾದಂಬರಿಯ ಶೀರ್ಷಿಕೆಯೇ ಧ್ವನಿಯಿಂದ ಕೂಡಿದುದು. ಸ್ವಾತಂತ್ರ ದೊರಕಿದ ವಿಜಯೋತ್ಸವವನ್ನು ಮತ್ತು ವಿಜಯ ಎನ್ನುವ ಆದರ್ಶವಾದಿ ಸ್ವಾತಂತ್ರ್ಯ ಯೋಧನ ಸ್ಮಶಾನಯಾತ್ರೆಯನ್ನು ಒಂದೇ ದಿನ ನಡೆಸಿ ವಿಜಯಯಾತ್ರೆ, ವಿಜಯನ ಸ್ಮಶಾನಯಾತ್ರೆಯಾಗಿ ನಮ್ಮ ದೇಶಾಭಿಮಾನದ ನೆಲೆಯನ್ನು ಅದುರಿಸುತ್ತದೆ.

ಇನಾಂದಾರರ ಈ ಕಾದಂಬರಿಯಲ್ಲಿ ಕತೆಯ ಹಂದರ ಹೊಸತೇನೂ ಇಲ್ಲವೆಂದು ಅನಿಸಬಹುದು. ಆದರೆ ಇಲ್ಲಿ ಲೇಖಕರು ಕಥೆಯನ್ನು ಸಂಯೋಜಿಸಿರುವ ತಂತ್ರ ಓದುಗರಿಗೆ ಹೊಸದೆನಿಸುವಂತೆ ತೋರುತ್ತದೆ. ಕಾಲ ಪರಿಮಿತಿಯ ನಿಯಮವನ್ನು ಮೀರದ ಇನಾಂದಾರರು ಕಾದಂಬರಿಯಲ್ಲಿ ಕಥಾನಾಯಕ ವಿಜಯನ ಪಾತ್ರದ ಪೋಷಣೆಯನ್ನು ಸಹಜ ಸುಂದರವಾಗಿ ಚಿತ್ರಿಸಿದ್ದಾರೆ. ಈ ಪುಟ್ಟ ಕಾದಂಬರಿಯೇ ಪ್ರಥಮ ಬಾರಿಗೆ ರಾಷ್ಟ್ರೀಯ ಪ್ರಜ್ಞೆಯ ಮಾರ್ಪಾಟಿನ ಬಗೆಗೆ ಹೊಸದನಿ, ಹೊಸಧಾಟಿಯಲ್ಲಿ ಮಾತನಾಡಿದೆ ಎನಿಸುತ್ತದೆ. ಲೇಖಕರು ಇಲ್ಲಿ ಮಧ್ಯಮ ವರ್ಗದ ಸುಶಿಕ್ಷಿತ ಯುವಕ ಯುವತಿಯರ ಕಣ್ಣಿನಿಂದ ಸ್ವಾತಂತ್ರ್ಯ ಚಳುವಳಿಯನ್ನು ನೋಡಿದ್ದಾರೆಂಬುದು ಸ್ಪಷ್ಟವಾಗುತ್ತದೆ. ವಿಜಯಯಾತ್ರೆಯಲ್ಲಿ ಮೊದಲಿನಿಂದಲೂ ವಿಜಯನೊಬ್ಬ ಗಾಂಧೀಭಕ್ತ, ಅವನಿಗೆ ಆದರ್ಶವೇ ಮುಖ್ಯವೆಂದು ಚಿತ್ರಿಸುವ ಕಾದಂಬರಿಕಾರರು, ಕೊನೆಯಲ್ಲಿ ದೈಹಿಕವಾಗಿ ದುರ್ಬಲನಾಗಿದ್ದ ವಿಜಯ ಸ್ವಾತಂತ್ರ್ಯೋತ್ಸವವನ್ನು ನೋಡಲೆಂದೇ, ಬದುಕಿ ಅದನ್ನು ನೋಡಲು ಹೋಗಿ ಕಾಲು ಜಾರಿಬಿದ್ದು ಅಸುನೀಗಿದ ಎನ್ನುವುದು ಸನ್ನಿವೇಶದ ವ್ಯಂಗ್ಯ.

ಇನಾಂದಾರರಿಗೆ ಪ್ರಪಂಚದ ಆವರಣದ ಅರಿವಿದ್ದರೂ ನಾವು ಮುಖ್ಯವಾಗಿ ಕಾಣುವುದು ಆ ಆವರಣದಲ್ಲಿ ನಲಿದಾಡುವ ಇಲ್ಲವೇ ತೊಳಲಾಡುವ ವ್ಯಕ್ತಿಗಳನ್ನು ಮಾತ್ರ. ಒಟ್ಟಿನಲ್ಲಿ ಇನಾಂದಾರರು ಸಮಕಾಲೀನ ಘಟನೆಗಳಿಂದ ಪ್ರಚೋದನೆಗೊಂಡು ಈ ಕಾದಂಬರಿಯನ್ನು ಕನ್ನಡ ಸಾಹಿತ್ಯಕ್ಕೆ ಒಂದು ವಿಶಿಷ್ಟ ಕೊಡುಗೆಯಾಗಿ ನೀಡಿದ್ದಾರೆಂಬುದರಲ್ಲಿ ಸಂಶಯವಿಲ್ಲ.

**ಪರಾಮರ್ಶನ ಗ್ರಂಥಗಳು**

1. ಹಾ.ಮಾ ನಾಯಕ (ಸಂ), 1990, ಕಾದಂಬರಿ ಲೋಕ, ಗೀತಾ ಬುಕ್ ಹೌಸ್, ಮೈಸೂರು
2. ಮೋಹನ ಕುಂಟಾರ್, 1994, ಇನಾಂದಾರರ ಕಾದಂಬರಿಗಳು, ಶ್ರೇಣಿ ಪ್ರಕಾಶನ, ಕಾಸರಗೋಡು
3. ರಾಜಗೋಪಾಲಾಚಾರ್ಯ. ಎಂಎಸ್. 1984, ನವನೀತ ಗೀತಾ ಬುಕ್ ಹೌಸ್, ಮೈಸೂರು
4. ಗಿರಡ್ಡಿ ಗೋವಿಂದರಾಜ, 1987, ಕಾದಂಬರಿ ವಸ್ತು ಮತ್ತು ತಂತ್ರ ಸ್ನೇಹ ಪ್ರಕಾಶನ, ಮಂಗಳೂರು
5. ಅಮೂರ್ ಜಿ.ಎಸ್., 1982, ಕನ್ನಡ ಕಾದಂಬರಿಯ ಬೆಳವಣಿಗೆ ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

❖❖❖

# ಜನಪದ ಸಾಹಿತ್ಯ ಪ್ರಕಾರಗಳು

**ಆರ್. ದುರ್ಗಾ ಮೆನನ್**
ಸಂಶೋಧನ ವಿದ್ಯಾರ್ಥಿ, ಮಣಿಪಾಲ ವಿಶ್ವವಿದ್ಯಾಲಯ

ಸಾಹಿತ್ಯ ಪ್ರಕಾರಗಳನ್ನು ಸ್ಥೂಲವಾಗಿ ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಎಂದು ವಿಭಾಗಿಸಲಾಗುತ್ತದೆ. ಕೆಲವು ಪ್ರಕಾರಗಳು ಶಿಷ್ಟ ಮತ್ತು ಜನಪದ ಎರಡೂ ವಿಭಾಗಗಳಲ್ಲೂ ಇದ್ದರೆ ಮತ್ತೆ ಕೆಲವು ಪ್ರಕಾರಗಳು ಕೇವಲ ಜನಪದದಲ್ಲಿ ಮಾತ್ರ ಕಾಣುತ್ತವೆ. ಇನ್ನು ಕೆಲವು ಪ್ರಕಾರಗಳು ಕೇವಲ ಶಿಷ್ಟ ವಿಭಾಗದಲ್ಲಿ ಮಾತ್ರ ಕಾಣುತ್ತವೆ. ಉದಾಹರಣೆಗೆ ಕಥೆಗಳು, ಕಾವ್ಯ, ಮಹಾಕಾವ್ಯ ಇವೆಲ್ಲ ಎರಡೂ ವಿಭಾಗಗಳಲ್ಲಿ ಇವೆ. ಸೋಬಾನೆ ಹಾಡುಗಳು, ಗಾದೆಗಳು, ಒಗಟುಗಳು ಇಂತಹ ಪ್ರಕಾರಗಳು ಜನಪದ ಸಾಹಿತ್ಯದಲ್ಲಿ ಮಾತ್ರ ಕಂಡುಬಂದರೆ ವಿಮರ್ಶೆ, ಪ್ರಬಂಧ, ಕಾದಂಬರಿ, ಸಾಹಿತ್ಯಮೀಮಾಂಸೆಯಂತಹ ಪ್ರಕಾರಗಳು  ಜನಪದ ಸಾಹಿತ್ಯವಾಗಿ ಅಸ್ತಿತ್ವದಲ್ಲಿ ಇಲ್ಲ. ಅವುಗಳು ಶಿಷ್ಟ ಸಾಹಿತ್ಯದಲ್ಲಿ ಮಾತ್ರ ಸಿಗುತ್ತವೆ.

ಜನಪದ ಸಾಹಿತ್ಯದ ಅಧ್ಯಯನಕಾರರು ಮತ್ತು ಸಂಶೋಧಕರು ಗಾದೆಗಳನ್ನು ಮತ್ತು ಒಗಟುಗಳನ್ನು ಜನಪದ ಸಾಹಿತ್ಯ ಎಂದೇ ಪರಿಗಣಿಸುತ್ತಾರೆ. ಆದರೆ ಇವುಗಳನ್ನು 'ಸಾಹಿತ್ಯ' ಎನ್ನುವ ವಿಭಾಗದಲ್ಲಿ ಪರಿಗಣಿಸಬೇಕೇ ಎನ್ನುವುದು ಜಿಜ್ಞಾಸೆಯ ವಿಚಾರವಾಗಿದೆ. ಯಾಕೆಂದರೆ ಸಾಮಾನ್ಯವಾಗಿ ಶಿಷ್ಟ ಸಾಹಿತ್ಯದಲ್ಲಿ ಜಾಣ್ಮೆಲೆಕ್ಕದಂತಹ ರಚನೆಗಳನ್ನು 'ಸಾಹಿತ್ಯ' ಎಂದು ಪರಿಗಣಿಸುವುದಿಲ್ಲ. ಅದೇನೇ ಇದ್ದರೂ ಗಾದೆಗಳು ಮತ್ತು ಒಗಟುಗಳು ಸ್ವಾರಸ್ಯಕರ ರಚನೆಗಳು ಎಂಬುದರಲ್ಲಿ ಎರಡು ಮಾತಿಲ್ಲ.

ಜನಪದ ಮಹಾಕಾವ್ಯ, ಜನಪದ ಹಾಡುಗಳು, ಕತೆಗಳು ಹೀಗೆ ಹಲವು ಪ್ರಕಾರಗಳನ್ನು ಜನಪದ ಸಾಹಿತ್ಯದಲ್ಲಿ ಕಾಣುತ್ತೇವೆ. ಹಾಡುಗಳನ್ನಷ್ಟೇ ಪರಿಗಣಿಸಿದರೆ, ದೈನಂದಿನ ಬದುಕಿನಲ್ಲಿ ನಿರ್ದಿಷ್ಟ ಸಂದರ್ಭ ಎಂದೇನೂ ಇಲ್ಲದೆ ಹಾಡಬಹುದಾದ ಹಾಡುಗಳಿರುವಂತೆಯೇ ನಿರ್ದಿಷ್ಟವಾಗಿ ವಿವಿಧ ವೃತ್ತಿಗಳಿಗೆ ಮತ್ತು ಆಚರಣೆಗಳಿಗೆ ಸಂಬಂಧಿಸಿದ ಹಾಡುಗಳು ಕೂಡ ಇವೆ. ಅಂತಹ ಹಾಡುಗಳನ್ನು ನಿರ್ದಿಷ್ಟುದ್ದೇಶದ ಹಾಡುಗಳೆಂದೂ ಕರೆಯಬಹುದು.

ಪ್ರಸ್ತುತ ಇಲ್ಲಿ ಜನಪದ ಮಹಾಕಾವ್ಯ ಮತ್ತು ಕತೆಗಳ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಿದೆ.

**ಜನಪದ ಮಹಾಕಾವ್ಯ**

ಜನಪದರ ರಚನೆಗಳಲ್ಲಿ ಅತ್ಯಂತ ವಿಶಿಷ್ಟವಾದವುಗಳೆಂದರೆ ಮಹಾಕಾವ್ಯಗಳು. ಯಾಕೆಂದರೆ ಅವು ಒಂದು ಸಮುದಾಯದ ಪರಂಪರೆಯನ್ನು, ಜೀವನದರ್ಶನವನ್ನು, ಆಶಯವನ್ನು, ಸಂಸ್ಕೃತಿಯನ್ನು ಮತ್ತು ಅಸ್ಮಿತೆಯನ್ನು ಅದರೆಲ್ಲಾ ಸಂಕೀರ್ಣತೆಯೊಂದಿಗೆ ನಮ್ಮ ಮುಂದಿಡುತ್ತದೆ. ರಾಮಾಯಣ ಮಹಾಭಾರತಗಳು ಹೇಗೆ ಸಮಗ್ರ ಭಾರತೀಯ ಸಂಸ್ಕೃತಿಯ ಭಾಗಗಳಾಗಿವೆಯೋ ಅದೇ ರೀತಿ ವಿವಿಧ ಪ್ರಾದೇಶಿಕ

ಜನಪದ ಮಹಾಕಾವ್ಯಗಳು ಆಯಾ ಪ್ರದೇಶ ಮತ್ತು ಸಮುದಾಯದ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುತ್ತದೆ. ಸಂಸ್ಕೃತ ಮೂಲದ ರಾಮಾಯಣ ಮಹಾಭಾರತಗಳು ಭಾರತದಾದ್ಯಂತ ಬೇರೆ ಬೇರೆ ಭಾಷೆಗಳಲ್ಲಿ ಶಿಷ್ಟ ಅಥವಾ ಲಿಖಿತ ರಚನೆಗಳಾಗಿ ಮರುಹುಟ್ಟು ಪಡೆದಂತೆಯೇ ಜನಪದರ ಬಾಯಲ್ಲೂ ಅನೇಕ ಬಗೆಯಲ್ಲಿ ಮರುಹುಟ್ಟು ಪಡೆದಿರುವುದು ಸರ್ವವಿದಿತ. 'ಮುನ್ನೂರು ರಾಮಾಯಣಗಳು' ಎಂದು ಎ.ಕೆ. ರಾಮಾನುಜನ್ ಅವರು ಕರೆದಿದ್ದಾರಾದರೂ ವಾಸ್ತವವಾಗಿ ಅದಕ್ಕಿಂತ ಎಷ್ಟೋ ಹೆಚ್ಚು ರಾಮಾಯಣಗಳೂ ಮಹಭಾರತಗಳೂ ಜನಮಾನಸದಲ್ಲಿವೆ. ಯಕ್ಷಗಾನಾದಿ ಕಲಾಪ್ರಕಾರಗಳಲ್ಲಿ ಮತ್ತೆ ಮತ್ತೆ ಮರುಹುಟ್ಟು ಪಡೆಯುತ್ತಿವೆ.

ಕನ್ನಡದಲ್ಲಿ ಮಲೆಮಾದೇಶ್ವರ ಸ್ವಾಮಿ, ಜುಂಜಪ್ಪ, ಚೌಡಿಕೆ ಎಲ್ಲಮ್ಮ, ಮೈಲಾರಲಿಂಗ, ಹಾಲುಮತ ಮೊದಲಾದ ಜನಪದ ಮಹಾಕಾವ್ಯಗಳಿವೆ. ಕರ್ನಾಟಕದ ಗುಡ್ಡಗಾಡಿನ ಬುಡಕಟ್ಟು ಜನಾಂಗಗಳಲ್ಲೂ ಜನಪದ ಮಹಾಕಾವ್ಯವಿರುವುದು ಕಂಡು ಬಂದಿದೆ. ಕನ್ನಡ ಜನಪದ ಮಹಾಕಾವ್ಯಗಳನ್ನು ಕಂಸಾಳೆ ಗುಡ್ಡರು, ನೀಲಗಾರರು, ಗಣೆಯವರು, ಚೌಡಿಕೆಯವರು, ಗೊರವರು ಮೊದಲಾದ ವೃತ್ತಿ ಗಾಯಕರು ಉಳಿಸಿಕೊಂಡು ಬಂದಿದ್ದಾರೆ. ಈ ಕಾವ್ಯಗಳು ನಿರ್ದಿಷ್ಟ ಆರಾಧನಾಪರಂಪರೆಗೆ ಸೇರಿವೆ. ಜನಪದ ಗುಂಪಿನ ಆರಾಧ್ಯದೈವ ಕಥಾ ನಾಯಕನಾಗಿರುತ್ತಾನೆ. ಆರಾಧ್ಯದೈವದ ಆರಾಧನೆ, ಪ್ರಚಾರ, ಪ್ರಸಾರ ವೃತ್ತಿಗಾಯಕರ ಉದ್ದೇಶವಾಗಿರುತ್ತದೆ. ಹಾಡುಗಾರಿಕೆಯಲ್ಲಿ ನಿರ್ದಿಷ್ಟವಾದ ವಾದ್ಯಗಳನ್ನು ಬಳಸುತ್ತಾರೆ. ಭಕ್ತಿಯಿಂದ ಹಾಡುವ ವೃತ್ತಿಗಾಯಕರಿಗೆ ಭಕ್ತಿಯಿಂದ ಕೇಳುವ ಭಕ್ತವರ್ಗವುಂಟು.

**ಜನಪದ ಕಥೆ :**

ಜಾನಪದ ವಿದ್ವಾಂಸರಾದ ಸ್ಟಿತ್ ಥಾಂಸನ್ ಜನಪದ ಕಥೆಯನ್ನು ಹೀಗೆ ವ್ಯಾಖ್ಯಾನಿಸುತ್ತಾರೆ. "The Story which has been handed down from generation to generation by word of mouth" ಕನ್ನಡದಲ್ಲಿ ಅಜ್ಜಿಕಥೆ, ಆಡುಗಲಜ್ಜಿ ಕಥೆ, ಕಟ್ಟುಕಥೆ, ಕಾಗಕ್ಕ ಗುಬ್ಬಕ್ಕನ ಕಥೆ, ರಾಜರಾಣಿ ಕಥೆ... ಇತ್ಯಾದಿ ಪದಗಳನ್ನು ಜನಪದ ಕಥೆಗೆ ಸಂವಾದಿಯಾಗಿ ಬಳಸುವ ರೂಢಿ ಇದೆ.

ಕಥೆಗಳಲ್ಲಿ ಕಲ್ಪನೆಗೆ ಬಹಳ ಪ್ರಧಾನ್ಯ ಕಥೆಯ ಬೇರೆ ಬೇರೆ ಪ್ರಕಾರಗಳಲ್ಲಿ ಈ ಕಲ್ಪನೆಯ ಪ್ರಮಾಣದಲ್ಲಿ ವ್ಯತ್ಯಾಸವಾಗಬಹುದು. ಇಲ್ಲಿ ವಾಸ್ತವ ಅಂಶಗಳೊಂದಿಗೆ ಕಾಲ್ಪನಿಕ ವಿವರಗಳು ಯಾವುದೇ ಭೇದವಿಲ್ಲದೆ ಬೆರೆತು ಬರುತ್ತವೆ. ಮಾತಾಡುವ ಪ್ರಾಣಿಗಳು ಜೀವಿಗಳಂತೆ ವರ್ತಿಸುವ ನಿರ್ಜೀವ ವಸ್ತುಗಳು, ದೇವತೆ, ರಾಕ್ಷಸ ದೆವ್ವ, ಬೇತಾಳ, ಕಿನ್ನರ, ಯಕ್ಷಿಣಿ ಮೊದಲಾದ ಕಾಲ್ಪನಿಕ ಅತಿಮಾನುಷ ಜೀವಿಗಳು, ಮಾಟಗಾತಿಯರು, ಸಾಧು ಸಂತರು ಇಲ್ಲಿ ಪಾತ್ರವಹಿಸುತ್ತಾರೆ. ಆದಿಮಾನವನ ಚಿಂತನೆ ಹಾಗೂ ಬದುಕಿನ ಪ್ರತಿಬಿಂಬವಾದ ನರಭಕ್ಷತನ, ಮಾಯೆ, ಮಾಟ, ಮೂಢನಂಬಿಕೆ ಹಾಗೂ ಆಚರಣೆಗಳನ್ನು ಕಥೆಗಳಲ್ಲಿ ಗುರುತಿಸಬಹುದು. ಕಥೆಗಳ ವಸ್ತುವಿನಲ್ಲಿ ಹೆಚ್ಚಿನಂಶ ಕಾಲ್ಪನಿಕವಾಗಿದ್ದರೂ ಚಾರಿತ್ರಿಕ, ಪೌರಣಿಕ, ಸಾಮಾಜಿಕ ಹಾಗೂ ವಾಸ್ತವಿಕ ವಿವರಗಳು ಸಮರಸವಾಗಿ ಬೆರೆತು ಅದೊಂದು ವಿಶಿಷ್ಟ ನಿರೂಪಣೆಯಾಗುತ್ತದೆ.

**ಕಥೆಗಳ ಪ್ರಯೋಜನ**

ಜನಪದಗಳು ಇಂದಿಗೂ ಮನೋರಂಜನೆ ಪ್ರಕಾರವಾಗಿ ಉಳಿದಿವೆ. ದೂರದರ್ಶನ, ಸಿನಿಮಾ ಹಾಗೂ ಇನ್ನಿತರ ಸಮೂಹ ಮಾಧ್ಯಮಗಳು ಜನಪದ ಕಥೆಗಳನ್ನು ಆಧರಿಸಿದ ಕಾರ್ಯಕ್ರಮವನ್ನು ಬಿತ್ತರಿಸುತ್ತಿವೆ. ಸಾಮಾಜಿಕ ಸೌಹಾರ್ದತೆಯನ್ನು ಬೆಸೆಯುವಲ್ಲಿ ಮಹತ್ತರವಾದ ಕೆಲಸವನ್ನು ಮಾಡುತ್ತವೆ. ಸಾಂಸ್ಕೃತಿಕ ಚರಿತ್ರಕಾರರಿಗೆ ಮಾನವ ಶಾಸ್ತ್ರಗಳ ಅಭ್ಯಾಸಿಗಳಿಗೆ ಭಾಷಾಶಾಸ್ತ್ರಜ್ಞರಿಗೆ ಜನಪದ ಕಥೆಗಳು ಅಮೂಲ್ಯವಾದ ಮಾಹಿತಿಯನ್ನು ಒದಗಿಸುತ್ತವೆ. ಹೀಗಾಗಿ ಜನಪದ ಕಥೆಗಳು ಜಾನಪದ ಇತರೆ ಪ್ರಕಾರಗಳಿಗಿಂತ ಹೆಚ್ಚಿನ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ.

**ಪರಾಮರ್ಶನ ಗ್ರಂಥಗಳು**


# ಅರುಣ ಕುಮಾರ್ ಎಸ್.ಆರ್, ಜಾನಪದ ಅನುಶೀಲನ, 1997, ಪೂರ್ಣ ಪ್ರಕಾಶನ, ಧರ್ಮಸ್ಥಳ
# ಚಂದ್ರಶೇಖರ ಕಂಬಾರ, ಕನ್ನಡ ಜಾನಪದ ವಿಶ್ವಕೋಶ ಸಂಪುಟ 1 1985, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
# ಮುಕುಂದ ಪ್ರಭು ಎಂ., ಪೊಲಿ, 2000, ಜಿಲ್ಲಾಧಿಕಾರಿ, ದ.ಕ., ಮಂಗಳೂರು
# ಸ್ವಾಮಿ ಬಿ.ಎಸ್., ಜಾನಪದ ಸೌರಭ 1993, ನವೀನ ಪ್ರಕಾಶನ, ಬೆಂಗಳೂರು


❖❖❖

ಹನಿಯೋಡುತಲಿದೆ ಹುಲ್ಲಲಿ ಜಾರಿ
ಹನಿಸುವ ಆಟವ ಆಡಿಹನಲ್ಲಿ

# ಕೀರ್ತನಾ ಸಾಹಿತ್ಯದಲ್ಲಿ ಅನುಭಾವದ ವಿಶಿಷ್ಟ ನೆಲೆ

**ಡಾ. ಕೆ. ಚಂದ್ರಕಾಂತ್**
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ) ಮಂಡ್ಯ

**ಡಾ. ದೇವಿಕ ಎಸ್.**
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರ.ದ.ಕಾಲೇಜು, ವಿಜಯನಗರ, ಬೆಂಗಳೂರು

ಕನ್ನಡ ಸಾಹಿತ್ಯದಲ್ಲಿ ಕೀರ್ತನಾ ಸಾಹಿತ್ಯ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ. ಭಕ್ತಿ ಮಾರ್ಗದ ಮೂಲಕ ಭಗವಂತನನ್ನು ಸೇರಬಹುದೆಂಬ ಭಾವಕ್ಕೆ ಕೀರ್ತನೆಗಳು ಮೂರ್ತರೂಪವನ್ನು ಕೊಟ್ಟವು. ತಮ್ಮ ಇಷ್ಟ ದೈವವನ್ನು ನಾನಾ ಪರಿಯಲ್ಲಿ ಸ್ತುತಿಸುವ ಕೀರ್ತನೆಗಳು ಸಮಾಜವನ್ನು ಸರಿದಾರಿಗೆ ತರುವ ಪ್ರಯತ್ನವನ್ನೂ ಮಾಡಿದವು. ವೈಯಕ್ತಿಕ ಬದುಕಿನಂತೆಯೇ ಸಾಮಾಜಿಕ ಬದುಕನ್ನು ಕೂಡ ಸರಿಮಾಡಿಕೊಳ್ಳುವ ಮೂಲಕ ಮೋಕ್ಷಕ್ಕೆ ದಾರಿ ಕಂಡುಕೊಳ್ಳಬೇಕು ಎನ್ನುವುದು ಕೀರ್ತನೆಗಳ ಹಿಂದಿರವ ತತ್ತ್ವ. ಹರಿ ಸ್ತುತಿಪರವಾದ ಈ ಕೀರ್ತನೆಗಳು ಸಂಗೀತದ ಸ್ವರ ಪ್ರಮಾಣ ಪಡೆದು ಸಂಗೀತ ಲೋಕ ಪ್ರವೇಶಿಸುತ್ತಿದ್ದು ಸಾಹಿತ್ಯದ ಪುಣ್ಯ ವಿಶೇಷವೆಂದೇ ಹೇಳಬೇಕು.

ತಮ್ಮ ಇಡೀ ಜೀವನವನ್ನು ತೆರೆದ ಪುಸ್ತಕದಂತೆ ಬದುಕಿ ಬಾಳಿದ ಕೀರ್ತನಕಾರರು ಸಾಮಾಜಿಕ ಕ್ರಾಂತಿಯ ಗಾಯಕರಾಗಿಯೇ ಕಂಗೊಳಿಸಿದರು. ಭಾಷಾ ದೃಷ್ಟಿಯಿಂದ ಬಹಳ ಸರಳವಾದ, ನಾದದ ದೃಷ್ಟಿಯಿಂದ ಸ್ವರಲೋಕಕ್ಕೆ ಒಗ್ಗುವ ಇಂಚರವಾಗಿರುವ ಕೀರ್ತನೆಗಳು ಜನಸಾಮಾನ್ಯರ ನಾಲಿಗೆಯಲ್ಲಿ ಹರಿದಾಡುತ್ತವೆ. ಸಾಹಿತ್ಯದ ಸ್ವಾರಸ್ಯದೊಂದಿಗೆ ಸಂಗೀತದ ಮಾಧುರ್ಯವು ಹದವಾಗಿ ಬೆರೆತು ಅನುಭಾವದ ನೆಲೆಯಲ್ಲಿ ಧರ್ಮದ ಸಂದೇಶವನ್ನು ಸಾರುತ್ತವೆ. ಅಂದರೆ ಜೀವತತ್ವ ಪರಮಾತ್ಮ ತತ್ವದಲ್ಲಿ ಲೀನವಾಗುವ ಅನುಭಾವದ ಪರಿ ಕೀರ್ತನೆಗಳ ಪ್ರಮುಖ ತತ್ವವಾಗಿದೆ.

ಶಿವಶರಣರು ಕನ್ನಡ ಕೀರ್ತನಸಾಹಿತ್ಯದ ಮೊದಲ ಪ್ರವರ್ತಕರೆಂದು ಎಲ್.ಬಸವರಾಜು ಅವರ 'ಶಿವಾದಾಸ ಗೀತಾಂಜಲಿ' ಕೃತಿಯಿಂದ ವಿದಿತವಾದರೂ ಕೀರ್ತನಸಾಹಿತ್ಯದ ಒಂದು ಮಹಾಪೂರವನ್ನು ತಂದು ಅದಕ್ಕೊಂದು ಗೇಯ ಸಾಹಿತ್ಯದ ರೂಪುರೇಷೆಯನ್ನು ನೀಡಿದವರು ಹರಿದಾಸರು. 13–14ನೆಯ ಶತಮಾನದ 'ನರಹರಿತೀರ್ಥರು' ಕೀರ್ತನಾ ಸಾಹಿತ್ಯದ ಆಧ್ಯ ಕೀರ್ತನಾಕಾರರೆಂದು ಗುರುತಿಸಿಕೊಂಡಿದ್ದಾರೆ.

**ವಿಹರಿಯೆ ಇದು । ಸರಿಯೆ**
**ಚರಣ ಸೇವಕರಲ್ಲಿ । ಕರುಣೆ ಬಾರದ್ಯಾಕೆ**
**ಪರಿತಿತನೆಂದು ಶ್ರೀ ಹರಿ ರಕ್ಷಿಸದಿರೆ**
**ವಿತತವಾಹುದೆ ನಿನ್ನ ಪತಿತ ಪಾವನಾ ಕೀರ್ತಿ ವಿ ಎಂಬಲ್ಲಿ**
**ವಿದೊರೆ ನಿನ್ನ ಮನಸ್ಸಿಗೆ ಸಂಬಂದಂತೆ ಮಾಡು**
**ಮೊರೆಹೊಕ್ಕನು ನಾ ನರಹರಿ ಪೂರ್ಣನೆ"**

ಎಂಬಲ್ಲಿ ಭಕ್ತಿಯ ಪರವಶತೆಯಿಂದ ಹರಿಯಲ್ಲಿ ಲೀನವಾಗುವ ಪರಿ ಸ್ಪಷ್ಟವಾಗಿ ಗೋಚರಗೊಳ್ಳುತ್ತದೆ.

ತದನಂತರದಲ್ಲಿ ಕಾಣಸಿಗುವ ಶ್ರೀಪಾದರಾಯ, ವ್ಯಾಸರಾಯರ ನೇತೃತ್ವದಲ್ಲಿ ಕೀರ್ತನಸಾಹಿತ್ಯವೊಂದು ಪ್ರವಾಹದಂತೆ ಹರಿದು ಬಂತು. ಇಷ್ಟದೈವದ ಅಂಕಿತದೊಂದಿಗೆ ಸಂಗೀತಕ್ಕೆ ಒಗ್ಗುವ ರಚನೆಗಳಾಗಿ ಕೀರ್ತನೆಗಳು ಸಮಾಜವಿಮರ್ಶೆಯನ್ನೂ ಮಾಡಿದವು. ಒಂದೇ ಭಾವವನ್ನು ಮೊದಲಿನಿಂದ ಕಡೆಯ ವರೆಗೂ ಸಾಧಿಸುವ ಗೀತ ಗುಚ್ಛಗಳಂತೆ ಕೀರ್ತನೆಗಳು ಕಂಗೊಳಿಸುತ್ತವೆ. ನೀತಿಬೋಧೆ ಮತ್ತು ತತ್ವಪ್ರಚಾರದ ತಂತುಗಳಾಗಿ ಕಂಡು ಬಂದ ಈ ಹರಿದಾಸರ ಕೀರ್ತನೆಗಳು ಸಮಾಜವನ್ನು ಸರಿದಾರಿಗೆ ತಂದು ಭಕ್ತಿಯ ಮೂಲಕ ಮೋಕ್ಷ ಮಾರ್ಗ ತೋರಿಸುವ ದಿಕ್ಸೂಚಿಗಳಾಗಿ ಕಂಗೊಳಿಸಿದವು.

ಭ್ರಮರಗೀತೆ, ವೇಣುಗೀತೆ, ಗೋಪಿಗೀತೆಗಳನ್ನು ರಚಿಸಿದ ಶ್ರೀಪಾದರಾಯರು ದಾಸಾಸಾಹಿತ್ಯದ ಪ್ರಮುಖ ಕೀರ್ತನಾಕಾರರು. ಮುಂದಿನ ಕೀರ್ತನಾಕಾರರಿಗೆ ವಿಶಿಷ್ಟ ರೀತಿಯ ಮಾದರಿಗಳನ್ನು ದರ್ಶಿಸಿದವರು. ಅವರು ಹರಿಯನ್ನು ಕುರಿತು ಹೀಗೆ ಹೇಳುತ್ತಾರೆ.

**ವಿಮುನ್ನ ಆಡಿದ ಮಾತ ಮರಿತು**
**ಎನ್ನ ವನದೊಳಗೀಡಾಡಿ**
**ವನಜಾಕ್ಷನು ಬಾರ ಪುರದ**
**ವನಿತೆಯರನು ಮೆಚ್ಚಿ ಪೋದ'**

ಹೀಗೆ ಕೀರ್ತನೆಗಳಲ್ಲಿ ಅನುಭಾವವು ಗಂಡು ಹೆಣ್ಣಿನ ನಡುವಿನ ಮಧುರಸಂಬಂಧದ ಭಾವವನ್ನೂ ನೆನಪಿಸುವುದು ಸಾಮಾನ್ಯ. ಯತಿಗಳಾಗಿ ಹಲವು ಲೌಕಿಕರಿಗೆ ದೀಕ್ಷೆ ನೀಡಿದ ವ್ಯಾಸರಾಯರು ಅಸಾಮಾನ್ಯ ವ್ಯಕ್ತಿತ್ವದ ಹಿರಿಮೆಯ ಮೂಲಕ ತಮ್ಮ ಕೀರ್ತನೆಗಳ ಮೂಲಕ ಭಕ್ತಿ ಪಾರಮ್ಯ ಸಾಧಿಸಿ ತೋರಿಸಿದವರು. 'ಶ್ರೀಕೃಷ್ಣ ರಂಗವಿಠಲ' ಎಂಬ ಅಂಕಿತದಿಂದ ಕೃಷ್ಣಲೀಲೆ, ಭಕ್ತನ ದೈನ್ಯತೆ, ವೈರಾಗ್ಯ, ಸಜ್ಜನರಸಂಗ, ಹರಿಮೊರೆ, ವೃತ್ತನಾಮಗಳನ್ನು ತಮ್ಮ ಕೀರ್ತನೆಗಳಲ್ಲಿ ಕಂಡರಿಸಿದವರು. ಇವರು ರಚಿಸಿದ ಈ ವೃತ್ತನಾಮಗಳು ರಂ.ಶ್ರೀ.ಮುಗುಳಿಯವರ ಅಭಿಮತದಂತೆ 'ಸರಳ ಭಾಷಾ ಶೈಲಿಯ ಭಗವದ್ಗೀತೆಗಳು'. ಮಧ್ವಶಾಸ್ತ್ರದ ಸಾರಾ ಸಂಗ್ರಹದಿಂದ ಗ್ರಹೀತರಾದ ಶ್ರೀಪಾದರಾಯರು ವಿಜಯನಗರದ ಶ್ರೀ ಕೃಷ್ಣದೇವರಾಯನ ಆಶ್ರಯದಲ್ಲಿ ವಿದ್ಯಾಪೀಠವನ್ನು ತೊರೆದು ನೂರಾರು ಹರಿಭಕ್ತರಿಗೆ ದೀಕ್ಷೆ ನೀಡಿ ಕೀರ್ತನಾಕಾರರನ್ನು ನೀಡಿದರು.

**"ತೊಳಲಿ ಸಂಸಾರ ಚಕ್ರದಲ್ಲಿ ಸಿಲುಕಿ**
**ಬಳಲಿದ ಜೀವಗಣಕೆ ಸಂತತ**
**ನಳಿನನಾಭಾ ನಿನ್ನ ಪದಾಂಭೋಜ**
**ನೆಳಲು......"**

ಎಂದು ಮುಂತಾಗಿ ಶ್ರೀಹರಿಯಲ್ಲಿ ಮೊರೆಯಿಡುತ್ತಾರೆ. ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳಾದ ಕನಕ ಮತ್ತು ಪುರಂದರದಾಸರು ತಮ್ಮ ಕೀರ್ತನೆಗಳಲ್ಲಿ ಸಮಾಜದಲ್ಲಿ ತಾವು ಕಂಡ ಅನುಭವಗಳನ್ನು ಅನುಭಾವಿಕ ನೆಲೆಯಲ್ಲಿ ಚಿತ್ರಿಸಿರುವ ಪರಿ ತುಂಬಾ ವಿಶಿಷ್ಟವಾಗಿದೆ.

ವ್ಯಾಸರಾಯರಿಂದ ದೀಕ್ಷೆ ಪಡೆದು 'ಪುರಂದರ ವಿಠಲ' ಎಂಬ ಅಂಕಿತದಿಂದ

ಮಧ್ವಮತಾನುಯಾಯಿಯಾದವರು ಪುರಂದರರು. ಸ್ವರ, ಲಯ, ತಾಳಗತಿಯ ರಾಗ ರಚನೆಯ ಮೂಲಕ ವಿಕರ್ನಾಟಕ ಸಂಗೀತದ ಪಿತಾಮಹಹಿ ಎಂಬ ಖ್ಯಾತಿಗೆ ಒಳಗಾದರು. ಅಸಂಖ್ಯಾತ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿದ ಪುರಂದರರ ಕೀರ್ತನೆಗಳು ವಿಪುರಂದರೋಪನಿಷತ್‌ಹಿ ಎಂದು ಕರೆಸಿಕೊಂಡಿವೆ. ಪುರಂದರರ ಕೀರ್ತನೆಗಳು ಸಂಕಥನಗಳಾಗದೆ ಅವು ಹರಿಯ ಭಾವಗೀತೆಗಳಾಗಿ ಆತ್ಮ ನಿವೇದನೆಯ, ಭಗವಂತನ ನಾಮಸ್ಮರಣೆಯ ಗೀತೆಗಳಾಗಿ ಗೋಚರವಾಗುತ್ತವೆ.

ಸಂಸಾರದಲ್ಲಿ ತೊಡಗಬೇಕು; ಮುಳುಗಬಾರದು ಎಂಬುದು ಪುರಂದರರ ಬೋಧೆ. 'ಮಾನವ ಜನ್ಮ ದೊಡ್ಡದು ಅದನ್ನು ಹಾಳುಮಾಡಬೇಡಿ ಹುಚ್ಚಪ್ಪಗಳಿರಾ' ಎನ್ನುವ ಪುರಂದರು, ಈಸಬೇಕು ಇದ್ದು ಜಯಿಸಬೇಕು ಎಂಬ ತತ್ವ ಸಾರವನ್ನು ಭೋದಿಸಿದರು. 'ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣ ಎನ್ನಬೇಕು' ಎನ್ನುವುದು ಅವರ ಅನುಭಾವದ ಸಾರ.

ಪುರಂದರರ ಪಡಿನೆರಳನಲ್ಲಿಯೇ ಸಾಮಾಜಿಕ ವಿಡಂಬನೆಯುಳ್ಳ ಕೀರ್ತನೆಗಳನ್ನು ಅನುಭವ ನೆಲೆಯಿಂದ ರಚಿಸಿ ಅನುಭಾವಿಕ ನೆಲೆಗೆ ಕೊಂಡೊಯ್ಯುವ ಮತ್ತೊಬ್ಬ ಕೀರ್ತನಕಾರರೆಂದರೆ ಕನಕದಾಸರು. ಚಿಂತನೆಗೆ ಹಚ್ಚುವ ಮತ್ತು ತತ್ತ್ವಜ್ಞಾನದ ಆಳವುಳ್ಳ ರಚನೆಗಳನ್ನೂ ಅವರು ಮಾಡಿದ್ದಾರೆ. ಉದಾಹರಣೆಗೆ:

**"ನೀ ಮಾಯೆಯೊಳಗೊ ನಿನ್ನೊಳು ಮಾಯೆಯಿ**

**ನೀ ದೇಹದೊಳಗೋ ನಿನ್ನೊಳು ದೇಹವೋ ಹರಿಯೋ**

**ಬಯಲೊಳಗೆ ಆಲಯದೋ ಆಲಯದೆಳಗೆ ಬಯಲೋ ।**

**ಬಯಲು ಆಲಯ ವೆರಡು ಮನೆಯನದೊಳಗೋ ।**

ಕನಕದಾಸರ ನಂತರ ಬಂದ ಶ್ರೀ ವಾದಿರಾಜರು ಕನ್ನಡ ಮತ್ತು ಸಂಸ್ಕೃತದಲ್ಲಿ ಸುಮಾರು 16 ಗ್ರಂಥಗಳನ್ನು ಬರೆದು 'ಹಯವದನ' ಎಂಬ ಅಂಕಿತದಲ್ಲಿ ಹಲವಾರು ಕೀರ್ತನೆಗಳನ್ನು ರಚಿಸಿದ್ದಾರೆ.

**ವಿತಾಳುವಿಕೆಗಿಂತ ತಪವು ಇಲ್ಲ**

**ಕೇಳಬಲ್ಲವರಿಗೆ ಹೇಳುವೆನು ಸೊಲ್ಲ । ನೆಟ್ಟಸಸಿ**

**ಫಲ ಬರುವ ತನಕ ಶಾಂತಿಯ ತಾಳು ..... ವಿ**

– ಎಂಬಲ್ಲಿ ಹರಿಭಕ್ತಿಯ ನಾಮಾಮೃತದ ಮಹತ್ವ ಚರಣ ಚರಣದಲ್ಲಿಯೂ ತುಂಬಿದೆ.

ತದನಂತರದಲ್ಲಿ ಬಂದ ವಿಜಯದಾಸರು, ಆನಂದತೀರ್ಥ, ವೇದವ್ಯಾಸರು, ರಾಘವೇಂದ್ರ ಸ್ವಾಮಿಗಳು ರಚಿಸಿದ ಸ್ತುತಿಗಳು ಹರಿಕಥಾಮೃತ ಸಾರವನ್ನು ಪರಿಪರಿಯಾಗಿ ಬಣ್ಣಿಸಿವೆ. ಇದೇ ಗುರುಪರಂಪರೆಯಲ್ಲಿ ಬಂದ ಜಗನ್ನಾಥದಾಸ, ಗೋಪಾಲದಾಸ, ಮೋಹನದಾಸರಿಂದ ಕೀರ್ತನಾ ಸಾಹಿತ್ಯ ಭಕ್ತಿಯ ಪಾರಮ್ಯವನ್ನು ಸಾಧಿಸಿ, ಅನುಭವದ ಆಧ್ಯಾತ್ಮ ಮಾರ್ಗದಿಂದ ಅನುಭವ ನೆಲೆಯನ್ನು ತಲುಪುವ ದಾರಿಯನ್ನು ಕಂಡುಕೊಂಡಿತು. ಮುಂದೆ ಈ ಪರಂಪರೆ ನಿಜಗುಣ ಶಿವಯೋಗಿಯ ಕೃತಿಗಳಲ್ಲಿ, ಚಿಕ್ಕದೇವರಾಜರ ಸಪ್ತಪದಿಗಳಲ್ಲಿ, ತಿರುಮಲಾರ್ಯ, ಚಿಕ್ಕಪ್ರದ್ಯಾಯ, ಸಿಂಗರಾರ್ಯ, ಶೃಂಗಾರಮ್ಮ, ಹೊನ್ನಮ್ಮ ಕೃತಿಗಳಲ್ಲಿ ದರ್ಶಿತವಾಯಿತು.

ಹೀಗೆ ಕೀರ್ತನಸಾಹಿತ್ಯ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಚಿರಂತನವಾಗಿರುವ ತತ್ತ್ವಗಳ ಮೂಲಕ ವಿಶಿಷ್ಟ ಬಗೆಯ ಸಾಹಿತ್ಯ ಪ್ರಕಾರವಾಗಿ ಕಂಗೊಳಿಸಿದೆ. ಸಾಹಿತ್ಯವನ್ನು ಸಂಗೀತದೊಳಕ್ಕೆ ಅಳವಡಿಸಿ, ಅದಕ್ಕೆ ಭಕ್ತಿಯ ತಂತುವಿನಿಂದ ಆಧ್ಯಾತ್ಮದ ಮಾರ್ಗದಲ್ಲಿ ಮೋಕ್ಷದೆಡೆಗೆ ಚಲಿಸುವ ಮಾರ್ಗವನ್ನು ಕೀರ್ತನಕಾರರು ತಮ್ಮ ಕೀರ್ತನೆಗಳ ಮೂಲಕ ಕಂಡರಿಸಿದರು. ವಾಸ್ತವದ ಅನುಭವದ ನೆಲೆಯಲ್ಲಿ ನಿಂತು ಸರಳ ಭಾಷೆಯ ಮೂಲಕ ಅನುಭಾವದ ಅಂತಃಚಕ್ಷುವಿನೊಂದಿಗೆ ಪಾರಮಾರ್ಥಿಕ ನೆಲೆಗೆ ಜನಸಾಮಾನ್ಯರನ್ನೂ ಒಯ್ಯಲು ಕೀರ್ತನಕಾರರಿಗೆ ಸಾಧ್ಯವಾಯಿತು ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ.

**ಪರಾಮರ್ಶನ ಗ್ರಂಥಗಳು**


1. ದಾಸಸಾಹಿತ್ಯದ ದ್ವಿತಿಯ ಘಟ್ಟದ ಹಿನ್ನಲೆ – ಕೆ.ಜಿ. ಗಟ್ಟಿ – (1970)
2. ಸಂಶೋಧನಾ ತರಂಗ – ಎಂ ಚಿದಾನಂದ ಮೂರ್ತಿ –ಸರಸ ಸಾಹಿತ್ಯ ಪ್ರಕಾಶನ, ಮೈಸೂರು– 1966
3. ಹರಿದಾಸ ಕೀರ್ತನಾ ತರಂಗಿಣಿ – (ಸಂ) ಸುಬೋಧ. ಯಂ ರಾಮರಾವ್– ಸುಬೋಧ ಪ್ರಕಾಶನ, ಬೆಂಗಳೂರು– 1977
4. ಕನ್ನಡ ಸಾಹಿತ್ಯ ಚರಿತ್ರೆ – ರಂ ಶ್ರೀಮುಗಳಿ –ಗೀತಾ ಬುಕ್ ಹೌಸ್–2014
5. ಹರಿದಾಸ ಹೃದಯ – ಜಿ ವರದರಾಜಾರಾವ್ – (1967)
6. ಕೀರ್ತನಾಕಾರರು – ಡಾ. ಹೆಚ್ ಎಸ್ ವೆಂಕಟೇಶ್ ಮೂರ್ತಿ, ಮರುಮುದ್ರಣ (2000)


❖❖❖

ಹಿಮವದು ಕರಗೆ ಬಿಸಿಲಿನ ಝಳಕೆ
ನದಿಯಾಗುತಲಿದೆ ಹರಿಯುತ ಕೆಳಕೆ

# ಮಹಾಕವಿ ಹರಿಹರ

**ಡಾ. ಪಾಟೀಲ ಶ್ರೀಕಾಂತ ವಿ.**
ಸಹಪ್ರಾಧ್ಯಾಪಕರು. ಸ.ಪ್ರ.ದ.ಮ. ಕಾಲೇಜು, ಬೀದರ

ಶರಣ ಪರಂಪರೆಯನ್ನು ಅನುಸರಿಸಿ ಬಂದ ಕವಿಗಳಲ್ಲಿ ಹರಿಹರ ಮುಖ್ಯನಾದವನು. ಬಸವಣ್ಣನ ನೇತೃತ್ವದಲ್ಲಿ ಜರುಗಿದ ಶರಣ ಸಂಕುಲದ ಆಂದೋಲನದ ಕಾಲಕ್ಕೂ ಈತನಿಗೂ ಸುಮಾರು ನೂರು ವರುಷಗಳ ಅಂತರವಿದೆ. ಬಸವಾದಿ ಶರಣರು ಪವಾಡಗಳನ್ನು ಮೆರೆದು ಜನತೆಯನ್ನು ಎಚ್ಚರಿಸಲು ಬಂದ ದೇವಲೋಕದ ಮಹಿಮಾನ್ವಿತರು ಎಂಬ ನಂಬಿಕೆ ಇವನ ಕಾಲಕ್ಕೆ ಜನಜನಿತವಾದಂತೆ ತೋರುತ್ತದೆ.

ಹರಿಹರ ಒಬ್ಬ ಭಕ್ತಕವಿ; ಶಿವಕವಿ. ಅವನ ಕಾವ್ಯಕ್ಕೆ ಉಜ್ವಲ ಶಿವಭಕ್ತಿಯೆ ಸ್ಥಾಯಿ. ಅವನ ಕಲ್ಪನೆ ಶಿವಪರ, ಶಿವಮಯ. ಕನ್ನಡದ ಇತರ ಹಲವು ಕವಿಗಳಂತೆ ಹರಿಹರನೂ ತನ್ನ ಬಗ್ಗೆ ತಾನು ಹೇಳಿಕೊಂಡಿರುವುದು ತುಂಬಾ ಕಡಿಮೆ. ಎಂ. ಚಿದಾನಂದಮೂರ್ತಿಯವರು ತಮ್ಮ ಸಂಶೋಧನೆಯ ಭಾಗವಾಗಿ ಹಂಪೆಯಲ್ಲಿ ಕ್ಷೇತ್ರ ಕಾರ್ಯ ಕೈಗೊಂಡು ಹರಿಹರನ ವಾಸಸ್ಥಳ ಆತನ ಪುಷ್ಪ ರಗಳೆಯಲ್ಲಿ ಬರುವ ಹೂದೋಟದ ಪ್ರದೇಶಗಳು ಯಾವುವೆಂಬುದನ್ನು ಶೋಧಮಾಡಿ ಪತ್ತೆಹಚ್ಚಿದ್ದಾರೆ. ಅಲ್ಲಿ ಬರುವ ಮನ್ಮಥಕುಂಡ ಮನ್ಮುಖಕುಂಡವೆಂದು ಹೇಳಿ ಅದರ ಹತ್ತಿರದ ನಾಗನಾಥೇಶ್ವರ ದೇವಾಲಯದ ಮುಂದೆ ಹರಿಹರನ ವಾಸಗೃಹವಿತ್ತೆಂದು ಹೇಳಿದ್ದಾರೆ. (ಮನ್ಮುಖತೀರ್ಥ ಮತ್ತು ಹರಿಹರನ ಹೂದೋಟ ಒಂದು ಅಭಿಜ್ಞೆ, ಪು.237–243). ಹರಿಹರನ ಗುರುಪರಂಪರೆಯನ್ನು ಹೀಗೆ ಗುರುತಿಸಲಾಗಿದೆ. 1. ಹಂಪೆಯ ಶಂಕರದೇವನ ಶಿಷ್ಯ 2. ಮಾದಿರಾಜ (ಇವನ ಶಿಷ್ಯ) 3. ಮಾಯಿದೇವ (ಇವನ ಶಿಷ್ಯ) 4. ಹಂಪೆಯ ಹರಿಹರ. ಇದರ ಜೊತೆಗೆ ಇವನ ಪುಷ್ಪ ರಗಳೆ ಪಿಂಡೋತ್ಪತ್ತಿ ರಗಳೆ ಮತ್ತು ಶತಕಗಳಲ್ಲಿ ಕಂಡು ಬರುವ ಅನೇಕ ಸಂಗತಿಗಳು ಕವಿಯ ಆತ್ಮಕಥೆಯನ್ನು ಅಭಿವ್ಯಕ್ತಿಸುತ್ತವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. 'ದೈತೆಯಂ ತಂದೊಬ್ಬಳಂ ಮದುವೆಯಂ ಮಾಡೆ' ಎಂಬ ಸಾಲು ಈತನ ವೈಯಕ್ತಿಕ ಜಿವನವನ್ನು ಕುರಿತದ್ದೆಂದು ಹೇಳುವವರೂ ಇದ್ದಾರೆ. ಆ ಪ್ರಕಾರ ಈತನಿಗೆ ಮದುವೆಯಾಗಿತ್ತೆಂದೂ, ಆಮೇಲೆ ವೈರಾಗ್ಯಭಾವ ಮೂಡಿ ಕಾವ್ಯಯೋಗಿಯಾದನೆಂದೂ ಅರ್ಥವಾಗುತ್ತದೆ.

**ಕೃತಿಗಳು:** 1. ಪಂಪಾಶತಕ 2. ರಕ್ಷಾಶತಕ 3. ಮುಡಿಗೆಯ ಅಷ್ಟಕ 3. ಗಿರಿಜಾಕಲ್ಯಾಣ ಮತ್ತು 4. ಶಿವಗಣದ ರಗಳೆಗಳು. ಈ ಕೃತಿಗಳ ರಚನೆಯ ಕ್ರಮದ ಬಗ್ಗೆ ಚರ್ಚೆ ನಡೆದಿದೆ. ಬಹುಶಃ ಇಂದಿನ ಎಲ್ಲ ಅಭ್ಯಾಸಿಗಳು ಒಪ್ಪುವಂತೆ ಮೊದಲಿನ ನಾಲ್ಕು ಗ್ರಂಥಗಳು ಅದರಲ್ಲಿಯೂ 'ಗಿರಿಜಾಕಲ್ಯಾಣ'ವು ಹರಿಹರನ ಕಾವ್ಯನಿರ್ಮಾಣದ ಮೊದಲ ಹಂತದಲ್ಲಿ ಹುಟ್ಟಿದುದೆಂದೂ ಶಿವಶರಣರ ರಗಳೆಗಳು ಎರಡನೆಯ ಹಂತದಲ್ಲಿ ಹುಟ್ಟಿದ್ದುದೆಂದೂ ಸ್ಥೂಲವಾಗಿ ಹೇಳಬಹುದು. ಚಂಪೂಕಾವ್ಯಗಳಲ್ಲಿ ವೈವಿಧ್ಯಕ್ಕಾಗಿ ಕ್ವಚಿತ್ತಾಗಿ ಉಪಯೋಗಿಸುತ್ತಿದ್ದ ರಗಳೆಯನ್ನು ಮಹಾಕಾವ್ಯಕ್ಕೆ ವಾಹಕವನ್ನಾಗಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಹರಿಹರನದು ಧುಮ್ಮಿಕ್ಕುವ ಪ್ರತಿಭೆ. ಅವನ

ರಭಸದ ಕಾವ್ಯಪ್ರವಾಹಕ್ಕೆ ರಗಳೆ ಒಳ್ಳೆಯ ಮಾಧ್ಯಮವಾಯಿತು. ಗಿರಿಜಾಕಲ್ಯಾಣದಲ್ಲಿ ಚಂಪೂಮಾರ್ಗವನ್ನೇ ಅನುಸರಿಸಿದ್ದರೂ ಚಂಪೂ ಅವನ ಪ್ರಕೃತಿಗೆ ಒಗ್ಗುವ ಕಾವ್ಯರೂಪವಲ್ಲವೆಂಬುದು ಸಹೃದಯನಿಗೆ ಕೂಡಲೇ ವೇದ್ಯವಾಗುತ್ತದೆ.

ಶಿವಗಣದ ರಗಳೆಗಳು ನೂರಾ ಆರು ಎಂದು ಹಿರೇಮಲ್ಲೂರು ಈಶ್ವರನ್ ಅವರು ಸಂಖ್ಯಾನಿರ್ಣಯ ಒಂದನ್ನೇ ಕುರಿತು ಶೋಧನೆಯನ್ನು ಮಾಡಿದ್ದಾರೆ. ಇದನ್ನೇ ಬಹುತೇಕ ವಿದ್ವಾಂಸರು ಒಪ್ಪಿದ್ದಾರೆ. ಇಲ್ಲಿಯ ರಗಳೆಗಳು ಸಾಮಾನ್ಯವಾಗಿ ಒಬ್ಬೊಬ್ಬ ಶಿವಭಕ್ತನ ಚರಿತೆಯನ್ನು ಹೊಂದಿವೆ. ಇವುಗಳಲ್ಲಿ ಕೆಲವು ಗಾತ್ರದ ದೃಷ್ಟಿಯಿಂದ ತೀರಾ ಚಿಕ್ಕದಾಗಿವೆ. ಕೆಲವು ಮಧ್ಯಮ ಗಾತ್ರದವುಗಳಿವೆ. ಇನ್ನೂ ಕೆಲವು ದೊಡ್ಡದಾಗಿವೆ.

******

'ಶಿವಗಣದ ರಗಳೆಗಳು ಹರಿಹರನ ವ್ಯಕ್ತಿತ್ವ ಸಿದ್ಧಿಯ ಪತಾಕೆಗಳು. ಅವುಗಳ ಎತ್ತರ ಸೊಬಗು ಬೇರೆಬೇರೆಯಾದರೂ ಒಂದೇ ವ್ಯಕ್ತಿತ್ವದ ಪರಿಪಾಕದಲ್ಲಿ ಅವುಗಳ ಮೂಲಾಧಾರವಿದೆ. ಅವುಗಳ ಕಥಾವಸ್ತು ಭಿನ್ನವಾದರೂ ಕಾವ್ಯರೂಪ ವರ್ಣನೆ ಶೈಲಿಗಳಲ್ಲಿ ಒಂದೇ ಪ್ರತಿಭೆಯ ಕೈವಾಡವಿದೆ. ಹರಿಹರನ ಕೃತಿಯೆಂದು ಹೆಸರು ಹೇಳದೆ ಸಹ ಗುರುತಿಸಲು ಬರುವಷ್ಟು ಅದು ನಿಚ್ಚಳವಾಗಿದೆ' ಎಂದು ರಂ. ಶ್ರೀ. ಮುಗಳಿಯವರು (ಕ. ಸಾ. ಚ., ಮು: 2012, ಪು.163) ಅಭಿಪ್ರಾಯ ಪಡುತ್ತಾರೆ. ಆದರೆ ಮುಂದೆ ಬಂದ ಅನೇಕ ಜನ ರಗಳೆ ಕೃತಿಕಾರರು ಇವನ ತಲೆಗೆ ರಚನೆಯ ಜವಾಬ್ದಾರಿಯನ್ನು ಕಟ್ಟಿರುವುದು ಕಾಣುತ್ತೇವೆ. ಹಿರೇಮಲ್ಲೂರು ಈಶ್ವರನ್ ಅವರು ಸಂಖ್ಯಾನಿರ್ಣಯವೊಂದನ್ನೇ ಪರಿಶೋಧಿಸಿ ಒಂದುನೂರಾಆರು ರಗಳೆಗಳು ಹರಿಹರನಿಂದ ರಚಿತವಾದವು ಎಂದು ನಿರ್ಣಯಿಸುತ್ತಾರೆ.

ಹರಿಹರನಿಗಿಂತ ಮೊದಲು ವಿವಿಧ ಲಯಗಳಿಂದ ಕೂಡಿದ ರಗಳೆಗಳು ವರ್ಣಕಗಳಿಗಾಗಿ ಪಂಪನಿಂದ ಮೊದಲುಗೊಂಡು ಬಹುತೇಕ ಕವಿಗಳು ವಿರಳವಾಗಿ ಬಳಸಿದ್ದರು. ಆದರೆ ಹರಿಹರನು ಕಥೆ, ವರ್ಣನೆ ಅಖಂಡವಾದ ವಸ್ತುವಿಗೆ ರಗಳೆಯನ್ನು ಮೊತ್ತಮೊದಲಿಗನಾಗಿ ಬಳಸಿ ರಗಳೆಯ ಸಂಸ್ಥಾಪನಾಚಾರ್ಯ ಎಂದೆನಿಸಿದನು.

ಆದಿ ಅಂತ್ಯಪ್ರಾಸ, ಮಾತ್ರಾಬಂಧ, ಅನಿಯಮವಾದ ಪಾದಸಂಖ್ಯೆ ಇವೆಲ್ಲವುಗಳಿಂದ ಕೂಡಿದ ರಗಳೆಯನ್ನು ಲಯಬದ್ಧವಾದ ಕಾವ್ಯರಚನೆಗೆ ವಾಹಕವನ್ನಾಗಿಸಿದನು. ಕೆಲವು ದೀರ್ಘ ರಗಳೆಯ ಕೃತಿಗಳಲ್ಲಿ ವೈವಿಧ್ಯಕ್ಕಾಗಿ ಒಂದು ಸ್ಥಲ ಪದ್ಯ ಇನ್ನೊಂದು ಗದ್ಯ ಹಿಗೆ ವಿಶಿಷ್ಟವಾದ ಪ್ರಕಾರವೊಂದನ್ನು ನಿರ್ಮಿಸಿದನು. ರಗಳೆಗಳೆಲ್ಲ ಹೆಚ್ಚಾಗಿ ಶಿವಶರಣರ ಚರಿತ್ರೆಯನ್ನೇ ಆಧರಿಸಿದ ರಚನೆಗಳು. ಪುರಾತನರ ಹಾಗೂ ನವೀನ ಶರಣರ ಕಥೆಗಳೆ ಇವುಗಳ ವಸ್ತುವಾಗಿವೆ. ಆದರೆ ಹರಿಹರನ ಭಕ್ತಿಯ ಪರಿವೇಶದ ಪ್ರಭಾವದಿಂದ ಅವು ಉಜ್ವಲ ರಚನೆಯಾಗಿ ಹೊರಹೊಮ್ಮಿವೆ. ರಂ. ಶ್ರೀ. ಮುಗಳಿಯವರು ಅಭಿಪ್ರಾಯ ಪಡುವಂತೆ 'ಮೂಲ ಕಥೆಯ ಲೋಹವನ್ನು ತನ್ನ ಕಲ್ಪನೆಯ ಸ್ಪರ್ಶದಿಂದ ಕಾವ್ಯಾತ್ಮಚರಿತೆಗಳ ರಾಶಿಯನ್ನೇ ಅವನು ಕನ್ನಡಕ್ಕೆ ನೀಡಿದ್ದಾನೆ'. ಇವನ ರಗಳೆಗಳಲ್ಲಿ ಕೇವಲ ಚರಿತ್ರೆಯಾಗಲಿ ಅಥವಾ ಕೇವಲ ಕಾವ್ಯಗಳಾಗಲಿ ಕಾಣುವುದಿಲ್ಲ. ಅವು ಹದವರಿತು ಮೇಳೈಸಿವೆ. 'ಅಳಿಯೆಱಗದನಿಲನಲುಗದ ರವಿಕರಂಪುಗದ' ಎಂಬ ಬಸವರಾಜದೇವರ ರಗಳೆಯಲ್ಲಿಯ(3–19) ಪಾದವು ಭಕ್ತಿಯ ಪಾರಮ್ಯವನ್ನು ಸಾರುವಂತಿದೆ.

ಬಸವರಾಜದೇವರ ರಗಳೆ ಹರಿಹರನನ್ನು ಮಹಾಕವಿಯನ್ನಾಗಿಸಿದ ಅಲ್ಪಗಾತ್ರದಲ್ಲಿದ್ದ ಮಹಾಕೃತಿಯೆನಿಸಿದೆ. ಇಂದು ನಮ್ಮ ಮಧ್ಯೆ ಇದ್ದಿರುವುದು ಖಿಲವಾಗಿರುವ ಅಪೂರ್ಣ ಪಾಠ. ಇದರಲ್ಲಿ ಹದಿಮೂರು ಸ್ಥಲಗಳು ಮಾತ್ರ ಲಭ್ಯವಿವೆ. ಈಗಿರುವ ಪಾಠದಲ್ಲಿಯೂ ಬಸವಣ್ಣನವರ ಉನ್ನತ ವ್ಯಕ್ತಿತ್ವ ಕಾಣುತ್ತೇವೆ. ಇದರಲ್ಲಿ ಭಕ್ತಿ ಜೀವನದ ರಸಯುತವಾದ ಚಿತ್ರಣವನ್ನು ಸಂಪೂರ್ಣ ತನ್ಮಯನಾಗಿ ವಿರಚಿಸಿದ್ದಾನೆ. ಬಸವರಾಜದೇವರ ರಗಳೆಯಲ್ಲಿ 3ನೆಯ ಸ್ಥಲದಲ್ಲಿ ಪೂಜೆಗೆ ಹೂವು ತೆಗೆದುಕೊಳ್ಳುವ ಸಂದರ್ಭದ ವರ್ಣನೆ ಅದಮ್ಯ ಭಾವದಿಂದ ಚಿತ್ರಿಸುತ್ತಾನೆ. 4ನೆಯ ಸ್ಥಲದಲ್ಲಿ ಗುರು ಕಾರುಣ್ಯವನ್ನು ಉತ್ಸಾಹಿತನಾಗಿ ಚಿತ್ರಿಸುತ್ತಾನೆ. ಬಸವಣ್ಣನ ವ್ಯಕ್ತಿತ್ವವನ್ನು ಅನಾವರಣಗೊಳಿಸುವಲ್ಲಿ ಹರಿಹರನಿಗೆ ಎಲ್ಲಿಲ್ಲದ ಉತ್ಸಾಹವನ್ನು ಕಾಣುತ್ತೇವೆ. ಭಕ್ತಜೀವಿಯಿಂದ ಮಾತ್ರ ಭಕ್ತ ಭಂಡಾರಿಯಾದ ಬಸವಣ್ಣನನ್ನು ಚಿತ್ರಿಸಲು ಸಾಧ್ಯ. ಇದು ಸಾಕಾರಗೊಂಡದ್ದು ಬಸವರಾಜದೇವರ ರಗಳೆಯಲ್ಲಿ. ಬಸವಣ್ಣನ ವ್ಯಕ್ತಿತ್ವವನ್ನು ಅನಾವರಣ ಮಾಡುವಲ್ಲಿ ಹರಿಹರನು ಏಕತಾನವಾದ ಭಾವನಿರ್ಭರತೆ ಭವ್ಯಕಲ್ಪಕತೆ ಹಾಗೂ ವಾಕ್ಸಹಜತೆಗಳಿಂದ ಅಲ್ಲಿಯ ಸನ್ನಿವೇಶ ಸಂವಾದ ವರ್ಣನೆಗಳನ್ನು ರೂಪಿಸಿರುತ್ತಾನೆ.

ಬಸವಣ್ಣ ಹಾಗೂ ಇನ್ನಿತರ ಶರಣರು ತೋರಿದ ದಾರಿಯಲ್ಲಿ ಮುನ್ನಡೆದು ಕ್ರಾಂತಿಕಾರಿಯೆನಿಸಿದವನು ಹರಿಹರ. ತನ್ನ ಪ್ರತಿಭಾ ಶಕ್ತಿಯಿಂದಾಗಿ ಒಂದು ಮಾರ್ಗವನ್ನೇ ರೂಪಿಸಿದಾತ. ಆದರೆ ಮುಂದೆ ಬಂದ ಇವನ ಸೊದರಳಿಯನೂ ಶಿಷ್ಯನೂ ಆಗಿರುವ ರಾಘವಾಂಕನೇ ರಗಳೆಯ ದಾರಿಯನ್ನು ತೊರೆದು ಷಟ್ಪದಿಯನ್ನು ಬಳಸಿದನು. ಹೀಗಾಗಿ ಹರಿಹರ ರಗಳೆಯ ಸಂಸ್ಥಾಪನಾಚಾರ್ಯ ಎಂದೆನಿಸಿದರೆ ರಾಘವಾಂಕನು ಷಟ್ಪದಿಯ ಸಂಸ್ಥಾಪನಾಚಾರ್ಯ ಎಂದೆನಿಸಿದನು.

**ಪರಾಮರ್ಶನ ಗ್ರಂಥಗಳು**


1. ಕನ್ನಡ ಸಾಹಿತ್ಯ ಚರಿತ್ರೆ ರಂ.ಶ್ರೀ. ಮುಗಳಿ, ಉಷಾ ಸಾಹಿತ್ಯಮಾಲೆ, ಮೈಸೂರು, 1960 ಮರುಮುದ್ರಣ 2012
2. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ 3 (ಕೋ. ಚನ್ನಬಸಪ್ಪ : ಹರಿಹರನ ಅಷ್ಟಕ ಶತಕಗಳು)ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1976
3. ಹರಿಹರನ ರಗಳೆಗಳು ಸಾಂಸ್ಕೃತಿಕ ಮುಖಾಮುಖಿ – ಶಿವಾನಂದ ಎಸ್. ವಿರಕ್ತಮಠ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003
4. ಗಿರಿಜಾಕಲ್ಯಾಣ ಮಹಾಪ್ರಬಂಧಂ. – ಸಂ: ಎಚ್. ದೇವಿರಪ್ಪ, ದೇ. ಜವರೇಗೌಡ, ಸ್ರೀ ಗೌರೀಶಂಕರ ಬುಕ್ ಡಿಪೋ, ಮೈಸೂರು, 1953
5. ಹರಿಹರನ ರಗಳೆಗಳು – ಸಂ : ಎಂ.ಎಂ. ಕಲಬುರಗಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999
6. ಲಿಂಗಾಯತ ಅಧ್ಯಯನಗಳು – ಎಂ. ಚಿದಾನಂದಮೂರ್ತಿ. 1986
7. ಮನ್ಮುಖತೀರ್ಥ ಮತ್ತು ಹರಿಹರನ ಹೂದೋಟ ಒಂದು ಅಭಿಜ್ಞೆ, – ಎಂ. ಚಿದಾನಂದ ಮೂರ್ತಿ. 1992
8. ಹರಿಹರನ ಕೃತಿಗಳು (ಒಂದು ಸಂಖ್ಯಾನಿರ್ಣಯ) – ಹಿರೇಮಲ್ಲೂರು ಈಶ್ವರನ್. 1992


❖❖❖

# ವಚನಕಾರ್ತಿಯರ ವಚನಗಳಲ್ಲಿ ಸಮಸಮಾಜದ ಆಶಯ

**ಡಾ.ಕೆ.ಜಿ. ಚವಾಣ**
ಪ್ರಾಚಾರ್ಯರು ಹಾಗೂ ಕನ್ನಡ ಸಹ ಪ್ರಾಧ್ಯಾಪಕರು,
ಎಸ್.ಜೆ.ಎಂ. ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ತರೀಕೆರೆ

ಅನುಭವದಿಂದಲೇ ಮೂಡಿ ರೂಪಿತವಾದ ವಚನ ಪ್ರಕಾರವು ಕನ್ನಡದ ಹೆಮ್ಮೆಯಾಗಿದ್ದು ವಿಶ್ವ ಸಾಹಿತ್ಯಕ್ಕೆ ಕನ್ನಡವು ಸಲ್ಲಿಸಿರುವ ಕಾಣಿಕೆಯಾಗಿದೆ. ಹನ್ನೆರಡನೆ ಶತಮಾನದ ವಚನ ಚಳವಳಿಯು ಕರ್ನಾಟಕ ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ನಾಂದಿ ಹಾಡಿತು. ವಚನಕಾರರು ಹಾಕಿಕೊಟ್ಟಿರುವ ತಾತ್ವಿಕ ಪರಿಕಲ್ಪನೆಗಳು ಇಡೀ ಕನ್ನಡ ಸಾಹಿತ್ಯಲೋಕ ನಿಬ್ಬೆರಗಾಗಿಸುವಂತೆ ಮಾಡಿತು. ವಚನಕಾರ್ತಿಯರ ಅಭಿವ್ಯಕ್ತಿಗೆ ಒಂದು ಮುಕ್ತತೆಯನ್ನು ಕಲ್ಪಿಸಿಕೊಟ್ಟಿದ್ದು ವಚನ ಸಾಹಿತ್ಯದ ಬಹುದೊಡ್ಡ ಸಾಧನೆ. ಈ ನೆಲೆಯಲ್ಲಿ ವಚನಕಾರ್ತಿಯರ ವಚನಗಳಲ್ಲಿ ಇರುವ ಬಹುಮುಖಿ ಆಯಾಮಗಳು ಚರ್ಚೆಯಾಗಬೇಕಾಗಿದೆ.

ಗಂಡು ಹೆಣ್ಣುಗಳ ಅಸಮಾನತೆಯ ಬಗ್ಗೆ ಜೇಡರ ದಾಸಿಮಯ್ಯ ತನ್ನ ಕಾಲದ ನಂಬಿಕೆಯನ್ನು ನಿರ್ಧಾಕ್ಷಿಣ್ಯವಾಗಿ ಖಂಡಿಸಿದ್ದಾನೆ. "ಮೊಲೆ ಮುಡಿ ಬಂದರೆ ಹೆಣ್ಣೆಂಬರು; ಗಡ್ಡ ಮೀಸೆ ಬಂದರೆ ಗಂಡೆಂಬರು; ನಡುವೆ ಸುಳಿವಾತ್ಮನು; ಗಂಡು ಅಲ್ಲ ಹೆಣ್ಣು ಅಲ್ಲ ಕಾಣಾ ರಾಮನಾಥ" – ದಾಸಿಮಯ್ಯನ ಹೆಂಡತಿ ದುಗ್ಗಳೆಯೂ ವಚನಕಾರ್ತಿಯಾಗಿರುವಂತಿದೆ 'ದಾಸಯ್ಯಪ್ರಿಯ ರಾಮನಾಥ' ಎಂಬ ಅಂಕಿತವಿರುವ ಅವಳ ವಚನದಲ್ಲಿ ಬಸವ ಅಲ್ಲಮ ಸಿದ್ಧರಾಮನ ಹೆಸರು ಬರುವುದು.

ಅಕ್ಕಮಹಾದೇವಿ ಎಂದು ಖ್ಯಾತಳಾಗಿರುವ ಶರಣೆ ವಚನ ಸಾಹಿತ್ಯದ ಉಜ್ವಲ ನಕ್ಷತ್ರ ಶ್ರೇಷ್ಠ ಅನುಭಾವಿ. ತನ್ನ ಆದರ್ಶಕ್ಕಾಗಿ ಸಾಮಾಜಿಕ ವ್ಯವಸ್ಥೆ ಮತ್ತು ರಾಜಪ್ರಭುತ್ವಗಳೆರಡನ್ನೂ ಏಕಕಾಲಕ್ಕೆ ಧಿಕ್ಕರಿಸಿ ನಿಂತವಳು. ಜೀವನವನ್ನು ಹೋರಾಟದಲ್ಲಿ ಕಳೆದವಳು ವಚನ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಗಳನ್ನು ಕೊಟ್ಟು ಕನ್ನಡದ ಹೆಣ್ಣು ಕುಲಕ್ಕೆ ಶ್ರೇಷ್ಠ ಕವಯಿತ್ರಿಯಾದವಳು. ಹೆಣ್ಣು ಕುಲಕ್ಕೆ ಒಂದು ಗೌರವ ಭಾವನೆಯನ್ನು ತಂದು ಕೊಟ್ಟು ಬಸವ, ಅಲ್ಲಮ ಮೊದಲಾದವರಿಂದ ಸನ್ಮಾನಿತಳಾದವಳು. ಶ್ರೀಶೈಲದ ಚೆನ್ನಮಲ್ಲಿಕಾರ್ಜುನನನ್ನು ತನ್ನ ಗಂಡನೆಂದೇ ಒಲಿದಳು.

ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಅಥವಾ ಬೌದ್ಧಿಕ ಇತಿಹಾಸದಲ್ಲಿ ಸ್ತ್ರೀ ಯಾವ ಪಾತ್ರವನ್ನು ವಹಿಸಬೇಕಿತ್ತೋ ಅದಕ್ಕೆ ಅವಕಾಶವಿಲ್ಲವಾಯಿತು. ವೈದಿಕಯುಗದಲ್ಲಿ ಕೆಲವು ಸ್ತ್ರೀ ದಾರ್ಶನಿಕರ ಹೆಸರು ಕಂಡುಬರುತ್ತವೆ. ಆದಾದ ಮೇಲೆ ಬಂದ ಭಾರತದ ಸಕಲ ಇತಿಹಾಸವೂ ಗಂಡಸರದಾಯಿತು. ಈ ಹಿನ್ನೆಲೆಯಲ್ಲಿ ನೋಡಿದಾಗ ವಚನಕಾರರ ಆಲೋಚನೆ ಅತ್ಯಂತ ಆಧುನಿಕವೂ ದೂರದೃಷ್ಟಿಯದೂ ಆಗಿದೆ. ಗಂಡು ಹೆಣ್ಣಿನ ಭೇದ ಭೌತಿಕ ಚಿಹ್ನೆಗಳಲ್ಲಿ ಮಾತ್ರ ಆದರೆ ಸತ್ವಶಃ ಇಬ್ಬರೂ ಒಂದೇ ಸಮಾಜದ ಉನ್ನತಿಯಾಗಬೇಕಾದರೆ ಅದರ ಅರ್ಧಭಾಗವಾದ ಸ್ತ್ರೀ ಸಮೂಹವನ್ನು ಹೊರಗಿಡುವುದು ವಿವೇಕವಲ್ಲ.

ಗಜೇಶ ಮಸಣಯ್ಯನ ಹೆಂಡತಿಯ ವಚನ ಈ ದೃಷ್ಟಿಯಿಂದ ಗಮನೀಯವಾಗಿದೆ.

**"ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು,**
**ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?**
**ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು,**
**ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?"**

ಹೀಗೆಯೇ ಮಣ್ಣು, ಅಂಗ, ಇಂದ್ರಿಯ ಜಗತ್ತುಗಳನ್ನು ಬಿಟ್ಟು ಲಿಂಗವನ್ನು ಒಲಿಸಬೇಕೆಂದು ಅಜ್ಞಾನಿಗಳು ಮಾತ್ರ ಹೇಳುತ್ತಾರೆ. ಆದರೆ ಅವು ಲಿಂಗಕ್ಕೆ ವಿರುದ್ಧವಲ್ಲವೆಂದು ಅವಳು ವಾದಿಸುತ್ತಾಳೆ. ನಿಜವಾಗಿಯೂ ವಿಚಾರಮಾಡಿದಾಗ ಆ ಅಡ್ಡಿಯಾಗುತ್ತವೆ ಎಂದು ಭ್ರಮಿಸುವ ಸಂಗತಿಗಳೇ ಮನುಷ್ಯನ ಹಿತಕ್ಕೆ ಸಾಧಕವಾಗಿ ಸುಖವನ್ನು ತರುತ್ತವೆ. ಎಂದರೆ ಪರದ ಸಾಧನೆಗೆ ಇಹಲೋಕದಿಂದ ತಪ್ಪಿಸಿಕೊಳ್ಳುವ ಅಗತ್ಯವೇ ಇಲ್ಲ. ದಾಸ ದುಗ್ಗಳೆಯರಾಗಲಿ ಸಿರಿಯಾಳ ಚಂಗಳೆಯರಾಗಲಿ ಸತಿಪತಿ ರತಿ ಸುಖವನ್ನು ಬಿಡಲಿಲ್ಲವೆಂದು ಬಸವಣ್ಣನೇ ವಾದಿಸಿದ್ದಾನೆ. ವಚನಕಾರರು ಸ್ಪಷ್ಟವಾಗಿ ಖಂಡಿಸಿದ್ದು ಪರಸತಿ ಸಂಗವನ್ನೇ ಹೊರತು ಗೃಹಸ್ಥ ಜೀವನವನ್ನಲ್ಲ ಬಸವನಿಗೆ ಮದುವೆಯಾಗಿದ್ದು ಗಂಗಾದೇವಿ, ನೀಲಲೋಚನೆಯವರನ್ನು ಆಗಿನ ಕಾಲದಲ್ಲಿ ಸ್ತ್ರೀಯರೂ ವಚನ ರಚನೆಗೆ ಕೈಹಾಕಿದ್ದು ಅವರಿಗೆ ದೊರಕಿದ ಆಲೋಚನಾ ಸ್ವಾತಂತ್ರ್ಯದ ಚಿಹ್ನೆಯಾಗಿದೆ.

ವಚನಕಾರ್ತಿಯರಲ್ಲಿ ನಮಗೆ ತಿಳಿದ ಮಟ್ಟಿಗೆ ಕಾಲಕ್ರಮದಲ್ಲಿ ಮೊದಲನೆಯವಳು ದುಗ್ಗಳೆಯೇ. ಜೇಡರ ದಾಸಿಮಯ್ಯ ಆದರ್ಶ ಭಕ್ತಿಗೆ ಸಂಕೇತವಾದಂತೆ ದಾಸಿಮಯ್ಯ ದುಗ್ಗಳೆಯರು ಆದರ್ಶ ದಾಂಪತ್ಯಕ್ಕೆ ಸಂಕೇತವಾದರು. ವಚನಕಾರ್ತಿಯರಲ್ಲಿ ಅತ್ಯಂತ ಶ್ರೇಷ್ಠಳಾದ ಅಕ್ಕಮಹಾದೇವಿಯ ವಿಷಯವನ್ನು ಆಗಲೇ ನೋಡಿದ್ದೇವೆ ಅವಳನ್ನು ಬಿಟ್ಟರೆ ಎರಡನೆಯ ಪ್ರಮುಖಸ್ಥಾನ ಮುಕ್ತಾಯಕ್ಕಗೆ ಸಲ್ಲಬೇಕು. ಗುಪ್ತಭಕ್ತಿ ಮತ್ತು ಸಂಪೂರ್ಣ ಶರಣಾಗತಿಗಳ ಜೀವಂತಮೂರ್ತಿಯಾದ ಅಜಗಣ್ಣನ ಸೋದರಿ ಮುಕ್ತಾಯಕ್ಕ, ತನ್ನ ವಚನಗಳಿಗೆ ಅಣ್ಣನಾದ ಅಜಗಣ್ಣನ ಅಂಕಿತವನ್ನಿಡುತ್ತಾಳೆ. 'ಕಂಡವರಿಗೆ ಕಡಿಮೆ ಮಾತು; ಕಾಣದವರಿಗೆ ಕಂಡಾಬಟ್ಟೆ ಮಾತು' ಇದು ಲೋಕದಲ್ಲಿ ಎಲ್ಲ ಸನ್ನಿವೇಶಗಳಿಗೂ ಅನ್ವಯವಾಗುವ ಒಂದು ಸತ್ಯ ಅದ್ವೈತವೆಂಬುದು ಶಿಶು ಕಂಡ ಕನಸಿನಂತಿರಬೇಕು. ಅದು ಹೇಳಲಿಕ್ಕೆಬಾರದು ಅನುಭವಕ್ಕೆ ಮಾತ್ರ ನಿಲುಕುವಂತಹದ್ದು. ಸಿದ್ದಪುರುಷ ಒಂದರ್ಥದಲ್ಲಿ ಶಿಶುವಾಗುತ್ತಾನೆ; ಸತ್ಯದ ಮುಂದೆ ಅವನು ತೀರ ಸಣ್ಣವನೆಂದು ಭಾವಿಸುತ್ತಾನೆ ಅಲ್ಲಮಪ್ರಭುವಿನ ಮಾತುಗಳೆಲ್ಲಾ ಅವಳಿಗೆ ಕೇವಲ ವಾದಾತ್ಮಕವಾಗಿ ಕಾಣಿಸುತ್ತವೆ. ಮುಕ್ತಾಯಕ್ಕ ಮುಖ್ಯವಾಗಿ ಬುದ್ಧಿಜೀವಿ. ಯಾವುದನ್ನೂ ಪರೀಕ್ಷಿಸದೆ ಕೆಣಕದೆ ಪ್ರಶ್ನಿಸದೆ ತನಗೆ ಒಪ್ಪಿಗೆಯಾಗದೆ ಅಂಗೀಕರಿಸುವವಳಲ್ಲ. ಅವಳು ಮಾತನಾಡುವಾಗ ಅಲ್ಲಮ ದೊಡ್ಡ ಜ್ಞಾನಿ; ತಾನು ಸಣ್ಣವಳು, ಹೆಣ್ಣು ಎಂಬ ಯಾವುದೇ ಅಳಕೂ ಇಲ್ಲ. ಅಲ್ಲಮನ ಯೋಗ್ಯತೆಯನ್ನೇ ಶಂಕಿಸಿ ಅವನನ್ನು ಕಡು ಪರೀಕ್ಷೆಗೆ ಒಳಗು ಮಾಡಿ ಅನಂತರ ಗುರುವಾಕ್ಯವೆಂದು ಅವನ ವಾಕ್ಯಗಳನ್ನು ಅಂಗೀಕರಿಸಿದ ವ್ಯಕ್ತಿಯೆಂದರೆ ಬಹುಶಃ ಮುಕ್ತಾಯಕ್ಕ ಒಬ್ಬಳೇ. ಬೌದ್ಧಿಕ ಪ್ರಖರತೆಯಲ್ಲಿ ಅವಳ ಸಮಕ್ಕೆ ಬರುವ ಮತ್ತೊಬ್ಬ ವಚನಕಾರ್ತಿ ಪ್ರಾಯಶಃ ಸಿಗಲಾರಳು ಮುಕ್ತಾಯಕ್ಕಗೆ ಭಾಷೆಯ ಸಾಧ್ಯತೆಗಳು ತಿಳಿದಿವೆ.

ಹಡಪದಪ್ಪಣ್ಣ ಬಸವಣ್ಣನ ಆಪ್ತರಲೊಬ್ಬ. ಅವನ ಹೆಂಡತಿ ಲಿಂಗಮ್ಮ. ಮನವನ್ನು ಹದಗೊಳಿಸಲು ದೇಹವನ್ನು ಶೋಷಿಸಬೇಕೆನ್ನುವವರ ವಾದವನ್ನು ಇವಳು ಒಪ್ಪಳು 'ಸಂದೇಹದಲ್ಲಿ ಮುಳುಗಿರುವ ಮನುಜರಿರಾ ನೀವು ಕೇಳಿರೊ ಹೇಳಿಹೆನು' ಎಂದು ಮನುಜ ಕುಲಕ್ಕೆ ಬುದ್ಧಿವಾದ ಹೇಳುವ ಸ್ಥಾನದಲ್ಲಿ ನಿಂತು ಮಾತನಾಡುತ್ತಾಳೆ. ಅವಳಿಗೆ ಕೈಲಾಸದ ದೇವತೆಗಳಿಗಿಂತ ಮರ್ತ್ಯದ ಮಹಾಗಣಗಳೇ ಶ್ರೇಷ್ಠ. ಏಕೆಂದರೆ ದೇವತೆಗಳಿಗೆ ಸಾವಿರ ವರ್ಷಕ್ಕಾದರೂ ಸಾವು ಬಂದೇ ಬರುತ್ತದೆ.

ತಾನು ತೀರ ಸಾಮಾನ್ಯ ಜಾತಿಯವಳೆಂದೂ ಬಸವಣ್ಣ ಮುಂತಾದವರಿಂದ ತಾನೊಬ್ಬಳು ಮನುಷ್ಯಳಾದೆ ಎಂದೂ ಅನೇಕ ಕಡೆ ಹೇಳಿಕೊಂಡಿದ್ದಾಳೆ. 'ಕನಿಷ್ಟದಲ್ಲಿ ಹುಟ್ಟಿದೆ ಉತ್ತಮದಲ್ಲಿ ಬೆಳೆದೆ' ಎಂದಿದ್ದಾಳೆ. ಒಟ್ಟು ಆ ಕಾಲದ ಸ್ತ್ರೀಯರ ಉದ್ಧಾರದ ಬಗೆಗೂ ಇವು ಒಳ್ಳೆಯ ದಾಖಲೆ. ಹಡಪದಪ್ಪಣ್ಣನೆ ಎನ್ನ ಕರಸ್ಥಲಕ್ಕೆ ಲಿಂಗವಾಗಿ ಬಂದು ನೆಲೆಗೊಂಡನು. ಎಂಬಲ್ಲಿ ತನ್ನ ಗಂಡನ ಬಗೆಗಿರುವ ಭಕ್ತಿಯನ್ನು ತೋರಿದ್ದಾಳೆ. ನೀಲಲೋಚನೆಯಂಥವರು ವಚನಗಳನ್ನು ಬರೆದಿದ್ದು ದೊಡ್ಡದೇ ನಿಜ. ಆದರೆ ಸೇವಕ ವೃತ್ತಿಯ ಹಡಪದ ಅಪ್ಪಣ್ಣನಂತಹ ಕೆಳವರ್ಗದವನ ಹೆಂಡತಿ 'ಕೇಳಿರೋ ಮನುಜರಿರಾ' ಎಂದು ಸಂಬೋಧಿಸಿ ಮಾತನಾಡುವುದು ಒಂದು ಪವಾಡವಾಗಿ ಕಾಣುತ್ತದೆ.

ಮೋಳಿಗೆ ಮಹಾದೇವಮ್ಮ ಮೋಳಿಗೆ ಮಾರಯ್ಯನ ಹೆಂಡತಿ. ಬೇಕೆಂದೇ ಬಡತನವನ್ನು ಆಯ್ದುಕೊಂಡಳು. ತನ್ನ ವಚನಗಳಲ್ಲಿ ಮಾರಯ್ಯನ ಶ್ರೀಮಂತಿಕೆಯ ಜೀವನವನ್ನು ಜ್ಞಾಪಿಸಿಕೊಂಡಿದ್ದಾಳೆ. "ಸವಾಲಕ್ಷದಲ್ಲಿ ಹುಟ್ಟಿ ಸಕಲ ಕ್ರಮಂಗಳಲ್ಲಿದ್ದು ಭೋಗಿಸಿ ಭಕ್ತಿಯನ್ನು ಮಾಡಿ ಕೈಲಾಸವನ್ನು ಬಯಸುವುದು ಕೆಲಸವನ್ನು ಮಾಡಿ ಕೂಲಿ ಬಯಸಿದಂತೆ" ಎಂದು ಹಾಸ್ಯ ಮಾಡುತ್ತಾಳೆ. ಕೈಯಲ್ಲಿರುವ ಲಿಂಗವನ್ನು ಅಲಕ್ಷಿಸಿದರೆ ಅದರಿಂದ ನಷ್ಟ ತಪ್ಪಿದ್ದಲ್ಲ ಎಂದು ಹೇಳುತ್ತಾಳೆ.

ಸತ್ಯಕ್ಕ ಒಬ್ಬ ಅತ್ಯಂತ ಪ್ರಾಮಾಣಿಕ ಸಾಧಕಿಯಾಗಿದ್ದು ವಚನಾಂಕಿತ ಶಂಭುಜಕ್ಕೇಶ್ವರ ತನ್ನ ಮನಸ್ಸಿನ ಪ್ರಾರ್ಥನೆ ಏಕೆನಗೆ ಕರುಣಿಸಲೊಲ್ಲದೆ ಕಾಡಿಹೆ ಏಕೆ ಹೇಳು ಎಲೆ ಲಿಂಗವೆ ತಾನು ಮಾಡಿದ ತಪ್ಪೇನು? ಅವಳ ಮಧುರಭಾವದ ವಚನಗಳು ಆಕರ್ಷಕವಾಗಿವೆ. "ಇನಿಯಂಗೆ ತವಕವಿಲ್ಲ ಎನಗೆ ಸೈರಣೆಯಿಲ್ಲ, ದಿನ ವೃಥಾ ಹೋಯಿತ್ತಾಗಿ ಯೌವನ ಬೀಸರವಾಗದ ಮುನ್ನ ಪಿನಾಕಿಯ ನೆರಹವ್ವಾ" ಎಂಬ ವಚನವು ಅವಳ ಮನಸ್ಸಿನ ಮೊರೆಯನ್ನು ಪ್ರತಿಧ್ವನಿಸುತ್ತದೆ, ತನ್ನ ಗಂಡ ಹೊರಗಿರುವನೆಂದು ಏನೋ ಮಾತಾಡಿದೆ ತಿಳಿಯದೆ ಇಲ್ಲೇ ಅಂತರಂಗದಲ್ಲಿಯೇ ಕುಳಿತು ಬಿಟ್ಟಿದ್ದ ಏನು ಮಾಡಲಿ ಎಂದು ಪೇಚಾಡುವ ಭಾವದ ವಚನ ಅವಳ ಅಂತರಂಗದ ಹೋರಾಟದ ಕುರುಹಾಗಿದೆ.

ಅಮುಗೆರಾಯಮ್ಮ ಕೂಡ ವಚನಗಳನ್ನು ಬರೆದಿದ್ದಾಳೆ. ಅವಳ ಅಂಕಿತ ಅಮುಗೇಶ್ವರಲಿಂಗ. ತಾನು ನಿಷ್ಟುರ ಸ್ವಭಾವದವಳು ವಚನಗಳನ್ನು ಹೇಳಿಕೊಂಡು ತಿರುಗುವ ತನ್ಮೂಲಕ ತಾವು ಜ್ಞಾನಿಗಳೆಂದು ಸುಳ್ಳು ಚಿತ್ರವನ್ನು ಕೊಡುವ ಜನರನ್ನು ಅದರಲ್ಲೂ ವಿರಕ್ತರನ್ನು ಇವಳು ಟೀಕಿಸಿರುವಂತೆ ಮತ್ತಾರೂ ಟೀಕಿಸಿಲ್ಲ. ಬೆಟ್ಟದ ನೆಲ್ಲಿಯ ಕಾಯಿಯನ್ನು ಹೊತ್ತುಕೊಂಡು ಹೋಗಿ ಪಟ್ಟಣದಲ್ಲಿ ಮಾರಿ ಹೊಟ್ಟೆ ಹೊರೆಯುವವನಂತೆ ಉತ್ತಮ ಕುದುರೆಯ ಹೆಸರು ಹೇಳಿ ಕಡಲೆ ತಿನ್ನುವವನಂತೆ ಆದ್ಯರ ವಚನಗಳನ್ನು ಅಲ್ಲಿಗಲ್ಲಿಗೆ ಉಸುರಿ ಹೇಳಿ ಕಡಲೆ ತಿನ್ನುವವನಂತೆ ಆದ್ಯರ ವಚನಗಳನ್ನು ಅಲ್ಲಿಗಲ್ಲಿಗೆ ಉಸುರಿ ಅನ್ನ ಕೂಳಿಗೆ ಹರಿದಾಡುವ ಅಜ್ಞಾನಿಗಳ

ಅನುಭಾವಿಗಳೆಂಬೆನೆ ಅಯ್ಯಾ ವಿರಕ್ತರೆಂಬೆನೆ ಎಂದು ಟೀಕಿಸುವುದು ಗಮನಾರ್ಹ. ಅವಳಲ್ಲಿ ಹಂದಿ, ಕತ್ತೆ, ಕಳ್ಳ, ಹೊತ್ತುಹೋಕರು ಪಟ್ಟಣದ ಸೂಳೆಯರ ಪ್ರತಿಮೆಗಳು ಬರುತ್ತವೆ. 'ಹೋತಿನ ಗಡ್ಡದಂತೆ ಹಿರಿಯ ನೋಡಾ' ಎಂಬಲ್ಲಿ ವಿಡಂಬನೆ ಸ್ಪಷ್ಟವಾಗಿದೆ. ಹೊಲದಲ್ಲಿ ಹುಲ್ಲಿನ ಬೆದರು ಬೊಂಬೆ ನಿಲ್ಲಿಸಿದರೆ ಅದಕ್ಕೂ ಇಷ್ಟಲಿಂಗ, ರುದ್ರಾಕ್ಷಿ, ಭಸ್ಮ ಇಡಬೇಕೆಂದು ಹೇಳುತ್ತಾಳೆ. ಹಕ್ಕಿ ಪ್ರಾಣಿಗಳು ಹತ್ತಿರಕ್ಕೂ ಸುಳಿಯಗೊಡದಂತೆ ಓಡಿಸುವ ಶಕ್ತಿ ಅದಕ್ಕಿದೆಯೆಂದು ಹೇಳುತ್ತಾಳೆ ಅದು ಆ ಬೊಂಬೆಯ ಶಕ್ತಿಯಲ್ಲ. ನಿಮ್ಮ ಮನಸ್ಸಿನ ಶ್ರದ್ಧೆ ಎಂದು ಹೇಳುವಾಗ ಮೂಢನಂಬಿಕೆಯಲ್ಲೂ ವೈಚಾರಿಕತೆಯನ್ನು ತೋರುತ್ತಾಳೆ. ಅಕ್ಕಮ್ಮನೂ ರಾಯಮ್ಮನ ಸ್ವಭಾವದವಳೇ. ಆದರೆ ಅವಳ ಮೊನಚು ಇವಳಲಿಲ್ಲ

ಗೊಗ್ಗವ್ವೆ ದಾಸಿಮಯ್ಯನ ವಚನವನ್ನು ಅನುಕರಿಸಿದ್ದಾಳೆ. 'ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಮೀಸೆ ಕಾಸೆ ಬಂದೆಡೆ ಗಂಡೆಂಬರು ಈ ಉಭಯದ ಜ್ಞಾನ ಹೆಣ್ಣೊ ಗಂಡೊ ನಾಸ್ತಿನಾಥ' ಇಂತಹುದೇ ವಚನ ಸತ್ಯಕ್ಕನಲ್ಲೂ ಉಂಟು. ಕದಿರ ರೆಮ್ಮವ್ವೆ ಕಾಳವ್ವೆಯರು ನೂಲುವ ಕಾಯಕದವರು ರಾಟೆಯ ಪ್ರತಿಮೆಯನ್ನು ಬಳಸಿ ರೆಮ್ಮವ್ವೆ ಆಧ್ಯಾತ್ಮವನ್ನು ಹೇಳಿದ್ದಾಳೆ. ಉರಿಲಿಂಗಪೆದ್ದಿಯ ಹೆಂಡತಿ ಕಾಳವ್ವೆಯ ಕೆಲವು ವಚನಗಳಲ್ಲಿ ಜಾತಿಭೇದದ ಬಗ್ಗೆ ಪ್ರತಿಭಟನೆ ಕಾಣುತ್ತದೆ. ಮಾದಿಗರ ಜಾತಿ ಕೀಳು ಎಂದು ಕರೆಯುವುದನ್ನು ಅವಳು ಖಂಡಿಸಿದ್ದಾಳೆ. ಶಿವಭಕ್ತ ಎದ್ದು ಗುರು ಲಿಂಗ ಜಂಗಮಕ್ಕೆ ಶರಣೆನ್ನಬೇಕೇ ಹೊರತು ಒಂಟಿ ಬ್ರಾಹ್ಮಣನ ಕಂಡು ಶರಣೆಂದರೆ ಹಂದಿಯ ಹೊಟ್ಟೆಯಲ್ಲಿ ಮತ್ತೆ ಮತ್ತೆ ಹುಟ್ಟಿ ಬರಬೇಕು ಎನ್ನುತ್ತಾಳೆ.

ಹಾದರದ ಕಾಯಕದ ಮಾರಯ್ಯನ ಹೆಂಡತಿ ಗಂಗಮ್ಮನ ಒಂದು ವಚನ ಹೀಗಿದೆ.

**"ಆವ ಕಾಯಕವ ಮಾಡಿದಡೂ ಒಂದೆ ಕಾಯಕವಯ್ಯಾ,**

**ಆವ ವ್ರತವಾದಡೂ ಒಂದೇ ವ್ರತವಯ್ಯ."**

ಕೊಟ್ಟಣದ ಸೋಮಮ್ಮನ ಅಂಕಿತ ನಿರ್ಲಜ್ಜೇಶ್ವರ – ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ ಎಂದು ತನ್ನ ವೃತ್ತಿಯನ್ನು ವಚನದಲ್ಲಿ ಸೂಚಿಸಿದ್ದಾಳೆ. ಬಾಚಿ ಕಾಯಕದ ಬಸವಯ್ಯನ ಹೆಂಡತಿ ಕಾಳವ್ವೆ 'ಕೈತಪ್ಪಿ ಕೆತ್ತಲು ಕಾಲಿಗೆ ಮೂಲ ಮಾತ ತಪ್ಪಿ ನುಡಿಯಲು ಬಾಯಿಗೆ ಮೂಲ' ಎನ್ನುವಲ್ಲಿ ತನ್ನ ಗಂಡನ ಉದ್ಯೋಗವನ್ನು ಸೂಚಿಸಿದ್ದಾಳೆ. ಕನ್ನಡಿ ಕಾಯಕದ (ಕ್ಷೌರದ ಜಾತಿಯ) ರೇಮಮ್ಮನ ಖಾರದ ಒಂದೇ ಒಂದು ವಚನವಿದೆ. ಧರ್ಮವಿರೋಧಿಗಳನ್ನು ಕೊಲ್ಲುವುದರಲ್ಲಿ ತಪ್ಪೇನೂ ಇಲ್ಲವೆಂದು ಅವಳ ವಾದ 'ಕೊಂದಡೆ ಮುಕ್ತಿಯಿಲ್ಲಯೆಂಬುವರ ಬಾಯಲ್ಲಿ ಪಡಿಹಾರನ ಪಾದರಕ್ಷೆಯ ನಿಕ್ಕುವೆ. ಮುಂಡಿಗೆಯ ನೆತ್ತಿರೊ ಭ್ರಷ್ಟಭವಿಗಳಿರಾ' ಎಂಬ ಸವಾಲು ಅವಳಲ್ಲಿದೆ. ಒಂದೊಂದೆ ವಚನ ದೊರಕಿರುವ ವಚನಕಾರ್ತಿಯರಲ್ಲಿ ಸೂಳೆ ಸಂಕವ್ವೆಯ ವಚನವೂ ಒಂದು. ನಿರ್ಲಜ್ಜೇಶ್ವರ ಅಂಕಿತನಾಮದಿಂದ ಸಂಕವ್ವೆ ಆತ್ಮವಿಶ್ವಾಸ, ದಿಟ್ಟ ಎದೆಗಾರಿಕೆ ತನ್ನ ವೃತ್ತಿಯಲ್ಲಿ ತಾನು ಅನುಸರಿಸುವ ನೀತಿಯನ್ನು ಹೇಳಿಕೊಳ್ಳಲು ಅವಳಿಗೆ ಯಾವುದೇ ನಾಚಿಕೆಯೂ ಇಲ್ಲ. ಸೂಳೆ ಸಂಕಲದೇವಿಯ(ಸಂಕವ್ವೆ) ಹೆಸರಿನ ಜೊತೆಗೆ ಸೂಳೆ ಬೊಮ್ಮಲದೇವಿ ಸೂಳೆ ಪದ್ಮಲದೇವಿ ಸೂಳೆ ಕಾಮಲದೇವಿಯರ ಹೆಸರುಗಳಿವೆ.

ವ್ಯಕ್ತಿ ಸ್ವಾತಂತ್ರ್ಯಕ್ಕೆ, ವಿಚಾರ ಸ್ವಾತಂತ್ರ್ಯಕ್ಕೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿದರ್ಶನಗಳು ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಕ್ಕಮಹಾದೇವಿ, ಸೂಳೆ ಸಂಕವ್ವೆ, ಕೊಟ್ಟಣದ ಸೋಮವ್ವೆಯರು

ಒಳ್ಳೆಯ ನಿದರ್ಶನ ಅನೇಕ ವಚನಕಾರ್ತಿಯರು ಪುರುಷರಂತೆಯೇ ಸಮಾಜ, ಧರ್ಮ, ಕಾಯಕಗಳ ಬಗ್ಗೆ ವಿಚಾರ ನಡೆಸಿದ್ದಾರೆ. ಅಭಿವ್ಯಕ್ತಿಯಲ್ಲಿ ತಮ್ಮತನವನ್ನು ತೋರಿರುವ ವಚನಕಾರ್ತಿಯರ ಸಂಖ್ಯೆ ಬಹಳವಿಲ್ಲ. ಸಾಹಿತ್ಯಕವಾಗಿ ಅಕ್ಕಮಹಾದೇವಿ ಇತರ ಯಾವುದೇ ಶ್ರೇಷ್ಠ ವಚನಕಾರನ ಮಟ್ಟಕ್ಕೂ ಬರುತ್ತಾಳೆ. ಬೌದ್ಧಿಕ ಪ್ರಖರತೆಯಲ್ಲಿ ಮುಕ್ತಾಯಕ್ಕ ಇತರರ ಆಲೋಚನೆಯ ಮಟ್ಟಕ್ಕೆ ಏರಬಲ್ಲಳು.

**ಆಕರ ಗ್ರಂಥಗಳು**


1. ವಚನ ಸಾಹಿತ್ಯ ಸಂಪುಟ–5, ಡಾ.ಎಂ. ಚಿದಾನಂದಮೂರ್ತಿ, ಪ್ರಸಾರಾಂಗ ಬೆಂಗಳೂರು ವಿ.ವಿ., ಬೆಂಗಳೂರು. 2000
2. ಶರಣ ಚರಿತಾಮೃತ, ಸಿದ್ಧಯ್ಯ ಪುರಾಣಿಕ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು. 1992
3. ಬಸವಣ್ಣನವರ ವಚನಗಳು, ಸಂಪಾದಕರು ಡಾ. ಎಲ್. ಬಸವರಾಜು, ಗೀತಾ ಬುಕ್ ಹೌಸ್ ಮೈಸೂರು. 1996
4. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ಬೆಂಗಳೂರು. 2014
5. ವಚನ ಸಾಹಿತ್ಯ ಸಂಪುಟ–1, ಡಾ.ಎಸ್.ವಿದ್ಯಾಶಂಕರ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. 2013


❖❖❖

ವಿಶ್ವ ಗೋಲಕದಿ ಜಲ ತೊಟ್ಟಿಕ್ಕಿ
ವ್ಯೋಮಕೇಶದಿಂ ಬುವಿಗಿಳಿದಿತ್ತು

# ತಾರಾ ಭಟ್ ಅವರ 'ಲೋಟಸ್ ಪಾಂಡ್' ಮಹಿಳೆಯರು

**ಡಾ. ದೇವಮ್ಮಣ್ಣಿ ಎಂ.**
ಸಹಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು

ಜಾಗತೀಕರಣ, ಆಧುನಿಕರಣವೆಂಬ ಪೆಡಂಭೂತಗಳು ಸರಕುಸಂಸ್ಕೃತಿಯನ್ನು ಬೆಳೆಸುತ್ತಾ ನಮಗರಿವಿಲ್ಲದಂತೆಯೇ ಕೊಳ್ಳುಬಾಕತನವನ್ನು ಸೃಷ್ಟಿಸಿ, ಪ್ರಲೋಭನೆಗಳಿಗೆ ನಮ್ಮನ್ನು ಒಡ್ಡುತ್ತಿವೆ. 2003ರಲ್ಲಿ ಪ್ರಕಟಗೊಂಡಿರುವ 'ಲೋಟಸ್ ಪಾಂಡ್' ಕಾದಂಬರಿ ಹುಸಿಮೌಲ್ಯಗಳಲ್ಲಿ ಬದುಕುವ ಮೇಲ್ವರ್ಗದ ಮಹಿಳೆಯರನ್ನು ಚಿತ್ರಿಸುತ್ತಾ, ಕೊಳಚೆ ಪ್ರದೇಶದ ಕ್ರೌರ್ಯ, ಅಲ್ಲಿನ ಸ್ತ್ರೀಪಾತ್ರಗಳು, ಈ ನಾಡಿನ ರಾಜಕೀಯದ ಬಗೆಗೂ ಒಂದಷ್ಟು ಮಾಹಿತಿ ಒದಗಿಸುತ್ತದೆ. ಬರಿಯ ಭಾವುಕತೆಯ ನೆಲೆಗಳಲ್ಲಿ ಮಾತ್ರವಲ್ಲದೆ ಸ್ತ್ರೀವಾದಿ ವೈಚಾರಿಕತೆ ಹಾಗೂ ಸೈದ್ಧಾಂತಿಕ ನೆಲೆಯಲ್ಲಿ ಕೂಡ ಹೆಣ್ಣಿನ ಸ್ಥಿತಿಯನ್ನು ಶೋಧಿಸುವ ತಾರಾ ಭಟ್ ಅವರ 'ಲೋಟಸ್ ಪಾಂಡ್' ಸ್ತ್ರೀ ಜಗತ್ತಿನ ಹಲವು ವಿಚಾರಗಳನ್ನು ಮನೋಜ್ಞವಾಗಿ ಚರ್ಚಿಸುವ ಒಂದು ಮಹತ್ವದ ಕಾದಂಬರಿ.

ಮೇಲುವರ್ಗದಲ್ಲಿನ ಹೆಚ್ಚಾಗಿ ಅನಿವಾಸಿ ಭಾರತೀಯ ಮಹಿಳೆಯರ ಹುಸಿತನ, ಲೋಲುಪತೆ, ಕೃತ್ರಿಮತೆ, ಹಾಗೂ ಥಳುಕಿನ ಲೋಕವನ್ನು ಪ್ರಕಟಿಸಲು 'ತಾವರೆಕೊಳ' (ಲೋಟಸ್ ಪಾಂಡ್)ದ ರೂಪಕವನ್ನು ಲೇಖಕಿ ಇಲ್ಲಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಇಲ್ಲಿನ ತಾವರೆಯ ಹೂಗಳು ಹಾಗೂ ತಾವರೆ ಕೊಳದ ಕಲ್ಪನೆ ನಮ್ಮ ಪಾರಂಪರಿಕವಾದ ಗ್ರಹಿಕೆಗೆ ವಿರುದ್ಧವಾಗಿದೆ. ಕೆಸರಿನಿಂದ ಹುಟ್ಟಿ ಬಂದ ತಾವರೆ ರಮಣೀಯವಾಗಿ ಇಲ್ಲಿ ವೈಭವೀಕರಣಗೊಳ್ಳುವುದಿಲ್ಲ. ಬದಲಾಗಿ ಹೊರನೋಟಕ್ಕೆ ಆಕರ್ಷಕವಾಗಿ ಕಾಣುವ ಇದೇ ತಾವರೆ ಕೊಳ ತನ್ನ ಆಳದಲ್ಲಿ ಜೊಂಡು ಕೆಸರಿನಿಂದ ನಾರುತ್ತಿರುವುದನ್ನು ಸಂಕೇತಿಸುತ್ತದೆ. ಇಲ್ಲಿ ಜನಪರವಾದ ಕಾಳಜಿಯನ್ನು ತಮ್ಮ ಸೋಗಿಗೆ ನಗದು ಮಾಡಿಕೊಳ್ಳುವ ಮಹಿಳೆಯರಿದ್ದಾರೆ. ಯಾವುದೇ ಗಟ್ಟಿಯಾದ ಮೌಲ್ಯಗಳನ್ನು ಪ್ರತಿಪಾದಿಸದ ಇವರುಗಳು ತರಗೆಲೆಗಳಂತೆ ತೂರಿ ಹೋಗಿಬಿಡುತ್ತಾರೆ. ಒಂದು ರೀತಿಯಲ್ಲಿ ಅಂತಃಕರಣದ ಸೂಕ್ಷ್ಮತೆ ಕಳೆದುಕೊಳ್ಳುತ್ತಾ ಹೋಗುವ ಪಾತ್ರಗಳು.

ಒಂದೆಡೆ ಸಂಪ್ರದಾಯಬದ್ಧ ಕುಟುಂಬ ವ್ಯವಸ್ಥೆಯಲ್ಲಿ ಹೆಂಗಸರು ಅಡುಗೆ ಕೋಣೆಯಲ್ಲಿ ಬಂಧಿತರು. ಮತ್ತೊಂದೆಡೆ ನಗರದಲ್ಲಿ ಮಹಿಳೆಯರು ಐಷಾರಾಮದ ಜೀವನಕ್ಕಾಗಿ ತಮ್ಮಲ್ಲಿನ ಭಾವನೆಗಳನ್ನೆಲ್ಲಾ ಕೊಂದುಕೊಂಡು ಬದುಕುವವರು. ಇವರಿಗೆ ಐಷಾರಾಮಿ ಬದುಕಿನ ಸಾಧ್ಯತೆಗಳೇ ಮುಖ್ಯವಾಗಿದ್ದು, ತಮ್ಮ ವ್ಯಕ್ತಿತ್ವವನ್ನು ಇತರರ ಮೇಲೆ ಸ್ಥಾಪಿಸುವುದೇ ಧ್ಯೇಯವಾಗಿ ಕಾಣುತ್ತದೆ. ಇಂತಹ ಭಾರತೀಯ ಪರಿಸರದಲ್ಲಿ ಬದಲಾದ ಕಾಲ ಧರ್ಮದಲ್ಲಿ ವಿದೇಶಿ ಸಂಸ್ಕೃತಿಗೆ ತೆರೆದುಕೊಂಡು ತಮ್ಮ ತಮ್ಮ ಅಸ್ತಿತ್ವ ಕಂಡುಕೊಳ್ಳಲು ಹೆಣಗುವ ಸ್ತ್ರೀಪಾತ್ರಗಳನ್ನು ಇಲ್ಲಿ ಕಾಣಬಹುದು.

ಶಿಕ್ಷಣ ಮತ್ತು ಸಾಮಾಜಿಕ ಸ್ತರದಲ್ಲಿ ಸಮಾನತೆ ಇಲ್ಲದಿರುವಾಗ ಹೆಂಡತಿ ಗುಲಾಮಳಂತೆ ಗಂಡನ ಬೇಕು ಬೇಡಗಳನ್ನು ಪೂರೈಸುವ ಒಬ್ಬ ನಿರ್ಜೀವ ಹೆಣ್ಣು ಅಷ್ಟೆ. ಈ ಸಂಬಂಧ ಕೇವಲ ಲೈಂಗಿಕವಾದುದು. ಇಂಥ ವಾಸ್ತವಕ್ಕೆ ಬಹಳ ದೊಡ್ಡ

ಉದಾಹರಣೆ ಕಾದಂಬರಿಯಲ್ಲಿನ ಕೃಪಾ ಡಿಕೋಸ್ಟಾಳ ಬದುಕು. ಈಕೆ ತನ್ನೆಲ್ಲಾ ಕನಸುಗಳನ್ನು ಗಂಡನಿಗಾಗಿ ಮರೆತು ಅವನ ಕನಸುಗಳು ನನಸಾಗಲು ಸಹಾಯ ಮಾಡಿದವಳು. ಗಂಡ, ಮಗಳು ತಮ್ಮ ಅಸ್ತಿತ್ವವನ್ನು ಮತ್ತೊಂದೆಡೆ ಕಂಡುಕೊಳ್ಳಲು ಹೊರಟಾಗ ಈಕೆ ತನ್ನ ಅಸ್ತಿತ್ವದ ಬಗ್ಗೆ ಚಿಂತಿಸುತ್ತಾಳೆ. ಗಂಡನ ಪ್ರಯೊಗಶೀಲ ಬದುಕಿನಲ್ಲಿ ಇವಳ ಬದುಕು, ನೆಮ್ಮದಿ, ಪ್ರೀತಿ ಬಲಿಯಾಗಿದ್ದವು. ಕೃಪಾಳನ್ನು ಎಲ್ಲ ಶ್ರೀಮಂತಿಕೆಯ ನಡುವೆಯು ಅನಾಥಪ್ರಜ್ಞೆ, ಒಂಟಿತನಗಳು ತೀವ್ರವಾಗಿ ಕಾಡಿದ್ದವು. ಅವಳ ಆಳವಾದ ಸಂವೇದನೆಗಳು ಯಾರಿಗೂ ಅರ್ಥವಾಗಿರಲಿಲ್ಲ. ಆದರೆ ಈಕೆ ವಿಚ್ಛೇದನದ ನಂತರ ತಾನೇನೆಂದು ಅರಿಯುವ ಹುಡುಕಾಟದಲ್ಲಿದ್ದಳು. ಮದುವೆ, ಕುಟುಂಬ ವ್ಯವಸ್ಥೆಯೊಳಗೂ ಅಭದ್ರತೆಯನ್ನು, ಏಕಾಂಗಿತನವನ್ನು ಅನುಭವಿಸಿ ತನ್ನ ಹುಟ್ಟೂರಿನಲ್ಲಿ ತನ್ನ ಅಸ್ತಿತ್ವದ ಬೇರುಗಳನ್ನು ಹುಡುಕಿಕೊಂಡು ಹೊರಟವಳು.

ಕುಟುಂಬ, ಮದುವೆ ಎಂಬ ವ್ಯವಸ್ಥೆಯಿಂದ ಭಿನ್ನವಾಗಿ ಬದುಕುವ ಅನೇಕ ಪ್ರಯೋಗಗಳು ನಡೆಯುತ್ತಲೇ ಇವೆ. ಮನುಷ್ಯನಿಗೆ ವ್ಯಕ್ತಿ ಸ್ವಾತಂತ್ರ್ಯ ಮುಖ್ಯವಾ? ಅಥವಾ ಕುಟುಂಬ ವ್ಯವಸ್ಥೆ ಮುಖ್ಯವಾ? ಎಂಬ ಚಿಂತನೆಯಲ್ಲಿ ಜಾನ್‌ಗೆ ವ್ಯಕ್ತಿ ಸ್ವಾತಂತ್ರ್ಯ ಮುಖ್ಯವಾದರೆ ಕೃಪಾಳಿಗೆ ವ್ಯಕ್ತಿ ಸ್ವಾತಂತ್ರ್ಯಕ್ಕಿಂತ ಕುಟುಂಬ ವ್ಯವಸ್ಥೆಯೇ ಮುಖ್ಯವಾಗಿತ್ತು. ಕುಟುಂಬ ಯಾವಾಗಲೂ ಹೆಣ್ಣಿಗೆ ಶ್ರೀರಕ್ಷೆಯನ್ನೊದಗಿಸುವುದು ಎಂಬುದನ್ನು ನಂಬಿದ್ದ ಇವಳಿಗೆ ಕುಟುಂಬದೊಳಗಿನ ಕ್ರೌರ್ಯ ಅರ್ಥವಾಗಿರಲಿಲ್ಲ. ದೇವರಲ್ಲಿ ಸಂಪೂರ್ಣ ಶರಣಾಗತಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತದೆ ಎಂಬ ಜಾನ್‌ನ ನಂಬಿಕೆಯಲ್ಲಿ ಕೃಪಾಳಿಗೆ ಎಳ್ಳಷ್ಟು ನಂಬಿಕೆ ಇರಲಿಲ್ಲ. ಕೃಪಾಳಿಗೆ ಮನುಷ್ಯರು, ದೇವರ ಆರಾಧನೆ, ಸೇವೆಯಲ್ಲಿ ಕಳೆದು ಹೋಗುವುದರಲ್ಲಿ ಸಾರ್ಥಕ್ಯವಿದೆ ಎನಿಸಿತ್ತು.

"ಹೆಂಗಸರು ಕೇವಲ ಕೌಟುಂಬಿಕ ಎಳೆಯಲ್ಲೆ ತಮ್ಮನ್ನು ತಾವು ವಶೀಕರಣಗೊಂಡವರಂತೆ ಇರುವುದರಿಂದಲೇ ತಮ್ಮ ಭಾವನೆಗಳನ್ನು, ಸಂವೇದನೆಗಳನ್ನು ಬೃಹತ್ತರಗೊಳಿಸಲು ಹೋಗುವುದೇ ಇಲ್ಲ. ಆದರಿಂದಲೇ ಕುಟುಂಬಜೀವನ ಒಡ್ಡುವ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ಅವರು ಕಳೆದುಕೊಳ್ಳುತ್ತಾರೆ. ಇದಕ್ಕಾಗಿಯೇ ಹೆಣ್ಣುಗಳು ಮದುವೆಯ ಚೌಕಟ್ಟಿನಲ್ಲಿಯೇ ಇರಲು ಬಯಸುವುದು" ಎಂಬ ಲೇಖಕಿಯ ಮಾತುಗಳು ಕೃಪಾಳ ಬದುಕನ್ನು ಅಂತಹ ಆಲೋಚನೆ ಹೊಂದಿರುವ ಭಾರತೀಯ ನಾರಿಯರ ಮನಸ್ಥಿತಿಗಳನ್ನು ತೆರೆದಿಡುತ್ತವೆ. ಮದುವೆಯ ನಂತರವೂ ಗಂಡ ಅಥವಾ ಹೆಂಡತಿ ತಮ್ಮವರನ್ನು ಬಿಟ್ಟು ಬೇರೆಯವರನ್ನು ಆಯ್ಕೆ ಮಾಡಿಕೊಳ್ಳುವುದು ಆಧುನಿಕತೆಯಾಗಿ, ಗಂಡು–ಹೆಣ್ಣಿನ ಆಧುನಿಕ ಪ್ರಜ್ಞೆಯಾಗಿ ಕಂಡರೆ ಅದು ಕೃಪಾಳಿಗೆ ಪುರುಷರು ಹೆಂಗಸರನ್ನು ಬಳಸಿಕೊಳ್ಳಲು ನಡೆಸುವ ಹುನ್ನಾರದಂತೆ ಕಾಣುತ್ತದೆ.

'ಗಾರ್ಡನ್ ವ್ಯೂ' ನಂತಹ ಪ್ರತಿಷ್ಠಿತ ಕಾಲೋನಿಯಲ್ಲಿ ವಾಸಿಸುವ, ವೃತ್ತಿಯಲ್ಲಿ ವೈದ್ಯಳಾದ ಆಯೇಷಾ ಜನಪರ ಕಾಳಜಿಯ ಬಗೆಗೆ ಅತ್ಯಂತ ಪ್ರಮಾಣಿಕವಾದ ಹಂಬಲವುಳ್ಳವಳು. ಅದರಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳಬಲ್ಲ ಈಕೆಯದು ಒಂದು ಇತ್ಯಾತ್ಮಕ ಪಾತ್ರ. ಆಧುನಿಕ ಬದುಕನ್ನು ಅಪ್ಪಿದ ಹೆಣ್ಣುಗಳ ಮನಸ್ಥಿತಿಗಳ ಬಗ್ಗೆ ಅವರ ಒಂಟಿತನ, ಅಭದ್ರತೆ, ಅವರ ಮುಖವಾಡದ ಮನಸ್ಸುಗಳ ಬಗ್ಗೆ ಚಿಂತಿಸುವ ಈಕೆ ವಿವಾಹವೆಂಬ ವ್ಯವಸ್ಥೆಯಾಚೆ ನಿಂತವಳು, ವಿವಾಹವೆಂಬ ಪ್ರವಾಹಕ್ಕೆ

ಎದುರಾಗಿ ಈಜಲು ಬಯಸಿದವಳು. ಕೃಪಾಳ ಬದುಕು ಕುಟುಂಬದೊಳಗಿದ್ದುಕೊಂಡೆ ಅಭದ್ರತೆಯ ಭಾವನೆ ಅನುಭವಿಸುವಾಗ, ವೃದ್ಧರ ಬದುಕುಗಳು ಒಂಟಿತನಗಳಲ್ಲಿ ನರಳುವಾಗ, ಮನುಷ್ಯರು ಸರಕು ಸಂಸ್ಕೃತಿಯನ್ನು ಅಪ್ಪಿಕೊಂಡು, ಅವಲಂಬಿಸಿಕೊಂಡು ಬದುಕುವುದಕ್ಕಿಂತ ಮನುಷ್ಯರನ್ನು ಹಚ್ಚಿಕೊಂಡು ಬದುಕಬೇಕೆನ್ನುತ್ತಾಳೆ. ಕೃಪಾ, ಜಾನ್, ಪ್ರತಿಭಾಳ ತ್ರಿಕೋನ ಪ್ರೇಮ ಸರಣಿಯಲ್ಲಿ ವ್ಯಕ್ತಿಸ್ವಾತಂತ್ರ್ಯ, ಗಂಡ–ಹೆಂಡಿರ ಸಂಬಂಧದ ನೈತಿಕತೆಯನ್ನು ಕುರಿತು ಚಿಂತಿಸುತ್ತಾಳೆ. ಆಧುನಿಕತೆ, ನಾಗರೀಕತೆ, ವಿದೇಶ ಬದುಕಿನ ಅನುಕರಣೆ ಹೆಚ್ಚಿದಂತೆ ಒಂದು ಸಂವೇದನಾರಹಿತ ಜಗತ್ತು ನಿರ್ಮಾಣವಾಗುವುದನ್ನು, ಅದರ ಅಪಾರ ಅಪಾಯಗಳನ್ನು ಆಯೇಷಾಳಂತಹ ಸೂಕ್ಷ್ಮ ಸಂವೇದನೆಯ ಪಾತ್ರ ಗುರುತಿಸುತ್ತದೆ.

ಹೆಣ್ಣಿಗೆ ಬದುಕಲು ಬೇಕಾದ ಗಟ್ಟಿತನಕ್ಕೆ ಉದಾಹರಣೆಯಾಗಿ ಲೇಖಕರು ಕೃತ್ತಿಕಾಳ ಪಾತ್ರವನ್ನು ಕಾದಂಬರಿಯಲ್ಲಿ ತಂದಿದ್ದಾರೆ. "ಅಮೇರಿಕಾದಲ್ಲಿ ಹೆಣ್ಣುಗಳೆಂದರೆ ಬರೇ ಸಂತಾನೋತ್ಪತ್ತಿ ಮತ್ತು ಮಗುವಿನ ಆರೈಕೆಗಾಗಿ ಹುಟ್ಟಿದವರು ಎಂದು ಪರಿಗಣಿಸುದೇ ಇಲ್ಲ. ಪ್ರೀತಿ, ಪ್ರೇಮ ಎಂದು ಗೋಜಲು ಮಾಡಿಕೊಳ್ಳುವುದಿಲ್ಲ. ತಮ್ಮೆಲ್ಲ ಜೀವನವನ್ನು ಗಂಡ ಮತ್ತು ಮಕ್ಕಳಿಗಾಗಿ ಎಂದು ಮುಡಿಪಿಡುವ ಇಲ್ಲಿನ ಹೆಂಗಸರ ಬಗ್ಗೆ ನನಗೆ ಆಶ್ಚರ್ಯವೆನಿಸುತ್ತದೆ" ಎಂಬ ಮಾತುಗಳಲ್ಲಿ ಕೃತಿಕಾಳ ವ್ಯಕ್ತಿತ್ವ ನಮಗೆ ಪರಿಚಯವಾಗುತ್ತದೆ.

ಗಾರ್ಡನ್ ವ್ಯೂ ಕಾಲೋನಿಯಲ್ಲಿ 'ಲೋಟಸ್ ಪಾಂಡ್' ಎಂಬ ಒಂದು ಮಹಿಳಾ ಸಂಘಟನೆಯನ್ನು (ಕ್ಲಬ್) ಕಟ್ಟಿದವಳು ನಮ್ರತಾ. ಲೋಟಸ್ ಪಾಂಡ್ ಎಂಬುದು, ಬದುಕು ಕೇವಲ ಯಾಂತ್ರಿಕವಾಗಬಾರದೆಂದು ಪರಸ್ಪರ ಮಾತನಾಡಲು ಚರ್ಚಿಸಲು, ವಿರಾಮವನ್ನು ಆನಂದವಾಗಿ ಕಳೆಯಲು ಮಹಿಳೆಯರಿಗಾಗಿ, ಮಹಿಳೆಯರೇ ಸೇರಿ ಕಟ್ಟಿಕೊಂಡ ಒಂದು ಸಂಸ್ಥೆ, ಒಂದು ವ್ಯವಸ್ಥೆ. ಇದು ಹೆಣ್ಣು ಮಕ್ಕಳಿಗೆ ಸೃಜನಾತ್ಮಕತೆಯ ಕೇಂದ್ರ ಬಿಂದು ಎಂದು ಎಲ್ಲರೂ ನಂಬಿದ್ದರು. ಇದರ ಸಂಸ್ಥಾಪಕಿಯಾಗಿ ತನ್ನದೇ ಒಂದು ವ್ಯಕ್ತಿತ್ವ ಕಟ್ಟಿಕೊಂಡು, ಒಂದು ಪ್ರಭಾವಿತ ವಲಯ ನಿರ್ವಹಿಸಿಕೊಂಡು, ಅದರಲ್ಲಿ ಅಧಿಕಾರ ಸ್ಥಾಪಿಸಿಕೊಂಡು, ಗೌರವ, ಪ್ರತಿಷ್ಠೆಗಳಿಗೆಗಾಗಿ ಬದುಕುವ ನಮ್ರತಾ ತನ್ನ ಸುತ್ತಮುತ್ತಲ ಹೆಣ್ಣುಮಕ್ಕಳ ಮೇಲೆ ಸಾಕಷ್ಟು ಪ್ರಭಾವ ಬೀರಬಲ್ಲ ವ್ಯಕ್ತಿತ್ವದವಳು. ವಾಸ್ತವದಲ್ಲಿ ಈಕೆ ಸಂಪೂರ್ಣ ಸ್ವಾರ್ಥಿ, ತನ್ನ ಒಳಿತಿಗಾಗಿ ಮತ್ತೊಂದು ಹೆಣ್ಣಿನ ಬದುಕನ್ನು ತನ್ನ ಲಾಭಕ್ಕಾಗಿ ಬಳಸಿಕೊಳ್ಳಲು ಹಿಂಜರಿಯುತ್ತಿರಲಿಲ್ಲ. ಕೃಪಾಳ ಒಂಟಿತನವನ್ನು ತನ್ನ ಲಾಭಕ್ಕಾಗಿ ಬಳಸಿಕೊಂಡಳು; ಸ್ತ್ರೀವಾದಿಯಲ್ಲಿನ ಫ್ಯೂಡಲ್ ಮನಸ್ಥಿತಿಯನ್ನು ಬಿಂಬಿಸುವ ಪಾತ್ರವಿದು.

ಮೇಲ್ನೋಟಕ್ಕೆ ಬಹಿರಂಗದಲ್ಲಿ ಸರಳವಾಗಿದ್ದರೂ ಅನೇಕ ಸಂಕೀರ್ಣ ಸಂಗತಿಗಳನ್ನು ಹೊಂದಿರುವ ಭಾರತೀಯ ಪರಂಪರೆಯನ್ನು ಅಧ್ಯಯನ ಮಾಡುವ ಸಲುವಾಗಿ ಅಮೇರಿಕಾದಿಂದ ಭಾರತಕ್ಕೆ ಬರುವ ನಿರೀಕ್ಷೆಯಲ್ಲಿರುವ ಪಾತ್ರ ಐರಿನ್ ಎಂಬ ಹೆಣ್ಣುಮಗಳು. ಕಾದಂಬರಿಯ ಕೊನೆಯ ಭಾಗದಲ್ಲಿ ಕಾಣಿಸಿಕೊಳ್ಳುವ ಪಾತ್ರವಿದು.

ಬಿಳಿಯರ ಸಂಸ್ಕೃತಿ ಉನ್ನತವಾದದು ಎಂಬುದು ಅಹಂನಿಂದ ಹುಟ್ಟಿರುವಂತದ್ದಾಗಿದೆ. ಬಿಳಿಯರ ಸಂಸ್ಕೃತಿಯೇ ಶ್ರೇಷ್ಠ ಎಂಬ ಮಾತನ್ನು ಲೇಖಕಿ ನಿರಾಕರಿಸುತ್ತಾರೆ. ಒಂದು ರೀತಿಯಲ್ಲಿ ಎಲ್ಲರೂ ಅಪೂರ್ಣರೇ; ಇದನ್ನು ಪಾಶ್ಚಾತ್ಯ ಸಂಸ್ಕೃತಿಯ ಎರವಲು ಎಂದು ತಿಳಿಯುವುದು ತಪ್ಪಾಗಿದ್ದು, ಭಾರತೀಯ ಜಾನಪದ

ಸಂಸ್ಕೃತಿಯಲ್ಲಿ ಇವೆಲ್ಲವೂ ಸಹಜವಾಗಿರುವುದು ಕಂಡುಬರುತ್ತದೆ. ಇಲ್ಲಿ ಎಲ್ಲರೂ ನೆಪಮಾತ್ರ. ಇಡೀ ಸಂದರ್ಭ ಅವಲೋಕಿಸಿದರೆ ಎಲ್ಲರೂ ಅಲ್ಲಿ ಅನಾಥರಾಗೇ ಕಾಣುವ ಸತ್ಯವನ್ನು ಇಲ್ಲಿ ಐರಿನ್ ಪಾತ್ರದ ಮೂಲಕ ಧ್ವನಿಸಲಾಗಿದೆ.

ಹೆಂಗಸರು ತಮ್ಮ ಸಂಕೋಚದಿಂದಾಗಿಯೇ ಅವರ ಅವನತಿಯನ್ನು ಅವರೇ ಮಾಡಿಕೊಳ್ಳುತ್ತಾರೆ ಎನ್ನುತ್ತಿದ್ದ ಜಾನ್ ಮಾತಿಗೆ ವಿರುದ್ಧವಾಗಿ ನಿಸ್ಸಂಕೋಚದಿಂದ ಬದುಕಬಲ್ಲ ಹೆಣ್ಣಾಗಿದ್ದವಳು ಪ್ರತಿಭಾ. ಜಾನ್ ಹಾಗೆ ಈಕೆ ಕೂಡ ತನ್ನ ಆಲೋಚನೆಗಳಿಗೆ, ಕನಸುಗಳಿಗೆ, ವ್ಯಕ್ತಿತ್ವಕ್ಕೆ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚು ಬೆಲೆ ಕೊಡುವವಳು. ಒಬ್ಬ ಸಂಸಾರಿಯಾಗಿ ಜಾನ್ ಕೈಗೊಳ್ಳುವ ನಿರ್ಧಾರ ಈ ಸಮಾಜದಲ್ಲಿ ತಪ್ಪಲ್ಲವೆಂದಾದಲ್ಲಿ ಪ್ರತಿಭಾಳ ನಿರ್ಧಾರ ಕೂಡ ಅಪರಾಧವಲ್ಲ ಎನಿಸುತ್ತದೆ. ವ್ಯಕ್ತಿಸ್ವಾತಂತ್ರ್ಯವೇ ಮುಖ್ಯವಾಗಿ ತನ್ನ ಬದುಕಿನ ಜವಾಬ್ದಾರಿಯನ್ನು ಮಾತ್ರವೇ ಅವಳು ಚಿಂತಿಸುತ್ತಿದ್ದಳು.

'ಗಾರ್ಡನ್ ವ್ಯೂ' ಎಂಬ ಬೆಂಗಳೂರಿನ ಪ್ರತಿಷ್ಠಿತ ಕಾಲೋನಿಯೊಂದರ ಸಮೀಪದಲ್ಲಿರುವ ಸ್ಲಂ ಒಂದರಲ್ಲಿ ವಾಸಿಸುವ ಸಾಮಾನ್ಯ ಹೆಣ್ಣು ಮಗಳು ಭಾಮಿ. ಲೇಖಕಿ ಈ ಕಾದಂಬರಿಯಲ್ಲಿ ಎರಡು ಭಿನ್ನ ನೆಲೆಯ ಬದುಕಿನ ಜನರನ್ನು ಮುಖಾಮುಖಿಯಾಗಿಸಿದ್ದಾರೆ. ಒಂದು ಶ್ರೀಮಂತ ಎನ್.ಆರ್.ಐಗಳು ವಾಸಿಸುವಂತಹ ಶ್ರೀಮಂತ 'ಗಾರ್ಡನ್ ವ್ಯೂ' ಕಾಲೋನಿಯಾದರೆ ಮತ್ತೊಂದು ಬಾಪು, ಅಂಬೇಡ್ಕರ್ ಕಾಲೋನಿಯಂಥ ಬಡ ಜನರಿರುವ ಕಾಲೋನಿ. ಅಸಹಾಯಕ, ಕಡು ಬಡತನದಲ್ಲಿ ವಾಸಿಸುವ ಭಾಮಿಯಂತಹ ಒಂದು ಪಾತ್ರವನ್ನು ಅಲ್ಲಿನ ಜನರ ಬದುಕಿನ, ಆಲೋಚನೆಗಳ ಪ್ರತಿನಿಧಿಯಾಗಿ ಚಿತ್ರಿಸಿದ್ದಾರೆ.

ಕುಟುಂಬದ ಒಳಗೆ ಹೆಣ್ಣು ಮಕ್ಕಳು ಅನುಭವಿಸುವ ಕ್ರೌರ್ಯವನ್ನು ಭಾಮಿ ಮತ್ತು ಅವಳ ಮಗಳ ಪಾತ್ರಗಳಲ್ಲಿ ಕಾಣುತ್ತೇವೆ. ಸ್ಲಂ ಬದುಕಿನ ದುರಂತ ಕಾಣುವುದು ಭಾಮಿಯಂತಹ ಅನಕ್ಷರಸ್ಥ, ಅನಾಗರೀಕ ಹೆಣ್ಣು ಮಗಳು ತನ್ನ ಮಗಳ ಮೇಲಾದ ಅತ್ಯಾಚಾರಕ್ಕೆ ಪ್ರತಿಕ್ರಿಯಿಸುವುದರಲ್ಲಿ. ಭಾಮಿಯ 8 ವರ್ಷದ ಚಿಕ್ಕ ಮಗುವಿನ ಮೇಲೆ ಅತ್ಯಾಚಾರವಾಗಿ ಆ ಮಗುವಿನ ಜನನೇಂದ್ರಿಯದಲ್ಲಿ ಕೀವು ಬರುವ ಹೊತ್ತಲ್ಲೂ ಆಕೆ ತಣ್ಣಗೆ ಹೀಗೆ ಪ್ರತಿಕ್ರಿಯಿಸುತ್ತಾಳೆ. "ಏಯ್ ಯಾಕ್ ಹಂಗೆ ದೆವ್ವ ಬಂದವರಾಗ್ ಕಿರುಗುಡ್ತಿ, ಸುಮ್ಕಿರು ಏನ್ ಆಗಾಕಿಲ್ಲ ಬಾಯ್‌ಮುಚ್ಚು ಮೊದಲ್, ಸಾಯುವಾಂಗ್ ಒದರ್ ಬ್ಯಾಡ್ ಒಂದು ಇಂಜೆಕ್ಷನ್ ಕೊಟ್ರ ನೋವಾಗಕಿಲ್ಲ. ನೀ ಸತ್ತರೆ ಸುಡುಗಾಡ್ ಹತ್ತಿರ ಇದೆ ಹೆದರ್ ಬ್ಯಾಡಾ" ಭಾಮಿ ತನ್ನ ಮಗಳೊಂದಿಗೆ ಡಾ. ಆಯೇಷಾಳ ಆಸ್ಪತ್ರೆಗೆ ಬಂದಾಗ ಆಡುವ ಈ ಮಾತುಗಳು ಓದುಗರಲ್ಲಿ ಆತಂಕ ಹುಟ್ಟಿಸುತ್ತವೆ. ಭಾಮಿಗೆ ಮಗಳ ಮೇಲೆ ನಡೆದಿರುವ ಪೈಶಾಚಿಕ ಕೃತ್ಯ ತಪ್ಪೆಂದಾಗಲಿ, ಅಪರಾಧವೆಂದಾಗಲಿ ಎಂದೂ ಅನ್ನಿಸಿರಲಿಲ್ಲ. ಯಾಕೆಂದರೆ ಭಾಮಿ ಕೂಡ ತನ್ನ ಕುಟುಂಬದ ಒಳಗೆ ಇಂತಹ ದೌರ್ಜನ್ಯಕ್ಕೆ, ಅತ್ಯಾಚಾರಕ್ಕೆ ಒಳಗಾಗಿದ್ದಳು, ಮಗಳ ಆರೋಗ್ಯ, ಆ ಕ್ಷಣದ ಆ ನೋವುಗಳಿಗಿಂತ ಅವಳಿಗೆ ತಮ್ಮನ ಮಾನ ಮರ್ಯಾದೆ ಮುಖ್ಯವಾಗಿ ಕಂಡಿತ್ತು. ಅವಳ ದೃಷ್ಟಿಯಲ್ಲಿ ಅತ್ಯಾಚಾರ ಒಂದು ಅಪರಾಧವಾಗಿರಲಿಲ್ಲ; ಒಂದು ಅಭ್ಯಾಸವಾಗಿತ್ತು ಅಥವಾ ಪ್ರತಿಭಟಿಸಲಾರದ ಒಂದು ಅಸಹಾಯಕತೆಯಾಗಿತ್ತು. ಆದರೆ ಹೇಳಲಾರದ ಒಂದು ನರಕಯಾತನೆಯನ್ನು ಅಲ್ಲಿನ ಹೆಣ್ಣುಮಕ್ಕಳು ಅನುಭವಿಸುತ್ತಿದ್ದರು. ಗಾರ್ಡನ್ ವ್ಯೂ ಕಾಲೊನಿಯಲ್ಲಿನ ಸಿರಿವಂತ ಹೆಣ್ಣಿನ ಅಸಹಾಯಕತೆಗೂ ಕೊಳಗೇರಿಗಳಲ್ಲಿನ

ಹೆಣ್ಣಿನ ಅಸಹಾಯಕತೆಗೂ ಯಾವುದೇ ವ್ಯತ್ಯಾಸವಿರದ ಸಮಾಜವನ್ನು ನಾವಿಲ್ಲಿ ಕಾಣುತ್ತೇವೆ.

ಈ ಕಾದಂಬರಿಯಲ್ಲಿನ ಮತ್ತೊಂದು ಮಹತ್ವದ ಅಂಶವೆಂದರೆ ಮನುಷ್ಯರ ಮನಸ್ಥಿತಿ, ಬದುಕುಗಳನ್ನು ಪ್ರಕೃತಿಯ ರೂಪಕಗಳ ಮೂಲಕ ವಿಶಿಷ್ಟವಾಗಿ ನಿರೂಪಿಸಿರುವುದು. ಅಂತೆಯೇ ಪ್ರಕೃತಿಯ ಅಗಾಧವಾದ ಶಕ್ತಿಯ ಎದುರು ಮನುಷ್ಯ ಎಷ್ಟೊಂದು ಕುಬ್ಜ ಎನ್ನುವುದನ್ನು ಅಭಿವ್ಯಕ್ತಗೊಳಿಸಲು, ಅಶ್ವತ್ಥ ಮರವೊಂದು ನೂರಾರು ವರ್ಷಗಳಿಂದ ಬೆಳೆದುಕೊಂಡು ತನ್ನ ಸುತ್ತ ದಂತಕಥೆಗಳನ್ನು ಕಟ್ಟಿಕೊಂಡು ಇದ್ದುದು, ಸಾವೇ ಇಲ್ಲ ಅದಕ್ಕೆ ಎಂದು ಜನರ ಬಾಯಿಂದ ಅನ್ನಿಸಿಕೊಂಡದ್ದು, ಅದೂ ಕೂಡ ಪ್ರಳಯಕಾರಿ ಮಳೆಗೆ ಬಲಿಯಾಗಿ ಶ್ರೀಮಂತ ಕಾಲೋನಿಯ ತಾರಸಿ ಮನೆಯೊಂದರ ಮೇಲೆಯೇ ಬೀಳುವುದು ತನ್ಮೂಲಕ ಪ್ರಕೃತಿಯ ಅಸಾಧಾರಣ ಶಕ್ತಿಯನ್ನು ಚಿತ್ರಿಸುತ್ತಾ ಕ್ಷಣಕಾಲ ಓದುಗರು ಕೂಡ ದಿಗ್ಭ್ರಮೆಗೆ ಒಳಗಾಗುತ್ತಾರೆ. ಸಹಸ್ರ ಯುಗಗಳಿಂದ ಕಾಲನ ಹೊಡೆತಕ್ಕೆ ಸೆಣಸಾಡಿ ನಿಂತ ನಿಸರ್ಗ ಕೋಟಿ ಕೋಟಿ ವರುಷಗಳಲ್ಲಿ ತಾನು ಕಂಡಿದ್ದನ್ನೆಲ್ಲಾ ದಾಖಲಿಸುವ ಶಕ್ತಿ ಹೊಂದಿದ್ದರೆ ಮನುಷ್ಯರಿಗೆ ಎಷ್ಟೆಲ್ಲಾ ಸತ್ಯಗಳು ಅರ್ಥವಾಗುತ್ತಿದ್ದವು!

ಗಾರ್ಡನ್ ವ್ಯೂ ಕಾಲನಿಯ ನಿವಾಸಿಗಳಿಗೆ ದಕ್ಕಿದ್ದು ನೆಮ್ಮದಿ ಕೊಡದ ಸಂಪತ್ತು ಮತ್ತು ಪ್ರೀತಿ ಇಲ್ಲದ ಸಂಭೋಗ ಮಾತ್ರ. ಇಂತಹ ಸೊಫೆಸ್ಟಿಕೇಟೆಡ್ ಪರಿಸರದಲ್ಲಿ ನೆರಳಿನಂತೆ ಓಡಾಡುತ್ತಾ ಇದ್ದೂ ಇಲ್ಲದಂತಿರುವ ಆಯೇಷಾಳ ಸಾಕ್ಷಿಪ್ರಜ್ಞೆಯಲ್ಲಿ ಇಲ್ಲಿನ ದುರಂತ ಬಿಚ್ಚಿಕೊಳ್ಳುತ್ತದೆ.

“ನಮ್ಮ ಬದುಕನ್ನು ನಮಗೆ ಬೇಕಾದ ರೀತಿಯಲ್ಲಿ ಬದುಕಲು ಸಾಧ್ಯವಾಗದ್ದರ ಹೊಣೆಯನ್ನು ಯಾರ ಮೇಲೆ ಹಾಕಲಿ ಎಂಬುದೇ ನನ್ನ ಹುಡುಕಾಟ” ಎಂಬ ಲೇಖಕಿ ತಾರಾಭಟ್‌ರ ಮಾತು ಕಾದಂಬರಿಯುದ್ದಕ್ಕೂ ಸಂಚರಿಸುತ್ತದೆ. ಇಲ್ಲೊಂದು ಹುಡುಕಾಟವಿದೆ. ಅಸ್ತಿತ್ವಕ್ಕಾಗಿ, ಹೊಸತನಕ್ಕಾಗಿ ಒಂದು ಶೋಧವಿದೆ.

❖❖❖

# ಆದದ್ದು – ಆಗಬೇಕಾದ್ದು ಮತ್ತು ಓದಬೇಕಾದುದು

**ಡಾ. ವೆಂಕಟೇಶಯ್ಯ ಕೆ.ಎಂ**
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು
ನರಸಿಂಹರಾಜ ಕಾಲೋನಿ, ಬೆಂಗಳೂರು–19.

ಅಜಕ್ಕಳ ಗಿರೀಶ್ ಭಟ್ ಅವರ 'ಆದದ್ದು ಆಗಬೇಕಾದ್ದು' ಎಂಬ ಕೃತಿ ಹತ್ತು ಹಲವು ಸಂಗತಿಗಳ ತತ್ತ್ವಶೋಧನೆ ಮಾಡುತ್ತದೆ. ಮುಖ್ಯವಾಗಿ ಇದು ಭಾರತೀಯ ಬೌದ್ಧಿಕ ವಲಯದ ವಿಮರ್ಶೆಯನ್ನು ಮಾಡಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಭಾರತೀಯ ಸಮಾಜ ಮತ್ತು ಸಂಸ್ಕೃತಿ, ಸಾಹಿತ್ಯವನ್ನು ಕುರಿತು ಹಾಗೂ ಇವುಗಳ ಪ್ರಾಥಮಿಕ ಪರಿಕಲ್ಪನೆಗಳನ್ನು ಕುರಿತು ಇರುವ ಕೆಲವು ಪಾರಿಭಾಷಿಕ ಪದಗಳು, ಸೈದ್ಧಾಂತಿಕ ನಿಲುವು, ವೈಚಾರಿಕ ಚಿಂತನೆಗಳ ಒಲವು–ನಿಲವುಗಳ ವಿವೇಚನೆಯನ್ನು ಇಲ್ಲಿನ ಬರಹಗಳಲ್ಲಿ ನಡೆಸಲಾಗಿದೆ. ಸ್ವಾತಂತ್ರ್ಯ ನಂತರ ಅದರಲ್ಲೂ 1960ರ ದಶಕದ ನಂತರ ಭಾರತೀಯ ಶೈಕ್ಷಣಿಕ ವಲಯ ಅಳವಡಿಸಿಕೊಂಡು ಸಮಾಜಕ್ಕೆ ಕೊಟ್ಟ ಸಾಹಿತ್ಯ ಸಮಾಜ ಮತ್ತು ಸಾಂಸ್ಕೃತಿಕ ಚಿಂತನೆಗಳ ಸ್ವರೂಪ ಸಂಪೂರ್ಣವಾಗಿ ಪಾಶ್ಚಾತ್ಯರಿಂದ ಎರವಲು ಪಡೆದದ್ದಾಗಿತ್ತು. ಇಲ್ಲಿನ ಬರಹಗಳಲ್ಲಿ ಇಂಥ ಚಿಂತನೆಗಳ ವಿಕಾಸ ಮತ್ತು ಬದಲಾವಣೆಗಳನ್ನು ಗುರುತಿಸಲಾಗಿದೆ.

ಆರಂಭಿಕ ದಿನಗಳಲ್ಲಿ ಸಾಹಿತ್ಯ ಸಂಸ್ಕೃತಿಯನ್ನು ಕುರಿತು ಮಾತನಾಡುವರು ಯೂರೋಪ್ ಅದರಲ್ಲೂ ಕಮ್ಯೂನಿಸ್ಟ್ ವಾದದ ಹಿನ್ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ಮಂಡಿಸಿದ್ದರೆ ಮಾತ್ರ ಅವರನ್ನು ಚಿಂತಕರೆಂದು ಗುರುತಿಸಲಾಗುತ್ತಿತ್ತು. ಆನಂತರ ಈ ಬಗೆಯ ಚಿಂತನೆಗಳಿಗೆ ವಿರುದ್ಧವಾಗಿ ಸಾಂಪ್ರದಾಯಿಕ ಒಲವುಗಳುಳ್ಳ ಚಿಂತನೆಗಳನ್ನು ಕೂಡ ಸ್ವೀಕರಿಸಲು ಆರಂಭಿಸಿದರೂ ಅದು ಎಡ ವಾದಗಳಿಗೆ ವಿರುದ್ಧವಾದದ್ದರಿಂದ 'ಬಲ' ಎಂದೂ ಎಡಪಂಥಿಯ ಚಿಂತನೆಗೆ ಪ್ರತಿಯಾಗಿ ಹುಟ್ಟಿದ ಇದನ್ನು ಬಲಪಂಥೀಯ ಚಿಂತನೆ ಎಂದು ಗುರುತಿಸುವ ಪರಿಪಾಠ ಬೆಳೆಯಿತು. ನಿಜವಾಗಿ ಎಡಪಂಥೀಯ ಚಿಂತನೆಗಳಿಗೆ ಒಂದು ತಾತ್ವಿಕ, ಸೈದ್ಧಾಂತಿಕ ಹಿನ್ನೆಲೆ ಇದೆ. ನಿಜವಾಗಿ ಈ ಎಡ ಬಲ ಎನ್ನುವುದು ಫ್ರಾನ್ಸಿನ ಸಂಸತ್ತಿನ ಸ್ವರೂಪದ ಹಿನ್ನೆಲೆಯಲ್ಲಿ ಬಳಕೆಗೆ ಬಂದಿದೆ. ಫ್ರಾನ್ಸಿನಲ್ಲಿ ಆಡಳಿತ ಪಕ್ಷ ಮತ್ತು ಅದರ ಸದಸ್ಯರು ಸದನದ ಬಲಭಾಗದಲ್ಲಿ ಕೂರುತ್ತಿದ್ದರು. ಅವರ ಎಡಭಾಗದಲ್ಲಿ ಪ್ರತಿ ಪಕ್ಷಗಳು ಕೂರುವುದು ವಾಡಿಕೆಯಾಗಿತ್ತು. ಪ್ರತಿ ಪಕ್ಷಗಳು ಏನನ್ನಾದರೂ ವಿರೋಧಿಸುವಾಗ ಅಧಿಕಾರಿಶಾಹಿಯ ವಿರುದ್ಧ ಮಾತನಾಡಲು ಸಾಮಾನ್ಯವಾಗಿ ಮಾರ್ಕ್ಸ್‌ನ ಚಿಂತನೆಗಳನ್ನು ಪ್ರಧಾನವಾಗಿ ಇಟ್ಟುಕೊಳ್ಳುತ್ತಿದ್ದರು. ಹೀಗೆ ಮಾಡುವ ಪರಂಪರೆಯಿಂದ ಆಡಳಿತ ವಿರೋಧಿ ನಿಲುವುಗಳೆಲ್ಲ ಎಡಪಂಥೀಯ ಚಿಂತನೆಗಳು ಅನಿಸಿಕೊಳ್ಳತೊಡಗಿದವು. ಇದು ಬೆಳೆಯುತ್ತಾ ಈಗಾಲೇ ಸ್ಥಾಪಿತವಾದ ಯಾವುದೇ ನಿಲವುವನ್ನು ಪ್ರಶ್ನಿಸುವ ಕ್ರಮಗಳೆಲ್ಲ ಎಡಪಂಥೀಯ ನಿಲುವಿಗೆ ಸೇರಿಕೊಳ್ಳಲಾರಭಿಸಿದವು. ಇದರಿಂದ ಏನನ್ನೇ ಪ್ರಶ್ನಿಸಿದರೂ ಅದು ಎಡಪಂಥೀಯ ಎಂದು ಗುರುತಿಸಿಕೊಳ್ಳಲು ಕಾರಣವಾಯಿತು. ಭಾರತೀಯ ಸಮಾಜದಲ್ಲಿ ಯೂರೋಪಿನ್ನರ ದೃಷ್ಟಿಯಿಂದ ಪ್ರಶ್ನಿಸಬೇಕಾದ ಅಸಂಖ್ಯಾತ ಸಂಗತಿಗಳು ಇಂದು ಮುಖ್ಯವಾಗಿ ಇಲ್ಲಿನ ಸಮಾಜದಲ್ಲಿದ್ದ ಆಚರಣೆ, ಸಂಪ್ರದಾಯಗಳು ಈ ದೃಷ್ಟಿಕೋನಕ್ಕೆ ಸುಲಭವಾಗಿ ಗುರಿಯಾದವು.

ಈ ದೃಷ್ಟಿಯಿಂದ ಅಜಕ್ಕಳರ ಚಿಂತನೆ ಈಗಾಗಲೇ ಸ್ಥಾಪಿತವಾದ ಎಡಪಂಥೀಯ ನಿಲುವಿಗೆ ಬೇರೆಯಾಗಿ ಕಾಣಿಸುವುದರಿಂದ ಸ್ವಲ್ಪಮಟ್ಟಿಗೆ ಬಲಪಂಥೀಯ ಎಂಬ ಹಣೆಪಟ್ಟಿಯನ್ನು ಹಚ್ಚಿಕೊಳ್ಳುವಂತಾಗಿದೆ. ಹಾಗೇ ನೋಡಿದರೆ ಅಜಕ್ಕಳ ಅವರ ಬರಹಗಳು ಎಡವೂ ಅಲ್ಲದ ಬಲವೂ ಅಲ್ಲದ ರೀತಿಯಲ್ಲಿರುವ ವಿವೇಚನೆಯಂತೆ ಕಾಣಿಸುತ್ತದೆ ಮತ್ತು ಅವರ ಬರಹದ ವಿಶೇಷವೇನೆಂದರೆ ವಸ್ತು ನಿಷ್ಠತೆ. ಪ್ರಸ್ತುತ ಕೃತಿಯಲ್ಲೂ ಕೂಡ ಅವರ ಈ ಧೋರಣೆ ಸ್ಪಷ್ಟವಾಗಿ ಕಾಣಿಸುತ್ತದೆ. ತಮ್ಮ ವಾದವನ್ನು ಸಮತೋಲನವಾಗಿ ಪ್ರತಿಪಾದಿಸುವುದು ಅವರ ವಿಶೇಷತೆ. ಇದಕ್ಕೆ ನಿದರ್ಶನವಾಗಿ ಸಮಷ್ಠಿ ಹಿತದ ತತ್ವ ಮತ್ತು ಭಾರತೀಯ ರಾಷ್ಟ್ರವಾದವು ಅಪಾಯಕಾರಿಯೇ ಎಂಬ ಬರಹಗಳನ್ನು ಗಮನಿಸಬಹುದು. ಈಗಾಗಲೇ ಹೇಳಿದಂತೆ ಅಜಕ್ಕಳ ಅವರ ಬರಹಗಳು ಈಗಾಗಲೇ ಸ್ಥಾಪಿತವಾದ ಚಿಂತನೆಗಳಿಗೆ ಪರ್ಯಾಯವನ್ನು ಕೊಡುತ್ತದೆ. ಭಾರತೀಯ ರಾಷ್ಟ್ರವಾದವನ್ನು ಯೂರೋಪಿನ ರಾಷ್ಟ್ರವಾದದಂತೆ ಗಮನಿಸಲು ಸಾಧ್ಯವಿಲ್ಲ. ಏಕೆಂದರೆ ಅವರ ನ್ಯಾಶನಲಿಸಂ ಎಂಬುದು ಒಂದು ನಿರ್ದಿಷ್ಟ ಪ್ರದೇಶ, ಜನಾಂಗ ಮತ್ತು ಭಾಷಿಕ ಸಮುದಾಯಕ್ಕೆ ಸಂಬಂಧಿಸಿದ್ದು. ಇದನ್ನು ಅನಾಮತ್ತಾಗಿ ಅನುವಾದ ಮಾಡಿಕೊಂಡು ನಾವು ರಾಷ್ಟ್ರವಾದವೆಂದು ಕರೆದುಕೊಂಡಾಗ ಆಗುವ ಸಮಸ್ಯೆ ಮತ್ತು ಸವಾಲುಗಳನ್ನು ಅಜಕ್ಕಳರು ಮನಮುಟ್ಟುವಂತೆ ಪ್ರತಿಪಾದಿಸುತ್ತಾರೆ. ಯೂರೋಪಿನ ನ್ಯಾಶನಲಿಸಂನ ಪ್ರಭಾವದಿಂದ ಜಿನ್ನಾ ಮುಸ್ಲಿಮರಿಗೆ ಪ್ರತ್ಯೇಕ ದೇಶ ಬೇಕೆಂದು ಕೇಳಿದ್ದು. ಈ ಕಾರಣಕ್ಕಾಗಿ ಮುಸ್ಲಿಮೇತರರಾದ ಹಿಂದೂಗಳು ಭಾರತದಲ್ಲಿ ಉಳಿಯುವಂತಾಯಿತು. ಹಿಂದೂಗಳು ಉಳಿದ ಈ ಪ್ರದೇಶವನ್ನು ಹಿಂದೂಸ್ಥಾನವೆಂದು ಕರೆಯಲಾಯಿತು. ಇಂಥ ಯೂರೋಪ್ ದೃಷ್ಟಿಕೋನದ ಚಿಂತನೆಯ ಕಾರಣದಿಂದ ಹಿಂದೂ ಮುಸ್ಲಿಮರ ನಡುವೆ ದೊಡ್ಡ ಬಿರುಕು ಕಾಣಿಸುವಂತಾಯಿತು. ಸಾಲದ್ದಕ್ಕೆ ಹಿಂದೂಗಳ ಒಳಗೆ ಇರುವ ಅನೇಕ ಮತ, ಪಂಥಗಳು ಬಿಡಿಬಿಡಿಯಾಗಿ ಕಾಣುವಂತೆ ಅವರಲ್ಲೇ ಪ್ರತ್ಯೇಕತೆ ಬರುವಂತೆ ಮಾಡಲಾಯಿತು. ರಾಷ್ಟ್ರವಾದ ಯೂರೋಪಿಗೂ ಭಾರತಕ್ಕೂ ಪರಿಕಲ್ಪನೆಯಲ್ಲಿ ಹೇಗೆ ಭಿನ್ನ ಎಂಬುದನ್ನು ಹೀಗೆ ಅಜಕ್ಕಳರು ಪ್ರತಿಪಾದಿಸುತ್ತಾ ಹೋಗುತ್ತಾರೆ. ಅವರ ಪ್ರತಿಪಾದನೆ ಸಮತೋಲನದಿಂದ ತಾರ್ಕಿಕತೆಯಿಂದ ನಮ್ಮ ಬುದ್ಧಿಯನ್ನು ತಲುಪುತ್ತದೆ. ಜೊತೆಗೆ ಓದುಗರು ಅವರ ಜೊತೆಯಲ್ಲಿಯೇ ಚಿಂತನೆ ಮಾಡುತ್ತಾ ಓದುತ್ತಾ ಹೋಗುವುದು ಅವರ ಬರಹದ ವಿಶೇಷ. ಅಜಕ್ಕಳರು ಇಂದಿನ ಸಂದರ್ಭದಲ್ಲಿ ಮಾತನಾಡಲು ಹಿಂಜರಿಯುವಂಥ ಪರಿಸ್ಥಿತಿ ಕಾಣಿಸಿಕೊಂಡಿರುವ ಸಾವರ್ಕರ್ ಅಂತಹವರ ಬಗ್ಗೆ ಕೂಡ ಸಮಾಧಾನದಿಂದ ವಿಮರ್ಶೆ ಮಾಡುತ್ತಾರೆ.

ಪ್ರಸ್ತುತ ಲೇಖನಗಳೆಲ್ಲ ಅವರೇ ಹೇಳಿಕೊಂಡಿರುವಂತೆ, ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಬಂಧ, ಲೇಖನಗಳ ರೂಪದಲ್ಲಿ ಪ್ರಕಟವಾದವು. ಇವನ್ನು ಏಕಸೂತ್ರತೆ ಬರುವಂತೆ ಹೆಣೆದು ಇಲ್ಲಿ ಸಂಕಲಿಸಿ ಕೊಡಲಾಗಿದೆ. ಇದುವರೆಗಿನ ವೈಚಾರಿಕತೆಯನ್ನು ಮಾತ್ರವಲ್ಲದೇ ಮುಂದೆ ಈ ನಿಟ್ಟಿನಲ್ಲಿ ಏನೆಲ್ಲಾ ಆಗಬೇಕಾಗಿದೆ ಎಂಬುದನ್ನು ಶ್ರೀಧರ್ ಮತ್ತು ಶಂಕರ ಭಟ್ಟರಂಥ ಭಾಷಾ ವಿಜ್ಞಾನಿಗಳ ವಿಚಾರದ ಹಿನ್ನೆಲೆಯಲ್ಲಿ ಪರಿಶೀಲಿಸುತ್ತಾರೆ. ಒಟ್ಟಿನಲ್ಲಿ ಕನ್ನಡ ಸಾರಸ್ವತ ಲೋಕಕ್ಕೆ ಅಜಕ್ಕಳರು ಹೊಸಬಗೆಯ ಸಮತೋಲಿತ ಚಿಂತನೆಯ ಧಾರೆಯನ್ನು ಹರಿಯಬಿಟ್ಟಿದ್ದಾರೆ. ಇನ್ನು ಇದನ್ನು ಕುರಿತ ವಿಚಾರವಿಮರ್ಶೆ ಅಥವಾ ಚರ್ಚೆಯನ್ನು ಬೆಳೆಸುವುದು ಸಾಹಿತ್ಯಾಸಕ್ತರಿಗೆ ಬಿಟ್ಟದ್ದು. ಬೆಂಗಳೂರಿನ ಅಯೋಧ್ಯಾ ಪ್ರಕಾಶನ ಇದನ್ನು ಪ್ರಕಟಿಸಿದೆ.

❖❖❖

# ಕಾಷ್ಠಶಿಲ್ಪ : ಜನಪದ ಕಲೆಯ ವೈಭವ

**ಡಾ. ಎಂ.ಎಸ್. ಮಾಗಣಗೇರಿ**
ಮುಖ್ಯಸ್ಥರು ಕನ್ನಡ ವಿಭಾಗ, ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ
ಮಹಾವಿದ್ಯಾಲಯ, ಚಡಚಣ ವಿಜಯಪುರ ಜಿಲ್ಲೆ 586205

ಜನಪದ ಕಲೆ ಅತ್ಯಂತ ಪ್ರಾಚೀನವಾದುದು, ಪರಂಪರೆಯಿಂದ ಉಳಿದು ಬಂದಿರುವ ಸಂಪ್ರದಾಯವಾಗಿದೆ. ವಿವಿಧ ಪ್ರಕಾರಗಳಲ್ಲಿ ವ್ಯಕ್ತವಾಗುವ ಕಲೆ, ಪ್ರಾದೇಶಿಕ ಮಹತ್ವ ಪಡೆದಿದೆ. ಆಧುನಿಕತೆಯ ಪ್ರಭಾವದಿಂದ ಜನಪದ ಕಲೆ ನಶಿಸುತ್ತಿದೆ. ಅನುಕರಣೆಯಿಂದ, ಅರಿತದ್ದನ್ನು ಒಂದೆಡೆ ದಾಖಲಿಸಬೇಕೆಂಬ ಮನುಷ್ಯ ಸಹಜ ಗುಣದಿಂದ ಇಂಥ ಕಲೆಗಳು ಅಸ್ತಿತ್ವಕ್ಕೆ ಬಂದಿವೆ. ಇದರಲ್ಲಿ ಬಡಿಗತನ ಕಲೆ ಕೂಡ ಒಂದು. ಮರ ಅಥವಾ ಕಟ್ಟಿಗೆಯ ಮೇಲೆ ಅರಳುವ ವಿವಿಧ ಚಿತ್ರಾಕೃತಿಗಳು ಪ್ರಾಚೀನ ಕಾಲದಿಂದಲೂ ಮಹತ್ವ ಪಡೆದುಕೊಂಡಿವೆ.

ಕಟ್ಟಿಗೆ ಅಥವಾ ಮರ ಬಡಿಗ ಪ್ರವೃತ್ತಿಯ ಜೀವಾಳ. ಒಂದೊಂದು ಕಟ್ಟಿಗೆಯಲ್ಲಿ ಒಂದೊಂದು ವಿಧವಾದ ಕಲೆಯ ಉಪಕರಣ ತಯಾರಿಸುವ ಕಲೆಗಾರಿಕೆ ಪುರಾತನ ಕಾಲದಿಂದಲೂ ಕಂಡುಬರುತ್ತದೆ. ಹಾಗಾಗಿಯೇ ಇದನ್ನು 'ಕಾಷ್ಠಶಿಲ್ಪ' ಎಂದೂ ಕರೆಯಲಾಗಿದೆ. ಬಡಿಗರ ಉಪಕರಣ ಸಂಸ್ಕೃತಿಯಲ್ಲಿ ಮೂರು ರೀತಿಗಳನ್ನು ಗುರುತಿಸಬಹುದು. ವಸ್ತುಜ್ಞಾನ, ವಿಷಯಜ್ಞಾನ ಮತ್ತು ಉಪಕರಣ ಜ್ಞಾನ. ವಸ್ತುಜ್ಞಾನವೆಂದರೆ ಭೌತಿಕ ವಸ್ತುಗಳಾದ ಲೋಹ, ಕಲ್ಲು, ಕಟ್ಟಿಗೆ, ರತ್ನ ಮತ್ತು ಪ್ರಕೃತಿಗೆ ಸಂಬಂಧಿಸಿದ್ದು. ವಿಷಯ ಜ್ಞಾನವೆಂದರೆ ಮೇಲ್ಕಾಣಿಸಿದ ಭೌತಿಕ ರೂಪಗಳ ಗುಣಸ್ವರೂಪಗಳಿಗೆ ಸಂಬಂಧಿಸಿದ್ದು. ಉಪಕರಣ ಜ್ಞಾನವೆಂದರೆ ಭೌತಿಕ ಮತ್ತು ವಸ್ತುವಿನ ಗುಣಸ್ವಭಾವಗಳನ್ನು ಅರಿತುಕೊಂಡು, ಭೇದವಿಲ್ಲದೆ ಅದನ್ನು ಸಾಮಾಜಿಕ ಜ್ಞಾನವನ್ನಾಗಿ ಪರಿವರ್ತಿಸುವ ವಿವೇಕಕ್ಕೆ ಸಂಬಂಧಿಸಿದ್ದಾಗಿದೆ. ಅದಕ್ಕೆ ವಿಶ್ವಕರ್ಮ ದಾರ್ಶನಿಕನಾದ ತಿಂತಿಣಿ ಮೌನೇಶ್ವರನ ಮಾತಿನಲ್ಲಿ ಹೇಳುವುದಾದರೆ,

**"ಬಡಿಗ ಕಮ್ಮಾರರು ಪೊಡವಿಗಧಿ ಕರ್ತರು**
**ಬಡಿದು ಬತ್ತೀಸ ಆಯುಧವ ಮಾಡಿ ಸರ್ವರಿಗೆ**
**ಕೊಡುವರಯ್ಯ ಬಸವಣ್ಣ"**

ಅಂದರೆ ಬಡಿಗ ಕಮ್ಮಾರರು ಸೃಷ್ಟಿಸುವ ಉಪಕರಣ ತಂತ್ರಜ್ಞಾನ ಸಮಾಜ ಮತ್ತು ಅದರ ಅವಶ್ಯಕತೆಗಳನ್ನು ಮುನ್ನಡೆಸುವ ತಾಂತ್ರಿಕ ವಿಜ್ಞಾನದ ವಿವೇಕವಾಗಿದೆ. ಬಡಿಗರ ಸಕಲ ಉಪಕರಣಗಳು ಕಾಳಮ್ಮನ ಪ್ರತೀಕ. ಇಕ್ಕಳವೇ ಕುಲದೈವ ಸುತ್ತಿಗಿಯೇ ಮನಿದೈವ, ಉಳಿ ಬಾಚಿ ಕೊಡತಿ ತ್ರಿಮೂರ್ತಿ ಸ್ವರೂಪವು. ಈ ಮಾತುಗಳು ಉಪಕರಣಗಳ ದೈವಿಕ ನೆಲೆಯನ್ನು ಹೇಳುತ್ತವೆ. ಕೆಲಸದ ಮೊದಲು ಅಗ್ರಪೂಜೆ ಸಲ್ಲುವುದೇ ಉಪಕರಣಗಳಿಗೆ.

ಬಡಿಗರಂತಹ ಶ್ರಮ ಸಮುದಾಯಗಳಿಗೆ ದೈವವೆಂದರೆ ತಮ್ಮ ವೃತ್ತಿಯಲ್ಲಿ ಬಳಕೆಯಾಗುವ ಉಪಕರಣಗಳು ಮತ್ತು ಸೃಷ್ಟಿಗೊಂಡ ಸಾಧನಗಳು. ವೃತ್ತಿಕಾರರ ದೈವಗಳು ಧರಿಸುವ ಆಯುಧಗಳೇ ಉತ್ಪಾದನಾ ಸಲಕರಣೆಗಳಾಗುವ ಅಪರೂಪದ

ವಿದ್ಯಮಾನವಿದು. ದೈವದ ಆಯುಧ ಅಥವಾ ಅಂಗಾಂಗಗಳೇ ಬಡಿಗ, ಕಮ್ಮಾರ, ಅಕ್ಕಸಾಲಿ, ಕಂಚುಗಾರ ಮತ್ತು ಶಿಲ್ಪಿಗಳ ದೇವತಾ ರೂಪಗಳು.

**ಉಪಕರಣಗಳು**

ಬಡಿಗ ತನ್ನ ಕೆಲಸದ ಅಗತ್ಯಗಳಿಗೆ ಸೃಷ್ಟಿಸಿಕೊಂಡ ಉಪಕರಣಗಳನ್ನು ಸ್ವಭಾವಕ್ಕನುಗುಣವಾಗಿ ಹನ್ನೊಂದು ಗುಂಪುಗಳನ್ನಾಗಿ ವಿಂಗಡಿಸಬಹುದು.

1. ಕೆತ್ತುವ ಸಾಧನಗಳು: ಬಾಚಿ, ಇದರಲ್ಲಿ ದೊಡ್ಡ ಬಾಚಿ, ಮಧ್ಯಮ ಬಾಚಿ ಮತ್ತು ಕೈ ಬಾಚಿ, ತಟ್ಟುಳಿ.
2. ಕಡಿಯುವ ಸಾಧನಗಳು: ಕೀಲುಳಿ, ತಟ್ಟುಳಿ, ಉಗುರುಳಿ, ಚೀರ್ಣ
3. ಬಡಿಯುವ ಸಾಧನಗಳು: ಕೊಡತಿ, ಸುತ್ತಿಗೆ, ಚಮ್ಮಟಿಗೆ (ದೊಡ್ಡ ಸುತ್ತಿಗೆ)
4. ಕೊಡರೆಯುವ ಸಾಧನಗಳು: ಗರಗಸ (ದೊಡ್ಡದು, ಮಧ್ಯಮ), ಕೈಕರಗಸ
5. ಹೆರೆಯುವ ಸಾಧನಗಳು: ಉಜ್ಜುಗೊರಡು (ದೊಡ್ಡದು), ಕೈ ಉಚಗೊಡ್ಡ
6. ತೂತು ಹಾಕುವ ಸಾಧನಗಳು: ಹಿಡಿಸ್ಯಾಳ, ವಿವಿಧ ವಿನ್ಯಾಸದ ಗಿರಮಟ್ಟುಗಳು (ಎಂಟನೆ ಜಾಡಿ, ನಾಲ್ಕನೆ ಜಾಡಿ, ಹನ್ನೆರಡನೆ ಜಾಡಿ, ಹತ್ತನೆ ಜಾಡಿ)
7. ಗೀರುವ ಸಾಧನಗಳು: ಗೀರಗೊಡ್ಡ, ಕತ್ತು, ಕೈವಾರ
8. ತಿಕ್ಕುವ ಸಾಧನಗಳು: ವಿವಿಧ ರೀತಿಯ ಅರಗಳು
9. ಮಸೆಯುವ ಸಾಧನಗಳು: ಮಸಗಲ್ಲು, ಬಳಪದ ಕಲ್ಲು
10. ಆಧಾರ ಸಾಧನ: ಅಡಿಗಟ್ಟೆ, ಬಡಿಗಿಗಟ್ಟೆ, ಬಡಿಗಟ್ಟಿ
11. ಅಳತೆಯ ಸಾಧನಗಳು

**ಮರ ಕೊರೆವ ಕಲೆಗಾರಿಕೆ**

ಇಮಾರತಿಗೆ ಬೇಕಾದ ಕಂಬ, ಜಂತಿ, ತೊಲೆ, ಬೋದಿಗೆ, ಬಾಗಿಲು, ದೇವಸ್ಥಾನ, ರಥ, ರೈತನ ಬಂಡಿ ಮುಂತಾದವುಗಳನ್ನು ಮಾಡಬೇಕಾದರೆ ಮೊದಲಿಗೆ ತಕ್ಕ ಮರದ ಗಾತ್ರವನ್ನು ಅದರ ಉದ್ದ, ಅಗಲ, ದಪ್ಪಗಳಲ್ಲಿ ಆಯ್ಕೆ ಮಾಡುತಿದ್ದರು. ಮರದ ಕೊರಡಿನ ಹೊರ ಮೈಯಲ್ಲಿರುವ ಗಂಟು ಅಥವಾ ಅದರ ಮೇಲ್ಪದರವನ್ನು ಬಡಿಗೆ ಬಾಚಿಯಿಂದ ಹೊಳು ಮಾಡುತ್ತಿದ್ದ. ನಂತರ ಕೆಂಪು ಬಣ್ಣದಲ್ಲಿ ನೂಲಿನ ದಾರ ಎದ್ದಿ ನೂಲು ಹೊಡೆಯುತ್ತಿದ್ದರು. "ಗೆರೆ ಹಾಕುವಾಗ ಜಂಗಾದ, ತಗ್ಗಾದ, ಬೋಡಾದ ಅಥವಾ ಅಸಮವಿದ್ದ ಕಟ್ಟಿಗೆಯ ಮೈಯನ್ನು ಮೊದಲು ನೂಲು ಹಾಕಿ ಸಮವಿದ್ದ ಭಾಗಕ್ಕೆ ಹೊಂದುವಂತೆ ಕೆತ್ತುತ್ತಿದ್ದರು. ನಂತರ ಉಳಿದ ಮೂರು ಮುಖಗಳಿಗೆ ಬಣ್ಣದಿಂದ ನೂಲು ಹಾಕಿ ನಾಲ್ಕು ಮುಖಗಳ ಅಥವಾ ಎಂಟು ಮುಖಗಳು ಆಕಾರದ ಕಂಬಗಳನ್ನು ವಿನ್ಯಾಸ ಮಾಡಿಕೊಳ್ಳುತ್ತಿದ್ದರು."

**ಕೆತ್ತುವ ಕಲೆಗಾರಿಕೆ**

**"ಆಶೆಯರಿತ ಬಾಚಿಯಲಿ ಭವಪಾಶವಿಲ್ಲದ ಜಂಗಮಕೆ ತೆತ್ತ**
**ದೋಷವಿಲ್ಲದ ಉಳಿಯಲಿ ನಿಜವಾಸವ ನೋಡಿ ಹುಗಿಲುದೆಗೆವುತ್ತ**
**ಭಾಷಡಗೆ ಊಣವಿಲ್ಲದ ಸದ್ಭಕ್ತರ ಮನೆಗೆ**

**ನಿಜವಾಸವ ಮಾಡುವ ಕಾಯಕ**

**ಈ ಗುಣ ಬಾಚಿ ಕಾಯಕದ ಬಸವಣ್ಣನ ನೇಮ"**

ಕಟ್ಟಿಗೆಯ ಸ್ವಭಾವವನ್ನು ಮತ್ತು ಉಳಿ, ಬಾಚಿಯ ಗುಣಗಳನ್ನು ಅರಿತು ಸುಂದರವಾದ ರೂಪವನ್ನು ರಚಿಸಿಕೊಳ್ಳುವಲ್ಲಿ ಬಡಿಗ ನಿಪುಣ.

**ಜೋಡಣಾ ಕಲೆಗಾರಿಕೆ**

ಸಾಮಾನ್ಯವಾಗಿ ಕೆಲಸದ ಸ್ವರೂಪದಂತೆ ಈ ಜೋಡಣಾ ತಾಂತ್ರಿಕತೆ ಇರುತ್ತದೆ. ಸಾದಾ ಕೆಲಸದಲ್ಲಿ ಸಾಮಾನ್ಯ ಜೋಡಣೆ ಇದ್ದರೆ ಕೌಶಲ್ಯಶೀಲ ಕೆಲಸದಲ್ಲಿ ವಿಶೇಷ ಜೋಡಣಾ ವಿಧಾನ ಇರುತ್ತದೆ. ಇದನ್ನು ಸ್ಥೂಲವಾಗಿ ಮೂರು ರೀತಿಯಲ್ಲಿ ವಿಂಗಡಣೆ ಮಾಡಬಹುದು. 1. ಕತ್ತರಿ ಜೋಡಣೆ 2. ಕೀಲು ಜೋಡಣೆ 3. ಕೂಲು ಜೋಡಣೆ. ಕತ್ತರಿ ಜೋಡಣೆ ಸಾಮಾನ್ಯವಾಗಿರುತ್ತದೆ. ಎರಡು ಮರಗಳ ತುದಿಗಳನ್ನು ಪರಸ್ಪರ ಜೋಡಿಸಬೇಕಾದ ಸಂದರ್ಭ ಬಂದಾಗ ಒಂದು ಮರದಲ್ಲಿ ಅರ್ಧದಷ್ಟು ಭಾಗವನ್ನು ಇನ್ನೊಂದು ಮರದಲ್ಲಿ ಅರ್ಧದಷ್ಟನ್ನು ಪೆನ್ಸಿಲ್ ಮಾರ್ಕ್ ಮಾಡಿ ಉಳಿಯಿಂದ ಕಡಿದು ವಟ್ಟಾಮಾಡಿ ಜೋಡಿಸುತ್ತಾರೆ. ಕೆಲವೊಮ್ಮೆ ಅದರ ಬಿಗಿಯ ಮೇಲೆಯೇ ಅದು ನಿಲ್ಲುತ್ತದೆ. ಇಲ್ಲಾಂದರೆ ಮರದ ಕೀಲುಗಳನ್ನು ಬಡಿದು ಭದ್ರ ಮಾಡುತ್ತಾರೆ. ಇತ್ತೀಚೆಗೆ ತಾರಮಳೆ ಹೊಡೆಯುತ್ತಾರೆ. ಇವೆರಡು ಕತ್ತರಿ ಜೋಡನೆಯಲ್ಲಿ ಮಿಳಿತಗೊಳ್ಳುತ್ತವೆ.

ಎರಡನೆ ನಮೂನೆ ಜೋಡಣೆ ಸ್ವಲ್ಪ ವಿಶೇಷವಾದದ್ದು. ಯಾವುದಾದರೂ ಗೃಹೋಪಯೋಗಿ ವಸ್ತುಗಳನ್ನು ಮಾಡಿದಾಗ ಅದು ಹೆಚ್ಚು ಬಾಳಿಕೆ ಬರಲು ಮತ್ತು ಬಿಚ್ಚಿ ತೊಡಿಸಲು ಅನುಕೂಲವಾಗುವಂತೆ ಕೀಲುಜೋಡಣೆ ಕ್ರಮವನ್ನು ಬಡಿಗರು ಬಳಸುತ್ತಾರೆ. ನಿದರ್ಶನಕ್ಕೆ ಹೇಳುವುದಾದರೆ ದ್ಯಾಮವ್ವನ ಮೂರ್ತಿಯನ್ನು ಮರದಲ್ಲಿ ಮಾಡುವ ಸಂದರ್ಭದಲ್ಲಿ ತೋಳು, ಮುಂಡ, ಮೊಳಕೈ, ತೊಡೆ ಮತ್ತು ಮೊಳಕಾಲು, ಪಾದ ಇವುಗಳನ್ನು ಪ್ರತ್ಯೇಕವಾಗಿ ಆಕಾರ ಮಾಡಿ ಅವನ್ನು ಪರಸ್ಪರ ಜೋಡಿಸುವಾಗ ಬಿದಿರಿನ ಇಲ್ಲವೇ ಸಾಗವಾಣಿ ಕೀಲುಗಳನ್ನು ಬಡಿದು ಜೋಡಿಸಲಾಗುತ್ತದೆ. ಸುತ್ತ ಮಡಿಗಿ, ತೊಲೆ ಮತ್ತು ಎಳಿಗಳನ್ನು ಜೋಡಿಸುವಾಗ ಉದ್ದವಾದ ಮರ ಸಿಗದಿದ್ದಾಗ ಎರಡು ತುಂಡುಗಳನ್ನು ತೆಗೆದು ಅದನ್ನು 'ಖಂಡು ಹಾಕಿ' ಜೋಡಿಸುತ್ತಾರೆ. ಈವೆರಡೂ ಹೊಂದಿಕೊಳ್ಳಲು ಮತ್ತು ಭದ್ರವಾಗಿರಲು ಎರಡರ ಮಧ್ಯೆ ಕಟ್ಟಿಗೆಯ ಕೀಲೊಂದನ್ನು ಬಡಿಯುತ್ತಾರೆ. ಇದರಿಂದ ಜ್ವಾಯಿಂಟು ಮಾಡಿದ ಜಾಗ ಅಲ್ಲಾಡದೆ ಭದ್ರವಾಗುತ್ತದೆನ್ನುವ ತಾಂತ್ರಿಕ ತಿಳುವಳಿಕೆ ಬಡಿಗನದು.

ಮೂರನೆಯದು ಕೂಲು ಜೋಡಣೆ. ಇದನ್ನು ಇಂದಿನ ಪರಿಭಾಷೆಯಲ್ಲಿ 'ಗ್ರೂ ಜ್ವಾಯಿಂಟ್' ಎಂದು ಕರೆಯಬಹುದು. ಕೂಲು ಜೋಡಣೆ ಬಡಿಗನ ವಿಶಿಷ್ಟ ತಜ್ಞತೆಯ ಕೆಲಸವಾಗಿದೆ. ವಿಶೇಷವಾಗಿ ಮನೆ ಮತ್ತು ದೇವರ ಬಾಗಿಲುಗಳಿಗೆ ಈ ಆಕಾರ ಮಾಡುವುದು ಸರ್ವೇಸಾಮಾನ್ಯ. ಬಾಗಿಲ ತೋಳು ಹಾಗೂ ಮೇಲ್ಬಾಗದ ಹಣೆಪಟ್ಟಿ ಎರಡು ಸೇರುವ ಜಾಗವನ್ನು ಕೂಲು ಮಾಡಿ ಜೋಡಿಸಲಾಗುತ್ತದೆ. ಹಣೆಪಟ್ಟಿಯಲ್ಲಿ ತೂತು ತೆಗೆದು ಬಾಗಿಲ ತೋಳಿನಲ್ಲಿ ಮೂರಿಂಚು ಕೂಲು ಮಾಡಿರುತ್ತಾರೆ. ಇವೆರಡನ್ನು ಜೋಡಿಸಿ ಬಣ್ಣದ ಕೈವಾರದಿಂದ ಗ್ಯಾಪಿನ ಅಗತ್ಯಕ್ಕೆ ತಕ್ಕಂತೆ ಕಳಾಸಕಡ್ಡಿಯಿಂದ ಕಳಾಸ ಮಾಡಿ ಹೊಂದಿಸುತ್ತಾರೆ. ಆಗ ಅದು ಪೋಟೋಗೆ ಕಟ್ಟು ಹಾಕಿದಂತೆ ವಿಶೇಷ

ಸೌಂದರ್ಯವನ್ನು ನೀಡುತ್ತದೆ. ಇದೊಂದು ಕೌಶಲ್ಯದಾಯಕ ಕಲೆಯೇ ಸರಿ.

ಒಟ್ಟಿನಲ್ಲಿ "ಕೊರೆಯುವ, ಕೆತ್ತುವ, ಬಡಿಯುವ ಮತ್ತು ಹುಗಿಲು ತೆಗೆಯುವ, ವಿವಿಧ ರೀತಿ ಜೋಡಣೆ ಮಾಡುವ ಬಡಿಗರ ಕ್ರಿಯೆಗಳು ಮರದ ವಾಸ್ತುಶಿಲ್ಪ ಮತ್ತು ಕಲೆಯ ದೃಷ್ಟಿಯಿಂದ ಮಹತ್ವ ಪಡೆದಿವೆ. ಮರದ ಕೆಸಲದ ಸೃಜನಶೀಲ ಪ್ರಯತ್ನಗಳೇ ಮುಂದೆ ಕಲ್ಲು ಮತ್ತು ಲೋಹಗಳಲ್ಲಿ ವಿವಿಧ ರೀತಿಯ ಸೂಕ್ಷ್ಮ ಕಲಾ ಕೌಶಲ್ಯಗಳನ್ನು ತರಲು ಶಿಲ್ಪಿಗಳಿಗೆ ಪ್ರೇರಣೆ ನೀಡಿದವು."

**ಗೃಹೋಪಯೋಗಿ ಉಪಕರಣಗಳು**

ಬಡಿಗ ಗೃಹೋಪಯೋಗಿ ಉಪಕರಣಗಳನ್ನು ತಯಾರಿಕೆಯಲ್ಲೂ ತನ್ನ ಕಲೆಗಾರಿಕೆ ಮೆರೆಯುತ್ತಾನೆ. ಇದರಲ್ಲಿ ಎರಡು ಪ್ರಕಾರಗಳನ್ನು ಗುರುತಿಸಬಹುದು. 1. ಗೃಹ ಬಳಕೆಯ ಉಪಕರಣಗಳು 2. ಅಲಂಕಾರಿಕ ಪೀಠೋಪಕರಣಗಳು.

**ಗೃಹ ಬಳಕೆಯ ಉಪಕರಣಗಳು ಮತ್ತು ಪೀಠೋಪಕರಣಗಳು**

ಗೃಹ ಬಳಕೆಯ ಉಪಕರಣಗಳಲ್ಲಿ ಅಡುಗೆ ಮನೆ ಬೇಕಾಗುವ ಮುಖ್ಯವಾಗಿ ಹುಟ್ಟು ಮಲೆನಾಡು ಸಂಪ್ರದಾಯದ ಬಳುವಳಿ ಸಟ್ಟುಗ, ಕಡಗೋಲು, ಮುದ್ದೆಕೋಲು, ಹೋಳಿಗೆ ಮಣೆ, ಲಟ್ಟನಿಗೆ, ಈಳಿಗೆ ಮಣೆ, ಶ್ಯಾವಿಗೆ ಮಣೆ, ಕಟ್ಟಿಗೆ ಸಮೆ, ಕೊಮ್ಮಣಿಗೆ, ಕುಡುಗೋಲು ಮತ್ತು ಕುರುಪಿ ಹಿಡಿ, ತೊಟ್ಟಿಲು, ಆಟದ ಬುಗುರಿ, ಚಂದಾಳಗೊಂಬಿ, ಮಕ್ಕಳಿಗೆ ಒತ್ತುಗಾಡಿ, ಸಂದೂಕದ ಪೆಟ್ಟಿಗೆ, ವಿಭೂತಿ ಕರಡಿಗಿ, ಗಡಂಚಿ, ನೀರಿನ ಡೋಣಿ, ಬಣ್ಣದ ಚೆಟ್ಟು ಮುಂತಾದ ಬಳಕೆ ಸಾಮಗ್ರಿಗಳನ್ನು ಮಾಡಿ ಕೊಡುತ್ತಿದ್ದರು. ಸ್ವಲ್ಪ ಅನುಕೂಲಸ್ಥರ ಮನೆಗಳಲ್ಲಿ ಊಟ ಮಾಡಲು, ಆರತಿ ತಟ್ಟೆ ಇಡಲು ಮರದ ಕಲಾತ್ಮಕ 'ಅಡ್ಡಣಿಗೆ'ಗಳನ್ನು ಬಳಸುತ್ತಿದ್ದರು. ದಕ್ಷಿಣ ಕರ್ನಾಟಕದಲ್ಲಿ ಇದಕ್ಕೆ 'ತೇವಟಿಕೆ ಮಣೆ' ಎಂದು ಕರೆಯುತ್ತಿದ್ದರು. ಹಳಗನ್ನಡ ಕಾವ್ಯಗಳಲ್ಲಿಯೂ ಇದರ ಪ್ರಸ್ತಾಪವಿದೆ. "...ಗುರುಮಠಗಳಲ್ಲಿ ಈ ತೇವಟಿಗೆಗಳು ವಿಶೇಷವಾಗಿ ಕಂಡುಬರುತ್ತವೆ. ಸದಾ ಸಂಚಾರಶೀಲರಾದ ಜಂಗಮರಿಗಾಗಿ ಮಡಿಸುವ ತೇವಟಿಗೆ ಮಣೆ ಬಳಕೆಗೆ ಬಂತು." ಪೀಠೋಪಕರಣಗಳು ಬಡಿಗತನದ ಕೌಶಲ್ಯದ ಮಗದೊಂದು ಕಲೆಯ ಆವಿಷ್ಕಾರಗಳಾಗಿವೆ.

**ಬಾಗಿಲು ಚೌಕಟ್ಟುಗಳು**

ಬಾಗಿಲು ಮತ್ತು ಬಾಗಿಲ ಚೌಕಟ್ಟುಗಳು ಬಡಿಗ ಕಲೆಯ ಉತ್ಕೃಷ್ಟತೆಯ ಮತ್ತೊಂದು ಮಜಲು. ಕುಸುರಿ ಕೆಲಸದ ಬಾಗಿಲುಗಳು, ಕರ್ನಾಟಕದಲ್ಲಿ ಬಾಗಿಲು ಚೌಕಟ್ಟುಗಳ ಅಲಂಕಾರಿಕ ರಚನೆಗಳಿಗೆ ಬದಾಮಿ ಚಾಲುಕ್ಯರು ಬಹಳ ಪ್ರೋತ್ಸಾಹ ನಿಡಿದ್ದರು. ಮರ ಮತ್ತು ಕಲ್ಲು ಎರಡರಲ್ಲಿಯೂ ಕೌಶಲ್ಯಪೂರ್ಣ ಮತ್ತು ವೈವಿಧ್ಯಮಯವಾದ ಕಲಾಕೃತಿಗಳನ್ನು ಕಾಣಬಹುದು. ಕಾಲಕಾಲಕ್ಕೆ ಶೈಲಿಗಳು ಬದಲಾಗಿದ್ದರೂ ಕೆಲವೊಂದು ಸಾಮಾನ್ಯ ಲಕ್ಷಣಗಳು ಇಂದಿಗೂ ಮುಂದುವರಿದುಕೊಂಡು ಬಂದಿವೆ.

ಹೂವಿನ ಕೆತ್ತನೆ ಮರದ ಬಾಗಿಲು, ಆಧುನಿಕ ಕೆತ್ತನೆ ಮರದ ಬಾಗಿಲು, ದೇವರೊಂದಿಗೆ ಮರದ ಬಾಗಿಲು ಕೆತ್ತನೆ, ಸಂಕೀರ್ಣ ಕೆತ್ತನೆ ಮರದ ಬಾಗಿಲು ಹೀಗೆ

ಬೇರೆ ಬೇರೆ ರೀತಿಯಲ್ಲಿ ಬಾಗಿಲುಗಳನ್ನು ಸುಂದರಗೊಳಿಸಲಾಗುತ್ತದೆ.

**ದೇವರ ಮೂರ್ತಿ ಮತ್ತು ರಥ**

ದೇವರ ಮೂರ್ತಿಗಳು, ಗ್ರಾಮದೇವತೆ ಮೂರ್ತಿಗಳು, ವಾಹನಗಳು ಮತ್ತು ರಥ (ತೇರು) ಪೂಜಾ ಸಾಮಗ್ರಿಗಾಗಿ ಬಳಸುವ ವಸ್ತುಗಳು ಬಡಿಗ ಕಲೆಗಾರಿಕೆ ಹೆಸರಾಗಿವೆ. ರಥವು ಕಾಷ್ಠಶಿಲ್ಪದ (ಬಡಿಗ) ಅತ್ಯುತ್ಕೃಷ್ಠ ಕಲಾವಿನ್ಯಾಸವಾಗಿದೆ. ರಥ ನಿರ್ಮಾತೃವಾದ ಬಡಿಗ ಅಥವಾ ಕಾಷ್ಠಶಿಲ್ಪಿ ತಾನು ವಿವಿಧ ಮರದಲ್ಲಿ ತೇರಿನ ವಿವಿಧ ಭಾಗಗಳನ್ನು ನಿರ್ಮಿಸುವ ಪೂರ್ವಭಾವಿ ವಿನ್ಯಾಸದ ನೀಲನಕ್ಷೆಯನ್ನು ಮನದಲ್ಲಿ ಕಲ್ಪಿಸಿಕೊಂಡು ರಥದ ರೂಪ ಸ್ವರೂಪವನ್ನು ತನ್ನ ಅಂತಃಚಕ್ಷುವಿನಿಂದ ಕಾಣಬಲ್ಲ ದರ್ಶನ ಪ್ರಜ್ಞೆಯುಳ್ಳವನಾಗಿರುತ್ತಾನೆ. "ರಥಶಿಲ್ಪಿ ಮರದ ಗುಣಧರ್ಮಗಳನ್ನು ಅದರ ಬಳಕೆಯ ಸಾಧ್ಯಾಸಾಧ್ಯತೆಗಳನ್ನು ತಿಳಿದಿರಬೇಕು. ರಥದ ಒಂದೊಂದು ಭಾಗಕ್ಕೆ ಒಂದೊಂದು ತರದ ಕಟ್ಟಿಗೆಯನ್ನು ಬಳಸುವ ನಿಯಮವಿರುತ್ತದೆ. ರಥದ ವಿವಿಧ ಒಳ ಮತ್ತು ಹೊರ ವಿನ್ಯಾಸಗಳು ಜ್ಯಾಮಿತಿ, ಪ್ರತಿಮಾಶಾಸ್ತ್ರ, ಶಿಲ್ಪಶಾಸ್ತ್ರ, ಚಿತ್ರಕಲೆ ಹಾಗೂ ಪೌರಾಣಿಕ ಸನ್ನಿವೇಶಗಳ ಹಿನ್ನೆಲೆ, ಆಗಮೋಕ್ತ ವಿಚಾರಗಳು, ವಿವಿಧ ರೀತಿಯ ಲೌಕಿಕ ಶಿಲ್ಪಗಳ ಕುರಿತು ಶಿಲ್ಪಿ ತಿಳಿದಿರುತ್ತಾನೆ."

**ಕೃಷಿ ಉಪಕರಣಗಳು**

ಬಡಿಗ ತನ್ನ ಕಲಾ ಕೌಶಲ್ಯದಿಂದ ದಿನನಿತ್ಯ ರೈತರಿಗೆ ಅವಶ್ಯವಾಗಿ ಬೇಕಾಗಿರುವ ಕೃಷಿ ಉಪಕರಣಗಳನ್ನು ತಯಾರಿಸುತ್ತಾನೆ. ಅದರಲ್ಲೂ ತನ್ನ ಕಲಾನಿಪುಣತೆಯನ್ನು ಮೆರೆಯುತ್ತಾನೆ. ಇವುಗಳಲ್ಲಿ ಕೂರಿಗೆಗಳು ಮತ್ತು ಕುಂಟೆಗಳು ಮುಖ್ಯವಾಗಿ ಉಲ್ಲೇಖಾರ್ಹವಾಗಿವೆ. ಅದೇರೀತಿ ರೈತರಿಗೆ ಬೇಕಾದ ಎಡೆದಿಂಡು, ಮಡಿಕೆ, ನೊಗ ಇತ್ಯಾದಿ ಸಲಕರಣೆಗಳನ್ನು ಕಲಾತ್ಮಕವಾಗಿ ಸೃಷ್ಟಿಸುತ್ತಾರೆ.

ಒಟ್ಟಿನಲ್ಲಿ ಮರಗೆಲಸವೆಂದರೆ ಅದು ಕೇವಲ ಒಂದು ಜೀವನೋಪಾಯದ ಕುಲಕಸುಬಷ್ಟೇ ಅಲ್ಲ. ಅದು ಕೌಶಲ ಮತ್ತು ಕಲೆಯ ಅಭಿವ್ಯಕ್ತಿ ಎಂಬುದನ್ನು ನಾವು ಪರಿಗಣಿಸಬೇಕಿದೆ.

**ಪರಾಮರ್ಶನ ಗ್ರಂಥಗಳು**


1. ಕುಮಾರಸ್ವಾಮಿ ಕೆ.ಎಸ್. – ಬೃಹತ್ ಕರ್ನಾಟಕದ ಶಿಲ್ಪಾಚಾರಿಯರ ಚರಿತೆ, ಕಣ್ವ ಪ್ರಕಾಶನ, ಬೆಂಗಳೂರು 2017
2. ರಾಮಚಂದ್ರರಾವ್ ಎಸ್. ಕೆ. – ಮೂರ್ತಿಶಿಲ್ಪ ನೆಲೆ–ಹಿನ್ನೆಲೆ, ಬೆಂಗಳೂರು ವಿಶ್ವವಿದಾಲಯ, 1975
3. ರಾಮಚಂದ್ರರಾವ್ ಎಸ್. ಕೆ. – ಕರ್ನಾಟಕದ ಕಲೆಗಳು, ಸಂಪುಟ 1, ಕನ್ನಡ ಸಾಹಿತ್ಯ ಪರೊಷತ್ತು, ಬೆಂಗಳೂರು
4. ಡಾ. ವೀರೇಶ ಬಡಿಗೇರ – ಬಡಿಗವೃತ್ತಿ : ವೈಜ್ಞಾನಿಕ ಚಿಂತನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2022
5. ವೀರೇಶ ಬಡಿಗೇರ – ತಿಂತಿಣಿ ಮೌನೇಶ್ವರರ ವಚನಗಳು ತಾತ್ಪರ್ಯಸಹಿತ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2016

6. ವೀರೇಶ ಬಡಿಗೇರ – ಬಾಚಿಕಾಯಕದ ಬಸವಯ್ಯ: ವೃತ್ತಿ ಹಾಗೂ ತತ್ತ್ವ ಮೀಮಾಂಸೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2007
7. ವೀರೇಶ ಬಡಿಗೇರ – ಗೃಹವಾಸ್ತು ಮತ್ತು ಶಿಲ್ಪಶಾಸ್ತ್ರ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು 2007
8. ಡಾ. ಚಕ್ಕೆರೆ ಶಿವಶಂಕರ್ – ಜನಪದ ತಂತ್ರಜ್ಞಾನ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು 2003
9. ಶಿವಾನಂದ ಬಂಟನೂರ – ಕರ್ನಾಟಕ ಜನಪದ ಶಿಲ್ಪಕಲೆ, ಎಸ್.ಎಲ್.ಎನ್. ಪಬ್ಲಿಕೇಷನ್, ಬೆಂಗಳೂರು 2018

❖❖❖

ಕ್ಷೀರಸಾಗರದಿ ಆದಿಯು ತೇಲೆ
ನಾಭಿಯ ಪದುಮವು ದಳದೆರೆದಿತ್ತು

# ಗೋವು ಮತ್ತು ಅಶ್ವವೈದ್ಯ ಸಾಹಿತ್ಯಕ್ಕೆ ಜೈನಕವಿಗಳ ಕೊಡುಗೆ

**ಡಾ. ಪ್ರವೀಣ್ ಕುಮಾರ್ ಎಸ್.**
ಸಹಾಯಕ ಪ್ರಾಧ್ಯಾಪಕ, ರೀಜನಲ್ ಇನ್ ಸ್ಟಿಟ್ಯೂಟ್ ಅಫ್ ಎಜುಕೇಶನ್
ಎನ್.ಸಿ.ಇ.ಆರ್.ಟಿ., ಮೈಸೂರು

ಕರ್ನಾಟಕದ ಪ್ರಾಣಿವೈದ್ಯ ಇತಿಹಾಸವನ್ನು ಸಾ.ಶ.ಸು 7ನೇ ಶತಮಾನದಿಂದ ಪ್ರಾರಂಭಿಸಬಹುದು. ಕರ್ನಾಟಕದ ದಕ್ಷಿಣಭಾಗದ ಬನ್ನೂರಿನಲ್ಲಿ ರಾಜ್ಯವಾಳುತ್ತಿದ್ದ ಗಂಗರಾಜ ಶ್ರೀಪುರುಷ (775) 'ಗಜಶಾಸ್ತ್ರ'ವನ್ನೂ ಆತನ ಮಗನಾದ ಸೈಗೊಟ್ಟ ಶಿವಮಾರ 'ಗಜಾಷ್ಟಕ'ವನ್ನೂ ಬರೆದಿದ್ದಾರೆ (800). ಶಿವಮಾರನ ಗಜಾಷ್ಟಕ ಕನ್ನಡಭಾಷೆಯ ಪ್ರಥಮಶಾಸ್ತ್ರ ಗ್ರಂಥ. ಚಾವುಂಡರಾಯ ತನ್ನ ಗ್ರಂಥವಾದ 'ಲೋಕೋಪಕಾರ'ದಲ್ಲಿ ಆಯುರ್ವೇದ ಶಾಸ್ತ್ರವನ್ನು ವಿಸ್ತಾರವಾಗಿ ವಿವರಿಸಿದ್ದಾನೆ. ಮಾನವ ಹಲವಾರು ಪ್ರಾಣಿಗಳನ್ನು ತನ್ನ ನಿತ್ಯ ಬದುಕಿನಲ್ಲಿ ಸಾಕುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದಿರುವುದಕ್ಕೆ ನಮಗೆ ಹಲವಾರು ಆಧಾರಗಳು ದೊರೆಯುತ್ತವೆ. ಹಾಗೆಯೇ ಭಾರತೀಯ ಪರಂಪರೆಯಲ್ಲಿ ಪೂರ್ವಕಾಲದಿಂದಲೂ ಪಶುಸಂಗೋಪನಾ ಸಂಸ್ಕೃತಿಯು ಅವಿಚ್ಛಿನ್ನವಾಗಿ ಅನುಸೂತ್ಯವಾಗಿ ಸಾಗಿಬಂದಿದೆ. ಪಶುಗಳು ಪ್ರಾಚೀನರ ಸಂಪತ್ತಿನ ಭಾಗವಾಗಿ ಗುರುತಿಸಿಕೊಳ್ಳುತ್ತಿದ್ದವು. ಯಾರ ಬಳಿಯಲ್ಲಿ ವಿಪುಲವಾದ ಗೋವಿನ ಸಂಪತ್ತಿದೆಯೋ ಅವನೇ ನಿಜವಾದ ಶ್ರೀಮಂತನೆಂದು ಹೇಳುತ್ತಿದ್ದರು. ಹೀಗೆ ತನ್ನ ಆತ್ಮಸಂಗತವಾದ ಪಶುಗಳು ರೋಗಗಳಿಗೆ ತುತ್ತಾದಾಗ ಅವುಗಳಿಗೆ ಉಪಚರಿಸಲು ಕಾಡಿನ ಔಷಧಿ ಕ್ರಮಗಳನ್ನು ಕಂಡುಕೊಂಡನು. ಮುಂದೆ ಕಾಲವಿಕಾಸ ಕ್ರಮದಲ್ಲಿ ಪಶುವೈದ್ಯಕೀಯ ವಿಚಾರಗಳು ಗ್ರಂಥಸ್ಥವಾದವು. ಅಂತಹವುಗಳಲ್ಲಿ ಕೀರ್ತಿವರ್ಮನ ಗೋವೈದ್ಯವೂ ಒಂದು. ಈ ಕೃತಿಯಲ್ಲಿ ಪ್ರಾಸಂಗಿಕವಾಗಿ ಪ್ರಾಣಿವೈದ್ಯದ ಪ್ರಸಾಪ ಬಂದಿದೆ.

## 1. ಕೀರ್ತಿವರ್ಮ (1100)

ಕೀರ್ತಿವರ್ಮನು **'ಗೋವೈದ್ಯ'** ಎಂಬ ಪಶುವೈದ್ಯ ಗ್ರಂಥವನ್ನು ಬರೆದಿದ್ದಾನೆ. ಇವನ ಕಾಲವನ್ನು 1100 ಎಂದು ಕವಿಚರಿತೆಕಾರರು ಊಹಿಸಿದ್ದಾರೆ.[1]

**"ಜಿನನಾಪ್ತಂ ಗುರು ದೇವಚಂದ್ರಮುನಿಪಂ ತ್ರೈಲೋಕ್ಯಮಲ್ಲಾಧಿಪಂ**
**ಆನಕಂ ಪಾಲಭವಂದ್ಯ... ವಾಕ್ಷೀವರಂ ವಿಕ್ರಮಾಂ**
**ಕನರೇಂದ್ರಂ ತನಗಗ್ರಜಾತನೆನಲಂತಾರ್ ನೋಂತರೀಕೀರ್ತಿವ**
**ರ್ಮನರೇಂದ್ರಂಬರಮೆಂದು ಧಾತ್ರಿ ಪೊಗಟ್ಟುಂ ನಿಚ್ಚ ಮಹೋತ್ಸಾಹದಿಂ॥** [2]

ಈ ಪದ್ಯದಿಂದ ಕೀರ್ತಿವರ್ಮನ ತಂದೆ ತ್ರೈಲೋಕ್ಯಮಲ್ಲಾಧಿಪನು. ಅಣ್ಣ ವಿಕ್ರಮಾಂಕ ನರೇಂದ್ರ, ಗುರು ದೇವಚಂದ್ರಮುನಿ. ಈತನು ಜಿನನನ್ನು ಆರಾಧಿಸಿ ಕೃತಿರಚನೆಯಲ್ಲಿ ತೊಡಗುತ್ತಾನೆ. ಇದರಿಂದ ಕೀತಿವರ್ಮನು ಚಾಳುಕ್ಯ ಅರಸು ಮನೆತನದಲ್ಲಿ ಹುಟ್ಟಿದವನೆಂದು ವೇದ್ಯವಾಗುತ್ತದೆ. ತ್ರೈಲೋಕ್ಯಮಲ್ಲನು

ಸಾ.ಶ.1042ರಿಂದ 1068ರವರೆಗೆ ಆಳಿದಂತೆ ತಿಳಿಯುತ್ತದೆ. ಇನ್ನು ವಿಕ್ರಮಾದಿತ್ಯನು ಸಾ.ಶ. 1076 ರಿಂದ 1126ರವರೆಗೆ ಆಳ್ವಿಕೆ ಮಾಡಿದ ಉಲ್ಲೇಖಗಳಿವೆ. ಆದುದರಿಂದ ಕವಿಯು ಸುಮಾರು ಸಾ.ಶ 1100ರಲ್ಲಿ ಇದ್ದಿರಬಹುದು. ತ್ರೈಲೋಕ್ಯಮಲ್ಲನಿಗೆ ಕೇತಲದೇವಿಯೆಂಬ ಜೈನಧರ್ಮಾನುಸಾರಿಣಿಯಾದ ಪತ್ನಿಯೊಬ್ಬಳಿದ್ದಂತೆಯೂ ಆಕೆ ಕೆಲವು ಜಿನಾಲಯಗಳನ್ನು ಕಟ್ಟಿಸಿದಂತೆಯೂ ತಿಳಿದುಬರುತ್ತದೆ.[3] ಅಂತೆಯೇ ಕವಿಯು 'ಜಿನನಾಪ್ತಂ' ಎಂದು ಹೇಳಿಕೊಂಡಿರುವುದರಿಂದ ಕೇತಲದೇವಿಯ ಮಗನಾಗಿರಬಹುದು. ಕೀರ್ತಿಚಂದ್ರ, ವೈರಕರಿಹರಿ, ಕಂದರ್ಪಮೂರ್ತಿ, ಸತ್ಯರತ್ನಾಕರ, ಬುಧಭವ್ಯಬಾಂಧವ, ವೈದ್ಯರತ್ನ, ಪಾಲಭವಂದ್ಯ, ಕವಿತಾಸ್ಥಿ, ಚಂದ್ರಮ ಕೀರ್ತಿವಿಳಾಸ ಎಂದು ತನ್ನನ್ನು ವಿಶೇಷಿಸಿಕೊಂಡಿದ್ದಾನೆ.

### 1.1. ಗೋವೈದ್ಯ

ಕನ್ನಡದಲ್ಲಿ ರಚಿತವಾದ ಮೊತ್ತಮೊದಲಿನ ವೈದ್ಯಗ್ರಂಥ. ಇದರ ಓಲೆಗರಿ ಪ್ರತಿ ಅಸಮಗ್ರವೂ ಅಶುದ್ಧವೂ ಆಗಿದೆ ಎಂದು ಕರ್ಣಾಟಕ ಕವಿಚರಿತೆಕಾರರು ಹೇಳುತ್ತಾರೆ. ಇದು ಚಂಪೂಗ್ರಂಥ. ಇದರಲ್ಲಿ ಗೋವುಗಳ ವ್ಯಾಧಿಗಳಿಗೆ ಔಷಧಗಳನ್ನೂ ಯಂತ್ರಗಳನ್ನೂ ಬರೆಹಾಕುವ ಕ್ರಮಗಳನ್ನೂ ವಿಸ್ತಾರವಾಗಿ ಹೇಳಿದೆ.

ಈ ಗ್ರಂಥದ ಎರಡು ಪದ್ಯಗಳು ಹೀಗಿವೆ:

**ಬಡವಂ ಕೊಬ್ಬಿದ ಬಂಜೆಯ**
**ನುಡುಗದೆ ಹಯಮಾಡಿ ಕಱೆವ ತೆಱನಂ ಕುತ್ತಂ॥**
**ಬಿಡುವಂತು ವೈರಿಕರಿಹರಿ**
**ನುಡಿದಂ ಕಂದರ್ಪಮೂರ್ತಿ ಕೀರ್ತಿವಿಲಾಸಂ॥**

**ಬಡಿಯದೆ ಭಾರಮಂ ಪಿರಿದನಿಕ್ಕದೆ ಮೇಹುಜಲಂಗಳೆಂಬಿವಂ**
**ಕುಡದವಱಿಂದಕ್ಕಟಂ ಬರದು ನೀಳದೆ ಕಾಯದೆ ಗೋಕುಲಂಗಳಂ**
**ಬಡವನಱಿಯದಂತು ಕಡುಗರುವಿಸಮಾನರಾಯಂ ಲಕ್ಷ್ಮಿಯಂ**
**ಪಡೆದಪರೆಂದು ಪೇಟಿದಿನುದಿತೋತ್ಸವದಿಂ ಬುಧಭವ್ಯಬಾಂಧವಂ।**[4]

ಬಡಕಲಾದ ಹಸುವನ್ನು, ಕೊಬ್ಬಿದ ಬಂಜೆಯನ್ನು ಕರೆಯುವ ಹಾಗೆ ಮಾಡುವುದನ್ನೂ ಅವುಗಳ ರೋಗರುಜಿನಗಳನ್ನು ನಿವಾರಿಸುವುದನ್ನೂ; ಗೋ ಸಂಪತ್ತು ಹೇಗೆ ವೃದ್ಧಿಸಿಕೊಳ್ಳಬೇಕೆಂದು ತಾನು ಹೇಳುತ್ತೇನೆಂದಿದ್ದಾನೆ.

ಧನ್ಯಕುಮಾರ ಇಜಾರಿ ಅವರು 'ಜೈನ ವೈದ್ಯಕೀಯ ಪರಂಪರೆ'[5] ಎಂಬ ಕೃತಿಯನ್ನು ರಚಿಸಿದ್ದಾರೆ. ಅದರಲ್ಲಿ ಗೋವುಗಳಿಗೆ ಸಂಬಂಧಿಸಿ ಬಂಜೆತನ, ದನವು ಮಾಂಸ ಸೇವನೆ ಮಾಡಿದಲ್ಲಿ, ದಿನ ತುಂಬದೆ ಗರ್ಭದಿಂದ ಕರು ಹೊರ ಬಂದಾಗ, ಹಸುವು ಕರುವಿಗೆ ಮೊಲೆಯುಣಿಸದಿದ್ದಾಗ, ಹಸುವು ಒರಟಾಗಿದ್ದರೆ, ಗರ್ಭದಲ್ಲಿ ಕರು ಸತ್ತಿದ್ದರೆ, ಬಾಯಿರೋಗ, ದನಗಳ ಕೆಮ್ಮು, ಹೊಟ್ಟೆಶೂಲ, ಜ್ವರ, ಹೊಟ್ಟೆ ಉಬ್ಬರಿಸಿದಾಗ – ಹೀಗೆ ಅನೇಕ ಸಮಸ್ಯೆಗಳಿಗೆ ಔಷಧಗಳನ್ನು ಹೇಳಲಾಗಿದೆ.

**2. ಅಶ್ವಶಾಸ್ತ್ರ**

ಶಾಲಿಹೋತ್ರನನ್ನು ಅನುಸರಿಸಿ ಕನ್ನಡದಲ್ಲಿ ಅನೇಕ ಕೃತಿಗಳು ಹುಟ್ಟಿಕೊಂಡಿವೆ. 1400ರಲ್ಲಿ ಅಭಿನವಚಂದ್ರನ ಅಶ್ವಶಾಸ್ತ್ರವು ತುರಗೋತ್ಪತ್ತಿ, ಸರ್ವಾಂಗ ಪರೀಕ್ಷೆ, ವರ್ಣ, ಪುಂಡ್ರ, ಸುಳಿ, ಆಯುನಿರ್ಣಯ, ಶರೀರಲಕ್ಷಣ, ಪೋಷಣವಿಧಿ, ನೀರಾಂಜನವಿಧಿ, ಅವಯವನಿರೂಪಣೆ, ಗುರುಶಿಷ್ಯಲಕ್ಷಣ, ಚಿಕಿತ್ಸಾ ಭೇದಗಳು, ವ್ರಣಚಿಕಿತ್ಸೆ, ಜ್ವರ, ರೋಗಭೇದಗಳು, ವಿಷವೈದ್ಯ ಹರೀತಕೀಕ್ರಿಯೆ ಇತ್ಯಾದಿ ಸಂಗತಿಗಳನ್ನು ಇಲ್ಲಿ ಚರ್ಚಿಸಲಾಗಿದೆ.

**ಅನುಪಮಹಯಶಾಸ್ತ್ರಾಗಮ**
**ವನಧಿಯೊಳಾಸಿಂಹದತ್ತಕೃತಿಲಕ್ಷಣಮಂ**
**ದಿನಕರತನಯನರೇವಂ**
**ತನಮತದಿಂಪೇಳ್ವೆನೆಸೆವಪೊಸಕನ್ನಡದಿ ॥**

ಹೀಗೆ 'ಅಶ್ವಶಾಸ್ತ್ರ' ಕೃತಿಯಲ್ಲಿ ಅಭಿನವಚಂದ್ರನು ಸಿಂಹದತ್ತ ರೇವಂತರ ಸಂಪ್ರದಾಯದಲ್ಲಿ ಈ ಕೃತಿಯನ್ನು ರಚಿಸಿದ್ದೇನೆಂದು ಹೇಳಿಕೊಂಡಿದ್ದಾನೆ. ಆದರೆ ಇದುವರೆಗೂ ಇವರಿಬ್ಬರ ಕೃತಿಗಳು ಉಪಲಬ್ಧವಾಗಿಲ್ಲ. ಈತನ ತರುವಾಯದವನೇ ಬಾಚರಸ.

**2.1. ಬಾಚರಸ(ಸಾ.ಶ.1500)**

**ವಿವಿಶ್ರುತಮೂವತ್ತೈದೆನಿಪ ವೃತ್ತದೊಳಂ ನೆಜತೆ ಪೇಳ್ವೆನಾಗಮ್ಮೈ**
**ಕಾಶ್ರಯಚೌಂಡರಾಜಸುತ ಬಾಚರಸಂ ಸುಜನೈಕಬಾಂಧವಂ ॥**

ಬಾಚರಸನು 'ಅಶ್ವವೈದ್ಯ'ವನ್ನು ಬರೆದಿದ್ದಾನೆ. ಇವನು ಜೈನಕವಿಯೆಂದು ತೋರುತ್ತದೆ. ಇವನ ತಂದೆ ಚೌಂಡರಾಜ. ಇವನಿಗೆ 'ಸುಜನೈಕಬಾಂಧವ' ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಇವನ ಕಾಲವು ಸುಮಾರು ಸಾ.ಶ. 1500–87 [6] ಎಂದು ಕವಿಚರಿತೆಕಾರರು ಊಹಿಸುತ್ತಾರೆ. ಇದರ ಹೊರತಾಗಿ ಬಾಚರಸನ ಕುರಿತಾಗಿ ಹೆಚ್ಚೇನೂ ಮಾಹಿತಿ ಲಭಿಸುವುದಿಲ್ಲ.

ಬಾಚರಸ ಕವಿಯ 'ಅಶ್ವವೈದ್ಯ'ದಲ್ಲಿ 35 ವೃತ್ತಗಳಿವೆ. ಅಲ್ಲಲ್ಲಿ ಗದ್ಯಭಾಗವೂ ಇದೆ.

**ಸುಶ್ರುತಶಾಲಿಹೋತ್ರನಳವಾಕ್ಯದೊಳಂ ಹಯಚೇಷ್ಟೆ ರೂಪು ದಂ**
**ಂತ ಶ್ರವಣಾಕ್ಷಿ ವರ್ಣ ಸುಚಿ ನಾಲಗೆ ಗಂಧ ಶುಭಾಶುಭಂಗಳಂ ॥**
**ಪೇರುರವಾಗಿ ಮಾಂಸಲತೆವೆತ್ತು ಮಯೂರನ ಕಂಠದಂದದಿಂ**
**ದೇರಣವಾಗಿಯುಂ ನಿಡುಗೊರಲ್ ಕಡುಸಣ್ಣಮೆ ಗಂಡಮಂಡಲಂ ॥**
**ಚಾರುಕಪೋಲಮುಂ ತೆಳುಪುವೆತ್ತೆನೆಯಲ್ ಕಿವಿ ಸಣ್ಣ ಮಾತಿಯುಂ**
**ನೇರಿದವಾಗಿ ನುಣ್ಣುನನಯಮಂ ಪಡೆಯದು ರಾಜವಾಹನಂ ॥**[7]

28 ಕುದುರೆಗಳ ವರ್ಣ, ಸೆಲೆ, ಹಲ್ಲು, ಕಿವಿ, ಕಣ್ಣು, ಸುಳಿ, ನಾಲಿಗೆ, ಗಂಧಗಳು ಮುಂತಾದವುಗಳನ್ನು ಆಧರಿಸಿ ಶುಭಾಶುಭ ವಿಷಯಗಳನ್ನು ತಿಳಿಸಲಾಗಿದೆ. ನವಿಲಿನ ಕೊರಳಿನಂತೆ ಎತ್ತರವಾದ ಕೊರಳನ್ನು ಹೊಂದಿದ್ದು, ಕೊರಳಭಾಗವು ಬಿಳಿದಾಗಿದ್ದರೆ ಶುಭಕರವೂ, ಸುಂದರವಾದ ಕಪೋಲವು ಕಿವಿಯು ಸಣ್ಣದಾಗಿಯೂ ನುಣುಪಾದ ಮೈಯನ್ನು ಹೊಂದಿದ್ದರೆ ರಾಜವಾಹವೆನಿಸುವುದು. ಹೀಗಿರುವ ಜೈನರು ಪಶುವೈದ್ಯ

ಶಾಸ್ತ್ರಕ್ಕೆ ನೀಡಿರುವ ಕೊಡುಗೆ; ಪ್ರಸ್ತುತ ಸಂದರ್ಭದಲ್ಲಿಯೂ ಬೆಳೆಯುಳ್ಳದ್ದಾಗಿದೆ ಎಂದು ಹೇಳಬಹುದು.

**ಕೊನೆಯ ಟಿಪ್ಪಣಿಗಳು**

1. ಆರ್. ನರಸಿಂಹಾಚಾರ್ಯ: ಕರ್ಣಾಟಕ ಕವಿಚರಿತೆ – ಪ್ರಥಮ ಸಂಪುಟ, ಪುಟ. 16
2 ಆರ್ವಿಯಸ್ ಸುಂದರಂ, ಶಾಸ್ತ್ರಸಾಹಿತ್ಯ: ಪುಟ. 44
3. Indian Antiquary Vol. XIX: P, 268
4. ಆರ್. ನರಸಿಂಹಾಚಾರ್ಯ, ಅದೇ, ಪೂರ್ವೋಕ್ತ,ಪು 137
5. ಧನ್ಯಕುಮಾರ ಇಜಾರಿ, ಜೈನ ವೈದ್ಯಕೀಯ ಪರಂಪರೆ, ಪು.32
6. ಆರ್. ನರಸಿಂಹಾಚಾರ್ಯ, ದ್ವಿತೀಯ ಸಂಪುಟ, ಪು. 112
7. ಅದೇ, ಪೂರ್ವೋಕ್ತ, ಪು. 113

**ಗ್ರಂಥ ಋಣ**


1. ಆರ್ವಿಯಸ್ ಸುಂದರಂ(2012), ಶಾಸ್ತ್ರಸಾಹಿತ್ಯ, ಚೇತನ ಬುಕ್‌ಹೌಸ್, ಮೈಸೂರು.
2. ಇಜಾರಿ ಧನ್ಯಕುಮಾರ್(2004), ಜೈನ ವೈದ್ಯಕೀಯ ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ನರಸಿಂಹಾಚಾರ್ಯ.ಆರ್(1924),ಕರ್ಣಾಟಕ ಕವಿಚರಿತೆ, ಸಂಪುಟ–1, ಬೆಂಗಳೂರು ಪ್ರೆಸ್, ಬೆಂಗಳೂರು.
4. ನರಸಿಂಹಾಚಾರ್ಯ.ಆರ್(1919),ಕರ್ಣಾಟಕ ಕವಿಚರಿತೆ, ಸಂಪುಟ–2, ಬೆಂಗಳೂರು ಪ್ರೆಸ್, ಬೆಂಗಳೂರು.
5. Indian Antiquary (VOL. XIX.—1890.)Edited By, John Faith full Fleet, C.LE.,Bombay Civil Service, and Richard Carnac Temple, Major, Bengal Staff Corps.


❖❖❖

# ಜನಪದ ಮಹಾಕಾವ್ಯ ಪರಂಪರೆ

**ಡಾ. ಅಪ್ಪಗೆರೆ ಸೋಮಶೇಖರ್**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ
ಕಡಗಂಚಿ, ಆಳಂದ ರಸ್ತೆ, ಕಲಬುರಗಿ – 585367

ಜನಪದರ ಆದಿಮ ಬದುಕಿನ ಅನುಭವ ಜಗತ್ತು ದಾಖಲಾಗಿರುವುದು ಜನಪದ ಸಾಹಿತ್ಯದಲ್ಲಿ. ಜನಪದ ಸಾಹಿತ್ಯವು ಸಮುದಾಯಗಳ ಆತ್ಮಕಥನಾತ್ಮಕ ಪಠ್ಯಗಳಾಗಿವೆ. ಜನಪದರ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಪ್ರಮುಖ ಆಕರಗಳಲ್ಲಿ 'ಜನಪದ ಮಹಾಕಾವ್ಯ'ವೂ ಪ್ರಧಾನವಾದದ್ದಾಗಿದೆ. ಜನಪದ ಮಹಾಕಾವ್ಯಗಳನ್ನು ಅಧ್ಯಯನಕ್ಕೆ ಒಳಪಡಿಸುವಾಗ ಕೆಲವು ತಾತ್ವಿಕ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಜನಪದ ಮಹಾಕಾವ್ಯಗಳನ್ನು ಯಾಕೆ ಅಧ್ಯಯನ ಮಾಡಬೇಕು? ಅವುಗಳ ಅಧ್ಯಯನವು ಹೇಗೆ ಸಮುದಾಯಗಳನ್ನು ಅರ್ಥೈಸಿಕೊಳ್ಳುವಲ್ಲಿ ನೆರವಾಗಬಲ್ಲವು? ತಳಸಮುದಾಯಗಳ ವರ್ತಮಾನದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸ್ವರೂಪಗಳನ್ನು ಕಂಡುಕೊಳ್ಳುವಲ್ಲಿ ಜನಪದ ಮಹಾಕಾವ್ಯಗಳ ಅಧ್ಯಯನವು ಹೇಗೆ ನೆರವಾಗಬಲ್ಲದು? ತಳಸಮುದಾಯಗಳ ಆದಿಮ ಸ್ಮೃತಿಯಲ್ಲಿನ ಅರಿವಿನ ನೆಲೆಗಳನ್ನು ಜನಪದ ಮಹಾಕಾವ್ಯಗಳ ಅಧ್ಯಯನದ ಮೂಲಕ ಹೇಗೆ ಕಂಡುಕೊಳ್ಳುವುದು? ಇತ್ಯಾದಿ.

ಬಹುನೆಲೆಯ ವಿಭಿನ್ನ ಭಾರತೀಯ ತಳಸಮುದಾಯಗಳ ಸಾಮಾಜಿಕ–ಸಾಂಸ್ಕೃತಿಕ ನೆಲೆಗಳ ಅಧ್ಯಯನಕ್ಕೆ "ಜನಪದ ಮಹಾಕಾವ್ಯ"ಗಳು ಆಕರವಾಗಬಲ್ಲವು. ಬಹುತೇಕ ಭಾರತೀಯ ಜನಪದ ಮಹಾಕಾವ್ಯಗಳು ಇಲ್ಲಿನ ಶೋಷಿತ, ಅಲಕ್ಷಿತ, ತಳ–ಶ್ರಮ ಸಮುದಾಯಗಳ ಅಸ್ಮಿತೆಯ ಸಂಕೇತಗಳಾಗಿದ್ದಾವೆ. ಜನಪದ ಮಹಾಕಾವ್ಯಗಳು ಏಕವ್ಯಕ್ತಿ ರಚಿತವಲ್ಲ. ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ನಾಯಕರುಗಳಾದ ಮಂಟೇಸ್ವಾಮಿ, ಮಹದೇಶ್ವರ, ಜುಂಜಪ್ಪ, ಮೈಲಾರಲಿಂಗ, ಸಿರಿ ಮುಂತಾದವರು ವ್ಯವಸ್ಥೆಯ ವಿರುದ್ಧ ಪ್ರತಿರೋಧವನ್ನು ಮಂಡಿಸಿದ "ಸಾಂಸ್ಕೃತಿಕ ಬಂಡಾಯಗಾರ"ರಾಗಿದ್ದಾರೆ. ಈ ಕಾವ್ಯಗಳಲ್ಲಿ ಬರುವ ಪವಾಡದ ಪ್ರಸಂಗಗಳು ಜನಪದರ ಸೃಜನಶೀಲತೆಗೆ, ಕಾವ್ಯತತ್ತ್ವಕ್ಕೆ, ದೇಸಿಮೀಮಾಂಸೆಯ ಗುಣಕ್ಕೆ ಸಾಕ್ಷಿ. ಕವಿರಾಜಮಾರ್ಗಕಾರ ಹೇಳುವ "ಕನ್ನಡನಾಡವರ್ಗಳ್ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್"; ಬಿ.ಎಂ.ಶ್ರೀ. ಅವರು ಹೇಳುವ "ಜನವಾಣಿ ಬೇರು, ಕವಿವಾಣಿ ಹೂವು"; ಕಿ.ರಂ. ನಾಗರಾಜ್ ಅವರು ಹೇಳುವ: "ಜನಪದ ಕಾವ್ಯಗಳು ನಮ್ಮ ಹಲವು ನಿರ್ಬಂಧಗಳಿಂದ ನಮ್ಮನ್ನು ಮುಕ್ತಗೊಳಿಸುತ್ತವೆ. ಹೊರದಾರಿಗಳನ್ನು ತೋರಿಸುತ್ತವೆ" ಎಂಬ ಮಾತುಗಳೇ ಜನಪದ ಮಹಾಕಾವ್ಯಗಳ ಅಧ್ಯಯನಕ್ಕೆ ಇರಬಹುದಾದ ಬಹುತ್ವದ ಪರಿಕಲ್ಪನೆಯ ಸಾಧ್ಯತೆಗಳನ್ನು ತೆರೆದಿಡುತ್ತವೆ. ಶೋಷಿತ–ಶೋಷಕ ಮತ್ತು ಪ್ರತಿರೋಧದ ನೆಲೆ; ಸ್ತ್ರೀ–ಪುರುಷ ಸಂಘರ್ಷಾತ್ಮಕ ನೆಲೆ; ಬಹುನೆಲೆಯ ಸಾಂಸ್ಕೃತಿಕ ಬೇರುಗಳ ಹುಡುಕಾಟದ ನೆಲೆ; ಮಹಾಕಾವ್ಯನಾಯಕರ ತಿರುಗಾಟದ ಪ್ರಾದೇಶಿಕ ನೆಲೆ; ಸೃಷ್ಠಿ ಪುರಾಣದ ನೆಲೆ; ಆರ್ಯ ಮತ್ತು ದ್ರಾವಿಡ ಪರಂಪರೆಗಳ ಸಾಂಸ್ಕೃತಿಕ ಮುಖಾಮುಖಿ ನೆಲೆ; ಅನ್ಯಧರ್ಮ,

ಜಾತಿ, ಮತ, ಲಿಂಗ ಸಂಬಂಧಗಳ ವೈರುಧ್ಯ ಹಾಗೂ ಸಾಮರಸ್ಯದ ನೆಲೆ; ಭಕ್ತರು(ಒಕ್ಕಲು), ಮಹಿಳೆಯರ ಪರೀಕ್ಷೆ; ಪವಾಡಗಳ ಭಿನ್ನಭಿನ್ನ ಅರ್ಥ ಸಾಧ್ಯತೆಗಳು–ಮುಂತಾದ ದೃಷ್ಟಿಕೋನಗಳಲ್ಲಿ ಜನಪದ ಮಹಾಕಾವ್ಯಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ. ಹಾಗಂತ ಇವೇ ಅಧ್ಯಯನದ ಅಂತಿಮ ನೆಲೆಗಳೆಂದು ಭಾವಿಸಬೇಕಿಲ್ಲ. ಇವುಗಳನ್ನು ಮೀರಿದ ಒಳನೋಟಗಳು ಜನಪದ ಮಹಾಕಾವ್ಯಗಳ ಆಳವಾದ ಅಧ್ಯಯನದಿಂದ ಸಾಧ್ಯ.

'ಮಹಾಕಾವ್ಯ' ಎಂಬ ಪರಿಭಾಷೆಯನ್ನು ಕುರಿತು ಹಲವು ವಿದ್ವಾಂಸರು ಮಂಡಿಸಿರುವ ವ್ಯಾಖ್ಯಾನಗಳು ಜನಪದ ಮಹಾಕಾವ್ಯಗಳನ್ನು ಸೂಕ್ಷ್ಮವಾಗಿ ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಸಹಕಾರಿಯಾಗಬಲ್ಲವಾಗಿವೆ. 'ಬೆಕ್ ಮತ್ತು ಹಾಂಕೋ' ವಿದ್ವಾಂಸರು ಅಭಿಪ್ರಾಯಪಡುವ ಹಾಗೆ: "ಮೌಖಿಕ ಮಹಾಕಾವ್ಯಗಳು ರಾಜಕೀಯ–ಸಾಮಾಜಿಕ ವ್ಯವಸ್ಥೆಗಳ ಅಂಚಿನಲ್ಲಿರುವ ಅಥವಾ ಅವುಗಳಿಂದ ದೂರವಿರುವ ಜನಾಂಗ–ಸಮುದಾಯಗಳಲ್ಲಿ ಸೃಷ್ಟಿಯಾಗುತ್ತವೆ(ಬ್ರೆಂಡಾ ಬೆಕ್); ಮತ್ತು ಮೌಖಿಕ ಮಹಾಕಾವ್ಯಗಳು ಆಯಾಯ ಜನಾಂಗ–ಸಮುದಾಯಗಳ ಧಾರ್ಮಿಕ–ಸಾಂಸ್ಕೃತಿಕ ಅಸ್ಮಿತೆಯ ರೂಪಣೆಗಳಾಗಿರುತ್ತವೆ" (ಹೊಸ ಮಡಿಯ ಮೇಲೆ ಚದುರಂಗ, ಪು–15). ಸಮುದಾಯಗಳ ಪಾರಂಪರಿಕವಾದ ಅನುಭವ ಅಭಿವ್ಯಕ್ತಿಯೇ 'ಜನಪದ ಮಹಾಕಾವ್ಯ' ಎಂಬುದಾಗಿ ಅರ್ಥೈಸಿಕೊಳ್ಳಬಹುದು. 'ಜನಪದ ಮಹಾಕಾವ್ಯ' ಎಂಬುದು ಬೌದ್ಧಿಕ ವಲಯವು ಕಂಡುಕೊಂಡಿರುವ ಪರಿಭಾಷೆಯಾಗಿದೆ. ಆದರೆ ಜನಪದರು ಇವುಗಳನ್ನು 'ಕಥೆ'ಯನ್ನಾಗಿಯೇ ಪರಿಭಾವಿಸುತ್ತಾರೆ. ಹಾಗಾಗಿ ಜನಪದರಿಗೆ 'ಮಲೆಮಾದೇಶ್ವರ ಕಾವ್ಯ' 'ಮಾದಪ್ಪನ ಕಥೆ'ಯಾಗುತ್ತದೆ; 'ಮಂಟೇಸ್ವಾಮಿ ಕಾವ್ಯ' 'ಮಂಟೇಸ್ವಾಮಿಯ ಕಥೆ, ಧರೆಗೆ ದೊಡ್ಡವರ ಕಥೆ'ಯಾಗುತ್ತದೆ; 'ಜುಂಜಪ್ಪನ ಕಾವ್ಯ' 'ಜುಂಜಪ್ಪನ ಕಥೆ'ಯಾಗುತ್ತದೆ. 'ಕಥೆ' ಎಂಬ ಪರಿಭಾಷೆಯು 'ಹೇಳುವ–ಕೇಳುವ' ಎರಡು ನೆಲೆಗಳನ್ನು ಸಾಂಕೇತಿಸುತ್ತದೆ. ಇದರ ಜೊತೆಗೆ, ಜನಪದ ಮಹಾಕಾವ್ಯಗಳು ಸಾಹಿತ್ಯದ ಹಲವು ರೂಪ–ಪ್ರಕಾರಗಳ ಸಂಕರಸ್ವರೂಪಿ ಪಠ್ಯಗಳಾಗಿವೆ. "ಪ್ರಾಯಃ ಮೌಖಿಕ ಮಹಾಕಾವ್ಯವೆಂಬುದು ಒಂದು ಪ್ರಭೇದವಲ್ಲ; ಅದು ಅನೇಕ ಪ್ರಭೇದಗಳನ್ನು ಒಳಗೊಳ್ಳುವ ಒಂದು ವ್ಯಾಪಕ ವರ್ಗ. ಸ್ವತಂತ್ರವಾಗಿಯೇ ಹಾಡಲು ಬರುವ ಸುಂದರ ಭಾವಗೀತೆಗಳು, ಒಗಟುಗಳು ಮತ್ತು ಗಾದೆಗಳು, ನಾಟಕೀಯ ದೀರ್ಘ ಸಂಭಾಷಣೆಗಳು, ಪುರಾಣ ಮತ್ತು ಮಾಯ–ಮೋಡಿಗಳ ರೋಚಕ ಕಥೆಗಳು" (ಹೊಸ ಮಡಿಯ ಮೇಲೆ ಚದುರಂಗ, ಪು–130) ಜನಪದ ಮಹಾಕಾವ್ಯಗಳಲ್ಲಿ ವಿವಿಧ ಪ್ರಕಾರಗಳು ಪೂರಕವಾಗಿ ಬೆಸೆದುಕೊಂಡಿರುವುದನ್ನು ಗುರುತಿಸಬಹುದು.

ಸಿ.ಎನ್. ರಾಮಚಂದ್ರನ್ ಅವರು ಹೇಳುವಂತೆ, "ಯಾವುದೇ ಮೌಖಿಕ ಮಹಾಕಾವ್ಯಗಳ ಬಗ್ಗೆ ನಾವು ಮೊದಲಿಗೆ ಎತ್ತಬೇಕಾದ ಪ್ರಶ್ನೆಯೆಂದರೆ ಈ ಕೃತಿಯನ್ನು ತಮ್ಮದೆಂದು ಮಾನ್ಯ ಮಾಡುವ ಸಮುದಾಯ–ಜನಾಂಗಗಳಿಗೆ ಏಕೆ ಮತ್ತು ಯಾವ ಕಾರಣಗಳಿಗಾಗಿ ಇವು ಮುಖ್ಯವಾಗುತ್ತವೆ ಎಂಬ ಪ್ರಶ್ನೆ"(ಹೊಸ ಮಡಿಯ ಮೇಲೆ ಚದುರಂಗ, ಪು–11). ಹಿನ್ನೆಲೆಯಲ್ಲಿ 'ಜನಪದ ಮಹಾಕಾವ್ಯ'ವನ್ನು ಜಿಜ್ಞಾಸೆಗೆ ಒಳಪಡಿಸಬೇಕಿದೆ. ಬಹುತೇಕ ಸ್ಪೃಶ್ಯ–ಅಸ್ಪೃಶ್ಯ ಸಮುದಾಯಗಳು ಪ್ರಭಾವಿ ದೈವಿಕ ನೆಲೆಯಲ್ಲಿ ಮಂಟೇಸ್ವಾಮಿ ಪರಂಪರೆಗೆ ನಡೆದುಕೊಳ್ಳುವುದನ್ನು ಕಾಣುತ್ತೇವೆ. ಫಿನ್‌ಲೆಂಡ್‌ನ ವಿದ್ವಾಂಸ 'ಲಾರಿ ಹಾಂಕೋ' ಜನಪದ ಮಹಾಕಾವ್ಯ, ಕಥನಗಳನ್ನು

“ಮಾನಸಿಕ ಪಠ್ಯ”(Mental Text) ಎಂದು ಕರೆಯುತ್ತಾರೆ. “...ಸದಾ ಬದಲಾವಣೆಯ ಸಾಧ್ಯತೆಯಿರುವ, ಅಂತಃಸ್ಥಿತ ಮಾದರಿಯನ್ನು ನಾವು ಮಾನಸಿಕ ಪಠ್ಯ'ವೆಂದು ಕರೆಯಬಹುದು. ...ಪ್ರತಿಯೊಬ್ಬ ಗಾಯಕನ ಮಾನಸಿಕ ಪಠ್ಯವೂ ಭಿನ್ನವಾಗಿರುತ್ತದೆ” (ಹೊಸ ಮಡಿಯ ಮೇಲೆ ಚದುರಂಗ, ಪು–43, 45) ಎಂದು ಹೇಳುತ್ತಾರೆ. ಇದು ಕೇವಲ ವ್ಯಕ್ತಿಗತ ಮಾನಸಿಕ ಸ್ತರವನ್ನು ಮಾತ್ರ ಪ್ರತಿಪಾದಿಸದೆ, ಒಟ್ಟು ಸಮುದಾಯದ ಮಾನಸಿಕ ಸ್ಥಿತಿಯ ದಾಖಲೀಕರಣವನ್ನು ಸಂಕೇತಿಸುತ್ತದೆ.

ಜನಪದ ಮಹಾಕಾವ್ಯಗಳು ಸಾಮುದಾಯಿಕ ಪ್ರಜ್ಞೆಯ ಮಾನಸಿಕತೆಯ ತಾತ್ವಿಕತೆಯನ್ನು ಮಂಡಿಸುತ್ತವೆ. ಜನಪದ ಮೌಖಿಕ ಕಥನಗಳಾದ ಮಹಾಕಾವ್ಯಗಳು ಏಕಕಾಲದಲ್ಲಿ “ಕೇಳುವ; ಗಟ್ಟಿಯಾಗಿ ಓದಿಕೊಳ್ಳುವ; ಕಣ್ಣಿನಿಂದ ನೋಡುತ್ತ ಮೌನವಾಗಿ ಓದಿಕೊಳ್ಳುವ” ಪಠ್ಯಗಳಾಗಿವೆ. ಒಂದರ್ಥದಲ್ಲಿ ಜನಪದ ಮಹಾಕಾವ್ಯಗಳು ಸಂಕರ ಸ್ವರೂಪಿಯಾದ ಮೌಖಿಕ ಕಥನ ಪಠ್ಯಗಳಾಗಿವೆ. ಯಾವುದೇ ಜನಪದ ಪಠ್ಯ ಏಕ ಸ್ವರೂಪಿಯದ್ದಾಗಿರದೆ, ಬಹುಸ್ವರೂಪಿಯದ್ದಾಗಿರುತ್ತದೆ. ಜನಪದ ಮಹಾಕಾವ್ಯಗಳು ಸಹಾ ಇದರಿಂದ ಹೊರತಾಗಿಲ್ಲ. ಒಬ್ಬ ಕಲಾವಿದ ಒಂದು ಜನಪದ ಕಾವ್ಯ ಪಠ್ಯವನ್ನು ಎಷ್ಟು ಸಾರಿ ಹಾಡುತ್ತಾನೊ, ಅಷ್ಟು ಸಾರಿಯೂ ಸಹಾ ಅದು ಭಿನ್ನಭಿನ್ನ ಪಠ್ಯವೇ ಆಗಿರುತ್ತದೆ. ಜನಪದ ಮಹಾಕಾವ್ಯಗಳ ಈ ಸ್ವರೂಪದ ಗುಣವನ್ನು ಗುರುತಿಸಿರುವ ಜಾನ್ ಕಾರ್ಕಳ “ಬೆಳೆಯುವ ಕಾವ್ಯಗಳು” (ಹೊಸ ಮಡಿಯ ಮೇಲೆ ಚದುರಂಗ, ಪು–17) ಎಂದು ಕರೆಯುತ್ತಾರೆ. ಯಾವುದೇ ಜನಪದ ಕಲಾವಿದ ಪ್ರತಿ ಸಾರಿಯೂ ಸಹಾ ಒಂದಲ್ಲ ಒಂದು ಹೊಸ ವಿಷಯವನ್ನು ಸೇರ್ಪಡಿಸಿಕೊಂಡೇ ಹಾಡುತ್ತಾನೆ. ಇದು ಜನಪದ ಕಲಾವಿದರ ಸ್ವೋಪಜ್ಞವಾದ ಸೃಜನಶೀಲ ಪ್ರತಿಭೆಯ ಕುರುಹಾಗಿದೆ. ಹಾಗಾಗಿ ಜನಪದ ಮಹಾಕಾವ್ಯಗಳು ಬಹುರೂಪಿ ಪಠ್ಯಗಳಾಗಿವೆ. ಈ ಬಹುರೂಪಿ ಪಠ್ಯಗಳಲ್ಲಿ ಯಾವುದು ಪ್ರಮಾಣೀಕೃತ ಪಠ್ಯ? ನಮ್ಮ ಅಧ್ಯಯನಕ್ಕೆ ಆಕರವಾಗಬೇಕಾದದ್ದು “ಅಕ್ಷರದಲ್ಲಿ ದಾಖಲಾಗಿರುವ ಸ್ಥಾವರಗೊಂಡಿರುವ ಜನಪದ ಮಹಾಕಾವ್ಯ ಪಠ್ಯವೆ?” ಅಥವಾ “ಪ್ರತಿಸಲವೂ ವಿಭಿನ್ನವಾಗಿ ಅನಾವರಣಗೊಳ್ಳುವ; ಜಂಗಮ ಸ್ವರೂಪಿಯಾದ; ಕಲಾವಿದನ ನೆನಪಿನ ಜನಪದ ಮಹಾಕಾವ್ಯ ಪಠ್ಯವೆ?” ಎಂಬುದು ಬಹಳ ಮುಖ್ಯ ಪ್ರಶ್ನೆಗಳಾಗಿವೆ. ಬೇರೆಬೇರೆ ಜನಪದ ಕಲಾವಿದರು ತಮ್ಮ ನೆನಪಿನ ಮೂಲಕ ಹಾಡುವ ಒಂದೇ ಜನಪದ ಮಹಾಕಾವ್ಯವನ್ನು ಸಂಗ್ರಹಿಸಿ, ಅದರ ಹಲವು ಪಠ್ಯಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಿದಾಗ ಹಲವು ರೀತಿಯ ಸಂಗತಿಗಳು ಬೆಳಕಿಗೆ ಬರುತ್ತವೆ.

ಜನಪದ ಮಹಾಕಾವ್ಯಗಳನ್ನು ಈಗಾಗಲೇ ವಿದ್ವತ್ ವಲಯವು ನಿರ್ಮಿಸಿರುವ ಅಧ್ಯಯನದ ಸೈದ್ಧಾಂತಿಕ ಮಾನದಂಡಗಳನ್ನು ಬಳಸಿಕೊಂಡು ಅಧ್ಯಯನ ಮಾಡಬೇಕ ಅಥವಾ ಜನಪದ ಲೋಕವನ್ನು ಗ್ರಹಿಸುತ್ತಲೇ ಅದು ಕಟ್ಟಿಕೊಡುವ ಸಾಮುದಾಯಿಕ, ಪಾರಂಪರಿಕ ವಿವೇಕದ ಅರಿವಿನ ಬೆಳಕಿನಲ್ಲಿ ಮಹಾಕಾವ್ಯಗಳನ್ನು ಅರ್ಥೈಸಿಕೊಳ್ಳಬೇಕ ಎಂಬುದು ಬಹಳ ಮುಖ್ಯ. ಜನಪದರು 'ಮಾದಪ್ಪನ ಕತೆ, ಮಂಟೇಸ್ವಾಮಿ ಕತೆ' ಎಂದರೆ, ವಿದ್ವತ್ ವಲಯವು 'ಮಹದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ' ಎನ್ನುತ್ತದೆ. ಮಾದಪ್ಪ–ಮಹದೇಶ್ವರನಾಗುವ, ಮಂಟೇದಯ್ಯ–ಮಂಟೇಸ್ವಾಮಿಯಾಗುವ ಸಾಂಸ್ಕೃತಿಕ ಪಲ್ಲಟವನ್ನು ನಮ್ಮ ಜಾನಪದ ಸಾಂಸ್ಕೃತಿಕ ಅಧ್ಯಯನಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ. ವಿದ್ವತ್ ವಲಯವು ಜನಪದವನ್ನು ಅದರ ಮೂಲ ನೆಲೆಯಲ್ಲಿಯೇ ಮುಖಾಮುಖಿಯಾಗುವ

ಬದಲಾಗಿ; ತನ್ನ ಬೌದ್ಧಿಕ ಮಾನದಂಡಗಳಿಗನುಗುಣವಾಗಿ ಅದನ್ನು ಪರಿವರ್ತಿಸಿಕೊಂಡು ಅಧ್ಯಯನಕ್ಕೆ ಮುಂದಾಗುವ 'ತೊಡಕ'ನ್ನು ಇಲ್ಲಿ ಕಾಣಬಹುದು.

ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಕೃಷ್ಣಗೊಲ್ಲರ ಕಾವ್ಯ, ಮೈಲಾರಲಿಂಗ, ಕುಮಾರರಾಮ, ಹಾಲುಮತ ಜನಪದ ಮಹಾಕಾವ್ಯ, ಮಾಳಿಂಗರಾಯನ ಕಾವ್ಯ, ಗೋಣಿ ಬಸಪ್ಪನ ಕಾವ್ಯ, ಬಿಳಿಗಿರಿರಂಗನ ಕಾವ್ಯ, ಗೊಂಡರಾಮಾಯಣ(ಕನ್ನಡ), ಸಿರಿ ಪಾಡ್ದನ(ತುಳು), ಅಣ್ಣನ್ಮಾರ್ ಕತೈ(ತಮಿಳು), ಪಾಲ್ನಾಟಿ ವೀರುಲ ಕಥಾ(ತೆಲುಗು), ಪಾಬೂಜಿ(ರಾಜಾಸ್ಥಾನಿ), ಚನೈನಿ(ಭೋಜ್‌ಪುರಿ, ಅವಧಿ) ಭಾರತೀಯ ಪ್ರಮುಖ ಜನಪದ ಮಹಾಕಾವ್ಯಗಳು. ಕಿಂಗ್‌ಗೆಜಕ(ಟಿಬೆಟನ್ ಮಂಗೋಲಿಯನ್), ಅಂತರ್(ಅರಾಬಿಕ್), ಮನಸ್(ಕಿರ್ಗೀಜ್), ಕಲೆವಾಲ(ಫಿನಿಷ್, ಇದನ್ನು ಎಲಿಯಾಸ್‌ಲೆನ್ರೂಟ್ 1835–36ರಲ್ಲಿ ಪ್ರಕಟಿಸಿದೆ), ಸೋನ್‌ಜಾರ(ಮಾಲಿ, ಆಫ್ರಿಕಾ), ಮೊಹಾವೆ ಮಹಾಕಾವ್ಯ(ಮೊಹಾವೆ, ದಕ್ಷಿಣ ಅಮೆರಿಕ), ಕೋಟನ್ ಉಟುನ್ನೈ(ಐನು, ಜಪಾನ್) ಇವು ಪ್ರಮುಖ ಭಾರತಿಯೇತರ ಜನಪದ ಮಹಾಕಾವ್ಯಗಳಾಗಿವೆ. ವಿಶ್ವದ ಪ್ರಪ್ರಥಮ ಮಹಾಕಾವ್ಯ "ಗಿಲ್ಗಮೇಶ್"(ಬೇಬಿಲೋನಿಯನ್). 8ನೇ ಶತಮಾನದ "ಬೆವುಲ್ಫ್"(ಇಂಗ್ಲಿಷ್), 11–12ನೇ ಶತಮಾನದ "ನೈಚಲುಂಗ್‌ನೆಡರ್"(ಜರ್ಮನ್) ನಂತರದ ಬಹುಮುಖ್ಯ ಜನಪದ ಮಹಾಕಾವ್ಯಗಳಾಗಿವೆ.

**ಪರಾಮರ್ಶನ ಗ್ರಂಥಗಳು**


1. ಹೊಸಮಡಿಯ ಮೇಲೆ ಚದುರಂಗ : ಸಿ.ಎನ್ ರಾಮಚಂದ್ರನ್ : ಸಪ್ನ ಬುಕ್ ಹೌಸ್, ಬೆಂಗಳೂರು, 2010
2. ಸುವರ್ಣ ಜಾನಪದ(ಸಂಪುಟ 1 ಮತ್ತು 2): ಪ್ರಧಾನ ಸಂ. ಡಾ. ಎಚ್. ಜೆ. ಲಕ್ಕಪ್ಪಗೌಡ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1998
3. ಮಲೆಯ ಮಾದೇಶ್ವರ(ಸಂಪುಟ 1 ಮತ್ತು 2): ಸಂ– ಡಾ. ಪಿ. ಕೆ. ರಾಜಶೇಖರ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006
4. ಮಂಟೇಸ್ವಾಮಿಕಾವ್ಯ : ಸಂ– ವೆಂಕಟೇಶ ಇಂದ್ವಾಡಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004
5. ಶ್ರೀ ಮಂಟೇಸ್ವಾಮಿ ಮತ್ತು ಇತರ ಕಥನ ಕಾವ್ಯಗಳು: – ಜೀ. ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ಬೆಂಗಳುರು, 2012
6. ಜನಪದ ಹಾಲುಮತ ಮಹಾಕಾವ್ಯ : ಸಂ– ಡಾ. ವೀರಣ್ಣ ದಂಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2000
7. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು: ಸಂ– ಜಿ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ಬೆಂಗಳುರು, 2012
8. ಕನ್ನಡ ವೃತಿಗಾಯಕ ಕಾವ್ಯಗಳು: ಸಂ– ಜಿ. ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ಬೆಂಗಳುರು, 2012
9. ಸಿರಿ ಜನಪದಕಾವ್ಯ ಸಾಂಸ್ಕೃತಿಕ ಮುಖಾಮುಖಿ –ಡಾ. ವೆಂಕಟೇಶ ಇಂದ್ವಾಡಿ(ಸಂ) : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2010
10. ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿ ಸಂಸ್ಕೃತಿ–ಡಾ. ಎಸ್. ಎಂ. ಮುತ್ತಯ್ಯ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : 2008


❖❖❖

# ಕನಕದಾಸರು ಕಂಡ ಆದಿಕೇಶವ ಯಾರು?

**ಡಾ. ಪುರುಷೋತ್ತಮ ಡಿ.**
ಕನ್ನಡ ಸಹ ಪ್ರಾಧ್ಯಾಪಕರು, ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಬೈರಾಪುರ, ಮೈಸೂರು.

'ಆದಿಕೇಶವ' ಎಂಬ ಪದವು ರೂಪಕಸಾರವುಳ್ಳ ಪದವಾಗಿದ್ದು, ವಿಶೇಷವಾದ ಬಹು ಆಯಾಮವುಳ್ಳ ವಿಸ್ತಾರವಾದ ಅರ್ಥ ಅರುಹುವನ್ನು ಹೊಂದಿರುವ ಸೃಷ್ಟಿ ಮೂಲದ ಪದವಾಗಿದೆ. ಪದ ನಿಷ್ಪತ್ತಿ, ಪದದ ಅರ್ಥ, ಪದಸಮೂಹದ ಅರ್ಥ ಇವನ್ನೆಲ್ಲ ಅನೇಕ ಆಯಾಮಗಳಿಂದ ಶೋಧಿಸಲು ಹಿನ್ನೆಲೆಯನ್ನು ಅರಿತುಕೊಳ್ಳುವ ಅಗತ್ಯವಿದೆ. ಏಕೆಂದರೆ ಕನಕದಾಸರು ತಮ್ಮ ಅಂಕಿತನಾಮವನ್ನು ರೂಪಿಸಿಕೊಳ್ಳುವಾಗ ಅವರು ಅನುಸಂಧಾನ ನಡೆಸಿದ ವಿಚಾರಗಳು ಹಾಗೂ ಅದರ ಹಿಂದಿರುವ ಜ್ಞಾನ ಶಾಖೆಗಳ ಅರಿವು ಬಹಳ ಮುಖ್ಯ. ಅವುಗಳ ಜ್ಞಾನ ಇಲ್ಲದೆ ಕೇವಲ ಪದದ ಅರ್ಥ ಹಿಡಿದು ಅದರ ವ್ಯಾಪ್ತಿಯನ್ನು ಚರ್ಚಿಸುವುದು ಸಾಧುವಲ್ಲ.

ಕನಕದಾಸರ ಕಾಲಕ್ಕೆ ಭಾರತೀಯ ತತ್ವಶಾಸ್ತ್ರ ಪರಂಪರೆ ಬಹುತಾರ್ಕಿಕ ಮಟ್ಟವನ್ನು ತಲುಪಿ, ಅನುಷ್ಠಾನ ಮಟ್ಟದ ಜಿಜ್ಞಾಸೆಯಲ್ಲಿ ಉಳಿದಿತ್ತು. ಆದರೆ ಕನಕದಾಸರು ಇವುಗಳ ಸಾರವನ್ನು ಅರಿತು ಅನುಷ್ಠಾನ ಮಾಡಿದರೊ ಅಥವಾ ಅವರು ವಿಶೇಷವಾದ ತತ್ವವನ್ನು ಬೋಧಿಸಿದರೊ ಎಂಬ ವಿಷಯವಾಗಿ ಗಂಭೀರ ಚರ್ಚೆ ನಡೆಯಬೇಕಿದೆ. ಕೇವಲ ಅಂಕಿತನಾಮ ಕುರಿತು ಶೋಧನೆಗೆ ಹೊರಟ ನನಗೆ ಹತ್ತು ಹಲವು ಪ್ರಶ್ನೆಗಳು ಎದುರಾದವು. ಕನಕದಾಸರು ಕೇವಲ ದಾಸಸಾಹಿತ್ಯದ ದಾಸರಷ್ಟೇ ಅಲ್ಲ; ತತ್ವಜ್ಞಾನಿ ಕೂಡ ಆಗಿದ್ದರು. ಶಂಕರ, ರಾಮಾನುಜ, ಬಸವ, ಮಾಧ್ವರಂತೆ ಕನಕದಾಸರು ಕೂಡ ಅವರ ತತ್ವವನ್ನು ಸಾಹಿತ್ಯದಲ್ಲಿ ಹೇಳಿರುವಂತೆಯೇ ಅವರ ಅಂಕಿತನಾಮದಲ್ಲಿ ಕೂಡ ಅಡಗಿಸಿದ್ದಾರೆ.

ಕನಕದಾಸರ ಸಾಹಿತ್ಯ ಲೌಕಿಕ ಜಗತ್ತಿನ ವ್ಯವಹಾರಗಳಿಂದ ಕೂಡಿದ, ತಾತ್ವಿಕ ಪರಿಭಾಷೆಯಲ್ಲಿ ಸಿದ್ಧಗೊಂಡು, ವಿಜ್ಞಾನ ಪಥದಲ್ಲಿ ಸಾಗುವ, ವೈಜ್ಞಾನಿಕ ಪ್ರಯೋಗದ ತಳಹದಿಯ ಮೇಲೆ ಸೃಜನೆಯಾಗಿರುವ ಜ್ಞಾನ ಭಂಡಾರವಾಗಿದೆ. 'ಆದಿಕೇಶವ'ಎಂಬ ಅಂಕಿತನಾಮವೇ ಅವರ ತಾತ್ವಿಕ ವಿಚಾರದ ಅರ್ಥ ವಿಸ್ತಾರತೆಯನ್ನು ಒಳಗೊಂಡ ಒನಪುಳ್ಳ ಧ್ವನಿಯಾಗಿದೆ.

'ಆದಿ' ಎಂಬ ಕಲ್ಪನೆ ಶೂನ್ಯದ ಬಿಂದುವಿನಿಂದ ಕೂಡಿದ ಅನಂತತೆಯ ಅನನ್ಯ ಶಕ್ತಿಯಾಗಿದೆ. 'ಆದಿ' ಎಂಬ ಪರಿಕಲ್ಪನೆ ಸಂಪೂರ್ಣವಾಗಿ ಸಕಲ ಸೃಷ್ಟಿಯ ಭಾಗವನ್ನು ಒಳಗೊಂಡ ಮೂಲಾಧಾರಗಳ ಕೇಂದ್ರದ ನೆಲೆಯ ಶಕ್ತಿಯಾಗಿ ಕಾವ್ಯನಾಮ ರೂಪುಗೊಂಡಿದೆ. 'ಶೂನ್ಯ – ಆದಿ' ಎಂಬುದು ತುದಿ ಮೊದಲು ಇಲ್ಲದ, ಅನಂತತೆಯಿಂದ ಕೂಡಿದ್ದು, ಅದು ಲಿಂಗಾತೀತವಾದ ನೆಲೆಯ ಕಲ್ಪನೆಯದು. ನಮ್ಮ ಅಳತೆಗೂ ಮೀರಿದ ಆನಂತತೆಯ ಲೋಕವನ್ನು ಆದಿಮೂಲ ಅನ್ನುವುದರ ಮೂಲಕ ಎಲ್ಲವನ್ನೂ ಒಳಗೊಳ್ಳುವ ಲೋಕ ಶಕ್ತಿಯನ್ನು, ದರ್ಶನವನ್ನು ಪರಿಭ್ರಮಿಸಿ ಅನುಭಾವಿಸಿ

ಆರಾಧಿಸುವ ನೆಲೆಯನ್ನು ಕನಕದಾಸರ ಕಾವ್ಯನಾಮದಲ್ಲಿ ಕಾಣಬಹುದು. 'ಆದಿ' ಎಂಬ ಪದ ತಾರ್ಕಿಕವಾದ ಹಿನ್ನೆಲೆಯನ್ನು ಹೊಂದಿರುವ ಪದ. ಸೃಷ್ಟಿ ಮೂಲದ ಕೇಂದ್ರ. ವಿಜ್ಞಾನ ಜಗತ್ತು, ತತ್ವಜ್ಞಾನಿಗಳು, ಇತಿಹಾಸತಜ್ಞರು, ಪುರಾಣಗಳು, ಎಲ್ಲಾ ಧರ್ಮಗಳು ಚರ್ಚೆ ಮಾಡುವುದು ಇದೇ ಆದಿ ಎಂಬ ಸತ್ಯವನ್ನು; ಕನಕರ ಕಾವ್ಯಶಕ್ತಿಯ ಕೇಂದ್ರವು ಇದೇ ಆಗಿದೆ. 'ಆದಿಶಕ್ತಿ' ಲಿಂಗಾತೀತವಾದ ಅಮೂರ್ತವಾದ ಮೊದಲನ್ನು ಒಳಗೊಂಡಿರುವ ಕಾರ್ಯವೂ, ಕಾರಣವೂ, ಮೂಲವೂ ಆದ ಸ್ಥಿತಿ ಶಕ್ತಿ. ಆದಿ ಸ್ಥಿತಿಯ 'ಸೃಷ್ಟಿ' ಶಕ್ತಿಯನ್ನು ಕನಕದಾಸರು ಕೇಶವನ ರೂಪದಲ್ಲಿ ಕಾಣುವುದು ಮೇಲ್ನೋಟಕ್ಕೆ ವೈದಿಕ ಪ್ರಭಾವ ಎಂದು ಸುಲಭವಾಗಿ ಹೇಳಬಹುದು. ಆದರೆ, ಅಷ್ಟು ಸುಲಭದಲ್ಲಿ ಅದನ್ನು ಸರಳಿಕರಿಸಿ ಹೇಳಲು ಆಗುವುದಿಲ್ಲ. ಕನಕದಾಸರ ತತ್ವಸಾಹಿತ್ಯವು ವೇದ ಉಪನಿಷತ್ತು, ಭಾಗವತ, ಗರುಡಪುರಾಣ, ವಿಷ್ಣುಪುರಾಣದ ಜೊತೆಗೆ ತತ್ವಶಾಸ್ತ್ರದ ಜ್ಞಾನಪಾಕದ ಭಕ್ತಿ ಸಾರದ ಆರ್ದ್ರತೆಯಿಂದ ಕೂಡಿರುವ ದರ್ಶನವಾಗಿದೆ. ಕನಕರ ತತ್ವವಿಚಾರಗಳ ಮೂಲಕಲ್ಪನೆ ಉಳಿದಿರುವುದು ಅವರ ಅಂಕಿತನಾಮದಲ್ಲಿ. ಆದಿಕೇಶವ ವಿಶ್ವಶಕ್ತಿಯ ಮೂಲವಾಗಿ, ಸತ್ಯರೂಪಿನ ಸುಗುಣಗಳ ಮಂಗಳರೂಪವಾದ ಚೈತನ್ಯವಾಗಿದೆ.

**"ಸಾಲದೆ ನಿನ್ನದೊಂದು ದಿವ್ಯನಾಮ" ದಿವ್ಯ+ನಾಮ; (ದಿವ್ಯ= ದೈವ, ದೇವತೆ, ಸತ್ಯ)**

**"ಕರಿರಾಜ ಕಷ್ಟದಲ್ಲಿ ಆದಿಮೂಲಾ ಎಂದು ಕರೆಯಲಾಕ್ಷಣ ಬಂದು ಒದಗಿದೆಯೊ ನರಹರಿಯೆ"(ಆದಿ+ಮೂಲ; ಆನೆ, ಮೊಸಳೆ ಸಕಲ ಚರಾಚರಗಳನ್ನು ಸೃಷ್ಟಿ ಮಾಡಿದ ಮೂಲ ಶಕ್ತಿ)**

**ಸಿರಿಯಾದಿಕೇಶವ ಸಿರಿ+ಆದಿ+ಕೇಶವ**

**ಸೃಷ್ಟಿಗೊಡೆಯನೆಕಾಗಿ ನೆಲೆಯಾದಿಕೇಶವ ಸೃಷ್ಟಿ+ಒಡೆಯನೆ........ಆದಿ+ಕೇಶವ**

**"ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ**
**ನೀ ದೇಹದೊಳಗೊ ನಿನ್ನೊಳು ದೇಹವೊ ಹರಿಯೆ॥"**
**(ಆತ್ಮ ಮತ್ತು ಪರಮಾತ್ಮನ ಹರಿಯುವ ಪರಿ)**

**"ಅಸಮ ಭವಕಾಗಿನೆಲೆಯಾದಿಕೇಶವರಾಯ।**
**ಉಸುರಲೆನ್ನಳವಲ್ಲ ಎಲ್ಲ ನಿನ್ನೊಳಗೊ ಹರಿಯೆ" (ಸಕಲ ಎಲ್ಲವೂ ನಿನ್ನೊಳಗೆ ಹರಿಯೆ)**

**"ಆತ್ಮಾಂತರಾತ್ಮ ನೆಲೆಯಾದಿಕೇಶವ"**
**ಎಂಬತ್ತುನಾಲ್ಕು ಲಕ್ಷದ ಜೀವರುಗ**
**ಳೆಂಬ ಬೀಜವ ಸೃಷ್ಟಿಕರ್ತ**
**ಮುಂಬೆಳಸಿಗೆ ಪಣತವಕಟ್ಟಿದಂದದಲಿ**
**ಪೊಂಬೆಟ್ಟಕಣದಗೆರಂಜಿಸಿತು** [1]

ವಿಶಿಷ್ಟಾದ್ವೈತ ದರ್ಶನದ ಪ್ರಭಾವ ಮೊದಲು ಕನಕದಾಸರ ಮೇಲೆ ಆಗಿದೆ. ಅದೇರೀತಿಯಾಗಿ ಅದ್ವೈತ ಹಾಗೂ ದ್ವೈತ(ಮಾಧ್ವ) ಪ್ರಭಾವಗಳು ಆಗಿ ಕನಕರದು ಬಹಳ ವಿಭಿನ್ನ ಆಯಾಮದ ತಾತ್ವಿಕ ಒಳನೋಟಗಳಿಂದ ಕೂಡಿದ ದೃಷ್ಟಿ. "ಶ್ರೀಮನ್ನಾರಾಯಣನೇ ಪರಬ್ರಹ್ಮ. ಆತನೇ ಸರ್ವಸ್ವಾತಂತ್ರ್ಯ. ಸಕಲ ವೈಭವದ ವೈಕುಂಠವು ಸತ್ತ್ವದಿಂದಾಗಿದೆ. ಎಂಬ ಅರಿವಿನ ವೇದಾಂತ ವಾಕ್ಯಗಳನ್ನು ಶ್ರವಣ ಮಾಡಿದ ಮೇಲೆ ಎಲ್ಲಾ ವಸ್ತುಗಳೂ ಬ್ರಹ್ಮನಿಂದಾಗಿವೆಯೆಂಬುದನ್ನು ತಿಳಿಯುತ್ತಾರೆ. ಬ್ರಹ್ಮನು ಅಂತರ್ಯಾಮಿಯಾಗಿ ಆತ್ಮರೂಪಿಯಾಗಿದ್ದಾನೆಂಬುದನ್ನು ಅರಿಯುತ್ತಾರೆ. ಆದ್ದರಿಂದ ಆಯಾ ಪ್ರಕಾರವಾಗಿ ಬ್ರಹ್ಮವನ್ನೇ ಎಲ್ಲ ಶಬ್ದಗಳೂ ಸೂಚಿಸುತ್ತವೆಯೆಂಬುದನ್ನು ಅರಿಯುತ್ತಾರೆ."[1]

ಆದಿಸೃಷ್ಟಿಯ ಕೇಂದ್ರವಾದ ಶಕ್ತಿಯನ್ನು ಜ್ಞಾನರೂಪದಲ್ಲಿ ಅನುಭವಿಸುತ್ತ, ಅದರೊಂದಿಗೆ ನಿರಂತವಾದ ಅನುಸಂಧಾನವನ್ನು ನಡೆಸುತ್ತ ಜ್ಞಾನದ ಅರಿವಿನಿಂದ ಭಕ್ತಿರಸದಲ್ಲಿ ಆದಿಮೂಲದ ಸೂತ್ರದ ಸುತ್ತ ಎಲ್ಲವನ್ನೂ ಒಳಗೊಂಡ ಆದಿಕೇಶವನ ಸ್ಮರಣೆಯಿಂದ ಭವ ಕ್ಲೇಶಗಳಿಂದ ಬಿಡುಗಡೆಗೆ ಪರಿತಪಿಸುತ್ತ ಆದಿಮೂಲದಲ್ಲಿ ಚಿತ್ತಲೀನಗೊಳಿಸಲು ಕನಕರ ಮೊರೆ ನಿರಂತರವಾಗಿರುವುದನ್ನು ಕಾಣಬಹುದು.

ಪರಮಾಣುಕಕ್ಷೆಯ ಸಂರಚನೆಯೇ 'ಶಕ್ತಿ' ಮೂಲ ಎಂದು ಗುರುತಿಸಿ ಹೇಳುವಂತೆ ಜ್ಞಾನ, ಕರ್ಮ, ಭಕ್ತಿ, ಇವು ಆದಿಮೂಲವನ್ನು ಕಾಣುವ, ಸೇರುವ, ಅದೊಂದಿಗೆ ನಿರಂತರ ಅನುಸಂಧಾನ ಮಾಡುವ ಪ್ರಕ್ರಿಯೆಯ ಚಿಂತನೆಗಳು ಕನಕರ ಕೀರ್ತನೆಗಳಲ್ಲಿ ದಾಖಲಾಗಿದೆ. "ಉಭಯತ್ರರೂ, ಅಂದರೆ ಅಪರೋಕ್ಷ ಅನುಭಾವಿಗಳಾದ ದಾರ್ಶನಿಕರೂ, ಪ್ರಜ್ಞಾನ ಪರಿಣತರಾದ ವಿಜ್ಞಾನಿಗಳೂ ಒಂದೇ ನೆಲೆಯಲಿ ನಿಂತು 'ಜಡ' ಎಂಬುದು ಘನೀಭವಿಸಿದ ಚೈತನ್ಯ (Metter Solidified Energy) ಎಂದುಕೈಎತ್ತಿ ಸಾರಿದರು. ಅದರ ಮೂಲ ಬೇರು 'ಅಣು'(Atom)ವಿನಲ್ಲಿದೆ ಎಂದು ವಿಜ್ಞಾನಿಗಳೂ ವಿಶ್ವದ ಕವಿ, ಋಷಿ, ಮನೀಷಿ, ಮೊದಲಾದ ಅನನ್ಯ ಚೇತನಗಳ ಅನುಭೂತ ಆವಿರ್ಭಾವದ ಸತ್‌ಸ್ವರೂಪದರ್ಶನಾತ್ಮಕ ಆವಿಷ್ಕಾರವನ್ನು ನಮ್ಮ ಅಪರೋಕ್ಷ ಜ್ಞಾನಿಗಳೂ ಘೋಷಿಸಿದ್ದಾರೆ...."[2] ತನ್ನ ಅರಿವಿನ ಮೂಲಕ, ತನ್ನ ಆತ್ಮಜ್ಞಾನದಿಂದ ಪಡೆದ ದರ್ಶನದ ಮೂಲಕ "ಆತ್ಮಾಂತರಾತ್ಮ ನೆಲೆಯಾದಿಕೇಶವ"ನ ಕಂಡು ಭಕ್ತಿಯಿಂದ ಭಜಿಸುವ ಕನಕದಾಸರ ನಾಮಮೀಮಾಂಸೆ ಬಹು ನೆಲೆಗಳಲ್ಲಿ ಅರ್ಥವನ್ನು ಒಳಗೊಂಡಿದೆ.

"ದೀಪ ಮತ್ತು ಬೆಳಕು ಎಂದಾಗ ಬೆಳಕು ದೀಪದ ಧರ್ಮ, ಅದರ ಸ್ವರೂಪವಲ್ಲ. ಜ್ಞಾನವು ಜಡವೂ ಅಲ್ಲ, ಸ್ವಯಂಪ್ರಕಾಶ. ತನ್ನನ್ನೂ ಬೆಳಗಿಸಿ ಬೇರೆ ಒಂದನ್ನೂ ತೋರಿಸುತ್ತದೆ. ಆದರೆ ಹಾಗೆ ಮಾಡುತ್ತೇನೆಂಬ ಅರಿವು ಅದಕ್ಕಿಲ್ಲ. ...ಆತ್ಮನ ಅನಂತವಾದ ಗುಣಗಳೆಲ್ಲ ಧರ್ಮಭೂತಜ್ಞಾನದ ಅವಸ್ಥಾಭೇದಗಳಾಗಿವೆ. ಭಕ್ತಿ–ಪ್ರಪತ್ತಿಗಳೂ ಅದರ ಭೇದಗಳೇ ಆಗಿವೆ."[3] ಎಂಬ ಧರ್ಮಭೂತಜ್ಞಾನದರ್ಶನ ಭಾಗದಲ್ಲಿ ರಾಮಾನುಜಾಚಾರ್ಯರು ಹೇಳುತ್ತಾರೆ. ಇಂತಹ ಬೆಳಕಿನ ಜ್ಞಾನಾನುಭೂತಿಯನ್ನು ಪಡೆದ ದರ್ಶನ ಸ್ಥಿತಿಯನ್ನು ಅಂತರಾಳದ ಚಿತ್ತ ಸೌಂದರ್ಯವೆಂದು ಕರೆಯಬಹುದು. ಅಂತಹ ಅಂತರಾಳದ ಚಿತ್ತಸೌಂದರ್ಯ ಉಳ್ಳ ಮನಸ್ಥಿತಿಯನ್ನು ಕನಕರು ಹೊಂದಿದ್ದರು.

'ನಾನು' ಎಂಬ ಅಹಂಭಾವ ಕುರಿತು ಕನಕದಾಸರು ಹೊಂದಿದ್ದ ಜಿಜ್ಞಾಸೆಯ ಸಾರವು ಶ್ರೀವೈಷ್ಣವ ಮತದ ನೆಲೆಯಿಂದ ಕೂಡಿದ ಫಲಿತವಾಗಿತ್ತು. "ಮುಕ್ತಾತ್ಮ ಪರಮಾತ್ಮನ ಕೈಂಕರ್ಯದಲ್ಲಿ ಪಾರತಂತ್ರ್ಯ ಸಿದ್ಧಿಯನ್ನು ಪಡೆಯುತ್ತಾನೆ. 'ನಾನು' ಅನ್ನುವ ಅಹಂಭಾವವನ್ನು ಅಳಿಯುತ್ತಾನೆ. 'ನಾನು' ಎಂದರೆ ನನ್ನಲ್ಲಿ ನೀನು, 'ದೇವಾ' ಅನ್ನುವ ಅನುಭವ ಪಡೆಯುತ್ತಾನೆ."[4] ಭಕ್ತ, ಭಕ್ತಿಯ ಔನ್ನತ್ಯದಲ್ಲಿ ಅಹಂ ಅನ್ನು ಅಳಿದು, ತನ್ನ ಆಂತರ್ಯದಲ್ಲಿ ದೇವಾತ್ಮಾನುಭವವನ್ನು ಪಡೆಯುವ ಮೂಲಕ, ಅನುಭೂತಿಯನ್ನು ಪರಿಗ್ರಹಿಸಿದ ಮೇಲೆ ಮಾಯೆ, ಅಹಂ, ಇಹ ಪರಗಳ ಯಾವ ಕುರುಹುಗಳು ಇಲ್ಲವಾಗುತ್ತದೆ. ಬ್ರಹ್ಮತ್ವದಲ್ಲಿ ಅನುಸಂಧಾನಗೊಳ್ಳುವ ಪ್ರಕ್ರಿಯೆಯಲ್ಲಿ ಆದಿ ಅನಂತದ ಜೊತೆಗೆ ಆತ್ಮಾನುಭೂತಿಗೊಳ್ಳುವ ಪರಿಯನ್ನು ಕನಕದಾಸರು ಅರಿತು ಆ ತತ್ವದ ನಡೆಯಲ್ಲಿಯೇ ಬದುಕಿದ ತತ್ವಾನುಷ್ಠಾನಿ.

**ಕೊನೆ ಟಿಪ್ಪಣಿಗಳು**


1. ಕನಕ ಸಾಹಿತ್ಯ ದರ್ಶನ–3– ಮೋಹನ ತರಂಗಿಣಿ, ಪುಟ:16
2. ಡಾ.ಸಾ.ಶಿ. ಮರುಳಯ್ಯ, ಕುವೆಂಪು ಸ್ವಪ್ನಲೋಕ, ಸ್ವಪ್ನ ಬುಕ್ ಹೌಸ್, 2013, ಪುಟ: 147
3. ತತ್ತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ, ಡಾ. ಸರ್ವೇಪಲ್ಲಿ ರಾಧಾಕೃಷ್ಣನ್, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 2014, ಪುಟ:359
4. ಅದೇ, ಪುಟ: 361


❖❖❖

ತತ್ತಿಯು ಒಡೆಯುತ ಹಾವಿನ ಮರಿಯು
ಸರಸರ ಹರಿಯಿತು ಹಸಿವಿನ ಕರೆಯು

# ಅರಟಗಲ್ಲಿನ ಸ್ಮಾರಕ ಶಿಲಾಶಾಸನ

**ಡಾ. ಕೆರೆಪ್ಪಗೌಡ ಎಸ್. ಪಾಟೀಲ**
ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಲಘಟಗಿ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಮುನವಳ್ಳಿಯಿಂದ 8ಕಿ.ಮೀ. ದೂರದಲ್ಲಿರುವ ಅರಟಗಲ್ಲಿನ ಕಲ್ಮೇಶ್ವರ ದೇವಾಲಯದ ಎದುರು ಸಂಪಾದಿಸಿರುವ ಸ್ಮಾರಕ ಶಿಲಾ ಶಾಸನವಿದೆ.[1] ಸ್ಮಾರಕಶಿಲ್ಪದಲ್ಲಿ ಒಂದರ ಮೇಲೊಂದರಂತೆ 3 ಪಟ್ಟಿಕೆಗಳಿವೆ. ಕೆಳಪಟ್ಟಿಕೆಯ ಎಡಪಾರ್ಶ್ವದಲ್ಲಿ ಛತ್ರಿಯಡಿ ಕುಳಿತಿರುವ ವ್ಯಕ್ತಿ ಮತ್ತು ಅವನ ಇಕ್ಕೆಲಗಳಲ್ಲಿ 3 ವ್ಯಕ್ತಿಗಳನ್ನು ಶಿಲ್ಪಿಸಿದೆ. ಬಲಪಾರ್ಶ್ವದಲ್ಲಿ ಅಗ್ನಿಕುಂಡದಲ್ಲಿ ಒಬ್ಬ ವ್ಯಕ್ತಿಯನ್ನು ತೋರಿಸಿದ್ದು ಅದರ ಮೇಲ್ಗಡೆ ಧುಮುಕಲು ತಯಾರಾಗಿರುವಂತೆ ನಿಂತಿರುವ ವ್ಯಕ್ತಿ ಇದ್ದಾನೆ. ಅಗ್ನಿಕುಂಡದ ಎಡ ಹಾಗೂ ಬಲ ಪಾರ್ಶ್ವಗಳಲ್ಲಿ ಇಬ್ಬರು ವ್ಯಕ್ತಿಗಳು ನಿಂತಿದ್ದು ಅವರಲ್ಲಿ ಒಬ್ಬನು ಬಲಗೈಯಲ್ಲಿ ಗಂಟೆ ಹಿಡಿದು, ಎಡಗೈಯನ್ನು ಮೇಲೆತ್ತಿರುವ ಪೂಜಾರಿಯಂತೆ ತೋರುತ್ತಾನೆ. ಇದರ ಮೇಲ್ಗಡೆ ಇರುವ ಪಟ್ಟಿಕೆಯಲ್ಲಿ ಇಬ್ಬರು ಪುರುಷರನ್ನು ಅಪ್ಸರೆಯರು ಕಂಠಾಶ್ಲೇಷ ರೀತಿಯಲ್ಲಿ ಕರೆದೊಯ್ಯುತ್ತಿರುವಂತೆ ತೋರಿಸಿದೆ. ಇವರಲ್ಲಿ ಎಡಪಾರ್ಶ್ವದಲ್ಲಿರುವ ವ್ಯಕ್ತಿಯ ತಲೆಯ ಮೇಲೆ ಛತ್ರಿಇದೆ. ಮೂರನೆಯ ಪಟ್ಟಿಕೆ ಅರ್ಧ ವೃತ್ತಾಕಾರದಲ್ಲಿದ್ದು ಮಧ್ಯದಲ್ಲಿ ಲಿಂಗ, ಅದರ ಇಕ್ಕೆಲಗಳಲ್ಲಿ ಇಬ್ಬರು ನಿಂತ ವ್ಯಕ್ತಿಗಳು, ಎಡಕ್ಕೆ ನಂದಿ, ಬಲಕ್ಕೆ ಇಬ್ಬರು ಕೈಮುಗಿದು ಕುಳಿತಿರುವ ಪುರುಷರು ಚಿತ್ರಿತರಾಗಿದ್ದಾರೆ. ಇದಲ್ಲದೇ ಸೂರ್ಯ, ಚಂದ್ರರ ಸಂಕೇತಗಳಿವೆ. ಪ್ರಸ್ತುತ ಶಾಸನವನ್ನು ಈ ಪಟ್ಟಿಕೆಗಳ ನಡುವಿನ ಅವಕಾಶದಲ್ಲಿ ಸುಮಾರು 12 ಸಾಲುಗಳಲ್ಲಿ ಕೊರೆದಿದೆ. ಇವುಗಳಲ್ಲಿ ಕೊನೆಯ ಪಟ್ಟಿಕೆಯ ಕೆಳಗಡೆ ಇರುವ ಸಾಲುಗಳು ಬಹಳ ತ್ರುಟಿತವಾಗಿವೆ. ಉಳಿದವು ಹೆಚ್ಚು ಕಡಿಮೆ ಸುಸ್ಥಿತಿಯಲ್ಲಿವೆ.

ಶಾಸನವನ್ನು ಕ್ರಿ.ಶ. 11–12ನೆಯ ಶತಮಾನದ ಕನ್ನಡ ಅಕ್ಷರಗಳಲ್ಲಿ ಮತ್ತು ಕನ್ನಡ ಭಾಷೆಯಲ್ಲಿ ಬರೆದಿದೆ. ಸುಮಾರು 12 ಸಾಲುಗಳನ್ನು ಗುರುತಿಸಲಾಗಿದ್ದು, 9ನೆಯ ಸಾಲಿನವರೆಗೆ ಅಕ್ಷರಗಳು ಸ್ಪಷ್ಟವಾಗಿವೆ. 9 & 10ನೇ ಸಾಲುಗಳಲ್ಲಿ ತೇದಿಯ ವಿವರಗಳಿದ್ದು, ಚಾಲುಕ್ಯ ವಿಕ್ರಮ ವರ್ಷ–24, ಶುದ್ಧ 5, ಬ್ರಹಸ್ಪತಿವಾರ ಎಂಬ ಪದಗಳು ಸ್ಪಷ್ಟವಾಗಿವೆ. ಆದರೆ ಸಂವತ್ಸರ ಮತ್ತು ಮಾಸದ ಹೆಸರುಗಳು ಅಳಿಸಿಹೋಗಿವೆ. ಆದ್ದರಿಂದ ಈ ತೇದಿಯನ್ನು ಕ್ರಿ.ಶ. 1100ಕ್ಕೆ ಸಮಾನವೆಂದು ಮಾತ್ರ ಪರಿಗಣಿಸಬಹುದು.

ಶಾಸನವು ಕಲ್ಯಾಣದ ಚಾಳುಕ್ಯ ದೊರೆ ತ್ರಿಭುವನಮಲ್ಲನ (6ನೇ ವಿಕ್ರಮಾದಿತ್ಯನ) ಆಳ್ವಿಕೆಯನ್ನು ಸಪ್ರಶಸ್ತಿಯನ್ನು ಪರಿಚಯಿಸುತ್ತದೆ. ತರುವಾಯ ಅವನ ಪಾದ ಪದ್ಮೋಪಜೀವಿಯಾಗಿದ್ದ ಮಹಾಸಾಮಂತ ಚಿಕ್ಕರಸನ ಬಿರುದಾವಳಿಯನ್ನು ನೀಡುತ್ತದೆ. ಈತನನ್ನು ಮಂಡಳಿಕವಾರಣ, ಸರಸಿಜ(ಕಮಲ)ಧ್ವಜ, ಉಪ್ಪುಂದಂತೆರಿತ್ತೋತ್ತಮಾಂಗ, ತ್ರಿಭುವನಮಲ್ಲ ದೇವರ ಅಂಗಜಾವದ ತುಳುವ ತಂತ್ರಕ್ಕೆ ಅಧಿಷ್ಠಾಯಕ ಎಂಬುದಾಗಿ ವರ್ಣಿಸಿದೆ. ಈ ಮಹಾಸಾಮಂತ ಚಿಕ್ಕರಸನ ಮಗ ದೇವತಿಯು ತೀರಿಕೊಂಡ. ಆಗ ಅವನ ಲೆಂಕನಾಗಿದ್ದ ನರಸುಗನು ಹೋಮಾಗ್ನಿ ಕೊಂಡದಲ್ಲಿ ಬಿದ್ದು ಸ್ವರ್ಗಕ್ಕೆ

ಹೋದನೆಂದೂ, ಆತನಿಗೆ ಪರೋಕ್ಷಧರ್ಮವಾಗಿ ಉಲ್ಲಿಖಿತ ತೇದಿಯೆಂದು ಬಹುಶಃ ಭೂದಾನ ಬಿಡಲಾಯಿತೆಂದೂ, ಶಾಸನದಿಂದ ತಿಳಿಯುತ್ತದೆ. ಇಲ್ಲಿ ಉಲ್ಲಿಖಿತ ಮಹಾಸಾಮಂತ ಚಿಕ್ಕರಸನು ನಮಗೆ ಬೇರೆ ಶಾಸನಗಳಿಂದ ಗೋಚರಿಸುವುದಿಲ್ಲ.

ಶಾಸನ ನೀಡಿರುವ ವಿವರಗಳ ಆಧಾರದ ಮೇಲೆ ಸ್ಮಾರಕ ಶಿಲ್ಪದ ಮೊದಲನೆಯ ಪಟ್ಟಿಕೆಯಲ್ಲಿ ಛತ್ರಿಯೆಡೆಗೆ ಕುಳಿತಿರುವ ವ್ಯಕ್ತಿಯು ಮಹಾಸಾಮಂತ ಚಿಕ್ಕರಸನ ಮಗ ದೇವತಿ ಎಂದೂ ಅಗ್ನಿಕುಂಡಕ್ಕೆ ಬೀಳಲು ತಯಾರಾಗಿರುವ (ಮತ್ತು ಬಿದ್ದಿರುವ) ವ್ಯಕ್ತಿ ಅವನ ಲೆಂಕ ನರಸುಗನೆಂದೂ ಗುರುತಿಸಬಹುದು. ಹಾಗೆಯೇ ಮಧ್ಯದ ಪಟ್ಟಿಕೆಯಲ್ಲಿರುವ ಚಿತ್ರದಲ್ಲಿ ಛತ್ರಿಯಡಿ ಇರುವ ವ್ಯಕ್ತಿಯು ದೇವತಿ ಎಂದೂ ಅಪ್ಸರೆಯರು ಕೊಂಡೊಯ್ಯುತ್ತಿರುವ ಇನ್ನೊಬ್ಬ ವ್ಯಕ್ತಿ ನರಸುಗನೆಂದೂ ಗುರುತಿಸಬಹುದು. ಹಾಗೆಯೇ ಮೇಲಿನ ಪಟ್ಟಿಕೆಯಲ್ಲಿ ಶಿಲ್ಪದ ಬಲಭಾಗದಲ್ಲಿ ಕುಳಿತಿರುವ ಇಬ್ಬರು ವ್ಯಕ್ತಿಗಳಲ್ಲಿ ತೀರ ಬಲಕ್ಕೆ ಇರುವವನು ನರಸುಗನೆಂದೂ, ಅವನ ಪಕ್ಕದಲ್ಲಿರುವ ಚಿಕ್ಕ ವ್ಯಕ್ತಿ ದೇವತಿ ಎಂದೂ ಗುರುತಿಸಬಹುದು. ಈ ಶಿಲ್ಪ ಪಟ್ಟಿಕೆಗಳಲ್ಲಿ ಪ್ರಭುವನ್ನು ಚಿಕ್ಕಗಾತ್ರದಲ್ಲಿಯೂ ಲೆಂಕನನ್ನು ದೊಡ್ಡಗಾತ್ರದಲ್ಲಿಯೂ ತೋರಿಸಿರುವುದು ಗಮನೀಯವಾಗಿದೆ.

ಇದೊಂದು ಆತ್ಮಬಲಿಯನ್ನು ದಾಖಲಿಸುವ ಶಾಸನವಾಗಿದ್ದು, ಶಿಲ್ಪ ನಿರೂಪಣೆಯು ಇರುವುದರಿಂದ ಅಪರೂಪದ ಸ್ಮಾರಕಶಿಲೆ ಎಂದು ಪರಿಗಣಿಸಬೇಕಾಗುತ್ತದೆ. ಶಾಸನದ ಪಠ್ಯ ಈ ಕೆಳಗಿನಂತಿದೆ.[2]

**ಮೊದಲನೆಯ ಪಟ್ಟಿ :**

1. ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವಿವಲ್ಲಭ ಮಹಾರಾಜಾಧಿರಾಜ [ಪರಮೇಶ್ವರ ಪರಮ] ಭಟ್ಟಾರಕ ಸತ್ಯಾಶ್ರ
2. ಯಕುಳತಿಳಕ ಚಾಳುಕ್ಯಾಭರಣ ಶ್ರೀಮತ್ರಿಭುವನಮಲ್ಲದೇವ ವಿಜಯರಾಜ್ಯ ಮುತ್ತ[ರೋ]ತ್ತ
3. [ರಾ]ಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕತಾರಂ ಬರಂ ಸಲುತ್ತಮಿರೆ [*] ತತ್ಪಾದಪದ್ಮೋಪಜೀವಿ ಸಮಧಿಗತ
4. ಪಂಚಮಹಾಸಬ್ದ ಮಹಾ[ಸಾ]ಮನ್ತವಿಜೆಯಲಕ್ಷ್ಮೀ ಕಾನ್ತ0 [ದು][ಸ್ತ][ರಾ]ರಾತಿ ಸಮರಹರಂಜಸ ಭಾವನದುಶ್ಯಂತ.

**ಮಧ್ಯದ ಪಟ್ಟಿ :**

5. ಪ್ರತಾಪಪಾವಕ[0] ಸಿಖಾಸಹಸ್ರ[ನೇಕ] ಹೋಮಾನದಂಡ ಮಂಡಳಿಕ[ವಾರ]ಣ ಸರಸಿಜ ಧ್ವ [ಜರ್ಜಪುಂ]
6. ಬಂತೆ [ರಿತೋ]ತ್ತಮಾಂಗಕೀರ್ತಿಲತಾನರ್ತ್ತಕೀನರ್ತನ ಭುವನ ಭೂಶಿತ[ರಂಗ] ಶ್ರೀಮತ್ತ್ರಿ ಭುವನ ಮಲ್ಲದೇವರಂಗ
7. ಜಾವದ ತುಳುವತಂತ್ರಕ್ಕಧಿಷ್ಠಾಯಕಂ ನಾಮಾದಿ ಸಮಸ್ತ ಪ್ರಸಸ್ತಿ ಸಹಿತಂ ಶ್ರೀಮನ್ಮಹಾಸಾಮನ ಚಿಕ್ಕರ–
8. ಸರಕುಮಾರಂದೇವತಿ ಸ್ವರ್ಗಸ್ಥನಾದ [*] ಅವರ ಲೆಂಕ ನರಸುಗಂ ಜನಪೊಗಳೆ ಮವನಂ [ಮಳಲೆಳೆವೆ..?]....

9. ಲಿಸಿ ಜನರೆಲ್ಲಂತಮ್ಮ ನಮಂ ಕೊಟ್ಟು ಹೋಮಾಗ್ನಿಕೊಂಡಮಂ ಪೊಕ್ಕು ಸರ್ಗ್ಗಮನೆಯ್ದ[*] ಆತಂಗೆ ಪರೋಕ್ಷಧರ್ಮ್ಮಕ್ಕಂ ಚಾಳುಕ್ಯ ವಿಕ್ರಮ [ವರ್ಷ]

**ಕೆಳಗಿನ ಪಟ್ಟಿ**

10. 24 ..ಸುದ್ಧ 5 ಬ್ರಹಸ್ಪತಿ [ವಾರದಂದು] ....ಮತಿಗೆ

11. .......ಬಿಟ್ಟ ಮಾನ.....ವಕುರು

12. ........ಲು.... [ತ] ..... ಕು @

**ಅಡಿಟಿಪ್ಪಣಿಗಳು**

1. ಈ ಶಾಸನವನ್ನು ಎನ್ಯುವಲ್ ರಿಪೋರ್ಟ್ಸ್ ಆನ್ ಸೌತ್ ಇಂಡಿಯನ್ ಎಪಿಗ್ರಫಿ(A.R.S.I.E.) 1940–41 ಅಪೆಂಡಿಕ್ಸ್–ಇ ನಂ.–1ರಲ್ಲಿ ಗಮನಿಸಲಾಗಿದೆಯಾದರೂ, ಶಾಸನದ ಪಠ್ಯ ಈವರೆಗೆ ಪ್ರಕಟಿತವಾಗಿಲ್ಲ.
2. ಕಪ್ಪುಷಾಯಿಯಿಂದ ತೆಗೆದ ಪಡಿಯಚ್ಚಿನಿಂದ ಓದಿದ್ದು.

❖❖❖

ಕಡಲದು ಕುಣಿಯುತ ದಡದೆಡೆ ಚಿಮ್ಮುತ
ತೀರದ ಹರಳನು ಒಳಸೆಳೆದಿತ್ತು

# ಡಿ.ವಿ. ಗುಂಡಪ್ಪನವರ ಕಗ್ಗಗಳಲ್ಲಿ ಮನಸ್ಸಿನ ನೆಲೆ : ಒಂದು ವಿವೇಚನೆ

**ಪವಿತ್ರಾ ಮ. ಹೂಗಾರ**
ಉಪನ್ಯಾಸಕರು, ವಾಣಿಜ್ಯ ವಿಭಾಗ, ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574199

**ಪೀಠಿಕೆ**

ಡಿ.ವಿ.ಜಿ. ಎಂಬ ಹೆಸರಿನಿಂದಲೇ ಪ್ರಖ್ಯಾತರಾದ ಡಾ. ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರನ್ನು ಕನ್ನಡದ ಆಧುನಿಕ ಸರ್ವಜ್ಞ ಎಂದೇ ಕರೆಯಲಾಗುತ್ತದೆ. ಹಾ.ಮಾ. ನಾಯಕರು "ಡಿ.ವಿ.ಜಿ. ಅವರದು ಸತ್ಯ ಶಿವ ಸೌಂದರ್ಯಗಳು ಸಮಹಿತವಾದ ಸಾಹಿತ್ಯ" ಎಂದು ಕೊಂಡಾಡಿದ್ದಾರೆ. ರಾಜಕೀಯ ವಿಶ್ಲೇಷಣೆ, ತತ್ವಶಾಸ್ತ್ರ, ಧಾರ್ಮಿಕ ವಿಚಾರಗಳು, ಪ್ರಬಂಧ ಬರಹ ಇವು ಇವರ ಬೇರೆ ಬೇರೆ ಸಾಹಿತ್ಯದ ಮಗ್ಗಲುಗಳಾದವು.

ಡಿ.ವಿ. ಗುಂಡಪ್ಪನವರ ವಿರಚಿತ 'ಮಂಕುತಿಮ್ಮನ ಕಗ್ಗ' ಉತ್ಕೃಷ್ಟ ಸಂಕಲನವಾಗಿದ್ದು, ಕಗ್ಗ ಮತ್ತು ಭಗವದ್ಗೀತೆ ಎರಡೂ ತಮ್ಮದೇ ಆದ ರೀತಿಯಲ್ಲಿ ವಿಶಿಷ್ಟವಾಗಿವೆ. ಇವೆರಡೂ ಜೀವನ ಧರ್ಮವನ್ನು ಮತ್ತು ಮೋಕ್ಷಶಾಸ್ತ್ರವನ್ನು ತಿಳಿಸುವ ಶ್ರೇಷ್ಠ ಗ್ರಂಥಗಳಾಗಿವೆ. ಇದು 945 ಕಗ್ಗಗಳನ್ನು ಒಳಗೊಂಡಿದೆ. ಕನ್ನಡ ಕಾವ್ಯಕ್ಷೇತ್ರದಲ್ಲಿ 'ಮಂಕುತಿಮ್ಮನ ಕಗ್ಗ' ಹಾಗೂ 'ಮರುಳ ಮುನಿಯನ ಕಗ್ಗ'ಗಳ ಮೂಲಕ ಇವರು ಎಲ್ಲರ ಮನೆಮಾತಾದವರು.

**ಮನವನಾಳ್ವುದು ಹಟದ ಮಗುವನಾಳುವ ನಯದೆ।**
**ಇನಿತಿನಿತು ಸವಿಯುಣಿಸು ಸವಿಕಥೆಗಳಿಂದೆ॥**
**ಅನುಕೂಲಿಸದು ಬರಿಯ ಕೂಗು ಬಡಿತಗಳಿನದು।**
**ಇನಿತಿತ್ತು ಮರೆಸಿನಿತ – ಮಂಕುತಿಮ್ಮ॥ (ಕಗ್ಗ– 375)**

ಈ ಕಗ್ಗದಲ್ಲಿ ಹರಿದೋಡುವ ಮನಸ್ಸನ್ನು ಹಿಡಿತಕ್ಕೆ ತರುವ ಬಗೆಯನ್ನು ಹಠಮಾರಿ ಮಗುವನ್ನು ಉದಾಹರಿಸುವ ಮೂಲಕ ಡಿ.ವಿ. ಗುಂಡಪ್ಪನವರು ಬಹು ಸುಂದರವಾಗಿ ವಿವರಿಸಿದ್ದಾರೆ. ಚಂಚಲವಾದ ಮನಸ್ಸು ಒಂದು ಸಂಕೀರ್ಣವಾದ ವಸ್ತುವೆಂದೇ ಹೇಳಲಾಗುತ್ತದೆ. ಮನಸ್ಸು ಗಾಳಿ–ಬೆಳಕಿಗಿಂತಲೂ ವೇಗವಾದದ್ದು. ಮನಸ್ಸು ಯಾವ ಅಂಕೆಶಂಕೆಗಳಿಲ್ಲದೆ ಇಷ್ಟಬಂದಲ್ಲಿ ಹರಿದಾಡುತ್ತಿರುತ್ತದೆ. ಇಂತಹ ಸದಾ ಹರಿದಾಡುತ್ತಿರುವ ಮನಸ್ಸನ್ನು ಆಳುವ ರೀತಿಯನ್ನು ಡಿ.ವಿ.ಜಿ. ಸುಂದರ ದೃಷ್ಟಾಂತದೊಂದಿಗೆ ನಮ್ಮ ಮುಂದಿಡುತ್ತಾರೆ. ಹಠ ಹಿಡಿದು ಅಳುವ, ಗಲಾಟೆ ಮಾಡುವ ಮಗುವನ್ನು ತಾಯಿ ಹೇಗೆ ಸಂಭಾಳಿಸುವಳೋ ಅದೇ ತೆರನಾಗಿ ಈ ಮನಸ್ಸೆಂಬ ಮಗುವನ್ನು ಸಂಭಾಳಿಸಬೇಕೆಂತೆ.

ಮನುಷ್ಯರಾಗಿ ಭೂಮಿಯಲ್ಲಿ ಹುಟ್ಟಿದ್ದೇವೆಂದರೆ, ಈ ಜಗತ್ತಿನಲ್ಲಿರುವ ಹಲವಾರು ವಿಷಯ ವಾಸನೆಗಳು ನಮ್ಮಲ್ಲಿ ವಿಧವಿಧದ ಹಸಿವುಗಳನ್ನು ಹುಟ್ಟಿಸುತ್ತವೆ. ಪ್ರಕೃತಿ ಸಹಜವಾದ ಈ ಹಸಿವು(ಆಸೆ)ಗಳನ್ನು ತಣಿಸದೆ ಹಸಿವನ್ನೇ ನಾಶಮಾಡುತ್ತೇವೆ ಎಂಬ

ಹಠಯೋಗಕ್ಕಿಂತ ರಾಜಮಾರ್ಗ ಉತ್ತಮವಾದದ್ದು. ಅಂದರೆ ಮನಸ್ಸಿನ ಬೇಡಿಕೆಗಳಾವುದನ್ನು ಈಡೇರಿಸುವುದಿಲ್ಲವೆಂಬ ಹಠಯೋಗದಿಂದ ಅದರ ಹಿಡಿತ ಸಾಧ್ಯವಾಗದು. ಅದರ ಬದಲು ಹಿತ–ಮಿತವಾಗಿ ಅದು ಬೇಡಿದ್ದನ್ನು ನೀಡುವ ರಾಜಯೋಗವೇ ಸೂಕ್ತಮಾರ್ಗ ಹಾಗೂ ವಾಸ್ತವದ ದಾರಿ ಎಂದು ಈ ಕೆಳಗಿನ ಕಗ್ಗ ಪ್ರತಿಪಾದಿಸುತ್ತದೆ.

**ಈ ಜಗದ ಗಂಧ ಪರಿಪರಿ ಹಸಿವ ಕೆಣಕುತಿರೆ।**
**ಭೋಜನವ ನೀಡನೆನೆ ಮನ ಸುಮ್ಮನಿಹುದೇ॥**
**ಸಾಜಗಳ ಕೊಲ್ಲೆನುವ ಹಠಯೋಗಕಿಂತ ಸರಿ।**
**ರಾಜಯೋಗದುಪಾಯ – ಮಂಕುತಿಮ್ಮ॥** **(ಕಗ್ಗ– 374)**

ಡಿ.ವಿ.ಜಿ. ವಾಸ್ತವವಾದಿ, ಅವರು ಸಾಧಕರನ್ನು ದಿಗಿಲುಗೊಳಿಸುವುದಾಗಲಿ, ಆತಂಕಕ್ಕೆ ಒಡ್ಡುವುದಾಗಲಿ, ಪಾಪಭೀತಿಯಿಂದ ನರಳುವಂತಾಗಲಿ ಮಾಡುವುದಿಲ್ಲ. ಪಂಚೇಂದ್ರಿಯಗಳು ಪ್ರಕೃತಿ ಸಹಜವಾಗಿ ಬಯಕೆಗಳನ್ನು ಚಿಗುರಿಸುತ್ತವೆ. ಇಂತ ಪರಿಸ್ಥಿತಿಯಲ್ಲಿ ಇಂದ್ರಿಯಗಳ ಬಯಕೆಗಳನ್ನು ಉಪಶಮನಗೊಳಿಸುವಾಗ ಕೆಲವು ತಪ್ಪುಗಳಾಗಬಹುದು. ಇಂದ್ರಿಯಗಳೇ ಎಲ್ಲಾ ಬಯಕೆಗಳಿಗೆ, ತಪ್ಪುಗಳಿಗೆ ಕಾರಣವೆಂದು ತಿಳಿದು ಇಂದ್ರಿಯಗಳನ್ನು ಅತೀಯಾದ ನಿಯಂತ್ರಣದಲ್ಲಿಟ್ಟು ಅವುಗಳ ಬಯಕೆಗಳನ್ನೇ ನಾಶಮಾಡುತ್ತೇನೆಂಬ ಹಠಯೋಗ ಫಲಿಸದು ಎಂಬುದು ಇವರ ನಿಲುವು.

**ಜನಕಜೆಯ ದರುಶನದಿನಾಯ್ತು ರಾವಣಚಪಲ।**
**ಕನಕಮೃಗ ದರುಶನದೆ ಜಾನಕಿಯ ಚಪಲ॥**
**ಜನವವನ ನಿಂದಿಪುದು ಕನಿಕರಿಪುದಾಕೆಯಲಿ।**
**ಮನದ ಬಗೆಯರಿಯದದು – ಮಂಕುತಿಮ್ಮ॥** **(ಕಗ್ಗ– 383)**

ರಾಮಾಯಣದ ಸುಪ್ರಸಿದ್ಧ ಘಟನೆಯಾದ "ಚಿನ್ನದ ಜಿಂಕೆ"ಯ ಪ್ರಸಂಗವನ್ನೇ ಆಧಾರವಾಗಿಟ್ಟುಕೊಂಡು ರಾವಣ ಮತ್ತು ಸೀತೆಯರ ಮನಸ್ಸಿನ ಚಪಲತೆಯನ್ನು ಅನಾವರಣಗೊಳಿಸುತ್ತಾ, ಅವರಿಬ್ಬರೂ ಮನಸ್ಸಿನ ಚಂಚಲತೆಯಿಂದಾಗಿ ತಪ್ಪನ್ನು ಮಾಡಿದವರೇ ಆದರೂ ಅವರಿಬ್ಬರನ್ನೂ ಜನ ಅಥವಾ ಸಮಾಜ ವಿಭಿನ್ನವಾಗಿ ನೋಡಿದ ದೃಷ್ಟಿಕೋನದ ಬಗೆಯನ್ನು ಮತ್ತು ಅವರ ತಪ್ಪಿಗೆ ಕಾರಣ ಮನಸ್ಸಿನ ಚಪಲ ಎಂಬುದನ್ನು ಡಿ.ವಿ.ಜಿ. ಮೇಲಿನ ಕಗ್ಗದಲ್ಲಿ ಬಹುಸ್ವಾರಸ್ಯವಾಗಿ ಚಿತ್ರಿಸಿದ್ದಾರೆ.

**ತಂಗುಳುಣಿಸಾದೊಡಂ ಸಾಕೆನುವನುಪವಾಸಿ।**
**ಸಿಂಗಾರ ಸಂಗಾತಿ ಬೇಕುಂಡವನಿಗೆ॥**
**ಬಂಗಾರ ಪದವಿ ಪ್ರತಿಷ್ಠೆ ಬೇಕಾಬಳಿಕ।**
**ಹಿಂಗದಾಯೆದೆ ಚಿಲುಮೆ – ಮಂಕುತಿಮ್ಮ॥** **(ಕಗ್ಗ– 210)**

ಮಾನವನ ಬಯಕೆಗಳಿಗೆ ಕೊನೆ ಎಂಬುದೇ ಇಲ್ಲ. ಒಂದಾದ ನಂತರ ಒಂದು ಬಯಕೆಗಳು ಸದಾ ಪುಟಿದೆಳುತ್ತಿರುತ್ತವೆ. ಆ ಬಯಕೆಗಳನ್ನು ಈಡೇರಿಸಿಕೊಳ್ಳಲು ಮನಸ್ಸು ಸದಾ ಹಾತೊರೆಯುತ್ತಿರುತ್ತದೆ. ಇದಕ್ಕೆ ಅಮೆರಿಕಾದ ಮನಶಾಸ್ತ್ರಜ್ಞನಾದ ಅಬ್ರಾಹಾಂ ಮಾಸ್ಲೊ ರವರ ಅಗತ್ಯ ವರ್ಗಶ್ರೇಣಿ ಸಿದ್ಧಾಂತ (Need Hyrarchy Theory) ಸಮಂಜಸವೆನಿಸುತ್ತದೆ. ಈ ಸಿದ್ಧಾಂತದ ಪ್ರಕಾರ ಮಾನವನು ಮೊದಲು ತನಗೆ ಅತ್ಯವಶ್ಯಕ ಎನಿಸುವ ಮೂಲ (ಶಾರೀರಿಕ) ಬಯಕೆಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನ ಪಡುತ್ತಾನೆ, ನಂತರ ತನ್ನ ಜೀವನ ಸುರಕ್ಷತೆಯ ಬಯಕೆಗಳನ್ನು

ಪೂರೈಸಿಕೊಳ್ಳಲಿಚ್ಛಿಸುತ್ತಾನೆ. ರಕ್ಷಣೆಯ ಅಗತ್ಯತೆಗಳನ್ನು ಪೂರೈಸಿಕೊಂಡ ನಂತರ ಸಾಮಾಜಿಕ (ಆತ್ಮೀಯತೆ, ಪ್ರೀತಿ) ಬಯಕೆಗಳನ್ನು, ಅನಂತರ ಸ್ವಪ್ರತಿಷ್ಠೆಯ (ಗೌರವ) ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಆಶಿಸುತ್ತಾನೆ. ಕೊನೆಗೆ ಅವನ ಬಯಕೆ ಸ್ವಯಂ-ವಾಸ್ತವೀಕರಣದತ್ತ ವಾಲುತ್ತದೆ. ಇದನ್ನೇ ವಾಸ್ತವವಾದಿ ಡಿ.ವಿ.ಜಿ. ಮನಶಾಸ್ತ್ರಜ್ಞರಂತೆಯೇ ಬಲು ಅರ್ಥಪೂರ್ಣವಾಗಿ ಹೇಳಿದ್ದಾರೆ.

ಇದೇ ಒಳಾರ್ಥವಿರುವ ಇವರ ಇನ್ನೊಂದು ಕಗ್ಗವನ್ನು ನಾವು ನೋಡಬಹುದು.

**ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ।**
**ಚಿನ್ನದಾತುರಕಿಂತ ಹೆಣ್ಣು ಗಂಡೊಲವು॥**
**ಮನ್ನಣೆಯ ದಾಹವೀಯೆಲ್ಲಕಂ ತೀಕ್ಷ್ಣ ತಮ।**
**ತಿನ್ನುವುದದಾತ್ಮವನೆ-ಮಂಕುತಿಮ್ಮ॥**

ಇವರ ಈ ಕಗ್ಗವೂ ಮಾನವನ ಮನಸಿನ ಬಯಕೆಗಳು ಒಂದಾದ ನಂತರ ಒಂದು ಮೊಳಕೆಯೊಡೆವುದನ್ನು ವ್ಯಕ್ತಪಡಿಸುತ್ತದೆ.

**ಸತ್ತವೆನ್ನಾಸೆಗಳು ಗೆದ್ದೆನಿಂದ್ರಿಯಗಣವ।**
**ಚಿತ್ತವಿನ್ನಲುಗದೆಂಬಾ ಜಂಬಬೇಡ॥**
**ಎತ್ತಣಿಂದಲೊ ಗಾಳಿ ಮೋಹಬೀಜವ ತಂದು।**
**ಬಿತ್ತಲಾರದೆ ಮನದಿ? -ಮಂಕುತಿಮ್ಮ॥** (ಕಗ್ಗ- 206)

ಮನಸ್ಸಿನಲ್ಲಿ ಅರಳುವ ಆಸೆಗಳೇ ಮನುಷ್ಯನ ಏಳು-ಬೀಳುಗಳಿಗೆ ಕಾರಣವಾಗುತ್ತವೆ. ಆಸೆಯೇ ದುಃಖಕ್ಕೆ ಮೂಲ ಎಂದು ಭಗವಾನ್ ಬುದ್ಧ ಕೂಡಾ ಎಚ್ಚರಿಸಿದ್ದಾನೆ. ಇದೊಂದು ಸರ್ವಕಾಲಿಕ ಸತ್ಯವಾಗಿದ್ದರೂ ಬದುಕಿರುವವರೆಗೂ ಮನಸಿನ ಬಯಕೆಗಳ ಪಾಶದಿಂದ ಮುಕ್ತನಾಗಲು ಸಾಧ್ಯವಾಗುವುದಿಲ್ಲ. ಸರ್ವಸಂಗ ಪರಿತ್ಯಾಗಿಗಳಾದರೂ ಸಹ ಯಾವುದೋ ರೂಪದಲ್ಲಿ ಬಯಕೆ, ಮೋಹ ಎಂಬ ಬೀಜ ಅವರ ಮನದಲ್ಲಿ ಬಿತ್ತಲ್ಪಟ್ಟು ಮನವಿಕಾರಕ್ಕೆ ಕಾರಣವಾಗುತ್ತದೆ. ಇದನ್ನೆ ಡಿ.ವಿ.ಜಿ. 'ಎತ್ತಣಿಂದಲೊ ಗಾಳಿ ಮೋಹಬೀಜವ ತಂದು ಬಿತ್ತಲಾರದೆ ಮನದಿ' ಎಂದು ಉದ್ಗರಿಸಿದ್ದಾರೆ.

**ಎರಡು ಕೋಣೆಗಳ ನೀಂ ಮಾಡು ಮನದಾಲಯದಿ!**
**ಹೊರಕೋಣೆಯಲಿ ಲೋಗರಾಟಗಳ ನಾಡು॥**
**ವಿರಮಿಸೊಬ್ಬನೆ ಮೌನದೊಳಮನೆಯ ಶಾಂತಿಯಲಿ।**
**ವರಯೋಗ ಸೂತ್ರವಿದು - ಮಂಕುತಿಮ್ಮ॥** (ಕಗ್ಗ- 701)

ಮನಸ್ಸೆನ್ನುವ ಮನೆಯಲ್ಲಿ ಹೊರಕೋಣೆ ಮತ್ತು ಒಳಕೋಣೆ ಎಂಬ ಎರಡು ಕೋಣೆಗಳನ್ನು ಮಾಡಿಕೊಳ್ಳಬೇಕು. ಹೊರಕೋಣೆಯಲ್ಲಿಯೇ ಲೋಕದ ವ್ಯವಹಾರಕ್ಕೆ ಬೇಕಾದ ಎಲ್ಲಾ ಚಟುವಟಿಕೆಗಳನ್ನು ಮುಗಿಸಿಕೊಳ್ಳಬೇಕು. ಒಳಕೋಣೆಯಲ್ಲಿ ಇತರರಿಗೆಲ್ಲರಿಗೂ ಪ್ರವೇಶವನ್ನು ನಿರ್ಬಂದಿಸಿ ತಾನು ಮಾತ್ರ ಅಲ್ಲಿ ಶಾಂತಿಯಿಂದ ವಿಶ್ರಮಿಸಬೇಕೆಂಬ ತಿಳಿ ಸತ್ಯವನ್ನು ಹೇಳಿದ್ದಾರೆ.

ಶುದ್ಧವಾದ ಮನಸ್ಸು ಭಗವಂತನ ಅಂಶವೇ ಆಗಿದ್ದು, ಅದಕ್ಕೆ ಕಾಲದೇಶಗಳ ಇತಿ ಮಿತಿಯೆಂಬುದು ಇರುವುದಿಲ್ಲ. ಒಳ್ಳೆಯದು ಎಲ್ಲಿಯೇ ಇರಲಿ, ಅದು ಸ್ವದೇಶದ್ದಾಗಿರಲಿ, ವಿದೇಶದ್ದಾಗಿರಲಿ ಮುಕ್ತವಾಗಿ ಅದನ್ನು ಸ್ವೀಕಾರ ಮಾಡುತ್ತದೆ. ಆದುದರಿಂದಲೇ ಗ್ರೀಸಿನ ಪ್ರಾಚೀನ ನಾಟಕಗಳು ದೆಹಲಿಯಲ್ಲೂ, ಕಾಶಿಯ ಪ್ರಾಚೀನ ಶಾಸ್ತ್ರಗಳು

ಆಕ್ಸಫರ್ಡಿನಲ್ಲೂ ಅಧ್ಯಯನಕ್ಕೆ ಲಭ್ಯವಾಗಿರುವುದು. ಮನಸ್ಸೆಂಬ ರಾಜ್ಯಕ್ಕೆ ಯಾವುದೇ ವಿಭಾಗಗಳೆಂಬುದಿಲ್ಲ. ಜಗತ್ತಿನಲ್ಲಿ ದೊರೆಯುವ ಒಳ್ಳೆಯದೆಲ್ಲವನ್ನು ಸ್ವೀಕರಿಸುತ್ತದೆ. ಕಾರಣ ಒಳ್ಳೆಯದು ಮತ್ತು ಒಳ್ಳೆಯದನ್ನು ಮಾಡುವ ಎಲ್ಲ ಅಂಶಗಳು ಭಗವಂತನ ಸ್ವರೂಪವೇ ಆಗಿವೆ ಎಂದು ವ್ಯಕ್ತಪಡಿಸಿದ್ದಾರೆ.

**ದೇವಮಂದಿರ ಭಜನೆ ಪೂಜೆ ಪ್ರಸಾದಗಳು।**
**ಜೀವನದಲಂಕಾರ ಮನಸಿನುದ್ಧಾರ॥**
**ಭಾವಮಂ ಕ್ಷ್ಮಲ್ಲ ಜಗದಿಂ ಬಿಡಿಸಿ ಮೇಲೊಯ್ವು।**
**ದಾವುದಾದಮೊಡಮೊಳಿತು – ಮಂಕುತಿಮ್ಮ॥ (ಕಗ್ಗ– 499)**

ಮನಸ್ಸಿಗೆ ಸಮಾಧಾನ, ಸಾಂತ್ವಾನ ಬೇಕಾಗುತ್ತದೆ. ಅದಕ್ಕೆ ನಮ್ಮ ಪೂರ್ವಜರು ಕಂಡುಕೊಂಡ ಮಾರ್ಗವೇ ದೇವಸ್ಥಾನಗಳಿಗೆ ಹೋಗಿ ದೇವರ ದರ್ಶನ ಪಡೆದು, ಪೂಜೆ–ಭಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ತೀರ್ಥ ಪ್ರಸಾಧಗಳನ್ನು ಸ್ವೀಕರಿಸಿ ಕೃತಾರ್ಥರಾಗುತ್ತಿದ್ದರು. ನಮ್ಮ ಹಿರಿಯರ ಈ ಆಚರಣೆಗಳು ಗೊಡ್ಡು ಸಂಪ್ರದಾಯಗಳಾಗಿರದೇ ಚಂಚಲ ಮನಸ್ಸಿಗೆ ಸಂಸ್ಕಾರವಿತ್ತು ಮೇಲೆತ್ತುವ ವಿಧಾನಗಳು. ಮನಸ್ಸಿಗೆ ಆನಂದವನ್ನು, ನೆಮ್ಮದಿಯನ್ನು ನೀಡುವ ಎಲ್ಲಾ ಒಳ್ಳೆಯ ಆಚರಣೆಗಳೂ ಯೋಗ್ಯವೇ ಎನ್ನುವುದು ಡಿ.ವಿ.ಜಿ. ಆಶಯ.

**ಗುಡಿಯ ಪೂಜೆಯೋ ಕಥೆಯೋ ಸೊಗಸು ನೋಟವೊ ಹಾಡು।**
**ಬಡವರಿಂಗುಪಕೃತಿಯೋ, ಆವುದೋ ಮನದ॥**
**ಬಡಿದಾಟವನು ನಿಲಿಸಿ, ನೆಮ್ಮದಿಯ ನೀವೊಡದೆ।**
**ಬಿಡುಗಡೆಯೊ ಜೀವಕ್ಕೆ – ಮಂಕುತಿಮ್ಮ॥**

ದೇವರ ಪೂಜೆಯಲ್ಲಿ ಮೈಮರೆಯುವುದು, ಕಾವ್ಯ, ಕಥೆಯನ್ನು ಕೇಳುವುದು, ಸುಂದರ ಸ್ಥಳಗಳನ್ನು ನೋಡುವುದು, ಇಂಪಾದ ಸಂಗೀತವನ್ನು ಕೇಳುವುದು, ಬಡವ–ಬಲ್ಲಿದರಿಗೆ ಸಹಾಯ ಹಸ್ತವನ್ನು ಚಾಚುವುದು, ಸಮಾಜ ಸೇವೆಯಂತಹ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಿಂದ ಮನದ ಆತಂಕ, ದುಗುಡ ಕಡಿಮೆಯಾಗಿ ನೆಮ್ಮದಿಯ ನಿಟ್ಟುಸಿರು ಬಿಡಲು ಸಾಧ್ಯವಾಗುತ್ತದೆಂಬುದೇ ಕಗ್ಗದ ಒಳಾಶಯವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಅನುಪಮಾ ಮಂಗಳವೇಢೆ, 2022, ಕಗ್ಗ: ಕನ್ನಡದ ಭಗವದ್ಗೀತೆ, ಸಂಗಮ–ಸುವರ್ಣ ಮಹೋತ್ಸವ ಎಡಿಸನ್, ವಿದ್ಯಾರಣ್ಯ ಕನ್ನಡ ಕೂಟ, 43(2), 80–83.
2. ಎಸ್. ಶ್ರೀನಿವಾಸಶೆಟ್ಟಿ, 2008, ಮಂಕುತಿಮ್ಮನ ಕಗ್ಗ ಜೀವನ ದೀವಿಗೆ–ಭಾಗ 1, ಸುಮನಸ ಪ್ರಕಾಶನ ಮಂಡ್ಯ.
3. ಸ್ವಾಮಿ ಪುರುಷೋತ್ತಮಾನಂದ, 2013, ಯಶಸ್ಸಿನ ರಹಸ್ಯ, ಶ್ರೀರಾಮಕೃಷ್ಣ ಆಶ್ರಮ ಯಾದವಗಿರಿ, ಮೈಸೂರು.
4. https://www.vishaya.in/manku-thimmana-kagga/dvg-mankuthimma-kagga-all/
5. https://www.sobagu.in/%EO%B2%A1%EO%B2%BE-%EO%B2%A1%EO%B2%BF-%EO%B2%B5%...

❖❖❖

# ‘ಪಂಪಭಾರತ’ ಹಾಗೂ ‘ಕುಮಾರವ್ಯಾಸ ಭಾರತ’ಗಳಲ್ಲಿನ ಅನಾಮಿಕ ಸ್ತ್ರೀಯರು

**ಲಕ್ಷ್ಮೀಕಾಂತ**
ಪಿಎಚ್.ಡಿ., ಸಂಶೋಧನಾ ವಿದ್ಯಾರ್ಥಿ, ಜಾನಪದ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–583276.

ಪಂಪ ಮತ್ತು ಕುಮಾರವ್ಯಾಸರು ಕನ್ನಡ ಸಾಹಿತ್ಯದ ಮೇರು ಶಿಖರಗಳು. ಈರ್ವರೂ ತಮ್ಮ ಕೃತಿರಚನೆಗೆ ವ್ಯಾಸನ ‘ಮಹಾಭಾರತ’ ಕೃತಿಯನ್ನು ಅವಲಂಬಿಸಿದ್ದರೂ, ಕೃತಿರಚನೆಯಲ್ಲಿ ಸ್ವಂತಿಕೆಯನ್ನು ಕಾಯ್ದುಕೊಂಡಿದ್ದಾರೆ. ‘ಮಹಾಭಾರತ’ದ ವಸ್ತುವನ್ನು ತಳಪಾಯದಂತೆ ಬಳಸಿಕೊಂಡಿದ್ದರೂ, ಈ ನೆಲದ ಸತ್ವವನ್ನು ಕಟ್ಟಡವಾಗಿ ಬಳಸಿಕೊಳ್ಳುವಲ್ಲಿ ಇಬ್ಬರೂ ಯಶಸ್ವಿಯಾಗಿದ್ದಾರೆ.

‘ವಿಕ್ರಮಾರ್ಜುನ ವಿಜಯ’ ಹಾಗೂ ‘ಕರ್ಣಾಟ ಭಾರತ ಕಥಾಮಂಜರಿ’ ಕೃತಿಗಳಲ್ಲಿ ಕಂಡುಬರುವ ಸ್ತ್ರೀವರ್ಗ ವೈವಿಧ್ಯಮಯವಾದುದು. ಇಲ್ಲಿ ತಂಟಲು ದಾಸಿಯರಂತಹ ಸಾಮಾನ್ಯ ಹೆಣ್ಣುಗಳಿಂದ ಹಿಡಿದು, ಹಿಡಿಂಬೆಯಂತಹ ಕಾನನಜೀವಿ, ರಂಭೆ, ಊರ್ವಶಿಯರಂತಹ ದೇವಲೋಕದ ಸ್ತ್ರೀಯರು, ಅರಮನೆ ಸ್ತ್ರೀಯರು, ರಾಣಿಯರು, ರಾಣಿಯರ ಸೇವಕಿಯರು, ಸೈನಿಕರ ಹೆಂಡತಿಯರು, ಗಂಧರ್ವನ ಪತ್ನಿ ಹಾಗೂ ದಾಸಿಯರವರೆಗೆ ಇಲ್ಲಿನ ಮಹಿಳಾ ಪಾತ್ರಗಳ ಹರಹಿದೆ. ಇಂತಹ ಮಹಿಳೆಯರಲ್ಲಿ ಅನೇಕರಿಗೆ ಹೆಸರುಗಳೇ ಇಲ್ಲದೆ ಕೃತಿಗಳಲ್ಲಿ ಅನಾಮಿಕ ಅಥವಾ ಅನಾಮಧೇಯ ಸ್ತ್ರೀಯರಾಗಿ ಉಲ್ಲೇಖಗೊಂಡಿರುವುದನ್ನು ಕಾಣಬಹುದು.

ಇಂತಹ ಅನಾಮಿಕ ಸ್ತ್ರೀಯರಲ್ಲಿ ವಿದುರನ ತಾಯಿ, ಸೈನಿಕರ ಹೆಂಡತಿಯರು, ಗಂಧರ್ವನ ಪತ್ನಿ ಮೊದಲಾದವರು ಪ್ರಮುಖರಾಗಿದ್ದಾರೆ. ಅವರನ್ನು ಪುರುಷರೊಂದಿಗೆ ಅವರು ಹೊಂದಿರುವ ಸಂಬಂಧಗಳ ಮೂಲಕ ಗುರ್ತಿಸುವುದು ಕಂಡುಬರುತ್ತದೆ. ಹೆಸರುಗಳಿಲ್ಲದಿದ್ದರೂ ಈ ಸ್ತ್ರೀಯರನ್ನು ಕಡೆಗಣಿಸಲು ಸಾಧ್ಯವಿಲ್ಲ. ವಿದುರನ ತಾಯಿಯು ಅನಾಮಿಕ ಸ್ತ್ರೀಯರಲ್ಲಿ ಬಹು ಮುಖ್ಯವಾಗಿ ಚರ್ಚಿಸುವಂತಹಳು. ಈಕೆ ವಂಶದ ಮುಂದುವರಿಕೆಗಾಗಿ ಸತ್ಯವತಿಯ ಮಾತುಗಳಿಗೆ ಕಟ್ಟುಬಿದ್ದು ವ್ಯಾಸನೊಂದಿಗೆ ನಿಯೋಗವನ್ನು ಬೆಳೆಸುವ ಅಂಬಿಕೆಯ ದಾಸಿ. ತನ್ನ ಒಡತಿಯ ಆಣತಿಯಂತೆ ಪುತ್ರ ಸಂತಾನದ ವರವನ್ನು ಪಡೆಯುವ ಸಲುವಾಗಿ ವ್ಯಾಸನ ನಿಯೋಗಕ್ಕೆ ಒಳಪಡುವ ಈಕೆಯ ಮಗನಿಗೆ ಅಂಬಿಕೆಯ ಮಗನ ರೀತಿ ಯಾವುದೇ ಗೌರವ, ರಾಜ್ಯಾಧಿಕಾರಗಳಿಲ್ಲ.

ಈಕೆಯ ವಿವರಗಳು ‘ವಿಕ್ರಮಾರ್ಜುನವಿಜಯ’ದ ಪ್ರಥಮಾಶ್ವಾಸದ 85ನೆ ಪದ್ಯದ ವಚನಭಾಗದಲ್ಲಿ ಕಂಡುಬರುತ್ತವೆ. ಇಲ್ಲಿ ಪಂಪನು ಈಕೆಯನ್ನು ಅಂಬಿಕೆಯ “ಸೂಟಿಕಾಯ್ತೆ”[1] ಎಂಬ ಪದದಿಂದ ಉಲ್ಲೇಖಿಸಿದ್ದಾನೆ. ‘ಸೂಟಿಕಾಯ್ತೆ’ ಎಂದರೆ “ಸೇವಕಿ; ದಾಸಿ”[2] ಎಂದು. ಇಲ್ಲಿ ಈಕೆಯ ಕೆಲಸ ತನ್ನ ಒಡತಿ ಹೇಳಿದ ಕಾರ್ಯಗಳನ್ನು ಚಾಚೂ ತಪ್ಪದೆ ಮಾಡುವುದು. ಆ ಕಾರಣವಾಗಿಯೇ ವ್ಯಾಸನಲ್ಲಿಗೆ ಮತ್ತೊಂದು

ಮಗುವಿನ ವರವನ್ನು ಕೇಳಲು ಹೋಗುವಂತೆ ಅಂಬಿಕೆಗೆ ಹೇಳಿದಾಗ ಆಕೆ ತನ್ನ ದಾಸಿಯಾದ ಈ 'ಸೂಟಿಾಯ್ತೆ'ಯನ್ನು ಕಳುಹಿಸುವುದು. ಆ ಸಂದರ್ಭವನ್ನು ಪಂಪ "ಅಂಬಿಕೆಯ ಸೂಟಿಾಯ್ತೆಯಪ್ಪಾಕೆ ದರಹಸಿತವದನಾರವಿಂದೆಯಾಗಿ ಬರವಂ ಕೈಕೊಂಡಳ್"[3] ಎಂದು ವಿವರಿಸಿದ್ದಾನೆ. ಇಲ್ಲಿ ತನ್ನನ್ನು ತಾನು ಪರಪುರುಷನೊಬ್ಬನಿಗೆ ಅರ್ಪಿಸಿಕೊಳ್ಳಬೇಕಾದ ವಿಷಯ ತಿಳಿದಿದ್ದರೂ ಆಕೆ ದರಹಸಿತ ವದನಾರವಿಂದೆಯಾಗಿ ಆತನ ಸನಿಹಕ್ಕೆ ಬರುತ್ತಾಳೆ.

ಇನ್ನು ಕುಮಾರವ್ಯಾಸ "ಚಪಲೆ"[4] ಎಂಬ ಪದದಿಂದ ಆಕೆಯ ವಿವರಗಳನ್ನು ತಿಳಿಸಿದ್ದಾನೆ. ಇಲ್ಲಿಯೂ ಸಹ ದಾಸಿಯ ಮಗನಾದ ವಿದುರನ ಜನನಕ್ಕೆ ಹಾಗೂ ಅಂಬಿಕೆ, ಅಂಬಾಲಿಕೆಯರ ಮಕ್ಕಳಾದ ಧೃತರಾಷ್ಟ್ರ ಮತ್ತು ಪಾಂಡುರಾಜನ ಜನನಕ್ಕೆ ಕಾರಣನಾದ ಪುರುಷನು ಒಬ್ಬನೇ ಆಗಿದ್ದರೂ ವಿದುರನ ತಾಯಿಗೆ ಸಿಗುವ ಸ್ಥಾನಮಾನ ಹಾಗೂ ಅವಳನ್ನು ನಡೆಸಿಕೊಳ್ಳುವಲ್ಲಿನ ಪ್ರಜ್ಞಾಪೂರ್ವಕವಾದ ಅವಜ್ಞೆಗಳು ಮಾರ್ಮಿಕವಾದವು. ಅಂತೆಯೇ ವಿದುರನೂ ಕೂಡ ಶೋಷಣೆಗೆ ಒಳಗಾಗಿದ್ದಾನೆ. ಮೇಧಾವಿ, ನೀತಿ ಪರ, ಜ್ಞಾನಿ ಎಂದೆನಿಕೊಂಡರೂ ಹಕ್ಕು ಮತ್ತು ರಾಜ್ಯಾಧಿಕಾರದ ಪ್ರತಿಪಾದನೆ ಎಂಬ ವಿಷಯ ಬಂದಾಗ ವಿದುರನೂ ಕೂಡ ಆ ಫಲಾನುಭವದ ವ್ಯಾಪ್ತಿಯಿಂದ ಹೊರ ತಳ್ಳಲ್ಪಟ್ಟಿದ್ದಾನೆ.

ಅನಾಮಿಕ ಸ್ತ್ರೀಯರಲ್ಲಿ ಸೈನಿಕರ ಹೆಂಡತಿಯರು ಗಮನಿಸುವಂತಹವರು. ಪಾಂಡವ ಹಾಗೂ ಕೌರವರ ನಡುವೆಯುದ್ಧ ನಿಶ್ಚಯವಾಗಿ ಸೈನಿಕರೆಲ್ಲರೂ ಅಣಿಯಾಗಿದ್ದಾರೆ. ಆ ಸಮಯದಲ್ಲಿ ಸೈನಿಕರು ಹಾಗೂ ಅವರ ಹೆಂಡತಿಯರು ಮಾತನಾಡಿಕೊಳ್ಳುವ ಸಮಯದಲ್ಲಿ ಹೆಸರಿಲ್ಲದೆ ಉಲ್ಲೇಖಗೊಳ್ಳುವ ಸೈನಿಕರ ಹೆಂಡತಿಯರ ವಿವರಗಳು ಕಂಡುಬರುತ್ತವೆ.

ಒಬ್ಬ ಸೈನಿಕ

"..ತನ್ನನಲ್ಲಳೊಳಿಂತೆಂದನೀಪೊಟ್ಟೆಪೊಟ್ಟುನಾಳೆ

ದೇವಲೋಕದ ಕನ್ಯಕೆಯರೋಲಗದೊಳಿರ್ಪ ನೆಂದು ನುಡಿಯೆ ನೀನೆಂದಂತು ಪೋಗಲ್ತೀರದು

ನಾಳೆ ಮಗುಟ್ದು ಬಂದೆನ್ನೊಳ್ ನೆರೆವೆಯೆಂದು"[5]

ಹೇಳುವ ಸಂಗತಿಗಳು ಮುಖ್ಯವಾದವು. ರಾಜನಿಗಾಗಿ ಸೈನಿಕರು ಸಾಯಲು ಸಿದ್ಧರಾಗಿರುವಾಗಲೇ, ತಮ್ಮ ಗಂಡಂದಿರಿಗಾಗಿ ತಾವು ಸಾಯಲು ಸಿದ್ಧರಾಗಿರುವ ಅವರ ಹೆಂಡತಿಯರ ಬದುಕಿನ ವಿವರಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಇನ್ನೊಬ್ಬಳು ದರ್ಭೆಯ ಹಾಸಿಗೆಯ ಮೇಲೆ ಮಲಗಿದ್ದ ತನ್ನ ಪತಿಯ ನಿರ್ಧಾರವನ್ನು ತಿಳಿದು ತನ್ನ ಸಾವನ್ನು ನಿಷ್ಕರ್ಷಿಸಿ

**"ತಾಂಗಡನಾಳೆಪೋಗಿ ದಿವಿಜಾಂಗನೆಯೊಳ್ತೊಡರ್ದಿರ್ಪನಿಲ್ಲಿಮಾ**

**ಣ್ದಾಂಗಡಮಿರ್ಪೆನಂತನಿತು ಬೆಳ್ಳನೆ ಮುನ್ನಮೆ ಪೋಗಿ ನಲ್ಮೆಗೆ**

**ಲ್ಲಂಗೊಳೆ ದೇವಲೋಕದೊಳಧೀಶನನಾನಿದಿರ್ಗೊಳ್ವೆನೋವೊ ಸ**

**ಗ್ಗಂಗಳೊಳಿರ್ಪ ದೇವಡಿತಿ ತೊಟ್ಟಿರೊಳಟ್ಟಿನಾಗಲೀವೆನೇ"6**

ತನ್ನ ಪತಿಗಿಂತ ಮುಂಚಿತವಾಗಿಯೇ ತಾನು ಸತ್ತುದೇವಲೋಕದಲ್ಲಿ ಆತನನ್ನು ಸ್ವಾಗತಿಸಲು ಅಣಿಯಾಗುವ ಮನಸ್ಥಿತಿ ಆ ಕಾಲಘಟ್ಟದ ಹೆಣ್ಣುಗಳ ಸ್ಥಿತಿಗತಿಗಳನ್ನು

ತಿಳಿಸಿಕೊಡುತ್ತದೆ. ಅಲ್ಲದೆ ಮತ್ತೊಬ್ಬಳು

**"ಜಲಧಿಯೊಳಾದಮುತ್ತುಗಳವೇಂ ಪೊಸತಾದುವೆ ನಿನ್ನ ತೋಳ ಬಾ**
**ಳೊಳೆ ಬಲಗರ್ವದಿಂತೆಗೆದುದಗ್ರ ವಿರೋಧಿ ಮದೇಭ ಮಸ್ತಕ**
**ಸ್ಥಳ ಜಳರಾಶಿಯೊಳ್ ಬಳೆದ ನಿರ್ಮಳ ನಿರ್ವ್ರಣ ವೃತ್ತ ಮೌಕ್ತಿಕಾ**
**ವಳಿಯನೆ ತರ್ಪುದೆಂದು ನುಡಿದಟ್ಟಿಱಿಕೊಳಾಜೆಸಿದಳ್ ನಿಜೇಶನಂ"**[7]

ತನ್ನ ಗಂಡನ ಬಾಹುಬಲದ ಆಧಿಕ್ಯವನ್ನು ಕುರಿತು ಮಾತನಾಡುತ್ತ ಆತನನ್ನು ಯುದ್ಧಭೂಮಿಗೆ ಕಳುಹಿಸಿಕೊಡುವ ಸಂಗತಿಗಳು ಕಂಡುಬರುತ್ತವೆ. ಇಲ್ಲಿ ಕಂಡುಬರುವ ಮೂವರೂ ಅನಾಮಿಕ ಸೈನಿಕರ ಹೆಂಡತಿಯರಿಗೆ ಹೆಸರಿಲ್ಲ. 'ನಲ್ಲೆ' ಎಂದಷ್ಟೆ ಪಂಪ ಅವರನ್ನು ಉಲ್ಲೇಖಿಸಿದ್ದಾನೆ. ಹತ್ತುಹಲವು ಹೆಸರುಗಳಿಂದ ವಿಜೃಂಭಿಸುವ ಅರಮನೆ ಸ್ತ್ರೀಯರ ನಡುವೆಯೇ, ಅವರಿಗಾಗಿಯೇ ತಮ್ಮ ಪ್ರಾಣಗಳನ್ನು ಕಳೆದುಕೊಳ್ಳುವ ಅಲಕ್ಷಿಸಲಾಗದ ಈ ಸಾಮಾನ್ಯ ಹೆಣ್ಣುಗಳು ತಮಗೊಂದು ಹೆಸರುಗಳಿಲ್ಲದೆ ಇಂತಹ ಮೇರು ಕೃತಿಗಳಲ್ಲಿ ಕಣ್ಮರೆಯಾಗಿದ್ದಾರೆ.

'ಕುಮಾರವ್ಯಾಸಭಾರತ'ದಲ್ಲಿ ಕಂಡುಬರುವ 'ಅಂಗಾರವರ್ಮ'8 ನೆಂಬ ಗಂಧರ್ವನ ಪತ್ನಿಗೂ ಯಾವುದೇ ಹೆಸರಿಲ್ಲ. ಗಂಡನ ಹೆಸರಿನ ಮೂಲಕ ಆಕೆಯ ಇರುವಿಕೆಯ ಗುರುತನ್ನು ತಿಳಿಸುವ ಕ್ರಮಗಳು ನಮಗೆ ತಿಳಿಯುತ್ತವೆ.

ಅರಗಿನ ಮನೆಯಿಂದ ತಪ್ಪಿಸಿಕೊಂಡು ಬಂದ ಪಾಂಡವರು ನಡುರಾತ್ರಿಯಲ್ಲಿ ಕೊಳ್ಳಿಯ ಬೆಳಕಿನ ಸಹಾಯದಿಂದ ಅಡವಿಯಲ್ಲಿ ನಡೆದು ಬರುತ್ತಿರುತ್ತಾರೆ. ಆ ಸಮಯದಲ್ಲಿ ಇವರ ಬರುವಿಕೆಯನ್ನು ಕಂಡ ಗಂಧರ್ವ ವಧುಗಳು ಲಜ್ಜಾಭಾವದಿಂದ ದಡಕ್ಕೆ ಬಂದು ನಿಲ್ಲುತ್ತಾರೆ. 'ಅಂಗಾರವರ್ಮ'ನು ಅರ್ಜುನನ್ನು ಕುರಿತು 'ಇರುಳಿನ ಪೂರ್ವಭಾಗದಲ್ಲಿ ನರರು ಸುಳಿಯಬೇಕು, ಉತ್ತರಭಾಗದಲ್ಲಿ ಖೇಚರರು ಸುಳಿಯಬೇಕು' ಎಂದು ಬ್ರಹ್ಮಸೃಷ್ಟಿಯ ನಿಯಮವಿದೆ. ಇದನ್ನು ಉಲ್ಲಂಘಿಸಿದ್ದೀರೆಂದು ನುಡಿದು ಅವರ ಕ್ರಮವನ್ನು ಖಂಡಿಸುತ್ತಾನೆ. ಈ ಮಧ್ಯೆ ಅವರಿಬ್ಬರ ನಡುವೆ ವಾಗ್ವಾದಗಳು ನಡೆದು ಅರ್ಜುನ ಆತನ ಮೇಲೆ ಬೆಂಕಿಯ ಬಾಣವನ್ನು ಪ್ರಯೋಗಿಸುತ್ತಾನೆ. ಈ ಸಮಯದಲ್ಲಿ ಆ ಗಂಧರ್ವನ ಪತ್ನಿ ಧರ್ಮರಾಯನ ಪಾದಗಳನ್ನು ಹಿಡಿದು ತನ್ನ ಪತಿಯ ಪ್ರಾಣವನ್ನು ರಕ್ಷಿಸುವಂತೆ ಬೇಡಿಕೊಳ್ಳುವ ಸಂಗತಿಗಳು ತಿಳಿದುಬರುತ್ತವೆ.

ಇಂತಹ ಹಲವು ವಿಚಾರಗಳ ಸಂದರ್ಭಗಳಲ್ಲಿ ಕಾವ್ಯದಲ್ಲಿ ಬರುವ ಸ್ತ್ರೀಪಾತ್ರಗಳಿಗೆ ಹೆಸರುಗಳಿಲ್ಲ. ಅವರು ಪುರುಷರೊಂದಿಗೆ ಹೊಂದಿರುವ ಸಂಬಂಧಗಳ ಮೂಲಕವೇ ಅವರನ್ನು ಗುರುತಿಸುವ ಪ್ರಯತ್ನ ನಡೆದಿರುವುದು ತಿಳಿಯುತ್ತದೆ. ಪಂಪ ಕುಮಾರವ್ಯಾಸರು ಹಲವು ಕಡೆಗಳಲ್ಲಿ ತಮ್ಮ ಕಲ್ಪನೆಯನ್ನು ಸೇರಿಸಿ ಕಥೆಯನ್ನು ಸ್ವಾರಸ್ಯಗೊಳಿಸಿದ್ದರೂ ಸ್ತ್ರೀಪಾತ್ರಗಳಿಗೆ ವಿಶೇಷ ಮಹತ್ತ್ವ ನೀಡಿಲ್ಲ.

**ಅಡಿ ಟಿಪ್ಪಣಿಗಳು**

1. ವಿಕ್ರಮಾರ್ಜುನ ವಿಜಯ, 1/85–ವ.
2. ಸಂಕ್ಷಿಪ್ತಕನ್ನಡ ನಿಘಂಟು, ಪು.ಸಂ–1326.
3. ವಿಕ್ರಮಾರ್ಜುನ ವಿಜಯ, 1/85–ವ.
4. ಕರ್ಣಾಟ ಭಾರತಕಥಾಮಂಜರಿ, ಆದಿಪರ್ವ 3/7.

5. ವಿಕ್ರಮಾರ್ಜುನ ವಿಜಯ, 10/44–ವ.
6. ವಿಕ್ರಮಾರ್ಜುನ ವಿಜಯ, 10/45.
7. ವಿಕ್ರಮಾರ್ಜುನ ವಿಜಯ, 10/46.
8. ಕರ್ಣಾಟ ಭಾರತಕಥಾಮಂಜರಿ, ಆದಿಪರ್ವ–11/33

**ಪರಾಮರ್ಶನ ಗ್ರಂಥಗಳು**

1. ಅನಂತರಂಗಾಚಾರ್.ಎನ್, (ಗ) ಪಂಪ ಮಹಾಕವಿ ವಿರಚಿತ ಪಂಪಭಾರತಂ, 2007, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಕುವೆಂಪು ಮತ್ತು ಮಾಸ್ತಿ ವೆಂಕಟೇಶಅಯ್ಯಂಗಾರ್, (ಸಂ) ಕರ್ಣಾಟ ಭಾರತಕಥಾಮಂಜರಿ, 1988, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಪುಟ್ಟಪ್ಪ ಕೆ. (ಪ್ರ.ಸಂ), ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, 2013, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಬಸವಾರಾಧ್ಯ. ಎನ್. ಪ್ರಧಾನ ಸಂಪಾದಕರು, ಸಂಕ್ಷಿಪ್ತಕನ್ನಡ ನಿಘಂಟು, 2016, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–18.
5. ಬೆಳ್ಳಾವೆ ವೆಂಕಟನಾರಾಣಪ್ಪ (ಸಂ), ವಿಕ್ರಮಾರ್ಜುನ ವಿಜಯಂ, 2018, ಪೊಡವಿ ಪ್ರಕಾಶನ, 1267, 1ನೇ ತಿರುವು, ಶ್ರೀರಾಂಪುರ 2ನೇ ಹಂತ, ಮೈಸೂರು–23.
6. ಶ್ರೀನಿವಾಸಶರ್ಮ.ಎಚ್.ವಿ, (ಗ) ಪಂಪ ಮಹಾಕವಿಯ ವಿಕ್ರಮಾರ್ಜುನ ವಿಜಯ, 2010, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು–02.

❖❖❖

ಚಲನೆಯು ತೋರದೆ ಜಗದೆದೆಯಲ್ಲಿ
ನಿಶ್ಚಲವಾಗಲು ನಾವಿನ್ನೆಲ್ಲಿ?

RNI Reg No. : KARKAN /2012/49251

**CHINTHANA BAYALU** **A Peer Reviewed Journal** **ISSN 2278-2192**

**Kannada Quarterly, Volume 13, Issue 2, October - December 2024**

Included in UGC - CARE List

Edited, Published, Printed & Owned by



**Reshma G. Bhat**

Door No. 15-109, Modankapu Post

Bantwal Taluk, Dakshina Kannada - 574 219

chinthanabayalu@gmail.com

**www.chinthanabayalu.in**



Printed at

**Aakrithi Prints**

Light House Hill Road, Mangaluru - 575 001

**Pages : 128**


ವಾರ್ಷಿಕ ಚಂದಾ : ರೂಪಾಯಿ ಇನ್ನೂರು

(ಅಂಚೆ ವೆಚ್ಚ ಸೇರಿ)

ಮೂರು ವರ್ಷಗಳಿಗೆ : ರೂಪಾಯಿ ಆರುನೂರು

ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ

ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ

ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ

ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

**ಕರ್ಣಾಟಕ ಬ್ಯಾಂಕ್**

ಬಂಟ್ವಾಳ ಮೂಡ ಶಾಖೆಯಲ್ಲಿ

**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ : 0712000100041401**

**IFSC : KARB0000071**


ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ಣಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com